ಶ್ರೀ ವಾಟಾಳ್ ನಾಗರಾಜ್ : ಖರ್ಗೆಯವರೆ, ಆ ಕಡೆ, ಈ ಕಡೆ ನಿಮ್ಮದು ನಡೆಯುತ್ತಿದೆ. ನನಗಿಂತ ಹೆಚ್ಚಾಗಿ ಯಾವ ಕಡೆ ಎಂಬುದನ್ನು ನೀವು ಹೇಳಬೇಕು.

ಆ) ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ :

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಹಿರಿಯ ಸದಸ್ಯರುಗಳೆಲ್ಲರೂ ಕೂಡ ಮಾತನಾಡಿ ಪ್ರತಿಯೊಬ್ಬ ಮಂತ್ರಿಗಳೂ ಕೂಡ ಅವರ ಇಲಾಖಾ ಬೇಡಿಕೆ ಮೇಲೆ ಉತ್ತರವನ್ನು ಕೊಡಬೇಕೆಂದು ಏನು ಬಯಸುತ್ತಿದ್ದಾರೆ, ನಾನು ಅವರಲ್ಲಿ ಒಂದು ಮನವಿಯನ್ನು ಮಾಡಬಯಸುತ್ತೇನೆ. ನಾನು ಮತ್ತು ಉಪ ಮುಖ್ಯಮಂತ್ರಿಗಳು ಕಳೆದ ಎಂಟು ಹತ್ತು ದಿವಸಗಳಿಂದ ಈ ಆಯವ್ಯಯಕ್ಕೆ ಒಪ್ಪಿಗೆಯನ್ನು ಪಡೆಯುವುದಕ್ಕೆ ಪೂರಕವಾಗಿ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾನ್ಯ ಸದಸ್ಯರುಗಳು ಏನು ಮಾಡಿದ್ದಾರೆ, ಅದಕ್ಕೆ ನಾವು ಕೊಡತಕ್ಕಂಥ ಉತ್ತರ ನಿಮಗೆ ಸಂತೃಪ್ತಿ ತರದೇ ಇದ್ದರೆ, ನಂತರ ಮತ್ತೆ ಬೇಕಾದರೆ ಆ ಇಲಾಖೆ ಸಚಿವರುಗಳೇ ಬೇಕಾದರೆ ನಿಮಗೆ ಸಮಜಾಯಿಷಿ ಕೊಡುತ್ತಾರೆ. ಈಗಾಗಲೇ ವಿರೋಧ ಪಕ್ಷದ ನಾಯಕರಾದ ಮಾನ್ಯ ಧರ್ಮಸಿಂಗ್‌ರವರು ಮಾತನಾಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ.

ಅವರು ಏನು ಪ್ರಸ್ತಾಪ ಮಾಡಿದ್ದಾರೆ, ಅದು ಸಮಾಜ ಕಲ್ಯಾಣ ಇಲಾಖೆ ಇರಬಹುದು, ನೀರಾವರಿ ಇಲಾಖೆ ಇರಬಹುದು, ನಮ್ಮ ಕಾಲದಲ್ಲಿ ಕೊಟ್ಟಿರತಕ್ಕಂಥ ರೀತಿಯಲ್ಲಿ ಹಣವನ್ನು ಈಗ ನಿಮ್ಮ ಸರ್ಕಾರ ಇದ್ದಂತಹ ಕಾಲದಲ್ಲಿ ಸರಿಯಾಗಿ ಕೊಟ್ಟಿಲ್ಲವೆಂದು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ಎಲ್ಲಾ ಸುದೀರ್ಘವಾಗಿ ನಮ್ಮ ಹಣಕಾಸು ಸಚಿವರು ಈ ಸಭೆಯ ಮುಂದೆ ಎಲ್ಲಾ ಅಂಕಿಅಂಶಗಳ ಸಮೇತ ವಿಷಯವನ್ನು ಇಡುತ್ತಾರೆ. ಅಂಕಿಅಂಶಗಳ ವಿವರಗಳನ್ನು ನಿಮ್ಮ ಮುಂದೆ ಕೊಡುವುದಕ್ಕೆ ತಯಾರಾಗಿದ್ದೇವೆ, ಇದರಲ್ಲಿ ಯಾವುದನ್ನು ಮುಚ್ಚಿಡುವಂತಹ ಪ್ರಶ್ನೆ ಇಲ್ಲ ಹಾಗೂ ಸುಳ್ಳು ಹೇಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಎಲ್ಲಾ ಇಲಾಖೆ ಸಚಿವರಿಗೆ ಅವರವರ ಇಲಾಖೆ ಬಗ್ಗೆ ಹೇಳುವುದಕ್ಕೆ ಸಮಯದ ಅಭಾವವಿರುವಂತಹ ಸಂದರ್ಭದಲ್ಲಿ ಮಾನ್ಯ ಸಾರಿಗೆ ಸಚಿವರು ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ. ಏಕೆಂದರೆ ಮಾನ್ಯ ರಮೇಶ್‌ಕುಮಾರ್‌ರವರು

ಸಾರಿಗೆ ಇಲಾಖೆ ಬಗ್ಗೆ ಹೆಚ್ಚಿನ ಗಮನ ಸೆಳೆದಿರುವುದರಿಂದ ಅವರಿಗೆ ಹೇಳಬೇಕು ಎಂದು ಆಸಕ್ತಿ ಇದೆ. ಅವರು ಅವರ ಇಲಾಖೆ ಬಗ್ಗೆ ಉತ್ತರ ಕೊಟ್ಟ ನಂತರ ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ನೀರಾವರಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಗೃಹ ಇಲಾಖೆ ಬಗ್ಗೆ ಮಾನ್ಯ ಸದಸ್ಯರು ಏನು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾವು ಉತ್ತರವನ್ನು ಕೊಡುವುದಕ್ಕೆ ಸಿದ್ಧವಿದ್ದೇವೆ. ಇವತ್ತು ನೀವು ಅಂತಿಮವಾಗಿ ಚರ್ಚೆಯನ್ನು ಮಾಡುವಂತಹ ಸಂದರ್ಭದಲ್ಲಿ ಮುಂದಿನ ಸಾಲಿನಲ್ಲಿ ಕುಳಿತಿರುವಂತಹ ಹಿರಿಯ ಸದಸ್ಯರುಗಳು ಕೊಡುವಂತಹ ವಿಚಾರದಲ್ಲಿ ತಾವು pass ಆಗಿಲ್ಲವೆನ್ನುವ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. pass ಆಗಿದ್ದೇವೋ fail ಆಗಿದ್ದೇವೋ ಎನ್ನುವ ಬಗ್ಗೆ ವಿವರಣೆಯನ್ನು ಕೊಡುತ್ತೇವೆ. ನಾವು fail ಆಗಿದ್ದೇವೆಂದು ಎಂದು ನೀವೇನು ಹೇಳಿದ್ದೀರಿ, fail ಆದರೆ re-valuationಗೆ ನಮ್ಮ ವಿದ್ಯಾರ್ಥಿಗಳು ಏನು ಹೋಗುತ್ತಾರೆ, ಅದೇ ರೀತಿ ನಿಮ್ಮ ಮುಂದೆ ನಾವು re-valuationಗೆ ತಯಾರಾಗಿದ್ದೇವೆ. ನಿಮ್ಮ ಮನಸ್ಸನ್ನು ಗೆಲ್ಲುವುದಕ್ಕೆ ಸಾಧ್ಯವಾಗುತ್ತದೆ ಎಂದು ನಮಗೆ ವಿಶ್ವಾಸ ಇದೆ. ಮಾನ್ಯ ಚೆಲುವರಾಯ ಸ್ವಾಮಿಯವರು ಮಾತನಾಡಿದ ನಂತರ ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಮಾತನಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ pass, fail ಎಂದು ಹೇಳುವುದು ಯಾವಾಗ ಎಂದರೆ, ನೀವು ಜಂಟಿಯಾಗಿ ಪ್ರಶ್ನೆಗೆ ಉತ್ತರವನ್ನು ಕೊಟ್ಟರೆ pass ಅಥವಾ fail ಎಂದು ಗೊತ್ತಾಗುವುದಿಲ್ಲ. ಪ್ರತಿಯೊಬ್ಬರು ಅವರ ಪ್ರಶ್ನೆಗಳಿಗೆ ಅವರೇ ಉತ್ತರ ಕೊಟ್ಟಾಗ ಎಷ್ಟು marks ಬಂತು ಎನ್ನುವುದು ಗೊತ್ತಾಗುತ್ತದೆ. ಆ marks ಪ್ರತಿಯೊಬ್ಬರಿಗೂ ಬಂದಿರುವುದನ್ನು ನೋಡಿದಾಗ ಅವರು pass ಅಥವಾ fail ಎಂದು ಗೊತ್ತಾಗುತ್ತದೆಯೇ ವಿನಹ ಎಲ್ಲರ ಪರವಾಗಿ ನಾವೇ ಪರೀಕ್ಷೆ ಬರೆಯುತ್ತೇವೆ ಎಂದರೆ ಎಲ್ಲರನ್ನು pass ಮಾಡುವುದಕ್ಕೆ ಆಗುತ್ತದೆಯೇ? ನೀವೇ ಹೇಳಿ.

ಶ್ರೀ ಚೆಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ನಾಯಕರು ಹೇಳಿದ ಹಾಗೆ ಸುದೀರ್ಘವಾದ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ಕೊಡುತ್ತಾರೆ. ಮಾನ್ಯ ರಮೇಶ್‌ಕುಮಾರ್‌ರವರು ನೇರವಾಗಿ ನನ್ನ ಇಲಾಖೆ ಬಗ್ಗೆ

ಆಪಾದನೆಯನ್ನು ಮಾಡಿರುವುದರಿಂದ, ಎರಡು ನಿಮಿಷದಲ್ಲಿ ಅದಕ್ಕೆ Clarification ಕೊಟ್ಟು ನನ್ನ ಉತ್ತರವನ್ನು ಮುಗಿಸುತ್ತೇನೆ. ಅದಕ್ಕಿಂತ ಮೊದಲಿಗೆ ಒಂದು ಮಾತನ್ನು ಹೇಳಬೇಕೆನಿಸುತ್ತದೆ. ಆಡಳಿತವನ್ನು ಮಾಡದೇ ಇರುವಂತಹ ಪಕ್ಷಗಳು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಈ ರೀತಿ ಟೀಕೆ ಮಾಡಿದರೆ ಮೆಚ್ಚುಗೆಯನ್ನು ವ್ಯಕ್ತಪಡಿಸಬಹುದು. ಆದರೆ ಈ ರಾಜ್ಯದಲ್ಲಿ 60 ವರ್ಷದಲ್ಲಿ, 45 ವರ್ಷ ಒಂದೇ ಪಕ್ಷ ಆಡಳಿತವನ್ನು ಮಾಡಿದೆ. ಇನ್ನೂ 15 ವರ್ಷ ಮಾತ್ರ ಬೇರೆಯವರು ಆಡಳಿತವನ್ನು ಮಾಡಿದ್ದಾರೆ. ಆದರೆ ನಡೆದಂತಹ ಎಲ್ಲಾ ದೋಷ ನ್ಯೂನತೆಗಳಿಗೆ ಕನಿಷ್ಟಪಕ್ಷ 75% Share ಆ ಪಕ್ಷಕ್ಕೆ ಇದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ನಾವು ಏನಾದರೂ ತಪ್ಪು ಮಾಡಿದರೂ ಕೂಡ ನಮ್ಮದು 25% ತಪ್ಪಿದೆ ಎಂದು ಒಪ್ಪಿಕೊಳ್ಳಬೇಕು. ನನ್ನ ಸ್ನೇಹಿತರಾದ ದಿನೇಶ್ ಗುಂಡೂರಾವ್ ಅಭಿವೃದ್ಧಿ ಕೆಲಸದಲ್ಲಿ ಲೂಟಿ ಮಾಡಿಬಿಟ್ಟರು ಎಂದು ಹೇಳಿದರು. ಸರ್ಕಾರ ಯಾವುದೇ ಆಪಾದನೆಯಿಲ್ಲದೆ, ದೋಷ ಇಲ್ಲದೆ ನ್ಯೂನತೆಗಳನ್ನು ಸರಿಪಡಿಸಿಕೊಂಡು ಸುಧಾರಣೆ ಮಾಡಿ ಒಳ್ಳೆಯ ಕೆಲಸಗಳನ್ನು ಮಾಡಿದರೆ ಒಳ್ಳೆಯ ಮಾತುಗಳನ್ನು ಹೇಳುವುದಿಲ್ಲವಲ್ಲ ಎಂದು ನಮಗೆ ಚಿಂತೆಯಾದರೂ ಕೂಡ ಅಂತಿಮವಾದಂತಹ ತೀರ್ಮಾನಕ್ಕೆ ನಾವೆಲ್ಲರೂ ಕೂಡ ಹೋಗಬೇಕಾಗಿ ರುವುರಿಂದ ನೀವು ಎಷ್ಟೇ ಆರೋಪ, ದೋಷ ಮಾಡಿದರೂ ಕೂಡ ಅಂತಿಮವಾಗಿ ನಿಮ್ಮಿಂದ marks ಸಿಗುತ್ತದೋ ಇಲ್ಲವೋ, ಜನರಿಂದ marks ಸಿಗುತ್ತದೆ ಎಂದು ನಾವು ನಂಬುತ್ತೇವೆ. ಮಾನ್ಯ ರಮೇಶ್‌ಕುಮಾರ್‌ರವರು ನನ್ನ ಇಲಾಖೆ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಿದ್ದಾರೆ. ಅವರು ಬಹಳ ಹಿರಿಯರು, ಅನುಭವಶಾಲಿಗಳು ಹಾಗೂ ಬುದ್ಧಿವಂತರು. ಅವರು ಮಾತನಾಡಿದರೆ ನಾವೆಲ್ಲಾ ಸುಧಾರಿಸಿಕೊಳ್ಳುವ ರೀತಿಯಲ್ಲಿ ಮಾತನಾಡುತ್ತಾರೆ. ಅವರು ಆರೋಪ ಮಾಡುವುದರ ಜೊತೆಗೆ ಒಳ್ಳೆಯ ವಿಚಾರಗಳನ್ನು ಹೇಳುವುದಿಲ್ಲ. ಅದು ಏಕೆಂದು ಗೊತ್ತಿಲ್ಲ. ಕೆಲವು ಒಳ್ಳೆಯ ವಿಚಾರಗಳನ್ನು ಹೇಳಿ, ಆಮೇಲೆ ದೋಷ ಇರುವುದನ್ನು ಹೇಳಿದರೆ ಬಹಳ ಸಂತೋಷ. ನನಗೆ ನಮ್ಮ ನಾಯಕರು Tansportation ಮತ್ತು ಸಾರಿಗೆ ಎರಡನ್ನು ಕೂಡ ವಹಿಸಿದ್ದಾರೆ. ಅನೇಕ ವರ್ಷಗಳಿಂದ ಸರ್ಕಾರ ಇದರಲ್ಲಿ revenue collection ಅಷ್ಟೇ ಸೀಮಿತವಾಗಿ ಮಾಡಿಕೊಂಡು ಬಂದಿದೆ. ಆ ಇಲಾಖೆಯಿಂದ ಜನರಿಗೆ ಆಗಬೇಕಾದಂತಹ ಉಪಯೋಗದ ಬಗ್ಗೆ, ಸಮಸ್ಯೆಗಳ ಬಗ್ಗೆ ಪರಿಹಾರ ಮಾಡಿ ಸುಧಾರಣೆಗಳನ್ನು ತರುವಂತಹ

ಕೆಲಸವನ್ನು ಮಾಡಿಲ್ಲ. ಅದಕ್ಕೆ ಒಬ್ಬರೇ ಕಾರಣವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಿದ್ದರಾಮಯ್ಯನವರು ಹಿಂದೆ ಉಪ ಮುಖ್ಯಮಂತ್ರಿಗಳಾಗಿದ್ದರು, ಇವತ್ತು ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಗಳಾಗಿದ್ದಾರೆ. ಪ್ರಪ್ರಥಮವಾಗಿ ಸಾರಿಗೆ ಇಲಾಖೆಯನ್ನು ಸುಧಾರಣೆ ತರುವುದಕ್ಕೆ ಅನೇಕ ಯೋಜನೆಗಳನ್ನು ನಾವು ರೂಪಿಸಿದ್ದೇವೆ. ಅದು ಇವತ್ತೇ ಪ್ರತಫಲ ಕೊಡುತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಕನಿಷ್ಠ ಕಾಲಾವಕಾಶ ಬೇಕಾಗುತ್ತದೆ. Driving licence ಕೊಡುವಂತಹ system ಇರಬಹುದು, ಕಚೇರಿಗಳಲ್ಲಿ ಕೆಲಸ ಮಾಡುವಂತಹ Inspector ಗಳನ್ನು ಸುಧಾರಣೆ ಮಾಡುವಂತಹ ವಿಚಾರ ಇರಬಹುದು, Technical instrument provide ಮಾಡುವುದು ಇರಬಹುದು, ಕಟ್ಟಡಗಳು ಇಲ್ಲದೇ ಜನರು ಬಂದು ಅವರ ಸಮಸ್ಯೆಗಳಿಗೆ officeನಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಹೋಗುವುದಕ್ಕೆ ಆಗದೇ ಮಧ್ಯವರ್ತಿಗಳ ಮೇಲೆ depend ಆಗುವಂತಹ ವಿಚಾರದಲ್ಲಿ ಸುಧಾರಣೆ ತರುವಂಥದ್ದಾಗಿರ ಬಹುದು. ಈ ರೀತಿ ಅನೇಕ ಸುಧಾರಣೆಗಳನ್ನು ನಾವು ತರುವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಅದು ಈ ವರ್ಷದಿಂದ ಪ್ರಾರಂಭವಾಗುತ್ತಿದೆ. ಅದರ ಜೊತೆಗೆ ನಮ್ಮ ಸಾರಿಗೆ ಇಲಾಖೆಯಲ್ಲಿ ಕೆಲವು ಸಮಸ್ಯೆಗಳನ್ನು ಹೇಳಿದ್ದೆನು. ಚರ್ಚೆಯಾದಂತಹ ಸಂದರ್ಭದಲ್ಲಿ ಇಬ್ಬರು ಮೂವರು ಸದಸ್ಯರು, ಈ profit ನಿಮ್ಮೊಬ್ಬರ ಕಾಲದಲ್ಲಿ ಮಾತ್ರ ಬಂದಿದೆಯಾ ಎಂದು ಹೇಳಿದರು. ನಾನು ಒಬ್ಬರ ಕಾಲದಲ್ಲಿ ಬಂದಿದೆ ಎಂದು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಈ ಸರ್ಕಾರ ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಯಡಿಯೂರಪ್ಪನವರು ನಾಯಕತ್ವ ವಹಿಸಿಕೊಂಡ ಮೇಲೆ ಮಾಡಿರುವಂತಹ ಸಾಧನೆಯನ್ನಾದರೂ ಹೇಳಬೇಕಲ್ಲ ಎನ್ನುವುದನ್ನು ಕೂಡ ಅವರ ಗಮನಕ್ಕೆ ತಂದಿದ್ದೇನೆ. ಹಿಂದೆ ಅನೇಕರು ದುಡಿದಿದ್ದಾರೆ, ಕೆಲಸ ಮಾಡಿದ್ದಾರೆ, ನೌಕರರ ಶ್ರಮ ಇದೆ ಎಂದು ಎಲ್ಲಾ ಹೇಳಿದರು. ಆದರೆ KSRTC ಮತ್ತು BMTC ಅಲ್ಪಮಟ್ಟಿಗೆ ಒಂದು ಒಳ್ಳೆಯ ರೀತಿಯಲ್ಲಿ ಹೆಜ್ಜೆಯನ್ನಿಟ್ಟು ಹೋಗುತ್ತಿದೆ. ಅದನ್ನು ನಾವು ಮುಂದೆ ನಡೆಸುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಹುಬ್ಬಳ್ಳಿ–ಗುಲ್ಬರ್ಗಾ ಬಗ್ಗೆ ಆ ಸದನದ ಮಾನ್ಯ ಹೆಚ್.ಕೆ.ಪಾಟೀಲ್ ಹಾಗೂ ಈ ಸದನದ ಮಾನ್ಯ ಎಸ್.ಎಸ್.ಪಾಟೀಲ್ ಸಹ ಮಾತನಾಡಿದ್ದಾರೆ. ಆದರೆ 97 ರಲ್ಲಿ ಪ್ರಾರಂಭವಾಗಿ 2007ರವರೆಗೂ ಸತತವಾಗಿ ಹತ್ತು, ಇಪ್ಪತ್ತು, ಮೂವತ್ತು

ಕೋಟಿ ರೂಪಾಯಿಯ ನಷ್ಟವನ್ನು ಹೊಂದಿದ್ದು, ಆ ವಿಚಾರವನ್ನು ನಾನು ಹೇಳುವುದು ಬೇಡ. ಬಿಜಾಪುರ, ಬೆಳಗಾಂ ಬಾಗಲಕೋಟೆ, ಹಾವೇರಿ ಮತ್ತು ಗದಗ್‌ನ ಶಾಸಕರು ಹೇಳಿದರೆ ನಮಗೆ ಸಮಾಧಾನವಾಗುತ್ತದೆ, ಅವರು ಏನು ಹೇಳುತ್ತಾರೆ, ಅದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿದ್ದೇನೆ. ಈ ವರ್ಷ ಅಲ್ಲಿ 12 ಕೋಟಿ ರೂಪಾಯಿ profit ತರುವುದರ ಜೊತೆಗೆ ಅಲ್ಲಿ infrastructure ಮಾಡುವುದರ ಜೊತೆಗೆ serviceನಲ್ಲಿ ಕೂಡ ಉತ್ತಮ ಸ್ಥಿತಿಯಲ್ಲಿ ತಂದಿದ್ದೇವೆ ಎಂದು ಹೇಳುವುದಕ್ಕೆ ನಮ್ಮ ನಾಯಕರಿಗೆ ನಮಗೆ ಮತ್ತು ಸರ್ಕಾರಕ್ಕೆ ಹಕ್ಕಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಮೈಸೂರಿನಲ್ಲಿ 615 ಕೋಟಿ ರೂಪಾಯಿ ವೆಚ್ಚದಲ್ಲಿ BRTC ಎಂದರೆ Bus Rapid Transit System ಅನ್ನು, MUDA, Corporation ಮತ್ತು KSRTC ಈ ಮೂರು ಸೇರಿ NURM ನ ಯೋಜನೆಯಡಿಯಲ್ಲಿ ಒಂದು proposal ಇದ್ದು, ಮಂಜೂರಾತಿ ಮಾಡಬೇಕೆನ್ನುವ ಹಂತದಲ್ಲಿದೆ. ಅದೂ ಕೂಡ ಒಂದು ಒಳ್ಳೆಯ ಯೋಜನೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಾವು BMTCನಲ್ಲಿ ಇಷ್ಟು service ಕೊಡುವುದರ ಜೊತೆಗೆ traffic ಅನ್ನು ಕಡಿಮೆ ಮಾಡುವ ದೃಷ್ಟಿಯಿಂದ 44 ಸ್ಥಳಗಳಲ್ಲಿ bus stand ಗಳನ್ನು Traffic Transit Management Centre ಎಂದು ಹೇಳಿ ಅಲ್ಲಿ ಅಗತ್ಯವಾದ ಸೌಲಭ್ಯಗಳಾದಂತಹ ಶೌಚಾಲಯ, ಸಂಕೀರ್ಣ, shopping mall ಮತ್ತು Bank, ATM, ಮುಂಗಡ ಆಸನ ಕಾದಿರಿಸುವಿಕೆ, ವೈದ್ಯಕೀಯ ಸೌಲಭ್ಯ, ಔಷಧಿಯ ಮಳಿಗೆ ಮುಂತಾದವು ಗಳನ್ನೆಲ್ಲಾ ಮೂಲಭೂತ ಸೌಕರ್ಯಗಳು ಹಾಗೂ ಅಲ್ಲಿ parking ವ್ಯವಸ್ಥೆಯನ್ನು ಮಾಡುವುದರ ಜೊತೆಗೆ, ಯಾವುದಾದರೂ ಒಬ್ಬ ಸಾಮಾನ್ಯ ಜನ ಬಂದರೆ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಸ್ವಂತ ವಾಹನವನ್ನು carry ಮಾಡದೇ, ಅಲ್ಲಿ ನಿಲ್ಲಿಸಿ KSRTC ಮತ್ತು BMTC bus ನಲ್ಲಿ ಹೋಗಿ ಅವರು shopping ಮುಗಿಸಿ ವಾಪಸ್ಸು ಬಂದು ಮತ್ತೆ ಮನೆಗೆ ಹೋಗುವಂತಹ ಒಂದು ಉತ್ತಮವಾದಂತಹ ಯೋಜನೆಯನ್ನು ನಗರದ ಒಳಗಡೆ ಹಾಗೂ ಹೊರಗಡೆ 44 ಸ್ಥಳಗಳಲ್ಲಿ ಮಾಡಬೇಕು ಎಂದು ಯೋಜನೆಯನ್ನು ತಂದು ಅದು ಈಗಾಗಲೇ ಜಯನಗರದಲ್ಲಿ ಪ್ರಾರಂಭವಾಗಿದೆ. ನಮ್ಮ ಮಾನ್ಯ ಸೋಮಣ್ಣನವರ ಕ್ಷೇತ್ರದಲ್ಲಿ ಬಹಳ ಒತ್ತಡ

ತರುತ್ತಿದ್ದಾರೆ. ಒಂದು ವಾರದಲ್ಲಿ ಕೆಂಗೇರಿ ಮತ್ತು ಉಳಿದ ಎಂಟು ಕಡೆ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಪ್ರಾರಂಭ ಮಾಡಬೇಕೆಂದು ಇದ್ದು, ನಾವು ಈಗಾಗಲೇ ಯೋಜನೆಗಳನ್ನು ಸಿದ್ಧ ಮಾಡಿದ್ದೇವೆ ಎನ್ನುವ ವಿಚಾರವನ್ನು ಕೂಡ ತಮ್ಮ ಗಮನಕ್ಕೆ ತರುತ್ತಿದ್ದೇವೆ. profitಗಿಂತ ಹೆಚ್ಚಾಗಿ ಇವತ್ತು ಎಲ್ಲಿ ಜನರಿಗೆ ಅವಶ್ಯಕತೆ ಇದೆಯೋ ಅಲ್ಲಿ ಎಂದರೆ ಹಳ್ಳಿ ಕಡೆ ಹಾಗೂ ಮುಖ್ಯ ರಸ್ತೆ ಕಡೆಯಲ್ಲಿ studentsಗೆ ಇರಬಹುದು, ಬೇರೆಯವರಿಗೆ ಇರಬಹುದು, ಅವರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಸಾರಿಗೆ ವ್ಯವಸ್ಥೆಯನ್ನು ಕೊಡುವುದಕ್ಕೆ ಬದ್ಧವಾಗಿದೆ. ಪ್ರತಿವರ್ಷಕ್ಕಿಂತ ಈ ವರ್ಷ ನಮ್ಮ ಹಣಕಾಸಿನ ಸಚಿವರು ಮತ್ತು ಮುಖ್ಯಮಂತ್ರಿಗಳ ಹೆಚ್ಚಿನ ಸಹಕಾರದಿಂದ ಇವತ್ತು infrastructure ಅನ್ನು ಕೊಡುವುದರ ಜೊತೆಗೆ ಸಾರಿಗೆ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತಂದು ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ. ನೀವು ಹೇಳಿರುವಂತಹ ನ್ಯೂನತೆಗಳನ್ನು ಸಹ ಸರಿಪಡಿಸುವಂತಹ ಪ್ರಾಮಾಣಿಕವಾದಂತಹ ಕೆಲಸವನ್ನು ನಾವು ಮಾಡುತ್ತೇವೆ. ಜೊತೆಗೆ ಈಗ ನಾಲ್ಕು ಸಾರಿಗೆ ಸಂಸ್ಥೆಯಿಂದ 15 ಸಾವಿರ ಹುದ್ದೆಗಳಿಗೆ ನೇಮಕಾತಿಯನ್ನು ನಾವು ಮಾಡುತ್ತಿದ್ದೇವೆ. ಇದರಿಂದ ಉದ್ಯೋಗವಿಲ್ಲದೆ ಇರುವಂತಹ ಯುವಕರಿಗೆ ಉದ್ಯೋಗವನ್ನು ಕೊಡುವಂತಹ ಒಂದು ಒಳ್ಳೆಯ ಕೆಲಸವನ್ನು ಒಂದು ವರ್ಷದಲ್ಲಿ ಮಾಡುವಂತಹ ಅವಕಾಶ ಇದೆ. BMTCನಲ್ಲಿ traffic revenue ಒಂದು ಸಾವಿರ ವಹಿವಾಟನ್ನು cross ಮಾಡುವಂತಹ ರೀತಿಯಲ್ಲಿ ನಾವು ಈ ವರ್ಷ ಕೆಲಸ ಮಾಡುತ್ತಿದ್ದೇವೆ.

(12-00 PM)

ಕಳೆದ ವರ್ಷದಲ್ಲೇ KSRTCಯಲ್ಲಿ 1,000ವನ್ನು ಕ್ರಾಸ್ ಮಾಡಿದ್ದೇವೆ. ಇವತ್ತು ನೇಮಕಾತಿಯನ್ನು online systemನಲ್ಲಿ ಪ್ರಾರಂಭ ಮಾಡಿದ್ದೇವೆ. ಇದರ ಜೊತೆಗೆ ಅಂಗವಿಕಲರಿಗೆ 50,000 ದಿಂದ 1,00,000 ಪಾಸುಗಳನ್ನು ಕೊಡುವಂಥಾದ್ದು ಮಾಡಿದ್ದೇವೆ. ಸ್ಟೂಡೆಂಟ್ಸ್‌ಗೆ 40 ಕಿ.ಮೀ. 50 ಕಿ.ಮೀ. distanceಗೆ ಕೊಟ್ಟಿದ್ದೇವೆ. ಇವತ್ತು ಅವತಾರ್ ಯೋಜನೆಯನ್ನು ರಾಜ್ಯದಲ್ಲೇ ಅಲ್ಲ, ರಾಷ್ಟ್ರದಲ್ಲಿ ಹೊರಗಡೆ ಭಾಗದಲ್ಲಿ ಇದ್ದರೂ ಕೂಡ, ಫೋನ್ ಮೂಲಕ, ಇಂಟರ್‌ನೆಟ್ ಮೂಲಕ reservation ಮಾಡುವಂಥ ವ್ಯವಸ್ಥೆಯನ್ನು ತಂದಿದ್ದೇವೆ. ಇವತ್ತು smart card ವ್ಯವಸ್ಥೆಯನ್ನು ನಾಲ್ಕು ಸಂಸ್ಥೆಗಳಲ್ಲೂ ಮಾಡುತ್ತಿದ್ದೇವೆ. ಅದರ ಜೊತೆಗೆ ಹೊಸ

ಬಸ್‌ಸ್ಟ್ಯಾಂಡ್‌ಗಳನ್ನು, ಮಾಡುವಂಥದ್ದು, ಡಿಪೋಗಳನ್ನು ಕೊಡವಂಥದ್ದು, renovation ಮಾಡುವಂಥದ್ದು, ಪಾವಗಡದಂಥ ಒಂದು ಹಿಂದುಳಿದಂಥ ತಾಲ್ಲೂಕಿಗೆ ಒಂದು ಡಿಪೋ ಇಲ್ಲದೇ ಇರುವಂಥದ್ದಕ್ಕೆ ಕೊಟ್ಟಿದ್ದೇವೆ. ಪಕ್ಕದಲ್ಲಿ ಮಾಗಡಿಗೆ ಯಾವ ಕಾಲಕ್ಕೂ ಬಸ್‌ಸ್ಟ್ಯಾಂಡ್ ಮತ್ತು ಡಿಪೋ ಇಲ್ಲದೇ ಇರುವಂಥದ್ದಕ್ಕೆ ಕೊಟ್ಟಿದ್ದೇವೆ. ಆ ರೀತಿ North Karnataka ದಲ್ಲಿ, Hyderabad-Karnataka ದಲ್ಲಿ ಇವತ್ತು ನಾವು ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಮಾನ್ಯ ರಮೇಶ್‌ಕುಮಾರ್‌ರವರು ಒಂದು ವಿಚಾರವನ್ನು ನಿರ್ದಿಷ್ಟವಾಗಿ ಸರ್ಕಾರದ ಗಮನಕ್ಕೆ ತಂದರು. Contract Carriage 1976ರಲ್ಲಿ ರದ್ದಾಗಿತ್ತು. ಯಾವ ರೀತಿಯಾಗಿ ಇದು ಮಾಯವಾಗಿ ಇದ್ದಕ್ಕಿದ್ದ ಹಾಗೆ ಪ್ರತ್ಯಕ್ಷವಾಗಿ, ಮಾಡುತ್ತಿದ್ದಿರೆಂದು ಕೇಳಿದರು. ನನಗೆ ನಿಖರವಾದ ದಿನಾಂಕವಿಲ್ಲದೇ ಇರುವುದರಿಂದ ಸರ್ಕಾರಿ ಆದೇಶವನ್ನು ನಾನು ಹೇಳುತ್ತೇನೆಂದು ಅವರಿಗೆ ಹೇಳಿದ್ದೆ. ತಾವು ಹೇಳಿದಂತೆ 1976ರಲ್ಲಿ ಇದು ರದ್ದಾಗಿದ್ದು ಸತ್ಯ. ಆದರೆ ಮತ್ತೆ ಇದ್ದಕ್ಕಿದ್ದ ಹಾಗೆ 2003ರಲ್ಲಿ ನಮ್ಮ ಸರ್ಕಾರ ಆಡಳಿತ ಮಾಡುವ ಸಂದರ್ಭದಲ್ಲಿ, ಅದನ್ನು ವಾಪಸ್ಸು ಪಡೆದು repeal ಮಾಡಿದ್ದು. ಅದನ್ನು ತಮ್ಮ ಗಮನಕ್ಕೆ ತರುತ್ತಾ, ಇದನ್ನು ನಾವು ಯಾರು ಮಾಡಿದಂಥ ಆದೇಶವಲ್ಲ. ಇದು 1976ರಲ್ಲಿ ದಿವಂಗತ ಶ್ರೀ ದೇವರಾಜ ಅರಸುರವರ ಕಾಲದಲ್ಲಿ ಮಾಡಿದ್ದರು. ಅದನ್ನು ಮತ್ತೆ ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ 2003ರಲಲಿ ಆ ಆದೇಶವನ್ನು ವಾಪಸ್ಸು ಪಡೆದು, ಒಂದು contarct carriage permit ಅನ್ನು ಕೊಡುವಂಥದ್ದು ಚಾಲನೆಯಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಒಟ್ಟು 821 ಒಪ್ಪಂದ permit ಅನ್ನು ಕೊಟ್ಟಿದ್ದಾರೆ. ಅದರಲ್ಲಿ ನಮ್ಮ ಸರ್ಕಾರ ಬಂದ ಮೇಲೆ 200 permit ಅನ್ನು ಕೊಟ್ಟಿದ್ದೇವೆ. ನಮ್ಮ ಸರ್ಕಾರದ ಹಿಂದೆ ಎರಡು ವರ್ಷ, ಒಂದೂವರೆ ವರ್ಷಕ್ಕೆ 200 permit ಅನ್ನು ಕೊಟ್ಟಿದ್ದೇವೆ. ಎರಡು ವರ್ಷಕ್ಕೆ 500 ಚಿಲ್ಲರೆ permit ಅನ್ನು ಕೊಟ್ಟಿದ್ದಾರೆ. ಆದರೆ ತಾವು ಹೇಳಿದಂಥ ಒಂದು ಮಾತನ್ನು ಒಪ್ಪಲೇ ಬೇಕಾಗುತ್ತದೆ. ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. Nationalize ಆಗಿರುವಂಥ ರೂಟ್‌ನಲ್ಲಿ ಈ ರೀತಿ permit ಅನ್ನು ಕೊಟ್ಟಿದ್ದರೆ, ಅದರಿಂದ KSRTCಗೂ ನಷ್ಟವಾಗುತ್ತದೆ. ಅದನ್ನು ಕೊಡುವಂಥ ಅವಶ್ಯಕತೆಯೂ ಇಲ್ಲ.

ಅದನ್ನು ನಾನು ರದ್ದು ಮಾಡಲು ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ. ಅದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂಬುದನ್ನು ತಮ್ಮ ಮುಂದೆ ಹೇಳಿಲಿಚ್ಛಿಸುತ್ತೇನೆ. ಇದರ ಜೊತೆಗೆ ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು 2-3 ವಿಚಾರಗಳನ್ನು ಹೇಳಿದ್ದಾರೆ. ಅದು ಮ್ಯಾಕ್ಸಿಕ್ಯಾಬ್, ಆಟೋಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆಟೋರಿಕ್ಷಾಗಳಲ್ಲಿ ಅವರಿಗೆ capacity permission ಏನು ಇದೆ, ಅದು ಮೂರು ಜನರು, ಮತ್ತೆ ಕಾನೂನು ಬದ್ಧವಾಗಿ ಏನು ಇದೆ, ಅದನ್ನು ಬಿಟ್ಟು ಹೆಚ್ಚು ಜನರನ್ನು ಸಾಗಾಣಿಕೆ ಮಾಡುವಂಥದ್ದನ್ನು ಸಂಪೂರ್ಣವಾಗಿ ರದ್ದು ಮಾಡುವಂಥದ್ದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಜೊತೆಗೆ ಮ್ಯಾಕ್ಸಿಕ್ಯಾಬ್ ಇರಬಹುದು, ಜೀಪ್ ಇರಬಹುದು, ಇದರಲ್ಲಿ ಅನಾವಶ್ಯಕವಾಗಿ ಜನರನ್ನು ಅವರು ಕ್ಯಾರಿ ಮಾಡುವುದರಿಂದ, ಜನರು ಅನಾಹುತಕ್ಕೆ ಒಳಗಾದಾಗ ಅವರಿಗೆ ಸಹಾತ ಧನ ಮತ್ತೆ ಯಾವುದೇ ರಕ್ಷಣೆ ಸಿಗದೇ ಇರುವಂಥ ಸ್ಥಿತಿ ಇರುವುದರಿಂದ, ಇವತ್ತು ಸಂಪೂರ್ಣವಾಗಿ KSRTC ಯಾವುದೇ ಗ್ರಾಮವಾಗಲಿ, ಅಲ್ಲಿ ಸಾರಿಗೆ ವ್ಯವಸ್ಥೆಯನ್ನು ಕೊಡುವುದಕ್ಕೆ ತಯಾರು ಇರುವುದರಿಂದ, ಇಂಥ ವಾಹನಗಳು ಜನರನ್ನು ಕ್ಯಾರಿ ಮಾಡುವಂಥದ್ದನ್ನು ಸಂಪೂರ್ಣವಾಗಿ ರದ್ದು ಮಾಡುತ್ತೇವೆಂಬ ಮಾತನ್ನು ಹೇಳುತ್ತೇನೆ. ಇನ್ನು ಉಳಿದಂಥ ನ್ಯೂನತೆಗಳ ಬಗ್ಗೆ ಎಲ್ಲಾ ಹಿರಿಯ ಸದಸ್ಯರು ನಮ್ಮ ಗಮನಕ್ಕೆ ತಂದಿದ್ದಾರೆ. ಅದೆಲ್ಲವನ್ನು ಸಹ ನಾನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ, ನನಗೆ ತಾವು ಅನುಮತಿಯನ್ನು ಕೊಟಟಿದ್ದಕ್ಕೆ ತಮಗೂ ವಂದನೆಗಳನ್ನು ಹೇಳುತ್ತಾ, ನನ್ನ ಇಲಾಖೆಯ ಬೇಡಿಕೆಯನ್ನು ಮಂಜೂರು ಮಾಡಿಕೊಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ಸೋಮಣ್ಣ : ಮಾನ್ಯ ಅಧ್ಯಕ್ಷರೆ, ನಾನು ಒಂದೇ ಒಂದು Clarification ಅನ್ನು ಕೇಳುತ್ತೇನೆ. ಮಾನ್ಯ ಸಚಿವರು ಹೇಳಿದರು, ಮತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಸಹ ನೋಡಿದ್ದಾರೆ. ನಮ್ಮ ಮೈಸೂರು ರಸ್ತೆಯಲ್ಲಿ 10 ಎಕರೆ ಜಾಗದಲ್ಲಿ ಒಂದು ಹೈಟೆಕ್ ಬಸ್ ಸ್ಟ್ಯಾಂಡನ್ನು ಮಾಡಿದ್ದೇವೆ. ಸುಮಾರು 25,26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೈಸೂರಿಗೆ ಹೋಗುವಂಥದ್ದು, ಹಾಸನಕ್ಕೆ ಹೋಗುವಂಥದ್ದು, ಮಡಿಕೇರಿಗೆ ಮತ್ತಿತರ ಜಿಲ್ಲೆಗಳಿಗೆ ಹೋಗುವಂಥದ್ದು ಅಲ್ಲಿಂದಲೇ ಹೊರಡಬೇಕೆಂದು ಮಾಡಿ, ಇಲ್ಲಿ ಕೊಟ್ಯಾಂತರ ರೂಪಾಯಿಗಳನ್ನು ಖರ್ಚು

ಮಾಡಿದ್ದೇವೆ. ಅಲ್ಲಿ ಮೂಲಭೂತ ಸೌಕರ್ಯಗಳು ಸರಿಯಾಗಿ ಇಲ್ಲ. ಮಾನ್ಯ ಸಚಿವರು ಅಲ್ಲಿಗೆ ಕರೆದುಕೊಂಡು ಹೋಗಿದ್ದೆ. ಅದು ಆದಮೇಲೆ ಸಾಮಾನ್ಯ ಜನರು ಆಟೋರಿಕ್ಷಾದಲ್ಲಿ ಹೋಗಬೇಕಾದರೆ, ಆಟೋರಿಕ್ಷಾದವರು ಒಂದು ದರಕ್ಕೆ ಒಂದೂವರೆ ಪಟ್ಟು ಹೆಚ್ಚಿಗೆ ಹಣವನ್ನು ಕೇಳುತ್ತಾರೆ. ಅಲ್ಲಿ ರಾತ್ರಿ ವೇಳೆಯಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ, ಒಬ್ಬ ಸೆಕ್ಯೂರಿಟಿಯೂ ಇಲ್ಲ. ಇಲ್ಲಿ ಲೈಟ್‌ಗಳನ್ನು 10 ಎಕರೆ ಪ್ರದೇಶದಲ್ಲಿ ಹಾಕಿದ್ದಾರೆ. ಅದು ರಾತ್ರಿಯಾದರೆ ಅಲ್ಲಿ ಕತ್ತಲೆಯ ವ್ಯವಸ್ಥೆ ಇರುತ್ತದೆ. ನಾನು ಸನ್ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಇದು ಒಂದು ವಿಷಯವಾದರೆ, ಎರಡನೆಯದಾಗಿ, ಈಗಾಗಲೇ ಸಾರಿಗೆ ಸಚಿವರಾದ ಸನ್ಮಾನ್ಯ ಚಲುವರಾಯ ಸ್ವಾಮಿಯವರು ಹೇಳಿದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸಹ ಆದೇಶವನ್ನು ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ನಾಲ್ಕೂವರೆ ಎಕರೆ ಜಾಗವಿದೆ. ಅದು ಕೈಗೆತ್ತಿಕೊಳ್ಳುತ್ತೇವೆಂದು ಹೇಳಿದ್ದಾರೆ. ಇನ್ನು ಕಿಮ್ಕೋ ಕಾರ್ಖಾನೆ ಎಂದು ಇತ್ತು. ಇದು ತಮಗೂ ಗೊತ್ತು, 12 ಎಕರೆ ಜಾಗವನ್ನು ಅಂದಿನ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಂಥ ಕಾಲದಲ್ಲಿ ಮರ್ಜ್ ಮಾಡಿಸಿ, ಆ ಜಾಗವನ್ನು ಉಳಿಸಿದ್ದೇವೆ. ಮಾನ್ಯ ಸಿದ್ದರಾಮಯ್ಯನವರು ಆಗ ಉಪ ಮುಖ್ಯಮಂತ್ರಿಗಳಾಗಿ, ಹಣಕಾಸಿನ ಸಚಿವರು ಆಗಿದ್ದರು. ಆಗ ನಾವು ಕೇವಲ 6 ಕೋಟಿ ರೂಪಾಯಿಗಳಿಗೆ ಆ ಜಾಗವನ್ನು ಉಳಿಸಿದೆವು. ಈಗ ಆ ಜಾಗದ ಬೆಲೆ 100 ಕೋಟಿ ರೂಪಾಯಿಗಳಿಗೂ ಮೇಲೆ ಆಗುತ್ತದೆ. ಆ ಜಾಗವನ್ನು ಉಪಯೋಗಿಸಿಕೊಳ್ಳಿ, ಅದರಿಂದ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಿಯೆಂದು, ನಾನು ಸುಮಾರು ಪತ್ರವನ್ನು ಬರೆದೆ. ನಾನು ಎಲ್ಲಿ ಕೂಗಾಡುತ್ತೇನೋ, ಎಂದು ಸಾರಿಗೆ ಸಚಿವರು ಹಾರಿಕೆಯನ್ನು ಉತ್ತರವನ್ನು ಕೊಡುತ್ತಿದ್ದಾರೆ. ಅದನ್ನು ಯಾವುದರಲ್ಲೋ ಮಾಡಿದ್ದೇವೆ, ಏನೋ ಮಾಡಿದ್ದೇವೆಂದು ಹೇಳಿ, ಮಾನ್ಯ ಮುಖ್ಯಮಂತ್ರಿಯವರು ಸೂಚನೆ ಕೊಟ್ಟು 2 ವರ್ಷಗಳಾಯಿತು. ಇದರ ಬಗ್ಗೆ ಉತ್ತರವನ್ನು ಹೇಳಬೇಕು, ಸ್ಪಷ್ಟವಾಗಿ ಹೇಳಬೇಕು. ತಮಗೆ ಕೆಲಸ ಮಾಡುವುದಕ್ಕೆ ಏನು ಕಳಕಳಿ ಇದೆ, ತಮ್ಮ ಇಲಾಖೆಯನ್ನು ಏನು ಚುರುಕುಗೊಳಿಸಿದ್ದೀರಿ, ತಾವು ತಮ್ಮ ಇಲಾಖೆಯನ್ನು ಚುರುಕುಗೊಳಿಸಿರುವಂಥದ್ದು, ಅದು ಬೆಂಗಳೂರು ನಗರದ ಸಾಮಾನ್ಯ ಜನರಿಗೂ ತಲುಪುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ಎಸ್.ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ನಮ್ಮ ಊರಿನಲ್ಲಿ ಬಸ್ ಸ್ಟ್ಯಾಂಡ್ open ಮಾಡಿರುವ ವಿಚಾರ ತಮಗೆ ಗೊತ್ತಿದೆ. ಆಗ ತಾವು ಸಹ

ಬಂದಿದ್ದೀರಿ, ಮಾನ್ಯ ಮುಖ್ಯಮಂತ್ರಿಯವರು ಅದನ್ನು open ಮಾಡಿದ್ದು. ಇದು ಆಗಿ ಒಂದು ವರ್ಷವಾಗಿದೆ. ಇವತ್ತಿನವರೆಗೂ ಅದನ್ನು ಪ್ರಾರಂಭ ಮಾಡಿಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ಊರಿಗೆ ಬಂದು ಭಾಷಣವನ್ನು ಮಾಡುತ್ತಾರೆ. ಈ ಬಸ್‌ಸ್ಟ್ಯಾಂಡ್ ಇಲ್ಲೇ ಇರುತ್ತದೆ. ನಾವು ಏನು ಮಾಡುವುದಿಲ್ಲವೆಂದು ಹೇಳಿದರೆ, ನಾವು ಇದಕ್ಕೆ ಅಷ್ಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ಕಟ್ಟಿದ ಮೇಲೆ ಆ ಹೊಸ ಬಸ್‌ಸ್ಟ್ಯಾಂಡ್ ಬಗ್ಗೆ ಈ ರೀತಿಯಲ್ಲಿ ಉತ್ತರವನ್ನು ಕೊಟ್ಟರೆ, ಇಲ್ಲಿ ಮುಖ್ಯಮಂತ್ರಿಯವರು ಮೇಲೆ ಇರುವ ಗೌರವ ಏನು ಆಗಬಹುದು? ಅವರೇ ಬಂದು ಇದನ್ನು open ಮಾಡಿದ್ದಾರೆ. ಇಲ್ಲಿ KSRTC ಯವರು ಹಳೆ ಬಸ್ ಸ್ಟ್ಯಾಂಡ್ ಇರುವವರೆಗೂ ನಾವು ಏನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಅಂದ ಮೇಲೆ ನಾನು ಏನು ಮಾಡುವುದಕ್ಕೆ ಆಗುತ್ತದೆಂಬುದನ್ನು ತಾವು ಹೇಳಿ. ಅದಕ್ಕೆ ಇದರ ಬಗ್ಗೆ ಯಾವಾಗ ಸೂಕ್ತ ಕ್ರಮವನ್ನು ತೆಗೆದುಕೊಂಡು, ಆ ಬಸ್‌ಸ್ಟ್ಯಾಂಡ್ ಯಾವಾಗ ಪ್ರಾರಂಭವಾಗುತ್ತದೆಂಬುದನ್ನು ತಾವು ಹೇಳಿ.

ಶ್ರೀ ಕೆ.ಶ್ರೀನಿವಾಸ ಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರು ತಮ್ಮ ಇಲಾಖೆಯಲ್ಲಿ ಲಾಭ ಮಾಡಿರುವ ವಿಚಾರ ಬಹಳ ಸಂತೋಷದ ವಿಷಯ. ಕೋಲಾರದ ಕಡೆ ನ್ಯಾಷನಲ್ ಹೈವೇನಲ್ಲಿ ಪರ್ಮಿಟ್ ಇಲ್ಲದೇ ನೂರಾರು ಬಸ್‌ಗಳು ಓಡಾಡುತ್ತವೆ. ಅಲ್ಲಿ ಹಳ್ಳಿಗಾಡಿನಲ್ಲಿ ರೂಟ್ ಮಾಡಿಕೊಂಡು ತೆಗೆದುಕೊಳ್ಳುತ್ತಾರೆ. ಇದು NH-4 ನಲ್ಲಿ ಆಗುತ್ತಿದೆ, ಯಾರನ್ನಾದರೂ ಕೇಳಿದರೆ, ಇದು ಪೋಲೀಸ್ ಪರ್ಮಿಟ್ ಎಂದು ಹೇಳುತ್ತಾರೆ. ಇದನ್ನು ಯಾವ ರೀತಿಯಲ್ಲಿ ಕಂಟ್ರೋಲ್ ಮಾಡಬೇಕೋ ಅದನ್ನು ಮೊದಲು ಮಾಡುವಂಥ ಕೆಲಸವನ್ನು ಮಾಡಿ.

ಶ್ರೀ ಎಸ್.ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಾರಿಗೆ ಸಚಿವರು NWKSRTC ಯನ್ನು ಲಾಭದಲ್ಲಿ ತಂದಿದ್ದೀರಿ. ನಾವು ಖಂಡಿತವಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಆದರೆ ಅಲ್ಲಿ ಕೇವಲ ಹಳೆಯ ಬಸ್ಸುಗಳು ಇವೆ. ಎಲ್ಲಿ ಅಂದರೆ ಅಲ್ಲಿ ನಿಲ್ಲುತ್ತವೆ. ದಯವಿಟ್ಟು ಹೊಸ ಬಸ್ಸುಗಳು ಖರೀದಿ ಮಾಡುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಇನ್ನು ನಿಮ್ಮಲ್ಲಿ ಡ್ರೈವಿಂಗ್ ಲೈಸೆನ್ಸ್ ಕೊಡುವ ಪದ್ಧತಿ ಏನು ಇದೆ, ಇಲ್ಲಿ ಡ್ರೈವಿಂಗ್ ಲೈಸೆನ್ಸ್‌ನ್ನು RTOದವರು ಕೊಟ್ಟಿರುತ್ತಾರೆ. ಆದರೆ ಇವರಿಗೆ ಅದರ ಮೇಲೆ ವಿಶ್ವಾಸವಿಲ್ಲದೇ, KSRTCಯವರು ತಮ್ಮದೇ ಆದಂಥ

ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಇಲ್ಲಿ ಡ್ರೈವರ್‌ಗಳನ್ನು ಅವರೇ ನೋಡಿ ಬಹಳ ಚೆನ್ನಾಗಿ ಸೆಲೆಕ್ಟ್ ಮಾಡುತ್ತಾರೆ. ಅದೇ ರೀತಿಯಲ್ಲಿ RTO ಆಫೀಸ್‌ನಲ್ಲೂ ಆಗುವಂಥ ವ್ಯವಸ್ಥೆಯಾಗಬೇಕು, ಇಲ್ಲದೇ ಹೋದರೆ ಯಾರೋ ಬಂದು ಅಪಘಾತಗಳು ಆಗುತ್ತದೆ. ಈಗ ಲೈಸೆನ್ಸ್ ಅನ್ನು ಯಾವ ರೀತಿ ಕೊಡುತ್ತಾರೆಂದರೆ, ಅದನ್ನು ಹೇಳಬಾರದು, ಅದು ನಿಮಗೂ ಗೊತ್ತಿದೆ. ಈ ಲೈಸೆನ್ಸ್ ಅನ್ನು ಕೊಡುವುದಕ್ಕೆ ರೇಟ್‌ಫಿಕ್ಸ್ ಆಗಿದೆ. ಇವರು ಮನೆಯಲ್ಲಿ ಇರುತ್ತಾರೆ, ಇವರನ್ನು ಪರೀಕ್ಷೆ ಮಾಡದೇ ಲೈಸನ್ಸ್ ಅನ್ನು ಕೊಟ್ಟು ಬಿಡುತ್ತಾರೆ. ದಯವಿಟ್ಟು ಆ ಲೈಸೆನ್ಸ್ ಕೊಡುವ ಪದ್ಧತಿಯನ್ನು ಸ್ಟ್ರಿಕ್ಟ್ ಮಾಡಬೇಕು. ಒಳ್ಳೆಯ ಅನುಭವವಿರುವವರಿಗೆ ಡ್ರೈವಿಂಗ್ ಲೈಸನ್ಸ್ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸಾರಿಗೆ ಇಲಾಖೆ ಲಾಭದಲ್ಲಿದೆಯೆಂದು ಸಮಾರಂಭಗಳು ಆಯಿತು. ಮಾನ್ಯ ಮುಖ್ಯಮಂತ್ರಿಯವರು ಅಭಿನಂದನೆಗಳನ್ನು ಸಲಿಸಿದರು. ಇಷ್ಟೆಲ್ಲಾ ಆದರೂ ತಾವು ಬಸ್ ದರವನ್ನು ಏಕೆ ಜಾಸ್ತಿ ಮಾಡುತ್ತಿದ್ದೀರಿ? ದರ ಜಾಸ್ತಿ ಮಾಡುವಂಥದ್ದು ಒಳ್ಳೆಯ ಸೂಚನೆಯಲ್ಲ. ಇದರಿಂದ ಬಹಳ ಜನರಿಗೆ ತೊಂದರೆಯಾಗಿದೆ. ನೀವು ಯಾವಾಗಲೂ ದರವನ್ನು ಇಳಿಸಬೇಕೇ ಹೊರತು, ಈಗ ಕೇಂದ್ರ ಸರ್ಕಾರದಲ್ಲಿ ಪೆಟ್ರೋಲ್ ಬೆಲೆ ಜಾಸ್ತಿಯಾಗಿತ್ತು, ಡೀಸೆಲ್ ಬೆಲೆ ಜಾಸ್ತಿಯಾಗಿತ್ತು. ಅವರು ಬೆಲೆಯನ್ನು ಇಳಿಸಿದರು. ಆದರೆ ನೀವು ದರವನ್ನು ಇಳಿಸಲೇ ಇಲ್ಲ, ನಿಮ್ಮ ಇಲಾಖೆ ಯಾವಾಗಲೂ ದರ ಏರಿಸುವ ಇಲಾಖೆ ಎಂದೇ? ಇದು ಸರಿಯಾದ ಕ್ರಮವಲ್ಲ. ಇದು ಒಳ್ಳೆಯ ಸೂಚನೆಯಲ್ಲ, ನೀವು ಗಂಭೀರವಾಗಿ ದರವನ್ನು ಇಳಿಸುತ್ತೇವೆಂದು ಹೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಚರ್ಚೆ ಮಾಡುವಾಗ ಒಂದು ಪ್ರಸ್ತಾವನೆಯನ್ನು ಇಟ್ಟಿದ್ದೆವು. ಇಲ್ಲಿ ವಿದ್ಯಾರ್ಥಿಗಳ ಬಸ್ ಪಾಸ್ ದರವನ್ನು ಇಳಿಸುವುದರ ಬಗ್ಗೆ ಚರ್ಚೆಯಾಯಿತು. ನೀವು ಅವರ ಜೊತೆಯಲ್ಲಿ ಕುಳಿತು ಚರ್ಚೆ ಮಾಡಿದ್ದೀರಿ. ನೀವು ಶೇ.20, ಶೇ.30, ದರವನ್ನು ಕಡಿಮೆ ಮಾಡುತ್ತೇವೆಂದು ಹೇಳಿದ್ದೀರಿ. ನಾವು ಸಂಪೂರ್ಣವಾಗಿ ಹಿಂದಿನ ವರ್ಷ ಎಷ್ಟು ಇತ್ತೋ, ಅಷ್ಟನ್ನೇ ನೀವು ದರ ನಿಗದಿ ಮಾಡಬೇಕು. ವಿದ್ಯಾರ್ಥಿಗಳಿಗೆ ತೊಂದರೆ ಯಾಗಬಾರದೆಂದು ನಾವು ಹೇಳೀದ್ದೆವು. ಅದನ್ನು ನೀವು ಪರಿಶೀಲನೆ ಮಾಡಿತ್ತೇವೆಂದು ಹೇಳಿದ್ದೀರಿ. ದಯವಿಟ್ಟು ನೀವು

ಅದನ್ನು ಅನೌನ್ಸ್ ಮಾಡಬೇಕು. ಹಿಂದಿನ ವರ್ಷ ಎಷ್ಟು ಇತ್ತೋ, ಅಷ್ಟಕ್ಕೆ ಸೀಮಿತಗೊಳಿಸಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಮ್ಮ ಮಲೆನಾಡಿನ ರಸ್ತೆಗಳ ಮಳೆಗಾಲದಲ್ಲಿ ಮೈನ್ಸ್‌ನ ಓರ್ ಮತ್ತು ಟಿಂಬರ್ ಈ ಮೂರೂ ಕೂಡ ಓವರ್ ಲೋಡಾಗಿ ಹೋಗುತ್ತಿದೆ. ನಿಮ್ಮ RTOಗಳೂ ಇದರ ಜೊತೆಗೆ ಶಾಮೀಲಾಗಿದ್ದಾರೆ. ಇದರ ಬಗ್ಗೆ ದಯವಿಟ್ಟು ಬಿಗಿ ನಿಯಂತ್ರಣ ಮಾಡಬೇಕು. ಕೆಲವು ರಸ್ತೆಗಳಲ್ಲಿ ಸ್ಕ್ವಾಡನ್ನಾದರೂ ಹಾಕಬೇಕು. ರಸ್ತೆಗಳು ಮತ್ತು ಸೇತುವೆಗಳು ಮುರಿದು ಬಿದ್ದು ಹೋಗುತ್ತಿವೆ. ಇನ್ನೊಂದು ವಿಷಯವೆಂದರೆ, ತಾಲ್ಲೂಕು ಮಟ್ಟದಲ್ಲಿ Electronic K.S.R.T.C. Booking Counter ಗಳನ್ನು ತೆರೆಯಬೇಕು. ನನ್ನ ತಾಲ್ಲೂಕಿನಲ್ಲೇ ಸುಮಾರು ಆರೇಳು ಬಸ್ಸುಗಳು ತಿರುಗಾಡುತ್ತಿವೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿ ಒಂದು Electronic Booking Counter ಅನ್ನು ತೆರೆಯಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೇ, RTO ಕಛೇರಿಗಳಲ್ಲಿ licence ಕೊಡುವುದಾಗಲೀ, vehicle passing ಮಾಡುವುದಾಗಲೀ, ಇವುಗಳಿಗೆ ನೇರವಾಗಿ ಹೋದರೆ ಏನೂ ಕೆಲಸವಾಗುವುದಿಲ್ಲ. ಏಜೆಂಟರ್ ಮೂಲಕ ಹೋದರೆ ಮಾತ್ರ ಕೆಲಸವಾಗುವಂಥ ಒಂದು ವ್ಯವಸ್ಥೆಯಿರುವುದು ತಮ್ಮ ಅನುಭವಕ್ಕೆ ಬಂದಿರಬಹುದು. ದಯವಿಟ್ಟು ಈ ವ್ಯವಸ್ಥೆ ಜನರಿಗೆ ನೇರವಾಗಿ ಸಿಗುವ ಹಾಗೆ ತಾವು ಏನು ಮಾಡುತ್ತೀರೋ, ಅದನ್ನು ಮಾಡಬೇಕು. ಇನ್ನೊಂದು, ವಿಚಾರವೆಂದರೆ, ಗದಗ್ ಬಸ್‌ಸ್ಟ್ಯಾಂಡಿನಲ್ಲಿ ಮಳೆಗಾಲದ ಕೂಡಲೇ ಫ್ಲೋರಿಂಗ್ ಅನ್ನು ಕಾಂಕ್ರೀಟ್ ಮಾಡುತ್ತೇವೆ ಎಂದು ಹೇಳಿದ್ದರು. ಹೋದ ಮಳೆಗಾಲ ಹೋಗಿ ಈಗ ಮತ್ತೆ ಮಳೆಗಾಲ ಬಂದಿದೆ. ಬೆಂಗಳೂರು ಬಸ್‌ಸ್ಟ್ಯಾಂಡ್ ಹೇಗಿದೆ, ಹಾಗೆಯೇ ಗದಗ್ ಬಸ್ ಸ್ಟ್ಯಾಂಡನ್ನೂ ಕಾಂಕ್ರೀಟ್ ಫ್ಲೋರಿಂಗ್ ಮಾಡಲು ತಾವು ಕ್ರಮ ಕೈಗೊಳ್ಳಬೇಕು.

ಶ್ರೀ ಸಿದ್ದನಗೌಡ ಚಿಕ್ಕನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಇದಕ್ಕೆ end ಇಲ್ಲ. ಎಲ್ಲರದ್ದೂ ಸಮಸ್ಯೆಗಳಿವೆ. ಈ ರೀತಿ ಎಲ್ಲರೂ ನಿಂತುಕೊಂಡರೆ ಹೇಗೆ? ಇನ್ನೂ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗಿದೆ. ಬಜೆಟ್ ಪಾಸ್ ಆಗಬೇಕಾಗಿದೆ. ಹೀಗಾದರೆ ಹೇಗೆ? ಇದೇನಿದು?

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು : ದೇಶಪಾಂಡೆಯವರೇ, ಹೀಗಾದರೆ ಹೇಗೆ?

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಆರಗ ಜ್ಞಾನೇಂದ್ರರವರು ಏನು ಹೇಳಿದರು. . . .

ಶ್ರೀ ಸಿದ್ದನಗೌಡ ಚಿಕ್ಕನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೇ, ಮತ್ತೆ ಮತ್ತೆ ಅವರಿಗೇ ಅವಕಾಶ ಕೊಡುತ್ತಿದ್ದೀರಿ. ನಾವು ಹಿಂದೆ ಕುಳಿತವರು ಏನು ಮಾಡುವುದು? ದಯಮಾಡಿ ನಮಗೂ ಅವಕಾಶ ಕೊಡಿ. ನಮಗೆ ಅವಕಾಶ ಕೊಡುತ್ತಿಲ್ಲ. ಹೀಗಾದರೆ ನಾವು ಬರುವುದಾದರೂ ಏಕೆ?

ಅಧ್ಯಕ್ಷರು : ಸಮಯ ಎಲ್ಲಿದೆರೀ? ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಲ್ಲವೇ? ಬಜೆಟ್ ಪಾಸ್ ಆಗಬೇಕಲ್ಲವೇ?

ಶ್ರೀ ಆರ್.ವಿ.ದೇಶಪಾಂಡೆ : ಬಳ್ಳಾರಿಯಿಂದ ಗೋವಾವರೆಗೆ, ಬಳ್ಳಾರಿಯಿಂದ ಮಂಗಳೂರು, ಹಾಸನ ಈ ಎಲ್ಲಾ ಕಡೆಗಳಲ್ಲಿ mining traffic ಇದೆ. ಓವರ್ಲೋಡಿಂಗ್ ಬಂದ್ ಮಾಡುವ ಬಗ್ಗೆ ಒಂದು ಕಡೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಈ mining traffic ನಿಂದ ಎಲ್ಲ ರಸ್ತೆಗಳು ಹಾಳಾಗಿವೆ. ಹುಬ್ಬಳ್ಳಿ ಕಾರವಾರ ರೋಡ್, ಹೊನ್ನಾವರ ರೋಡ್ ಎಲ್ಲಾ already washed out. ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಪ್ರತಿ ಸಲ ನೀವು road maintenance ಗೆಂದು ಹಣವನ್ನು ಕೊಡುತ್ತೀರಿ. ಈ ಹಣ Deputy Commissioner ರವರ disposalನಲ್ಲಿ ಇರಬೇಕು. ಎಲ್ಲಾ ರೋಡುಗಳೂ wash out ಆಗಿ ಬಿಟ್ಟಿವೆ. ಹಾಗಾಗಿ overloading ಅನ್ನು ತಡೆಯಬೇಕು ಎನ್ನುವುದು ಒಂದು. ಇನ್ನೊಂದು, road maintenanceಗೆ toll collect ಮಾಡಿ hand it over to the Deputy Commissioner of that area. ಆಗ ರಸ್ತೆಗಳನ್ನು maintain ಮಾಡಲಿಕ್ಕಾಗುತ್ತದೆ. ಪ್ರತಿ ವರ್ಷ ನೀವು ಕೊಡುತ್ತಿರುವ ಹಣ ಖರ್ಚಾಗುತ್ತದೆ, ಆದರೆ ಉಪಯೋಗವಾಗುತ್ತಿಲ್ಲ. ಆದ್ದರಿಂದ ಬಹಳ ದಿವಸಗಳಿಂದ ನಾನು ಈ ಸಲಹೆಯನ್ನು ಕೊಡುತ್ತಿದ್ದೇನೆ, ಮಾನ್ಯ

ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಾರಿಗೆ ಸಚಿವರು ಇದರ ಬಗ್ಗೆ ಚಿಂತನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದನಗೌಡ ಚಿಕ್ಕನಗೌಡ ಈಶ್ವರಗೌಡ : ಎಸ್.ಎಂ.ಕೃಷ್ಣಾರವರ ಸರ್ಕಾರವಿದ್ದಾಗ ಆಗಿನ ಸಾರಿಗೆ ಸಚಿವರಾದಂಥ ರಮಾನಾಥ ರೈರವರಿಗೂ ಮನವಿ ಕೊಟ್ಟಿದ್ದೇನೆ, ಕಲಘಟಗಿಯಲ್ಲಿ ಬಸ್ ಡಿಪೋದ ಅವಶ್ಯಕತೆ ಇದೆ ಎಂದು ಅನೇಕ ಲೆಟರ್‌ಗಳನ್ನು ಕೊಟ್ಟಿದ್ದೇನೆ. ಕಲಘಟಗಿ 126 ಹಳ್ಳಿಗಳಿರುವಂಥ ಒಂದು ಕ್ಷೇತ್ರ ಮತ್ತು ಇದು ಮಲೆನಾಡಿನಲ್ಲಿ ಬರುತ್ತದೆ. ಗುಡ್ಡಗಾಡು ಪ್ರದೇಶಗಳ ಜನರಿಗೆ, ಗ್ರಾಮೀಣ ಜನರಿಗೆ, ವಿದ್ಯಾರ್ಥಿಗಳಿಗೆ ಓಡಾಡಲು ತೊಂದರೆ ಯಾಗುತ್ತದೆ. ಬಸ್ಸುಗಳು ದಾರಿಯಲ್ಲಿ ನಿಲ್ಲುತ್ತಿವೆ. ಅದಕ್ಕಾಗಿ ಅಲ್ಲಿ ಒಂದು ಬಸ್ ಡಿಪೋ ಮಾಡಿ ಎಂದು ಹೇಳಿದ್ದೇನೆ. 3–4 ಸಲ M.D. ಯವರನ್ನು, D.C. ಯವರನ್ನು ಕರೆದುಕೊಂಡು ಹೋಗಿ ಜಾಗ ತೋರಿಸಿದ್ದೇನೆ. ಜಾಗದ ಮಾಲೀಕರು ತಾವು ಜಾಗವನ್ನು ಕೊಡುತ್ತೇವೆ ಎಂದು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅವರು ಒಪ್ಪಿಗೆ ಕೊಟ್ಟು ಒಂದು ವರ್ಷದ ಮೇಲಾಯಿತು. ಹೀಗೆ ವಿಳಂಬವಾಗುತ್ತಿದ್ದರೆ ಜಾಗದ ರೇಟ್ ಹೆಚ್ಚುತ್ತದೆ. ಆದ್ದರಿಂದ ನಾನು ತಮ್ಮ ಮೂಲಕ ಸಾರಿಗೆ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಕಲಘಟಗಿಯಲ್ಲಿ ಬಸ್ ಡಿಪೋವನ್ನು ತಾವು ಮಾಡಿಕೊಡುತ್ತೀರೋ, ಇಲ್ಲವೋ ಎನ್ನುವುದನ್ನು ತಾವು ದಯಮಾಡಿ ತಿಳಿಸಬೇಕು.

ಶ್ರೀ ಎನ್.ಚಲುವರಾಯಸ್ವಾಮಿ : ಸೋಮಣ್ಣನವರು clarification ಕೇಳಿದಾಗ, ಹಾರಿಕೆಯ ಉತ್ತರ ಎಂದು ಹೇಳಿದ್ದರೆ, ಅವರೂ ಸಹ ಶಾಸಕರಾಗಿ, ಸಚಿವರಾಗಿ ಕೆಲಸ ಮಾಡುತ್ತಿದ್ದಾರೆ. ಹಾರಿಕೆಯ ಉತ್ತರ ಯಾವುದು, ಇನ್ನೊಂದು ಯಾವುದು ಎಂದು ನನಗೆ ಗೊತ್ತಿಲ್ಲ. ನನಗೆ ಗೊತ್ತಿರುವುದು ಒಂದೇ ಉತ್ತರ, ಮಾಡುತ್ತೇವೆ ಅಥವಾ ಆಗುವುದಿಲ್ಲ ಅಥವಾ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನ ಮಾಡುತ್ತೇವೆ, ಈ ರೀತಿಯ ಉತ್ತರವಷ್ಟೇ ನನಗೆ ಗೊತ್ತಿರುವುದು. ಖಂಡಿತವಾಗಿಯೂ ಅವರ ಯೋಜನೆಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಅವರನ್ನೇ ಕರೆದುಕೊಂಡು ಹೋಗಿ, ಅಲ್ಲಿ ಪೂಜೆ ಮಾಡಿಸಿ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದೇನೆ. ಇನ್ನೊಂದು ವಾರ ಅಥವಾ ಹತ್ತು ದಿವಸಗಳಲ್ಲಿ ನಾನು ಆ ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ. ಎಸ್.ಎಸ್.ಪಾಟೀಲರು ಹೇಳಿರುವ ಬಗ್ಗೆ ಹೇಳುವುದಾದರೆ, ಈ ವರ್ಷ

ಒಂದು ಸಾವಿರ ಹೊಸ ಬಸ್ಸುಗಳನ್ನು ಸೇರಿಸುತ್ತಿದ್ದೇವೆ. ಕಳೆದ ವರ್ಷ ಒಂದು ಸಾವಿರ ಬಸ್ಸನ್ನು ಸೇರಿಸಿದ್ದೇವೆ. ಇನ್ನೆರಡು ವರ್ಷಗಳಲ್ಲಿ ಹುಬ್ಬಳ್ಳಿಯಲ್ಲಿ ಎಲ್ಲ ರೀತಿಯ ಸುಧಾರಣೆಗಳನ್ನು ತಂದು, ಎಂಟೂವರೆ ಲಕ್ಷ ಕಿ.ಮೀ.ಗಳಿಗೆ ಮೇಲೆ ಓಡತಕ್ಕಂಥ ಬಸ್ಸುಗಳನ್ನು ಡ್ರಾಪ್ ಮಾಡತಕ್ಕಂಥದ್ದಾಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ ಎನ್ನುವುದನ್ನು ಹೇಳುತ್ತೇನೆ. ಡಿ.ಆರ್.ಪಾಟೀಲ್‌ರವರು ಗದಗ್ ಬಸ್‌ಸ್ಟ್ಯಾಂಡ್ ಬಗ್ಗೆ ಏನು ಹೇಳಿದ್ದಾರೆ, ಗದಗ್ ಬಸ್‌ಸ್ಟ್ಯಾಂಡನ್ನು ಕಾಂಕ್ರೀಟ್ ಮಾಡಲು ಈಗಾಗಲೇ M.D. ಯವರು ನನ್ನ ಒಪ್ಪಿಗೆಯನ್ನು ತೆಗೆದುಕೊಂಡು ಹೋಗಿದ್ದಾರೆ. ಅದನ್ನೂ ಸಹ ಮಾಡಿಕೊಡುತ್ತೇವೆ. ಶ್ರೀನಿವಾಸಗೌಡರು ಏನು ಹೇಳಿದ್ದಾರೆ, ಅದನ್ನು ನಾವು ರದ್ದು ಮಾಡುತ್ತೇವೆ ಎಂದು ಹೇಳಿದ್ದೇನೆ, ಅದರ ಬಗ್ಗೆ ಕ್ರಮವನ್ನೂ ತೆಗೆದುಕೊಳ್ಳುತ್ತೇವೆ, ಅದರ ಬಗ್ಗೆ ಯಾವುದೇ ಅನುಮಾನ ಬೇಡ. ವಾಟಾಳ್ ನಾಗರಾಜ್‌ರವರು ಕೇಳಿರತಕ್ಕಂಥಾದ್ದರ ಬಗ್ಗೆ ನಾನು, ಮುಖ್ಯಮಂತ್ರಿಯವರಿಬ್ಬರೂ ಈಗಾಗಲೇ ಮಾತನಾಡಿದ್ದೇವೆ. ಈಗಾಗಲೇ 60%, 70%, 80% passes clear ಆಗಿವೆ. ನಾವಿಬ್ಬರೂ ಹಣಕಾಸಿನ ಸಚಿವರ ಜೊತೆ ಮಾತನಾಡಿ, ಹೊಸ ಪದ್ಧತಿಯನ್ನು ತರುವ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದೇವೆ. ಈ ವರ್ಷವೇ ಅದನ್ನು ಜಾರಿ ಮಾಡುವ ರೀತಿಯಲ್ಲಿ ಮಾಡುತ್ತೇವೆ. ಹುಬ್ಬಳ್ಳಿ ಸಂಸ್ಥೆಯಲ್ಲಿ ಈಗಾಗಲೇ ನೂರಕ್ಕೆ ನೂರರಷ್ಟು pass issue ಆಗಿದೆ. ಈಗ ಮತ್ತೆ ಕಡಿಮೆ ಮಾಡಲಿಕ್ಕೆ ಹೋದರೆ ಅದು ಸೂಕ್ತವಾಗುವುದಿಲ್ಲ. ಖಂಡಿತವಾಗಿ ನಾವು ಮುಂದಿನ ವರ್ಷಕ್ಕೆ ಒಂದು ಹೊಸ ಸಿಸ್ಟಂ ಅನ್ನು ತಂದು, ಈಗ ನಾವು ಮಾಡುತ್ತಿರುವುದಕ್ಕಿಂತ ಒಳ್ಳೆಯ ಉತ್ತಮವಾದಂಥಾದ್ದನ್ನು ನಾವು ವಿದ್ಯಾರ್ಥಿಗಳಿಗೆ ಕೊಡಬೇಕು ಎನ್ನುವ ಬಗ್ಗೆ ನಾನು, ಮುಖ್ಯಮಂತ್ರಿಗಳು ಮಾತನಾಡಿದ್ದೇವೆ. ಖಂಡಿತವಾಗಿ ಅದನ್ನು ನಾವು implement ಮಾಡುತ್ತೇವೆ. ಈ ವರ್ಷದಲ್ಲೇ ಅದಕ್ಕೆ ಚಾಲನೆ ಕೊಡುವ ರೀತಿಯಲ್ಲಿ ಸೂಕ್ತ ಏರ್ಪಾಡು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ, ದರ ಇಳಿಸುವ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು.

ಅಧ್ಯಕ್ಷರು : ನಾಗರಾಜ್‌ರವರೇ, ಈ ರೀತಿಯಾದರೆ ಹೇಗೆ? ಬಜೆಟ್ ಪಾಸ್ ಆಗಬೇಕೋ ಹೇಗೆ?

ಶ್ರೀ ಎನ್.ಚಲುವರಾಯಸ್ವಾಮಿ : ಒಂದು ನಿಮಿಷ ಕುಳಿತುಕೊಳ್ಳಿ ವಾಟಾಳ್‌ರವರೇ, ಹೇಳುತ್ತೇನೆ. ಈಗಾಗಲೇ ದರವನ್ನು ಇಳಿಸಿದ್ದೇವೆ. ದರವನ್ನು ಇಳಿಸಿರುವ ಜೊತೆಗೆ ಇನ್ನೂ ಒಂದು benefit ಕೊಡತಕ್ಕಂಥಾದ್ದರ ಬಗ್ಗೆ ನಾನು ಇಲ್ಲಿ ಹೇಳುವುದು ಬೇಡ, ಹಣಕಾಸು ಸಚಿವರು ಮತ್ತು ಇಲಾಖೆಯ ಜೊತೆ ಮಾತನಾಡಿ ಅಂತಿಮ ತೀರ್ಮಾನವನ್ನು ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಬೇಡಿಕೆಗಳ ಮೇಲೆ ಉತ್ತರ ಕೊಡುವಾಗ ಹೇಳದೇ ಇನ್ನ್ಯಾವಾಗ ಹೇಳುತ್ತೀರಿ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ದರ ಇಳಿಸುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ವಿದ್ಯಾರ್ಥಿಗಳ ಬಸ್‌ಪಾಸ್ ಬಗ್ಗೆ ಮಾತ್ರವಲ್ಲ, ಪ್ರಯಾಣಿಕರ ಪ್ರಯಾಣದ ದರವನ್ನು ಇಳಿಸುವ ಬಗ್ಗೆಯೂ ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಈ ರೀತಿಯಾದರೆ ಆಗುವುದಿಲ್ಲ. ಆಯಿತು, ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕೇಂದ್ರದವರು ಪೆಟ್ರೋಲ್ ಮತ್ತು ಡೀಸೆಲ್‌ನ ದರವನ್ನು ಇಳಿಸಿರುವಾಗ ಇವರು ತಮ್ಮ ಸಂಸ್ಥೆ ಲಾಭದಾಯಕವಾಗಿದೆ ಎಂದು ಹೇಳಿ ಶಹಭಾಷ್‌ಗಿರಿ ಪಡೆದುಕೊಂಡು, ಹೀಗೆ ದರ ಏರಿಸತಕ್ಕಂಥಾದ್ದು ಸರಿಯಲ್ಲ. ವಿದ್ಯಾರ್ಥಿಗಳದ್ದೊಂದೇ ಮಾತ್ರವಲ್ಲ, ಪ್ರಯಾಣಿಕರದೂ ಇಳಿಸಬೇಕು. ಅದನ್ನು ಈ ಸದನದಲ್ಲಿ ಹೇಳಬೇಕು.

(ಗೊಂದಲ)

ಅಧ್ಯಕ್ಷರು : ಆಯಿತು, ನಾಗರಾಜ್‌ರವರೇ ಕುಳಿತುಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ವಿದ್ಯಾರ್ಥಿಗಳ ಬಸ್‌ಪಾಸ್, ಇತರ ಎಲ್ಲಾ ಪಾಸುಗಳು ಮತ್ತು ಇತರ ಎಲ್ಲಾ ಪ್ರಯಾಣದ ದರಗಳನ್ನು ಕಡಿಮೆ ಮಾಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಪರ್ಮಿಟ್ ಇಲ್ಲದ ಬಸ್ಸುಗಳನ್ನು ಯಾವತ್ತಿನಿಂದ ರದ್ದು ಮಾಡುತ್ತಾರೆ ಎನ್ನುವುದನ್ನೂ ಹೇಳಬೇಕು.

(ಗೊಂದಲ)

ಶ್ರೀ ಎಸ್.ಚಲುವರಾಯಸ್ವಾಮಿ : ಯಾವುದೇ ರೂಟಿನಲ್ಲಿ ಓಡಾಡತಕ್ಕಂಥ ಪರ್ಮಿಟ್ ಇಲ್ಲದೇ ಇರುವ ಬಸ್ಸುಗಳನ್ನು ನಾಳೆಯಿಂದಲೇ ರದ್ದು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಭಾಷಣವನ್ನೂ ಮಾಡುತ್ತೀರಿ? Clarification ಅನ್ನೂ ಕೇಳುತ್ತೀರಿ. ಈ ರೀತಿಯಾದರೆ ಹೇಗೆ? ತಾವು ಉತ್ತರ ಕೊಡಿ. ನಿಮ್ಮದು ಆಯಿತೇ?

(ಗೊಂದಲ)

ಶ್ರೀ ಧರ್ಮಸಿಂಗ್ : ಯಾರು ಉತ್ತರ ಕೊಡುತ್ತಾರೆ?

ಅಧ್ಯಕ್ಷರು : ಅವರು ಉತ್ತರ ಕೊಟ್ಟಿದ್ದಾರಲ್ಲ. ವಿರೋಧ ಪಕ್ಷದ ನಾಯಕರು ಈ ರೀತಿ ಮಾಡಿದರೆ ನಾವು ಸಭೆ ನಡೆಸಲು ಆಗುವುದಿಲ್ಲ. ಎಲ್ಲಿ 224 ಜನರೂ ನಿಂತುಕೊಂಡು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಧರ್ಮಸಿಂಗ್ : ತಮ್ಮ ಎಲ್ಲ ಸಂಸ್ಥೆಗಳೂ ಲಾಭದಲ್ಲಿ ನಡೆಯುತ್ತಿವೆ ಎಂದು ಹೇಳಿಕೊಳ್ಳುತ್ತಾರೆ. ಮತ್ತೆ ರೇಟ್ ಹೆಚ್ಚು ಮಾಡಲು ಹೋಗುತ್ತಾರೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ನಿಮ್ಮಿಷ್ಟ ಬಂದ ಹಾಗೆ ನಡೆದುಕೊಳ್ಳುತ್ತಿದ್ದೀರಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಎಲ್ಲಾ ಸಂಸ್ಥೆಗಳೂ ಲಾಭದಾಯಕವಾಗಿದೆ ಎಂದು ಒಂದು ಕಡೆ ಹೇಳುತ್ತಾರೆ. ಈಗ ಡೀಸೆಲ್ ಮತ್ತು ಪೆಟ್ರೋಲ್‌ನ ದರ ಕೂಡ ಹೆಚ್ಚಾಗಿಲ್ಲ. ಆದರೂ ಇವತ್ತಿನ ದಿವಸ ಬಸ್ ದರವನ್ನು ಏಕೆ ಏರಿಕೆ ಮಾಡುತ್ತಿದ್ದೀರಿ? ಮತ್ತೊಂದು ವಿಷಯವೆಂದರೆ, ಮುಖ್ಯಮಂತ್ರಿಗಳೇ ಯಾವುದಾದರೂ ಇಂಥ Policy decision ತೆಗೆದುಕೊಳ್ಳಬೇಕಾದರೆ you have to consult opposition parties. ಆ ರೀತಿಯೇನೂ ಆಗುತ್ತಿಲ್ಲ. ಇದು ಏನೆಂದು ನಮಗೆ ಅರ್ಥವಾಗುತ್ತಿಲ್ಲ. ಎಲ್ಲ ಕಡೆ ಲಾಭದಾಯಕವಾಗಿದೆ,

ನಮಗೆ ಯಾವುದೂ ಕಷ್ಟವಿಲ್ಲ ಎಂದು ಹೇಳುತ್ತಾರೆ. ಕಷ್ಟವಿಲ್ಲದಿದ್ದರೆ ದರವನ್ನು ಏಕೆ ಏರಿಕೆ ಮಾಡುತ್ತೀರಿ? ಸಾಮಾನ್ಯ ಜನರಿಗೆ ಏಕೆ ಹೊರೆ ಹಾಕುತ್ತೀರಿ? ಇದು ಸರಿಯಾದ ರೀತಿಯಲ್ಲ. ಪೆಟ್ರೋಲ್, ಡೀಸೆಲ್ ದರಗಳು ಕಡಿಮೆಯಾಗಿದ್ದರೂ ಕೂಡ ದರವನ್ನು ಏರಿಸಿ ಬಿಡುತ್ತಾರೆ.

ಅಧ್ಯಕ್ಷರು : ಅದಕ್ಕೆ ಮುಖ್ಯಮಂತ್ರಿಗಳು ಉತ್ತರ ಹೇಳುವಾಗ ಹೇಳುತ್ತಾರೆ.

(ಗೊಂದಲ)

ಶ್ರೀ ಚಲುವರಾಯಸ್ವಾಮಿ : ದಯವಿಟ್ಟು ಕೂರಿಸಿ Sir. ನಾನು ಉತ್ತರವನ್ನು ಮುಗಿಸಿಬಿಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ದರವನ್ನು ಇಳಿಸುವ ಬಗ್ಗೆ ಅವರ ಇಲಾಖೆಯವರು ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

ಅಧ್ಯಕ್ಷರು : ನಾಗರಾಜ್‌ರವರೇ, ಪದೇ ಪದೇ ಹೀಗೆ ನಿಂತುಕೊಂಡರೆ ನಾನು ಸುಮ್ಮನಿರುವುದಿಲ್ಲ. ಒಂದು ಸಾರಿ ಮಾತ್ರ Clarification ಕೇಳಬೇಕು. ಪದೇ ಪದೇ ಕೇಳುವುದಕ್ಕೆ ಅವಕಾಶವಿಲ್ಲ.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ರಾಜೇಂದ್ರನ್‌ರವರು ಏನು ಹೇಳಿದ್ದಾರೆ, ಅವರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಅದನ್ನು ಮುಖ್ಯಮಂತ್ರಿಯವರು, ನಾವು ಉದ್ಘಾಟನೆ ಮಾಡಿದ್ದೇವೆ. ಯಾವ ಕಾರಣದಿಂದ ಸಚಿವರು ಆ ರೀತಿ ಹೇಳಿಕೆ ಕೊಟ್ಟಿದ್ದಾರೋ ಗೊತ್ತಿಲ್ಲ. ಹಳೆಯ ಬಸ್‌ಸ್ಟ್ಯಾಂಡ್‌ನ್ನು ಕ್ಲೋಸ್ ಮಾಡಿ ಹೊಸ ಬಸ್‌ಸ್ಟ್ಯಾಂಡ್‌ನಲ್ಲಿ ನಡೆಯಬೇಕು ಎನ್ನುವ ಬಗ್ಗೆ ನಾವು ಆದೇಶ ಕೊಟ್ಟಿದ್ದೇವೆ. ಅದರ ಬಗ್ಗೆ Notification ಮಾಡಿದ್ದಾರೆ. ಆದರೆ, ನಿನ್ನೆ ಅವರು ಹೇಳಿಕೆ ಕೊಟ್ಟಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಮಾನ್ಯ ಸಚಿವರ ಜೊತೆ ಮಾತನಾಡುತ್ತೇನೆ. ರಾಜೇಂದ್ರನ್‌ರವರು ಹೇಳುತ್ತಿರುವುದು ಸರಿಯಾಗಿದೆ. ಅಲ್ಲಿ 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಿದ್ದೇವೆ. ಅದನ್ನು ಪ್ರಾರಂಭ ಮಾಡಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಆರಗ ಜ್ಞಾನೇಂದ್ರರವರು ಮತ್ತು ಇನ್ನಿತರ ಸದಸ್ಯರು ಏನು ಹೇಳಿದ್ದಾರೆ, ಅದರ ಬಗ್ಗೆ ನಾವು ಸುಧಾರಣೆ

ತರಲು ಕ್ರಮ ತೆಗೆದುಕೊಂಡಿದ್ದರೂ ಸಹ ಇನ್ನೂ ನಡೆಯುತ್ತಿದೆ ಎಂದು ಹೇಳಿದ್ದಾರೆ. ಓವರ್ ಲೋಡ್ ಬಗ್ಗೆ ಮತ್ತು ಮಲೆನಾಡು ಭಾಗದಲ್ಲಿರತಕ್ಕಂಥ ಇನ್ನಿತರ ಸಮಸ್ಯೆಗಳ ಬಗ್ಗೆ ಜಯಪ್ರಕಾಶ ಹೆಗ್ಡೆಯವರೂ ಸಹ ನಮ್ಮ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳುವುದರ ಜೊತೆಗೆ, ಅಲ್ಲಿ ಯಾವ ರೀತಿ ಅನಾನುಕೂಲವಾಗಿದೆಯೋ ಅದನ್ನು ಸರಿಪಡಿಸುತ್ತೇವೆ. ಇನ್ನು, ದರ ಏರಿಕೆಯ ಬಗ್ಗೆ ಹೇಳಿದ್ದಾರೆ. ನಾವು ಇತ್ತೀಚಿನ ದಿನಗಳಲ್ಲಿ ದರವನ್ನು ಹೆಚ್ಚು ಮಾಡಿಲ್ಲ. ದಯಮಾಡಿ ವಿರೋಧ ಪಕ್ಷದ ನಾಯಕರು ಕೇಳಬೇಕು ಎಂದು ನನ್ನ ಮನವಿ. ಹಿಂದೆ ಎರಡು ಬಾರಿ diesel ಬೆಲೆ raise ಆದಾಗ, ಮೊದಲನೇ ಬಾರಿ ಬೆಲೆ raise ಆದಾಗ ನಾವು ticket rate raise ಮಾಡಲಿಲ್ಲ. ಎರಡನೇ ಸಲ diesel ಲೀಟರ್ ಒಂದಕ್ಕೆ 2 ರೂ. ಜಾಸ್ತಿ ಆದಾಗ 9 ತಿಂಗಳ ನಂತರ ಅದರಲ್ಲಿ 15% rate ಜಾಸ್ತಿ ಮಾಡುವ ಬದಲು ಕೇವಲ 7% ಮಾತ್ರ rate ಜಾಸ್ತಿ ಮಾಡಿದ್ದೇವೆ. ಎರಡೂ ಬಾರಿ ಜಾಸ್ತಿ ಮಾಡಬೇಕೆಂದು ಏನಿತ್ತು, ಅದನ್ನು ಮಾಡಲಿಲ್ಲ. ಈ ಸಲ ಲೀಟರ್ ಒಂದಕ್ಕೆ 1 ರೂ. ಕಡಿಮೆಯಾದಾಗ, ಆ 1 ರೂ.ಗೆ. ನಾವು tickate rate ಕಡಿಮೆ ಮಾಡುವುದಕ್ಕೆ ಹೋದರೆ 5 ಪೈಸೆ, 10 ಪೈಸೆ ಮಾತ್ರ ಹೆಚ್ಚು ಮಾಡತಕ್ಕಂಥದ್ದು, ಮತ್ತೆ 2 ರೂಪಾಯಿ ಜಾಸ್ತಿ ಆದಾಗ ಕಡಿಮೆ ಮಾಡುವುದು ಬೇಡ ಎಂದು, ಸದ್ಯದಲ್ಲಿ ಈ ವರ್ಷದಲ್ಲಿ ಅಥವಾ ಇನ್ನು 6 ತಿಂಗಳಲ್ಲಿ, 1 ವರ್ಷದಲ್ಲಿ diesel ಬೆಲೆ 2ರೂ. ಜಾಸ್ತಿ ಆದರೂ ಸಹ ಸಾರಿಗೆ ಸಂಸ್ಥೆಯಿಂದ rate ಅನ್ನು raise ಮಾಡುವುದಿಲ್ಲವೆನ್ನುವುದನ್ನು ಸಹ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಆದರೆ, ಏನು infrastruction fee ಅನ್ನು ಹೆಚ್ಚು ಮಾಡಿದ್ದೇವೆ, ನಾನು ಹೇಳುವುದನ್ನು ಕೇಳಿ ಸರ್.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಾನು ಈಗ ಏನು ಹೇಳುತ್ತೇನೆ. ಅದರಿಂದ ನಿಮಗೆ ಉತ್ತರ ಸಿಗುತ್ತದೆ. ಈಗ ಮಾನ್ಯ ಸಚಿವರ statement contradictory ಆಗಿದೆ. ಏಕೆಂದರೆ, ಕಳೆದ ಸಲ diesel ಬೆಲೆ ಮತ್ತು pertrol ಬೆಲೆ ಹೆಚ್ಚಿಗೆ ಆದರೂ ಕೂಡ ನಾವು ದರ ಏರಿಸಲಿಲ್ಲವೆಂದು ಹೇಳಿದರು. ದರ ಏರಿಸದಿದ್ದರೂ ಕೂಡ ಕಳೆದ ವರ್ಷ ಸಾರಿಗೆ ಸಂಸ್ಥೆ

ಲಾಭದಲ್ಲಿ ನಡೆಯಿತು. ಲಾಭದಲ್ಲಿ ನಡೆದ ಮೇಲೆ ಈ ಸಲವೂ diesel ಬೆಲೆ petrol ಬೆಲೆ ಇಳಿತವಾದ ಮೇಲೆ ಮತ್ತೇಕೆ ticket ದರ ಏರಿಸುತ್ತಿದ್ದೀರಿ?

(ಗೊಂದಲ)

ಶ್ರೀ ಎನ್.ಚೆಲುವರಾಯಸ್ವಾಮಿ : ಅದು 1 ರೂ.ನಿಂದ 10 ರೂಪಾಯಿಯ ticket ಗೆ rate ಜಾಸ್ತಿ ಮಾಡಲಿಲ್ಲ. 10 ರೂ.ನಿಂದ 20 ರೂಪಾಯಿಯ ticketಗೆ 1 ರೂ. ಜಾಸ್ತಿ ಮಾಡಿದ್ದೇವೆ. ಇದರ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಸಾರ್ವಜನಿಕರ ಅಭಿಪ್ರಾಯ ಕೇಳಿದಾಗ 80% bus stand, ವೆಚ್ಚ ಮಾಡಬೇಕೆಂದು ಬರೆದಿದ್ದಾರೆ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ತಾವು ಈಗ ಪ್ರಯಾಣಿಕರ ದರವನ್ನು ಕಡಿಮೆ ಮಾಡುತ್ತೀರೋ ಇಲ್ಲವೋ ಅನ್ನುವುದನ್ನು ಸ್ಪಷ್ಟವಾಗಿ ಹೇಳಿ. ಸಾರ್ವಜನಿಕರ ಅಭಿಪ್ರಾಯವನ್ನು ಕೇಳಿ ಮಾಡುವುದಾದರೆ ನೀವು ಎಷ್ಟು ಜನ ಸಚಿವರು ಯಾವ್ಯಾವುದಕ್ಕೆ ಕೇಳಿದ್ದೀರಿ? ಹೇಳಿ. ನೀವೂ ಕೂಡ ಸಾರ್ವಜನಿಕರ ಅಭಿಪ್ರಾಯ ಕೇಳಿ ಮಾಡಿಬಿಡಿ. ಇನ್ನು ಮೇಲೆ assemblyಯಲ್ಲಿ ಕೆಲಸ ಏನೂ ಆಗುವುದು ಬೇಡ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನೀವು ಸುತ್ತಿ ಬಳಸಿ ಹೋಗುವುದು ಬೇಡ. ನೀವು ದರ ಇಳಿಸುತ್ತೀರೋ ಇಲ್ಲವೋ ಅಷ್ಟು ಹೇಳಿ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಸಾರ್ವಜನಿಕರ ಅಭಿಪ್ರಾಯ ಕೇಳಿ ಮಾಡುವುದಾದರೆ ನೀವ್ಯಾಕೆ ಇಲ್ಲಿ budget pass ಮಾಡಿಕೊಡಿ ಎಂದು ಕೇಳುತ್ತೀರಿ? ನಾವ್ಯಾಕೆ ಇಲ್ಲಿ budget pass ಮಾಡಿಕೊಡಬೇಕು?

(ಗೊಂದಲ)

ಅಧ್ಯಕ್ಷರು : ಆಯಿತು. ಇಲ್ಲಿಗೆ ಉತ್ತರ ಮುಕ್ತಾಯವಾಗಿದೆ. ಈಗ ಮಾನ್ಯ ಎಂ.ಪಿ.ಪ್ರಕಾಶ್‌ರವರು ಉತ್ತರ ಹೇಳಬೇಕು.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ : ನಾವು ಕೇಳಿದ ವಿಷಯಗಳಿಗೆ ಸರಿಯಾದ ಉತ್ತರ ಕೊಡದಿರುವುದರಿಂದ ನಾವು ಸಭಾತ್ಯಾಗ ಮಾಡುತ್ತೇವೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : Rate ಜಾಸ್ತಿ ಮಾಡಿ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದ್ದಾರೆ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷಗಳಾದ, ಕಾಂಗ್ರೆಸ್ ಪಕ್ಷದ ಸದಸ್ಯರು, ವಾಟಾಳ್ ಪಕ್ಷದ ಶ್ರೀ ವಾಟಾಳ್ ನಾಗರಾಜ್, ಜೆಡಿಯು ಪಕ್ಷದ ಶ್ರೀ ಜೆ.ಸಿ.ಮಾಧುಸ್ವಾಮಿ, ಕಮ್ಯುನಿಸ್ಟ್ ಪಕ್ಷದ ಸದಸ್ಯರಾದ ಶ್ರೀ ಜಿ.ವಿ.ಶ್ರೀರಾಮರೆಡ್ಡಿ ಯವರು ಸರ್ಕಾರ, ಸಾರಿಗೆ ಸಚಿವರ ವಿರುದ್ಧ ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಮಾನವ ಹಕ್ಕುಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಗೃಹ, ಕಾನೂನು, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಬಹಳ ದೀರ್ಘವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾದಂಥ ಅಗತ್ಯತೆ ಇಲ್ಲ. ಇದರ ಬಗ್ಗೆ ಕೆಲವು ಮಾನ್ಯ ಸದಸ್ಯರುಗಳು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ ಹಿನ್ನೆಲೆಯಲ್ಲಿ ಕೆಲವಕ್ಕೆ ಮಾತ್ರ ಉತ್ತರಗಳನ್ನು ಕೊಡುವಂಥ ಪ್ರಯತ್ನ ಮಾಡುತ್ತೇನೆ. ಕಳೆದ ಈ ಒಂದು ವರ್ಷದಲ್ಲಿ ನಮ್ಮ ಇಲಾಖೆಯಲ್ಲಿ ಆಗುತ್ತಿರತಕ್ಕಂಥ ಪ್ರಗತಿ, ಮಾಡಿರುವ ಕೆಲಸ ಮತ್ತು ಮಾಡಬೇಕಾಗಿರುವ ಕೆಲಸದ ಬಗ್ಗೆ ನಮ್ಮ ರೂಪುರೇಷೆಗಳೇನಿವೆ ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಪೊಲೀಸ್ ಇಲಾಖೆಯ ಪರಿಕಲ್ಪನೆ ಎನ್ನುವಂಥದ್ದು ನಿನ್ನೆ ಮೊನ್ನೆಯಲ್ಲ, ಅಥವಾ ಬ್ರಿಟಿಷರು ನಮ್ಮ ದೇಶಕ್ಕೆ ಬಂದ ನಂತರ ಆಗಿರುವಂಥದ್ದು ಅಲ್ಲ. ನಮ್ಮ ಅರ್ಥಶಾಸ್ತ್ರದಲ್ಲಿ ಈ ವಿಚಾರ ಇದೆ. ಪ್ರಸ್ತಾಪ ಮಾಡುತ್ತಾರೆ. ಮೊಗಲರ ಕಾಲದಲ್ಲಿಯೂ ಕೂಡ ಇಂಥದ್ದೇ ಆಗಿರತಕ್ಕಂಥ ಬೇಹುಗಾರರಿಗೆ ಸಂಬಂಧಪಟ್ಟ Watch and ward ಎನ್ನುವ ಒಂದು ಪರಿಕಲ್ಪನೆ ಈ ವಿಚಾರಗಳನ್ನು ನೋಡಿಕೊಳ್ಳುವ ಕಿವಿಯಾಗಿ, ಕಣ್ಣಾಗಿ ಸರ್ಕಾರ ಮತ್ತು ಜನತೆಯ ನಡುವೆ ಸುವ್ಯವಸ್ಥೆಯನ್ನು ತರತಕ್ಕಂಥ ವ್ಯವಸ್ಥೆಗೆ ಅನುಗುಣವಾಗಿರುವಂಥ ರೀತಿಯಲ್ಲಿ ಆ ಪರಿಕಲ್ಪನೆಗಳನ್ನು ಕಾಲಕಾಲಕ್ಕೆ ಅಲ್ಲಿಯ ಆಶೋತ್ತರಗಳು ಬದಲಾದಂತೆ, ಕೈಗಾರಿಕಾ ಉತ್ಪನ್ನಗಳು ಹೆಚ್ಚಾದಂತೆ, ತಂತ್ರಜ್ಞಾನ ಹೆಚ್ಚಾದಂತೆ, ಅಪರಾಧಗಳ ಬದಲಾದಂಥ ರೀತಿಯಲ್ಲಿ ಈ

ಕಾನೂನನ್ನು ಬದಲಿ ಮಾಡಿದ್ದೇವೆ. 1861 ರಲ್ಲಿ ಪೊಲೀಸ್ ಕಾಯಿದೆಯನ್ನು ಬ್ರಿಟಿಷರು ತಂದರು, ಅದಕ್ಕೆ ಕಾಲಕಾಲದಲ್ಲಿ ತಿದ್ದುಪಡಿಯನ್ನು ತಂದಿರುವುದನ್ನು ಮಾಡಿದ್ದೇವೆಯೇ ವಿನಃ ಆ ಕಾನೂನನ್ನು ನಾವು ರದ್ದುಪಡಿಸಿಲ್ಲ. ಅದೇ ರೀತಿಯಾಗಿ Indian Evidence Act ಎಂದು ಆ ಕಾಲದಲ್ಲಿ ಇರತಕ್ಕಂಥದ್ದರಲ್ಲಿ Presumption of innocence ಎನ್ನತಕ್ಕಂಥ ನಮ್ಮ ಒಂದು ಪರಿಕಲ್ಪನೆಗಳಲ್ಲಿ ಯಾರು ತಪಪಿತಸ್ಥರು ಎಂದು ಪರಿಭಾವಿಸಿಕೊಳ್ಳದೇ ಅವರು ನಿರ್ದೋಷಿಗಳು ಯಾರು ಅವರ ಮೇಲೆ ಆಪಾದನೆಗಳನ್ನು ಮಾಡಿದ್ದಾರೆ, ಅವರು ರಾಜ್ಯ ಸರ್ಕಾರ ಆಗಿರಬಹುದು, ಅಥವಾ ಖಾಸಗಿಯಾಗಿರುವಂಥ Complant ಆಗಿರಬಹುದು, ಅವರು ಮಾತ್ರ ಆ ಅಪರಾಧವನ್ನು ಸ್ಥಿರೀಕರಿಸಬೇಕು, ಸಾಬೀತುಪಡಿಸಬೇಕೆನ್ನುವ ಒಂದು ನಾಗರೀಕ ಪ್ರಪಂಚದ ಹೊಸ ಆಶಯಗಳ ಮೂಲಕವಾಗಿ ಅನೇಕ ಸಂದರ್ಭಗಳಲ್ಲಿ ಸಾಕ್ಷಿಧಾರಿಗಳು ವ್ಯತ್ಯಾಸಗಳು ಮಾಡುತ್ತಿರುತ್ತಾರೆ. ಹೊಸ ಹೊಸ ತೀರ್ಮಾನಗಳು ಬಂದಿವೆ. ಅವುಗಳಿಗೆ ಅನುಗುಣವಾಗಿ ನಾವು ರಾಜ್ಯಭಾರವನ್ನು ಮಾಡಲೇಬೇಕಾಗುತ್ತದೆ. ಹಿಂದೆ ಇಂಗ್ಲೀಷರ ಕಾಲದಲ್ಲಿ ಪೊಲೀಸರಿಗೆ ಅವರನ್ನು brutalization of the forces ಎಂದು ಕರೆಯುತ್ತಿದ್ದರು. ಅವರನ್ನು ಕ್ರೂರಿಗಳನ್ನಾಗಿ, ಹಿಂಸಾ ಪ್ರವೃತ್ತಿಯಲ್ಲಿಯೇ ಹೆದರಿಕೆಯ ಭಯದ ವಾತಾವರಣವನ್ನು ಸೃಷ್ಟಿ ಮಾಡಲಿಕ್ಕೆ ಪೊಲೀಸರನ್ನು ಬಳಸಿಕೊಳ್ಳತಕ್ಕಂಥದ್ದು ಸಾಧಾರಣವಾಗಿತ್ತು. ಆದರೆ, ಸ್ವತಂತ್ರೋತ್ತರ ಭಾರತದಲ್ಲಿ, ಪೊಲೀಸರು ಜನತೆಯ ಸ್ನೇಹಿತರು. ಅವರ ಪ್ರಾಣ, ಮಾನ, ಆಸ್ತಿ ಇವುಗಳನ್ನು ರಕ್ಷಣೆ ಮಾಡುವುದರ ಜೊತೆಗೆ ಮುಂದೆ ಇಂಥ ಅಪರಾಧಗಳನ್ನು ಮಾಡತಕ್ಕಂಥ ಸಮಾಜಬಾಹಿರ ವ್ಯಕ್ತಿಗಳನ್ನು, ಸಂಘಟನೆಗಳನ್ನು ಅವರನ್ನು ಮೊದಲೇ ಕಂಡುಹಿಡಿದು ಅದರ ಮೇಲೆ ಜಾಗೃತಾ ಕ್ರಮಗಳನ್ನು ಕೈಗೊಳ್ಳುವ ರೀತಿಯಲ್ಲಿ ಸ್ವತಂತ್ರೋತ್ತರ ಭಾರತದಲ್ಲಿ ಪೊಲೀಸ್ ಇಲಾಖೆ ಜನತೆಯ ಸ್ನೇಹಿತರಾಗಿ ಸಮಾಜದಲ್ಲಿ ಕಷ್ಟನಿಷ್ಠುರಗಳು ಬಂದಂಥ ಸಂದರ್ಭದಲ್ಲಿ ಕೂಡ ಅವರಿಗೆ ಸಾಂತ್ವನ ಹೇಳುವ ರೀತಿಯಲ್ಲಿ ಅದು ಬದಲಾವಣೆಯಾಗಿರುವುದನ್ನು ನಾವು ಕಾಣುತ್ತೇವೆ. ಈ ದೃಷ್ಟಿಕೋನದಿಂದ ಕರ್ನಾಟಕ ಪೊಲೀಸ್‌ನವರು ನಿಜವಾಗಿಯೂ ಕೂಡ ಭಾರತ ದೇಶದ ಕೆಲವೇ ಪ್ರಮುಖ ರಾಜ್ಯಗಳಲ್ಲಿ ಇದೊಂದು ಉತ್ತಮವಾಗಿರುವ ಹೆಸರನ್ನು ಪಡೆದಿರುವ ಪೊಲೀಸ್ ಇಲಾಖೆಯಾಗಿದೆ. ಈ

ವಿಚಾರವನ್ನು ಮಾತನಾಡುತ್ತೇವೆ ಎಂದ ತಕ್ಷಣವೇ ಪೊಲೀಸ್ ಇಲಾಖೆಯಲ್ಲಿ ಏನೂ ತಪ್ಪಿಲ್ಲವೆಂದಲ್ಲ. ಪೊಲೀಸರು ಕೂಡ ನಮ್ಮ ಸಮಾಜದ ಮಧ್ಯದಿಂದಲೇ ಎದ್ದು ಬಂದವರು. ಅವರೂ ಕೂಡ ನಮ್ಮ ಸಹೋದರರು ಆದಂತೆ. ವ್ಯವಸ್ಥೆ ಎಷ್ಟು ಕೆಟ್ಟಿದೆ, ಅಷ್ಟು ಪ್ರಮಾಣದಲ್ಲಿಯೂ ಕೂಡ ಪೊಲೀಸರಲ್ಲಿ ಕೆಲವು ಕಪ್ಪು ಚುಕ್ಕೆಗಳಿರಬಹುದು. ಆದರೆ, ಅವರು ಒತ್ತಡಗಳ ನಡುವೆ ಕೆಲಸ ಮಾಡುವ ರೀತಿಯಲ್ಲಿ ರಾಜಕೀಯ ಹಸ್ತಕ್ಷೇಪ ಅವರ ನೇಮಕಾತಿಯಲ್ಲಾಗಲಿ, ಅಥವಾ ಅವರ ಕಾರ್ಯನಿರ್ವಹಣಾ ವೈಖರಿ ಯಲ್ಲಾಗಲಿ, ರಾಜಕೀಯ ಹಸ್ತಕ್ಷೇಪ ಬಹಳ ಕಡಿಮೆ ಪ್ರಮಾಣದಲ್ಲಿ ಕರ್ನಾಟಕದಲ್ಲಿದೆ. ಅತ್ಯಂತ ಹೆಗ್ಗಳಿಕೆಯಿಂದ ಹೇಳಬಹುದಾದ ಮಾತೆಂದರೆ, 2006ರಲ್ಲಿ ನೇಮಕಾತಿ ಮಾಡಿಕೊಂಡಂಥ ಪ್ರಕರಣ ಭಾರತ ದೇಶದಲ್ಲಿಯೇ ಅತ್ಯುತ್ತಮವಾದ ಪಾರದರ್ಶಕವಾದ ಪ್ರಾಮಾಣಿಕವಾದಂಥ ಒಂದು ದೊಡ್ಡ ಪ್ರಯತ್ನ ಮತ್ತು 6 ತಿಂಗಳೊಳಗಾಗಿ ಸುಮಾರು 3497 ಪೊಲೀಸ್ ಪೇದೆಗಳನ್ನು ಅದರಲ್ಲೂ ಮುಖ್ಯವಾಗಿ 387 ಮಹಿಳಾ ಪೊಲೀಸ್ ಪೇದೆಗಳನ್ನು 433 APC ಗಳನ್ನು, 192 PSI ಗಳನ್ನು 33 ಮಹಿಳಾ PSI ಗಳನ್ನು 4 RSI ಗಳನ್ನು 34 RSI, KSRP ಇವರುಗಳ ನೇಮಕಾತಿ ಮಾಡಿದ್ದೇವೆ. ಇಂಥ ನೇಮಕಾತಿ ಮಾಡಿ ಈಗಾಗಲೇ ತರಬೇತಿಯಲ್ಲಿದ್ದಾರೆ. ಅವರನ್ನು ಇನ್ನು ಸ್ವಲ್ಪ ದಿವಸಗಳಲ್ಲಿಯೇ ವಿವಿಧ ಇಲಾಖೆಗಳಲ್ಲಿ ವಿವಿಧ ಠಾಣೆಗಳಲ್ಲಿ ಅವರು ಕರ್ತವ್ಯದಲ್ಲಿ ನಿರತರಾಗುತ್ತಾರೆ. ಆದರೆ, ಈಗಿರತಕ್ಕಂಥ ಒಟ್ಟು ಸುಮಾರು 77000 ದಷ್ಟಿರುವ ನಮ್ಮ ಪೊಲೀಸ್ ಸಿಬ್ಬಂದಿ ನಡುವೆ ಸುಮಾರು 6 ಕೋಟಿ ಜನಸಂಖ್ಯೆಯ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವಂಥದ್ದು, ಯಾವುದಾದರೂ ಪ್ರಕೃತಿ ವಿಕೋಪ ಮೊದಲಾಗಿರುವ ಅವಘಡಗಳು ನಡೆದಾಗ ಪ್ರಜೆಗಳ ಸಹಾಯಕ್ಕೆ ಬರತಕ್ಕಂಥದ್ದು, ಅದರ ಜೊತೆಗೆ ಈ ಹೊಸ cyber crime ಮೊದಲಾದಂಥ ಭಯೋತ್ಪಾದಕರು, ನಕ್ಸಲರು ಮೊದಲಾದಂಥವರನ್ನು ಕಂಡುಹಿಡಿಯುವಂಥ ಅವರ ಮೇಲೆ ಕ್ರಮ ಕೈಗೊಳ್ಳುವ ಕೆಲಸಕ್ಕೆ ಈ ಸಿಬ್ಬಂದಿ ಬಹಳ ಕಡಿಮೆ. ಆದರೂ ಕೂಡ ಈ ಸಲದಲ್ಲಿ ಸಿಬ್ಬಂದಿಗಾಗಿಯೇ ಸುಮಾರು 3420 ಜನ, ಅದರಲ್ಲಿ 605 ಮಹಿಳಾ ಪೊಲೀಸರನ್ನು ನೇಮಕಾತಿ ಮಾಡಿಕೊಳ್ಳಬೇಕೆನ್ನುವು ದಕ್ಕಾಗಿಯೇ 10–7–2007 ರಂದು ನಾವು ಅಧಿಕೃತ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಇವರನ್ನು ನೇಮಕಾತಿ ಮಾಡಿಕೊಳ್ಳುವುದರ ಜೊತೆಗೆ ಭಾರತೀಯ ಮೀಸಲು

ಪಡೆಯನ್ನು ಮುನಿರಾಬಾದ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಶಿಲಾನ್ಯಾಸ ಮಾಡುವುದರ ಮೂಲಕವಾಗಿ ಸುಮಾರು 263 ಎಕರೆಯ ವಿಸ್ತೀರ್ಣದ ಪ್ರದೇಶದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿರುವ ಜನಗಳಿಗೆ ತಕ್ಷಣದಲ್ಲಿ ಮೀಸಲು ಪಡೆಯ ಮೂಲಕ ಮತ್ತು ಅವರ ಲಭ್ಯತೆಯು ಆಗಲಿ ಎನ್ನುವ ಕಾರಣಕ್ಕಾಗಿ ಸುಮಾರು 1707 ಜನರನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದೇವೆ. ಕೇಂದ್ರ ಸರ್ಕಾರ ಮತ್ತು ನಮ್ಮ ರಾಜ್ಯ ಸರ್ಕಾರದ ಶೇಕಡ 50:50 ರ ಪಾಲಿನಲ್ಲಿ ಇದು ನಡೆಯುತ್ತದೆ. ಈಗಾಗಲೇ ಅದರ ಬಗ್ಗೆ ನೇಮಾಕಾತಿಯ ಪ್ರಕ್ರಿಯೆ ಮತ್ತು ಕಟ್ಟಡದ ಪ್ರಕ್ರಿಯೆಗಳಿಗೆ ಕೆಲಸ ಪ್ರಾರಂಭ ಮಾಡಿದ್ದೇವೆ. ಆಗಲೇ ಹಡಗಲಿಯಲ್ಲಿ ಈ ಸಶಸ್ತ್ರ ತರಬೇತಿ ಪಡೆಯ ಶಾಲೆಯನ್ನು ಪ್ರಾರಂಭ ಮಾಡಲಿಕ್ಕೆ ಸುಮಾರು 100 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆ. 3 ಕೋಟಿ ರೂಪಾಯಿಗಳನ್ನು ಈಗಾಗಲೇ ಅದಕ್ಕೆ ಮೀಸಲಾಗಿಟ್ಟಿರುವ ಜೊತೆಯಲ್ಲಿ ಇಲಾಖೆಯ ವ್ಯವಸ್ಥೆಯಲ್ಲಿ ಸುಮಾರು 2 ಕೋಟಿ ಹೀಗೆ ಒಟ್ಟು 5 ಕೋಟಿ ರೂಪಾಯಿಗಳ ಕೆಲಸ ಈಗ ಪ್ರಾರಂಭವಾಗುತ್ತದೆ. ಹಾಸನದಲ್ಲಿ ಒಂದು KSRP ಅಂದರೆ ಸಶ್ತ್ರ ಮೀಸಲು ಪಡೆಯನ್ನು ಪ್ರಾರಂಭ ಮಾಡಲಿಕ್ಕೆ ಈಗಾಗಲೇ ಎಲ್ಲಾ ತರಹದ ಕ್ರಗಳನ್ನು ಕೈಗೊಂಡಿದ್ದೇವೆ. ಅಂದರೆ, ಈ ಪೊಲೀಸ್ ಇಲಾಖೆಯಲ್ಲಿ ತೆಗೆದುಕೊಂಡಿರುವ ಅನೇಕ ಕಾರ್ಯಕ್ರಮಗಳ ಜೊತೆಗೆ ಇಲ್ಲಿ ಪ್ರಸ್ತಾಪ ಮಾಡಿರುವುದು ಮುಖ್ಯವಾಗಿ ಪಾಕಿಸ್ತಾನದಿಂದ ಬಂದಿರುವ ಅನೇಕ ಜನ ತಮ್ಮ ವೀಸಾದ ಅವಧಿ ಮುಗಿದ ಬಳಿಕವೂ ಇಲ್ಲಿಯೇ ಉಳಿದುಕೊಂಡಿದ್ದಾರೆನ್ನುವ ಮಾತನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು.

(12-30 PM)

ಅದರಲ್ಲಿ 2005ರ ಸುಮಾರಿಗೆ ಬಂದಂಥ, ಕ್ರಿಕೆಟ್ ಮ್ಯಾಚ್ ಕೊಡುತ್ತೇವೆ ಎನ್ನುವ ನೆಪದ ಮೂಲಕ ಅಥವಾ ಬಾಂಧವ್ಯ ಮೊದಲಾದ ರಕ್ತಸಂಬಂಧದ ಮೂಲಕವಾಗಿ ಅನೇಕರಲ್ಲಿ ಸುಮಾರು ಈ ರೀತಿ 500 ಜನಗಳು ಕಾಣೆಯಾಗಿದ್ದರು. ಇದು ಒಂದು ದೊಡ್ಡ ದೇಶ. ಪಾಕಿಸ್ತಾನ ಮತ್ತು ಭಾರತ ದೇಶವೂ ಕೂಡ ಬುಡಕಟ್ಟಿನ ಒಂದೇ ಜನಾಂಗವಾಗಿರುವುದರಿಂದ ethnic entity ಎಂದೇನು ಕರೆಯುತ್ತೇವೆ, ಆ ರೀತಿ ಇರುವುದರಿಂದ, ಅವರನ್ನು ನಾವು ಪ್ರತ್ಯೇಕವಾಗಿ ಗುರುತಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಊಟ, ಉಡುಗೆ, ಮಾತುಕತೆ, ಭಾಷೆ, ಇವೆಲ್ಲವೂ ಕೂಡ ಭಾರತೀಯರಿಗೂ ಮತ್ತು

ಪಾಕಿಸ್ತಾನದವರಿಗೂ ವ್ಯತ್ಯಾಸ ಇರುವುದು ಬಹಳ ಕಡಿಮೆ. ಎಲ್ಲೋ ಒಂದು ಕಡೆಗೆ ವಾಯುವ್ಯ ಸರಹದ್ದಿನ ಪಠಾಣರು ಇದ್ದಾಗ ಮಾತ್ರ ಸ್ವಲ್ಪಮಟ್ಟಿನ ವ್ಯತ್ಯಾಸ ಕಾಣಬಹುದೇ ವಿನಾ ಉಳಿದಂತೆ ಅವರು ನಮ್ಮ ಅಣ್ಣ-ತಮ್ಮಂದಿರು. ಕೇವಲ 60 ವರ್ಷಗಳ ಹಿಂದೆ ಅವರು ಪ್ರತ್ಯೇಕ ರಾಷ್ಟ್ರವಾಗಿ ಹೋಗಿದ್ದಾರೆ. ಆ ಕಾರಣಕ್ಕಾಗಿ ಅವರನ್ನು ಕಂಡುಹಿಡಿಯತಕ್ಕಂಥದ್ದು ಬಹಳ ಕಷ್ಟವಾಗಿದ್ದರೂ ಕೂಡ "ಗುಂಪಿನಲ್ಲಿ ಗೋವಿಂದ" ಎನ್ನುವುದು ಬಹಳ ಸುಲಭವಾಗಿರ ತಕ್ಕಂಥದ್ದು. ಆದರೂ ಕೂಡ ಈಗ ಸತತವಾದ ಪ್ರಯತ್ನದ ಮೂಲಕವಾಗಿ ಇದ್ದರೆ, ಈಗ 48 ಜನಗಳ ಬಗ್ಗೆ ಸತತವಾಗಿ ಪ್ರಯತ್ನವನ್ನು ಮಾಡುತ್ತಿದ್ದೇವೆ ಅವರು ಇಲ್ಲಿ ಇದ್ದಾರೆಯೋ ಅಥವಾ ಭಾರತ ದೇಶದ ಬೇರೆ ರಾಜ್ಯಗಳಿಗೆ ಹೋಗಿದ್ದಾರೆಯೇ ಅಥವಾ ವಾಪಸ್ಸು ಹೋಗಿರುವ ಸಂದರ್ಭದಲ್ಲಿಯೂ ಕೂಡ, ವಾಯುಮಾರ್ಗದಲ್ಲಿ, ರಸ್ತೆ ಮಾರ್ಗದಲ್ಲಿ, ಸಮುದ್ರಯಾನದ ಮೂಲಕ ಹೋಗತಕ್ಕಂಥ, ಜನಗಳಿದ್ದಾಗ ಗಡಿ ಪ್ರದೇಶದಲ್ಲಿದ್ದಂಥ ಪೊಲೀಸ್ ಠಾಣೆಗಳು ಆ ಮಾಹಿತಿಗಳನ್ನು ಒಮ್ಮೊಮ್ಮೆ ರಾಜ್ಯ ಸರ್ಕಾರಕ್ಕೆ ಕಳುಹಿಸುವುದಿಲ್ಲ. ಕಳುಹಿಸಿದರೂ ಕೂಡ ಬಹಳ ವಿಳಂಬವಾಗತಕ್ಕಂಥ ಕಾರಣ ಇರುವುದರಿಂದ, ಕೇವಲ 48 ಜನಗಳನ್ನು ಹುಡುಕುವ ಪ್ರಯತ್ನವನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಈ ಬಗ್ಗೆ ಯಾವುದೇ ಹೆಚ್ಚಿನ ಆತಂಕವನ್ನು ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲ ಎಂದು ತಮ್ಮ ಮೂಲಕ ನಾನು ಹೇಳಲಿಕ್ಕೆ ಬಯಸುತ್ತೇನೆ. ಕುದುರೆ ಮುಖದ ಅರಣ್ಯ ಪ್ರದೇಶದ ಬಗ್ಗೆ, ನಕ್ಸಲರ ವಿಚಾರದ ಬಗ್ಗೆ, ಒಂದು ದೊಡ್ಡದಾಗಿರುವ ಚರ್ಚೆ ಕಾಲಕಾಲಕ್ಕೆ ಆಗಿದೆ. ಕುದುರೆ ಮುಖದ ರಾಷ್ಟ್ರೀಯ ಉದ್ಯಾನವನದಲ್ಲಿರುವ ಒಳಗಡೆ ಅರಣ್ಯ ಪ್ರದೇಶದಲ್ಲಿರುವಂಥ ಮೂಲ ನಿವಾಸಿಗಳನ್ನು, ಆದಿವಾಸಿಗಳನ್ನು ಮತ್ತು ಅರಣ್ಯ ದಲ್ಲಿರತಕ್ಕಂಥ ಕೆಲವು ಜನಗಳನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮಾಡುತ್ತಿರುವು ದರಿಂದಲೇ ಅದರ ಹೋರಾಟದ ಸಮಿತಿ ಇರುವುದು ತಮಗೆ ಗೊತ್ತಿದೆ. ಆ ಬಗ್ಗೆ ಬಹಳ ದೊಡ್ಡ ಸುಆರು ಹತ್ತು ವರ್ಷಗಳಿಂದಲೂ ಈ ಪ್ರಸ್ತಾಪವಿದ್ದರೂ ಕೂಡ ಈ ರಾಜ್ಯ ಸರ್ಕಾರ, ಅದರ ಹಿಂದಿನ ಸರ್ಕಾರಗಳು ಕೂಡ ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನವನ್ನು ಮಾಡಲಿಲ್ಲ. ನಾವು ಒತ್ತಾಯದ ಮೂಲಕವಾಗಿ ನಮ್ಮ ಜೀವನದ ವಿಧಾನ ಮತ್ತು ಕ್ರಮಗಳನ್ನು ಮೂಲ ನಿವಾಸಿಗಳ ಮೇಲೆ ಆದಿವಾಸಿಗಳ ಮೇಲೆ ಹೇರಬೇಕಾಗಿರತಕ್ಕಂಥದ್ದು ಸಮಂಜಸವಲ್ಲವೆಂದು ಕೇಂದ್ರ ಸರ್ಕಾರವೂ ಈ ಯೋಜನೆ ಮಾಡಿ, ಈ ಉದ್ಯಾನವನದ ವಿಚಾರಗಳ ಬಗ್ಗೆ ಅರಣ್ಯನಿವಾಸಿಗಳ ಹಕ್ಕುಗಳ ರಕ್ಷಣಾ

ಕಾಯಿದೆ ಎಂದು ಇತ್ತೀಚೆಗೆ ಅವರು ಪಾಸ್ ಮಾಡಿದ್ದಾರೆ. ಇನ್ನು ಯಾವುದೇ ಕಾರಣಕ್ಕಾಗಿ ಕುದುರೆ ಮುಖ ಅರಣ್ಯ, ರಾಷ್ಟ್ರೀಯ ಉದ್ಯಾನವನದ ನಡುವೆ ಇರುವ ಆದಿವಾಸಿಗಳನ್ನು ಅಲ್ಲಿಯ ಅರಣ್ಯವಾಸಿಗಳನ್ನು ಒಕ್ಕಲೆಬ್ಬಿಸುವ ಪ್ರಶ್ನೆ ಉದ್ಭವವಾಗುವುದಿಲ್ಲ. ಆ ಕಾರಣಕ್ಕಾಗಿ ಯಾವುದೇ ಆತಂಕವಿದ್ದರೂ ಕೂಡ ಆ ಆತಂಕವನ್ನು ನಾವು ಈಗ ನಿವಾರಿಸಿದ್ದೇವೆ. ಚಿರಂಜೀವಿಸಿಂಗ್‌ರವರು ಮತ್ತು ಕಾಲ ಕಾಲಕ್ಕೆ ಬೇರೆ ಬೇರೆ ನಮ್ಮ ಹಿರಿಯ ಅಧಿಕಾರಿಗಳು ಕೊಟ್ಟಂಥ ವರಿದಿಯಾಧಾರದ ಮೇಲೆ ಅಲ್ಲಿ ಅವರಿಗೆ ಪಕ್ಕದಲ್ಲಿ ಅರಣ್ಯದ ಗಡಿ ಪ್ರದೇಶದಲ್ಲಿ ಪುನರ್ ವ್ಯವಸ್ಥೆಗಾಗಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಆದರೆ ಅದು ಐಚ್ಛಿಕವಾದ ವಿಷಯ. ಆದಿವಾಸಿಗಳು ಆ ಗಡಿ ಪ್ರದೇಶದ ಆಚೆಗೆ ಬಂದು ಇರಬಹುದು, ಇಲ್ಲದೇ ಹೋದರೆ ಅದರ ಒಳಗಡೆ ಇರಬಹುದು. ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪಿಸುವಾಗ ಅನಾಥ ಶವಗಳ, ಶವಸಂಸ್ಕಾರಕ್ಕಾಗಿ ಕೊಟ್ಟಿರುವ ಹಣ ಹಾಸ್ಯಾಸ್ಪದವೆನ್ನುವಂಥ ಮಟ್ಟಿಗೆ ಇತ್ತು. ಅದು 400 ರೂಪಾಯಿಗಳಿತ್ತು. ಈ ಸರ್ಕಾರ ಬಂದ ಮೇಲೆ ಗ್ರಾಮೀಣ ಪ್ರದೇಶದಲ್ಲಿ ಶವ ಸಂಸ್ಕಾರಕ್ಕಾಗಿ ಅಂದರೆ ಅನಾಥ ಶವಸಂಸ್ಕಾರಕ್ಕಾಗಿ 900 ರೂಪಾಯಿಗಳು, ಪಟ್ಟಣ ಪ್ರದೇಶಗಳಲ್ಲಾದರೆ 1000 ರೂಪಾಯಿ, ಇಲ್ಲಿ ಅವಶ್ಯಕತೆ ಕಂಡು ಬಂದರೆ ಅದನ್ನು ಕೂಡ ಹೆಚ್ಚು ಮಾಡಬೇಕಾದಂಥ ಯೋಚನೆ ಈ ಸರ್ಕಾರಕ್ಕಿದೆ. ಈಗಾಗಲೇ ಹೆಚ್ಚಿನ ಹಣ ಕೊಡತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. ಆ ದೃಷ್ಟಿಯಿಂದ ಅನಾಥ ಶವಸಂಸ್ಕಾರಕ್ಕಾಗಿ ಎಲ್ಲಾ ತರಹದ ಸಹಾಯವನ್ನು ಮಾಡುತ್ತಿದ್ದೇವೆ. ಈಗ ಹೆಚ್ಚಿನ ಹಣ ಕೊಡಬೇಕಾಗಿರುವುದು ಬಹಳ ಮುಖ್ಯ. ನಂತರ ಮಾತನಾಡುವಂಥ ಸಂದರ್ಭದಲ್ಲಿ ರಹಸ್ಯ ಸೇವಾ ವೆಚ್ಚದ ಬಗ್ಗೆ ಬಹಳ ಮಾತನಾಡಿ ಅದು ದುರುಪಯೋಗವಾಗುತ್ತಿದೆ, ಮತ್ತು ಅದನ್ನು ಯಾರ‍್ಯಾರು ಉಪಯೋಗಿಸಿ ಕೊಳ್ಳುತ್ತಾರೆ, ಇಂಥ ಅನೇಕ ವಿಚಾರಗಳು, ಪ್ರಶ್ನೆಗಳು ಬಂದವು. ಕೇಂದ್ರ ಸರ್ಕಾರದಲ್ಲಿರುವ ಕೆಲವು ಪಡೆಗಳಿಗೆ 500 ಕೋಟಿ ರೂಪಾಯಿಗಳಷ್ಟು ರಹಸ್ಯ ವೆಚ್ಚದ ಬಗ್ಗೆ ಅವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಇಲ್ಲಿಯಾದರೂ ನಮಗೆ 132 ಲಕ್ಷ ಮಾತ್ರ ಇದೆ. ಹಿಂದೆ 127 ಲಕ್ಷ ಇತ್ತು. ಅದನ್ನು 2007ರ ಆಯವ್ಯಯದಲ್ಲಿ 132 ಲಕ್ಷದಲ್ಲಿ ನಮ್ಮ ಪೋಲೀಸ್ ಮಹಾ ನಿರ್ದೇಶಕರಿಂದ ಹಿಡಿದು, ಮೂರು ಆಯುಕ್ತರು ಇರುವ ಪ್ರದೇಶದಿಂದ ಹಿಡಿದು 29 ಪೋಲೀಸ್ ಜಿಲ್ಲಾ ಏನು ಇದೆ, ಅದರಲ್ಲಿ ರೈಲ್ವೇ ಮತ್ತು ಕೆ.ಜಿ.ಎಫ್‌ನ ಘಟಕಗಳೇನು ಇವೆ ಇವುಗಳನ್ನು ಸೇರಿಸಿಕೊಂಡು, ಅವರಿಗಿರುವುದು 132

ಲಕ್ಷ ಮಾತ್ರ. ಈ 132 ಲಕ್ಷ ರೂಪಾಯಿಗಳನ್ನು, ಮಾಹಿತಿಯನ್ನು ತಂದು ಕೊಡುವಂಥದ್ದಕ್ಕೆ, ಅದನ್ನು ವಿತರಣೆ ಮಾಡುವಂಥದ್ದಕ್ಕೆ, ಕೆಲವು ಸಂದರ್ಭದಲ್ಲಿ ಅವರಿಗೆ ನಾವು ಅನುಕಂಪದ ಆಧಾರದ ಮೇಲೆ ಅಥವಾ ಪಾವತಿ ಮಾಡುವ ಸಂದರ್ಭ ಬಂದಾಗ ಆ ಹಣವನ್ನು ಉಪಯೋಗಿಸಿ-ಕೊಳ್ಳುತ್ತೇವೆ. ಇದನ್ನು ಲೆಕ್ಕಪರಿ-ಶೋಧಕರು ಮಾಡುವುದಿಲ್ಲ ಅದು ನಿಜ. ಆದರೆ ಆಂತರಿಕ ಲೆಕ್ಕ ಪರಿಶೋಧಕರು ಈ ಕೆಲಸವನ್ನು ಯಾರಿಗೆ ಈ ಹಣವನ್ನು ಕೊಟ್ಟಿದ್ದಾರೆನ್ನುವ ಬಗ್ಗೆ ಸಂಪೂರ್ಣವಾದ ದಾಖಲೆಗಳು ಇರುತ್ತವೆ, ಅದನ್ನು ಪುಸ್ತಕದಲ್ಲಿ ಬರೆದು ದಾಖಲಿಸಲ್ಪಟ್ಟಿರುತ್ತದೆ. ನಮ್ಮ ಆಂತರಿಕ ಆಡಿಟರ್ ಎಂದೇನು ಕರೆಯುತ್ತೇವೆ, ಆ ಆಂತರಿಕ ಲೆಕ್ಕ ಪರಿಶೋಧಕರು ಆ ರಹಸ್ಯ ಸೇವಾ ವೆಚ್ಚದ ಬಗ್ಗೆ ಸಂಪೂರ್ಣವಾದ ಕಟ್ಟೆಚ್ಚರಿಕೆಯನ್ನು ಇಟ್ಟಿರುತ್ತಾರೆ. ಇದು ಇವತ್ತಿನ ಕಾಲಕ್ಕೆ ಇದು ಬಹಳ ಕಡಿಮೆ ಎಂದು ನಾನು ಅಂದುಕೊಳ್ಳುತ್ತೇನೆ. ನಕ್ಸಲರ ಚಟುವಟಿಕೆಗಳು ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಇವತ್ತಿನ ದಿವಸ ಪೊಲೀಸ್‌ನವರಿಗೂ ಕೂಡ ಸುಮಾರು 25 ಕೋಟಿ ರೂಪಾಯಿಗಳನ್ನು ಅಬಕಾರಿ ನಿಯಂತ್ರಣ ಮಾಡಲು ನೀಡಲಾಗಿದೆ. ಏಕಮೇವವಾಗಿರತಕ್ಕಂಥ ಭಾರತ ದೇಶದಲ್ಲಿ ಯಾವುದೇ ರಾಜ್ಯ ಗುಜರಾತ್‌ನ್ನು ಬಿಟ್ಟರೆ, ಸಾರಾಯಿ ಮುಕ್ಯವಾಗಿರಲಿಲ್ಲ. ಇತ್ತೀಚೆಗೆ ಆಂಧ್ರ ಮತ್ತು ತಮಿಳುನಾಡಿನಲ್ಲಿ ಅಬಕಾರಿ ನಿಯಂತ್ರಣ ಮಾಡಿದ್ದಾರೆ. ಆ ಪ್ರಕಾರವಾಗಿ ನಮ್ಮಲ್ಲಿಯೂ ಆದಾಗ, ಕಳ್ಳಭಟ್ಟಿದುರಂತಗಳಾಗಬಾರದು, ಈ ರೀತಿಯಾಗಿ ಕಳಪೆ ಪಾನೀಯವನ್ನು ಜನತೆ ತೆಗೆದುಕೊಂಡು ಆರೋಗ್ಯ ಕೆಡಿಸಿಕೊಳ್ಳಬಾರದು ಎನ್ನುವ ಕಾರಣಕ್ಕಾಗಿ ನಮಗೆ 25 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ ಪೊಲೀಸರ ಜವಾಬ್ದಾರಿ ಅಬಕಾರಿ ಇಲಾಖೆಯ ಜನತೆಗೂ ಕೂಡ ಮಾಡಬೇಕಾಗಿರುವ ಕರ್ತವ್ಯ ಇದೆ. ಈ ಸರ್ಕಾರದ ಮುಖ್ಯವಾಗಿರುವ ಕಾಳಜಿ, ಬರೀ ಕಳ್ಳಭಟ್ಟಿ ಸಾರಾಯಿಯನ್ನು ನಿಯಂತ್ರಿಸುವುದು ಒಂದೇ ಅಲ್ಲ ಯಾವುದೇ ಸಾವು ಆಗಲಾರದ ರೀತಿಯಲ್ಲಿ ಮತ್ತು ಕೆಲವು ಸ್ಥಾಪಿತ ಹಿತಾಶಕ್ತಿಗಳು ಈ ರೀತಿಯಾದಂಥ ಅವಘಡಗಳು ಮಾಡುವುದರ ಮೂಲಕ ಈ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರಬೇಕೆನ್ನುವ ಪ್ರಯತ್ನವನ್ನು ಅವರು ಮಾಡಬಹುದು ಎನ್ನುವ ಕಾರಣಕ್ಕಾಗಿ ನಾವು ಕಟ್ಟೆಚ್ಚರಿಕೆಯನ್ನು ಪ್ರಯತ್ನವನ್ನು ವಹಿಸುತ್ತಿದ್ದೇವೆ. ಈ ಸಂದರ್ಭದಲ್ಲಿ ನಾವು ಅವರಿಗೆ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇಲ್ಲಿಯವರೆಗೆ ಸಾರಾಯಿ ಗುತ್ತಿಗೆ ತೆಗೆದುಕೊಂಡಿರುವಂಥವರು ಎಲ್ಲಾ ಸದಸ್ಯರಿಗೂ ಗೊತ್ತಿದ್ದಂತೆ

ಅಬಕಾರಿ ಇಲಾಖೆಯ ಸಹಾಯ ಅಲ್ಲ, ಅವರದೇ ಆದಂಥ ಕಾರ್ಯಪಡೆಯನ್ನು ಇಟ್ಟುಕೊಂಡು ಎಲ್ಲೆಲ್ಲಿ ಕಳ್ಳಭಟ್ಟಿಯನ್ನು ಮಾಡುತ್ತಿದ್ದರು, ಅಲ್ಲಿಗೆ ಹೋಗಿ ದಾಳಿ ಮಾಡುತ್ತಿದ್ದರು. ಅದರ ಜೊತೆಗೆ ನಿರತವಾಗಿರತಕ್ಕಂಥ ಜನಗಳಿಗೆ ಅವರು ಗುಡಿ-ಗೋಪುರಗಳನ್ನು ಕಟ್ಟಿಸಿಕೊಡುವುದರ ಜೊತೆಗೆ ಆ ಊರಿಗೆ ಹಣವನ್ನು ಕೊಡುತ್ತಿದ್ದರು. ಅವರಿಗೂ ಕೂಡ ಕೆಲವು ರಕ್ಷಣೆಯನ್ನು ಕೊಡುತ್ತಿದ್ದರು. ಅಧಿಕೃತವಾಗಿರತಕ್ಕಂಥ ಸಾರಾಯಿ ಅಂಗಡಿಗಳಿಗಿಂತ ಅನಧಿಕೃತವಾಗಿರುವ ಸಾರಾಯಿ ಅಂಗಡಿಗಳು ಮೂರು-ನಾಲ್ಕು ಪಟ್ಟು ಹೆಚ್ಚಾಗಿ ಅವರಿಗೆ ಒಂದು ಉದ್ಯೋಗದ ಮೂಲವನ್ನು ಕಲ್ಪಿಸಿಕೊಡುತ್ತಿದ್ದರು. ಈಗ ಸರ್ಕಾರ ಅಂಥ ಉದ್ಯೋಗದ ಮೂಲಗಳನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಅಬಕಾರಿ ಮತ್ತು ಪೊಲೀಸ್ ಇಲಾಖೆ ಒಂದು ತಿಂಗಳೊಳಗಾಗಿಯೇ ಇಂಥ ಒಂದು ಕೆಲಸದಲ್ಲಿ ಸನ್ನದ್ಧರಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಪಾನೀಯ ಅಭಿವೃದ್ಧಿ ನಿಗಮದ ಮೂಲಕವಾಗಿ, ಮೊದಲು ಏನು 12 ಲಕ್ಷ ಕೇಸ್‌ಗಳು ಮಾರಾಟ ವಾಗುತ್ತಿದ್ದವೋ ಇವತ್ತು ಈಗಾಗಲೇ 28 ಲಕ್ಷಕ್ಕೆ ಮಾರಾಟಕ್ಕೆ ಬಂದಿದೆ. ಅಂದರೆ, ಸಾರಾಯಿಯನ್ನು ನಿಲ್ಲಿಸುವುದರ ಜೊತೆಗೆ ಉತ್ತಮ ಗುಣಮಟ್ಟದ ಮದ್ಯಪಾನವನ್ನು ಮಾಡುವುದಕ್ಕೆ ಈ ವ್ಯವಸ್ಥೆಯಲ್ಲಿ ಒಂದು ಪರ್ಯಾಯ ವ್ಯವಸ್ಥೆಯನ್ನು ರೂಪಿಸಿಡುವುದಕ್ಕೆ, ಪೊಲೀಸ್‌ರವರಿಗೆ ಮಾಹಿತಿಯನ್ನು ಕೊಡಲಿಕ್ಕೆ ಬೇಕಾಗಿರತಕ್ಕಂಥದ್ದರಲ್ಲಿ 132 ಲಕ್ಷವಲ್ಲ, ಇನ್ನು ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಹಾಗೆಯೇ ಇಲ್ಲಿರತಕ್ಕಂಥ ಮಲೆನಾಡು ಪ್ರದೇಶಗಳಲ್ಲಿ ಬಹಳ ಜನ ನಕ್ಸಲರ ಹಾವಳಿಯ ಸಂದರ್ಭದಲ್ಲಿ ಮಾಹಿತಿಯನ್ನು ಕೊಡುವ ಜನಗಳಿಗೂ ಕೂಡ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಅಪಘಾತವಾದಾಗ ಅವರಿಗೆ ಅನುಕೂಲಗಳನ್ನು ಕಲ್ಪಿಸಬೇಕಾಗುತ್ತದೆ. ಮಾಹಿತಿಯ ಸಂಗ್ರಹಕ್ಕೆ ಬೇಕಾಗಿರತಕ್ಕಂಥ ಹಣಕಾಸನ್ನು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ನಾನು 132 ಲಕ್ಷವಲ್ಲ, ಇನ್ನು ಹೆಚ್ಚಿನ ಹಣ ಕೊಟ್ಟರೂ ಕೂಡ ತಪ್ಪಲ್ಲ. ಈ ಬಗ್ಗೆ ಸಾರಾಸಗಟಾಗಿ ಎಲ್ಲೋ ಒಂದು ಕಡೆಗೆ ದುರುಪಯೋಗವಾಗಿದೆ ಎನ್ನುವಂಥದ್ದನ್ನೇ ನಾವು ಯೋಚನೆ ಮಾಡುವುದು ಸರಿಯಾದುದಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರ ಮಾತನಾಡುವಾಗ, ಈ ಎಫ್.ಐ.ಆರ್.ನಲ್ಲಿ ಏನು ನಮೂದಿಸಿದೆ, ಅದನ್ನು ಪ್ರಥಮ ವರ್ತಮಾನ ಪತ್ರಿಕೆಯಲ್ಲಿ ಇರುವುದನ್ನು ಹಾಗೆಯೇ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ನಮ್ಮ ILR 2006 SC 132

Judgement ಕೂಡ ಇದೆ. ಅದನ್ನು ಯಾವಾಗಲೂ ತೆಗೆದುಕೊಳ್ಳಬೇಕೆಂದು ಇದೆ. ಎರಡೆರಡು ಮಾಹಿತಿಗಳನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಚಾರ್ಜ್‌ಸೀಟ್‌ಗಳನ್ನು ಹಾಕಬೇಕೆನ್ನುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ನಾನು ಇದ್ದಾಗ ಅವರು ಪ್ರಸ್ತಾಪಿಸಿದರು. ಆ ಬಗ್ಗೆ ಸಿ.ಓ.ಡಿ ತನಿಖೆಗೆ ವಹಿಸಿ ಕೊಡಿ ಎನ್ನುವ ಮಾತನ್ನು ಹೇಳಿದರು. ನಾವು ಇಲ್ಲಿ ಯಾರಿಗೇ ಆಗಲಿ ರಕ್ಷಣೆ ಕೊಡುವುದಾಗಲಿ, ಯಾರ ಮೇಲೆಯಾದರೂ ದ್ವೇಷದ ಕ್ರಮವನ್ನು ತೆಗೆದುಕೊಳ್ಳುವಂಥದ್ದು ಮಾಡುವುದಿಲ್ಲ. ಆ ರೀತಿಯಾಗಿ ಸಿ.ಓ.ಡಿಗೆ ಕೊಡುವ ಅಗತ್ಯವಿದ್ದರೆ ಅದಕ್ಕೂ ಕೂಡ ನಾವು ತಯಾರಿದ್ದೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಮುಖ್ಯ ಕಾರ್ಯದರ್ಶಿಗಳು ತೆಗೆದುಕೊಂಡಿರತಕ್ಕಂಥ ಸಮೀಕ್ಷೆಯ ಪ್ರಕಾರ ನಮ್ಮ ಗೃಹ ಇಲಾಖೆ ಕಡತ ವಿಲೇವಾರಿಯಲ್ಲಿ ಮೊದಲನೇ ಸ್ಥಾನದಲ್ಲಿದೆ. ಮತ್ತೆ ಕಾನೂನು ಇಲಾಖೆ 5ನೇ ಸ್ಥಾನದಲ್ಲಿದೆ. ಬೇರೆ ಇಲಾಖೆಗೆ ಹೋಲಿಸಿದಾಗ ಇದು 5ನೇ ಸ್ಥಾನದಲ್ಲಿರುವುದಕ್ಕೆ ಮುಖ್ಯ ಕಾರಣವೇನೆಂದರೆ, ಅನೇಕ ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಇರತಕ್ಕಂಥ ಕಾರಣದಿಂದ ಸದರಿ ಕಡತಗಳನ್ನು ವಿಲೇವಾರಿ ಮಾಡುವುದಕ್ಕೆ ಆಗದೇ ಇರುವುದರಿಂದ ಅವುಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕಾಗಿರುವುದ-ರಿಂದ ಈ ಬಗ್ಗೆ ನಾವು ಹೆಚ್ಚಿನ ಮುತ್ತುವರ್ಜಿ ವಹಿಸಬೇಕಾಗಿರತಕ್ಕಂಥದ್ದು ಇದೆ. ಇತ್ತೀಚಿನ ದಿನಗಳಲ್ಲಿ White collared Criminals ಎಂದು ನಾವು ಕರೆಯುತ್ತೇವೆ. ವಿದ್ಯಾವಂತರಾಗಿರು ವಂಥವರು, ಸುಸಂಸ್ಕೃತ ಮನೆತನದಿಂದ ಬಂದಿರತಕ್ಕಂಥವರು, ನಯನಾಜೂಕಿ ನಿಂದ ವರ್ತಿಸತಕ್ಕಂಥ ಜನಗಳು ಬಹಳ ಅಪರಾಧ ಮನೋಭಾವಗಳನ್ನು ತಮ್ಮ ಅಂತರಂಗದಲ್ಲಿ ಬಚ್ಚಿಟ್ಟುಕೊಂಡಿರತಕ್ಕಂಥವರು ಇರುತ್ತಾರೆ. ಇದರ ಜೊತೆಗೆ ಭಯೋತ್ಪಾದಕರು ಮತ್ತು ನಕ್ಸಲ ಚಟುವಟಿಕೆಗಳನ್ನು ಹತ್ತಿಕ್ಕಲು ನಮ್ಮ ಪೊಲೀಸ್‌ನವರಿಗೆ ದೊಡ್ಡ ತರಬೇತಿಯನ್ನು ಹಾಗೂ ಅವರಿಗೆ ಬೇಕಾಗಿರತಕ್ಕಂಥ ಉಪಕರಣಗಳನ್ನು ನಾವು ಕೊಡಬೇಕಾಗುತ್ತದೆ. Anti Naxalite Force ಈಗಾಗಲೇ ಸುಮಾರು 543 ಜನರಿದ್ದಾರೆ. ಈ ಸಂಖ್ಯೆಯನ್ನು 1117 ಏರಿಸಲಿಕ್ಕೆ ಸಹಮತಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಶೇಕಡ 50% ರಷ್ಟು ಅವರ ಸಂಬಳದ ಮೂಲ ವೇತನವನ್ನು ಅವರಿಗೆ ಹೆಚ್ಚು ಕೊಡತಕ್ಕಂಥ ಕೆಲಸವನ್ನೂ ಸಹ ಮಾಡಿದ್ದೇವೆ. ಹಾಗೆಯೇ ನಮ್ಮ

ಕೆಎಸ್‌ಆರ್‌ಪಿ ಯಲ್ಲಿ 2003ರಿಂದ 12 ಕಮಾಂಡೊ ಫೋರ್ಸ್‌ಗಳಿವೆ. ಇದನ್ನು ಹೆಚ್ಚಿಸಬೇಕೆಂಬುದನ್ನೂ ಸಹ ಈಗ ತೀರ್ಮಾನ ಮಾಡಿದ್ದೇವೆ. ಮತ್ತೆ ನಮ್ಮ ಪೊಲೀಸ್ ಆಯುಕ್ತರ ನಡುವೆ ಈ ರೀತಿಯಾದ ಭಯೋತ್ಪಾದಕ ನಿಗ್ರಹಕ್ಕೆ ಸಂಬಂಧಪಟ್ಟಂತೆ 153 ಜನರಿದ್ದಾರೆ. ಇದನ್ನೂ ಕೂಡ ಹೆಚ್ಚಿಸುವಂಥ ಕೆಲಸವನ್ನು ಮಾಡಿದ್ದೇವೆ. ಈಗಾಗಲೇ ನಮ್ಮ ಗುಪ್ತವಾರ್ತೆಗೆ ಹೆಚ್ಚುವರಿಯಾಗಿ 287 ಸಿಬ್ಬಂದಿಗಳನ್ನು ಕೊಟ್ಟಿದ್ದೇವೆ. ಮತ್ತೆ ಗುಪ್ತವಾರ್ತೆಯಲ್ಲಿ ಕೆಲಸ ಮಾಡತಕ್ಕಂಥ ಸುಮಾರು 350 ಸಿಬ್ಬಂದಿಗಳಿಗೆ Mobile Phone ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ನಾನು ಹೇಳಿರತಕ್ಕಂಥವರ ಮೇಲೆ ಎಲ್ಲರೂ ಅರ್ಥ ಮಾಡಿಕೊಳ್ಳಬಹುದು. ಇವತ್ತಿನ ದಿವಸ ಬದಲಾಗುತ್ತಿರುವ ತಂತ್ರಜ್ಞಾನದ ಹಿನ್ನಲೆಯಲ್ಲಿ ಈ ವಿದ್ಯಾವಂತರು ಮಾಡುತ್ತಿರುವ ಅನೇಕ ಅನಾಹುತಗಳ ಸಂದರ್ಭದಲ್ಲಿ ಅವರಿಗೆ Mobile Phone ಕೊಡತಕ್ಕಂಥದ್ದರ ಬಗ್ಗೆ ನಾವು ಈಗ ನಿರ್ಣಯ ಮಾಡಬೇಕಾಗಿರತಕ್ಕಂಥ ಸಂದರ್ಭ ಬಂದಿದೆ. ಮತ್ತೆ ಇನ್ನೂ ಹೆಚ್ಚಿನ ಉಪಕರಣಗಳನ್ನು ಕೊಡತಕ್ಕಂಥದ್ದರ ಬಗ್ಗೆ ಕೂಡ ನಾವು ಯೋಚನೆ ಮಾಡುತ್ತಿದ್ದೇವೆ. Industrial Security Force ಎನ್ನತಕ್ಕಂಥದ್ದು ಏನಿದೆ, ಅದರಿಂದ ನಮ್ಮ ಉದ್ಯಮಗಳಿಗೆ ರಕ್ಷಣೆ ಸಿಗಬೇಕು ಮತ್ತು ಅವುಗಳಿಗೆ ಬೇಕಾಗಿರತಕ್ಕಂಥ ಮಾಹಿತಿಗಳನ್ನು ಒದಗಿಸಬೇಕೆಂಬ ಉದ್ದೇಶದಿಂದ ಈಗಾಗಲೇ ಹಣಕಾಸಿನ ಇಲಾಖೆಗೆ ಈ ವಿಚಾರವನ್ನು ಕಳುಹಿಸಿಕೊಟ್ಟಿದ್ದೇವೆ. ಅದರ ಮೂಲಕವಾಗಿ ನಾವು ಹೆಚ್ಚಿನ ಕೆಲಸವನ್ನು ನಿರ್ವಹಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮುನಿರಾಬಾದ್ ಮತ್ತು ಹಾಸನ ಹಾಗೂ ಹಡಗಲಿಯಲ್ಲಿ ಮಾಡುವಾಗ ಹುಬ್ಬಳ್ಳಿಯಲ್ಲಿ ಸುಮಾರು 11.5 ಎಕರೆ ಜಾಗ ಬಹಳ ವರ್ಷಗಳಿಂದ ಪೊಲೀಸ್‌ರ ಸ್ವಾಧೀನದಲ್ಲಿತ್ತು. ಸದರಿ ಜಾಗದಲ್ಲಿ ಕಛೇರಿ ಮತ್ತು ವಸತಿ ಗೃಹಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಈ ಸಾರಿ 3.5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಕಳೆದ ಬಾರಿ 20 ಹೊಸ ಪೊಲೀಸ್ ಠಾಣೆಗಳನ್ನು ಪ್ರಾರಂಭ ಮಾಡಿದ್ದೇವೆ. ಬೆಂಗಳೂರಿನಲ್ಲಿ 7 ಪೊಲೀಸ್ ಠಾಣೆಗಳನ್ನು ಮಾಡಲಾಗಿತ್ತು. ಕೊನೆಗಳಿಗೆಯಲ್ಲಿ ಮತ್ತೆ 13 ಪೊಲೀಸ್ ಠಾಣೆಗಳನ್ನು ಮಾಡಿದ್ದೇವೆ. 13 ಪೊಲೀಸ್ ಠಾಣೆಗಳಲ್ಲಿ ಸುಮಾರು 3–4 ಪೊಲೀಸ್ ಠಾಣೆಗಳು ನಕ್ಸಲ್‌ರ ಬಾಧಿತವಾದಂಥ ಮಲೆನಾಡು ಪ್ರದೇಶಗಳಲ್ಲಿ ಮಾಡಿದ್ದೇವೆ. ಅಗ್ನಿಶಾಮದಳ ಮತ್ತು ತುರ್ತು ಇಲಾಖೆಗೆ ಸಂಬಂಧಪಟ್ಟಂತೆ

35 ಕೋಟಿ ರೂಪಾಯಿಗಳನ್ನು ಈ ಸಾಲಿನ ಆಯವ್ಯಯದಲ್ಲಿ ಕೊಟ್ಟಿದ್ದರಿಂದ, ಈಗ ಹೊಸದಾಗಿ 55 ವಾಹನಗಳನ್ನು ಕೊಂಡುಕೊಂಡಿದ್ದೇವೆ. 5 ಕೋಟಿ ರೂಪಾಯಿ ಬೆಲೆ ಬಾಳುವಂಥ 53 ಮೀಟರ್‌ನಷ್ಟು ಎತ್ತರಕ್ಕೆ ಹೋಗುವಂಥ ಏಣಿಯ ಸೌಲಭ್ಯ ಹೊಂದಿರುವಂಥ ವಾಹನವನ್ನು ನಾವು ಜರ್ಮನಿಯಿಂದ ಖರೀದಿ ಮಾಡಿದ್ದೇವೆ. ಮೊನ್ನೆದಿವಸ ಬಹುಮಹಡಿಯ ಕಟ್ಟಡದಲ್ಲಿ ಬೆಂಕಿಯ ಅನಾಹುತವಾಯಿತು. ಇಂಥ ದೊಡ್ಡ ಕಟ್ಟಡಗಳಲ್ಲಿ ಬೆಂಕಿಯನ್ನು ಆರಿಸುವ ಸಲುವಾಗಿ ಮತ್ತು ಅಲ್ಲಿರತಕ್ಕಂಥ ಜನರನ್ನು ರಕ್ಷಣೆ ಮಾಡುವುದಕ್ಕೋಸ್ಕರ ಇಂಥ ಪ್ರಯತ್ನಗಳನ್ನು ಮಾಡಿದ್ದೇವೆ. ಮತ್ತೆ ಅ ಸಿಬ್ಬಂದಿಗಳಿಗೆ ಸಮವಸ್ತ್ರವನ್ನು ಕೊಟ್ಟಿದ್ದೇವೆ. ಇದುವರೆಗೆ ಸಮವಸ್ತ್ರಗಳನ್ನು ಕೊಡತಕ್ಕಂಥದ್ದು ಇರಲಿಲ್ಲ. ಹಾಗೆಯೇ ಅವರಿಗೆ ಪಡಿತರ ವ್ಯವಸ್ಥೆಯನ್ನು ಕೊಡತಕ್ಕಂಥದ್ದನ್ನು ಸಹ ಮಾಡಿದ್ದೇವೆ. ಪೊಲೀಸರಿಗೆ ನೀಡುವ ಅನೇಕ ಸೌಲಭ್ಯಗಳ ಬಗ್ಗೆ ಅಂದರೆ ಅವರಿಗೆ ಯಾವ್ಯಾವ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತೇವೆಂಬ ವಿಷಯವನ್ನು ಆಗಸ್ಟ್ 15 ರೊಳಗಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಕಟಗೊಳಿಸುತ್ತಾರೆ. ಹೆಚ್ಚಿನ ಸಮಯ ಇಲ್ಲದೇ ಇರುವುದರಿಂದ ಅವರಿಗೆ ಯಾವ್ಯಾವ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತೇವೆ ಎಂಬ ವಿಷಯವನ್ನು ಹೇಳತಕ್ಕಂಥ ಪ್ರಯತ್ನವನ್ನು ನಾನು ಮಾಡುವುದಿಲ್ಲ. ಶೇಕಡ 50 ರಷ್ಟು ವಸತಿ ಸೌಕರ್ಯ ನಮ್ಮ ಪೊಲೀಸ್‌ನವರಿಗೆ ಇದೆ. ಆದರೆ, ಹೆಚ್ಚು ಸಿಬ್ಬಂದಿಯನ್ನು ನೇಮಕಾತಿ ಮಾಡಿದಾಗ ವಸತಿ ಸೌಕರ್ಯ ಶೇಕಡವಾರು ಕಡಿಮೆಯಾಗುತ್ತಾ ಹೋಗುತ್ತವೆ. ಆದ್ದರಿಂದ, ಅದನ್ನು ಹೆಚ್ಚು ಮಾಡಿಕೊಳ್ಳುವ ಪ್ರಯತ್ನವನ್ನು ನಮ್ಮ ಪೊಲೀಸ್ ಹೌಸಿಂಗ್ ಕಾರ್ಪೊರೇಷನ್ ಮೂಲಕ ಮಾಡುತ್ತಿದ್ದೇವೆ. ಮತ್ತೆ ನಮ್ಮ ಕಾನೂನು ಇಲಾಖೆಯಲ್ಲಿ ಅನೇಕ ಪ್ರಗತಿಪರವಾದಂಥ ಕೆಲಸಕಾರ್ಯಗಳ ಜೊತೆಗೆ ಲೋಕೋಪಯೋಗಿ ಇಲಾಖೆಯ 250 ಕೋಟಿ ರೂಪಾಯಿಗಳ ಮೂಲಕವಾಗಿ, ನಮಗೆ ಕೊಟ್ಟಿರುವ ಹಣ ಬಹಳ ಕಡಿಮೆ ಇದ್ದರೂ ಕೂಡ 250 ಕೋಟಿ ರೂಪಾಯಿಗಳನ್ನು ನನ್ನ ಸಚಿವ ಸಹೋದ್ಯೋಗಿಯಾಗಿರುವ ಮಾನ್ಯ ರೇವಣ್ಣನವರು ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ 250 ಕೋಟಿ ರೂಪಾಯಿಗಳನ್ನು ನ್ಯಾಯಾಂಗ ಇಲಾಖೆಯ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಕೊಟ್ಟಿರತಕ್ಕಂಥದ್ದು ನಿಜವಾಗಿಯೂ ಕೂಡ ಒಂದು ದಾಖಲೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಜೊತೆಗೆ ಸಾಕ್ಷಿ ಭತ್ಯೆಯನ್ನು ಕೊಡಬೇಕಾಗಿರತಕ್ಕಂಥ ಪರಿಕಲ್ಪನೆಯ ಬಗ್ಗೆ ಕಳೆದ ಬಾರಿ ಮಾನ್ಯ

ಹೆಚ್.ಕೆ.ಪಾಟೀಲ್‌ರವರು ಪ್ರಸ್ತಾಪ ಮಾಡಿದ್ದರು. ಇದು ಹಾಗೆಯೇ ಉಳಿದುಕೊಂಡಿತ್ತು. ಈಗ ನಮ್ಮ ಪೊಲೀಸ್‌ನವರ ಮೂಲಕ ತರುವ ಸಾಕ್ಷಿಗಳು ತಮ್ಮ ಕೆಲಸಕಾರ್ಯಗಳನ್ನು ಬಿಟ್ಟು ಬಂದಿರುತ್ತಾರೆ. ಆದ್ದರಿಂದ, ಸಾಕ್ಷಿಭತ್ಯೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಆಗಸ್ಟ್ 15ರೊಳಗಾಗಿ ಪ್ರಕಟ ಮಾಡಲಾಗುತ್ತದೆ. ಇದಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಖರ್ಚಾಗುವುದಿಲ್ಲ. ಸಾಕ್ಷಿ ಹೇಳುವವರು ಉದ್ಯೋಗವನ್ನು ಬಿಟ್ಟು ಬಂದಿರುತ್ತಾರೆ ಮತ್ತು ಅವರು ಸಾಕ್ಷಿಯನ್ನು ನುಡಿದಂಥ ಸಂದರ್ಭದಲ್ಲಿ ರೌಡಿಗಳು ಅಥವಾ ಪ್ರತಿವಾದಿಗಳ ಮೂಲಕವಾಗಿ ತೊಂದರೆಗೊಳಗಾಗುವಂಥ ಸಂದರ್ಭ ಕೂಡ ಇರುತ್ತದೆ. ಈ ಒಂದು ಕಾರಣದಿಂದ ಅವರಿಗೂ ಕೂಡ ಅನುಕೂಲವನ್ನು ಕಲ್ಪಿಸಬೇಕೆಂದು ಸಾಕ್ಷಿಭತ್ಯೆಯನ್ನು Minimum Wages Act ಕೆಳಗೆ ನಮ್ಮಲಿರುವಂತೆ 69 ಅಥವಾ 70 ರೂಪಾಯಿಗಳನ್ನು ಅವರಿಗೆ ಕೊಡಬೇಕೆಂಬುದರ ಬಗ್ಗೆ ಈಗ ಲೆಕ್ಕ ಹಾಕುತ್ತಿದ್ದೇವೆ. ಆಗಸ್ಟ್ 15ರೊಳಗಾಗಿ ಸಾಕ್ಷಿಭತ್ಯೆಯನ್ನು ಕೊಡತಕ್ಕಂಥ ವಿನೂತನ ಕ್ರಮವನ್ನು ಮಾಡುತ್ತಿದ್ದೇವೆ, ಪ್ರಾಯಶಃ ಭಾರತ ದೇಶದಲ್ಲಿ ಯಾವ ರಾಜ್ಯ ಸರ್ಕಾರಗಳು ಇದನ್ನು ಮಾಡಿಲ್ಲ. ಮತ್ತೆ ಇದರ ಜೊತೆಗೆ ನಮ್ಮ ಹೊಸ ವಕೀಲರುಗಳಿಗೆ ತಿಂಗಳಿಗೆ 2 ಸಾವಿರ ರೂಪಾಯಿಗಳಂತೆ ಒಂದು ವರ್ಷದ ಪ್ರಾರಂಭದ ಹಂತದಲ್ಲಿ ಪುಸ್ತಕಗಳನ್ನು ಖರೀದಿ ಮಾಡುವುದಕ್ಕೆ ಮತ್ತು ತಾತ್ಕಾಲಿಕವಾದಂಥ ಅನುಕೂಲಗಳನ್ನು ಪಡೆಯಲಿಕ್ಕೆ ಕೊಡತಕ್ಕಂಥ ವಿನೂತನ ಕ್ರಮ ಏನಿದೆ ಭಾರತ ಸರ್ಕಾರದಿಂದ ಈಗಾಗಲೇ ಮೆಚ್ಚುಗೆಯನ್ನು ಪಡೆದಿದೆ. ಗಣಕೀಕರಣ ವಿಚಾರದಲ್ಲಿ ಕರ್ನಾಟಕ ಸರ್ಕಾರ ಮಾಡಿರತಕ್ಕಂಥದ್ದು ಅತ್ಯುತ್ತಮವಾದಂಥ ಕೆಲಸ ಇದನ್ನು ಇತರೇ ರಾಜ್ಯ ಸರ್ಕಾರಗಳು ಪರಿಪಾಲಿಸಬೇಕೆಂದು ಕೇಂದ್ರ ಕಾನೂನು ಸಚಿವರಾಗಿರುವಂಥ ಮಾನ್ಯ ಭಾರದ್ವಾಜರವರು ಎಲ್ಲರಿಗೂ ಕೂಡ ಮೌಖಿಕವಾಗಿ ಹೇಳಿರುವ ಜೊತೆಗೆ ಪತ್ರವನ್ನೂ ಸಹ ಬರೆದಿದ್ದಾರೆ. ನಾವು ಈಗ ಹೊಸದಾಗಿ ಮಾಡುತ್ತಿರುವ Modernization ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರ ನಮಗೆ ಒಪ್ಪಿಗೆ ಕೊಡತಕ್ಕಂಥದಲ್ಲದೇ 100 ಕೋಟಿ ರೂಪಾಯಿಗಳನ್ನು ಈ 5 ವರ್ಷಗಳಲ್ಲಿ ಖರ್ಚು ಮಾಡತಕ್ಕಂಥ ಕಾರ್ಯಕ್ರಮ ನಮ್ಮ ಹತ್ತಿರ ಇದೆ. ನಮ್ಮ ಬೆಂಗಳೂರಿನಲ್ಲಿ ಪ್ರತಿ ದಿವಸ ಹೆಚ್ಚು ಕಾನೂನು ಬಾಹಿರ ಕ್ರಮಗಳು ಆಗುತ್ತಿವೆ. ಅಂದರೆ, ಹತ್ಯೆ, ಅಪಹರಣ, ಸರಗಳ್ಳತನ ಪ್ರಕರಣಗಳನ್ನು 2006ರ ಸಾಲಿಗೆ ಅಂದರೆ, ಹಿಂದಿನ ವರ್ಷಗಳಿಗೆ

ಹೋಲಿಸಿದಾಗ ಶೇಕಡ 10 ರಷ್ಟು ಅಪರಾಧಗಳು ಕಡಿಮೆಯಾಗಿವೆ. ಮತ್ತು ಇನ್ನೂ ಆಗತಕ್ಕಂಥ ಅಪರಾಧಗಳು ನಾಗರೀಕರಣದ ಕಾರ್ಯಕ್ಕಾಗಿ ಮಾನಸಿಕ ಒತ್ತಡಗಳಿಗೆ ಒಳಗಾಗಿರತಕ್ಕಂಥ ಜನ ಮತ್ತು ಸಾಮಾಜಿಕ ಪ್ರಕ್ರಿಯೆಗಳಲ್ಲಿ ಅವರು ತಮ್ಮ ಮುಖ ಹೇಡಿತನದ ಮೂಲಕವಾಗಿ ತಮ್ಮನ್ನು ತಾವೇ ಗುರುತಿಸಿಕೊಳ್ಳಲಾರದಂಥ ರೀತಿಯಲ್ಲಿ ಅಂಚೆ ವಿಳಾಸದ ಮೂಲಕವಾಗಿ ಆ ವ್ಯಕ್ತಿಯ ಸ್ಥಾನಮಾನಗಳನ್ನು ಗುರುತಿಸುವಂಥ ರೀತಿಯಲ್ಲಿ, ಆಗುತ್ತವೆ. ಅಂದರೆ, ಯಾವುದೋ ಹಳ್ಳಿಯಿಂದ ಉದ್ಯೋಗ ಅರಸಿಕೊಂಡು ಬಂದಂಥ ಯುವಕ ಸ್ನೇಹಿತರಿಲ್ಲದೇ ಸಂಘಟನೆಗಳಿಲ್ಲದೇ ಮತ್ತು ಆತನ ಹೆಸರೂ ಕೂಡ ಗೊತ್ತಿಲ್ಲದಂಥ ರೀತಿಯಲ್ಲಿ ಅನಾಮಧೇಯವಾಗಿ ಬದುಕುವಂಥ ಅನ್ಯತೆಗೆ ಒಳಗಾಗುವಂಥ ಕಾರಣಕ್ಕಾಗಿ, ಅನೇಕ ಒತ್ತಡಗಳಿಂದ ಅಪರಾಧಗಳು ಆಗುತ್ತವೆ. ಬೇರೆ ಬೇರೆ ಅಂದರೆ, ನಮ್ಮ ಸಿನಿಮಾಗಳು, ಧಾರವಾಹಿಗಳಿರ ಬಹುದು ಅಥವಾ ಅನುಚಿತವಾದಂಥ ಕೆಲವು ಪುಸ್ತಕಗಳು ಮತ್ತು ಪತ್ರಿಕೆಗಳಿರಬಹುದು ಇವುಗಳ ಮೂಲಕವಾಗಿ ಪ್ರೇರೇಪಿತರಾಗಿರುವಂಥವರು ಇದ್ದಾರೆ. ಮೊನ್ನೆ ದಿವಸ ನಡೆದಂಥ ಒಂದು ಘಟನೆ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಪ್ರಾಯಶಃ ಇದನ್ನು ಯಾರೂ ಸಹ ಊಹಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಪೆನ್ನು ಕಳವಾಗಿದೆ ಎಂಬ ಕಾರಣಕ್ಕಾಗಿ 8 ಮತ್ತು 9 ವರ್ಷದ ಸಹಪಾಟಿಗಳು ನೇಣು ಹಾಕುವಂಥ ಪ್ರಯತ್ನವನ್ನು ಮಾಡುತ್ತಾರೆಂದರೆ ಅವರಿಗೆ ಯಾವ ಪ್ರಭಾವವಾಗಿರಬೇಕು. ಅಮೇರಿಕ ದೇಶದಲ್ಲಿ ಬಂದೂಕವನ್ನು ತೆಗೆದುಕೊಂಡು ಎಲ್ಲರ ಮೇಲೆ ಗುಂಡು ಹಾರಿಸಿದಂಥ ವಿದ್ಯಾರ್ಥಿಗಳ ವಿಷಯವನ್ನು ನಾವು ಪೇಪರ್‌ನಲ್ಲಿ ಓದಿದ್ದೇವೆ. ಆದರೆ, ಬೆಂಗಳೂರು ನಗರ ಕೂಡ ಇಂಥ ಒಂದು ಮಾನಸಿಕ ಒತ್ತಡಕ್ಕೆ ಒಳಗಾಘುತ್ತಿದೆ. ಇವುಗಳೆಲ್ಲವನ್ನು ನೋಡಿದ ಮೇಲೆ ಆಗಿರತಕ್ಕಂಥ ಪರಿಣಾಮಗಳು ಇದಾಗಿವೆ. ಇದು ಕೇವಲ ಕಾನೂನಿಗೆ ಸಂಬಂಧಪಟ್ಟಿರ ತಕ್ಕಂಥದ್ದಲ್ಲ. ಕೊಲೆ, ಸುಲಿಗೆ ಮೊದಲಾದಂಥವುಗಳ ಬಗ್ಗೆ ಕೂಡ ನಿರ್ದಿಷ್ಟವಾದಂಥ ಕ್ರಮಗಳನ್ನು ತೆಗೆದುಕೊಳ್ಳುವ ಜೊತೆಗೆ ಸುಮಾರು 200 ರೌಡಿಗಳನ್ನು ಈಗಾಗಲೇ ಬಂಧಿಸಿ ಸೆರಮನೆಗೆ ಕಳುಹಿಸಿಕೊಟ್ಟಿದ್ದೇವೆ. ಸುಮಾರು 800 ರಷ್ಟು ಮತ್ತೆ ಎಂದೂ ಸಹ ತಿದ್ದುವುದಕ್ಕೆ ಆಗದೇ ಇರತಕ್ಕಂಥವರು ಮತ್ತು ಕ್ರೂರಿಗಳಾಗಿರತಕ್ಕಂಥ ಹಾಗೂ ವಿಚಿತ್ರಕಾರಿ ಶಕ್ತಿಗಳಲ್ಲಿ ತೊಡಗಿಸಿಕೊಂಡಿರುವಂಥ ಜನಗಳನ್ನು ಗುರುತಿಸಿ ಅವರೆಲ್ಲರನ್ನೂ ಸಹ ನಾವು ಜೈಲಿಗೆ ಕಳುಹಿಸಿಕೊಟ್ಟಿದ್ದೇವೆ. ಸುಮಾರು 10 ಜನರನ್ನು ಗೂಂಡಾ

ಆಕ್ಟ್ ಕೆಳಗೆ ಬಂಧಿಸಿರುವುದರ ಜೊತೆಗೆ ಕರ್ನಾಟಕ ಪೋಲೀಸ್ ಆಕ್ಟ್ ಮೇರೆಗೆ 9 ರೌಡಿಗಳನ್ನು ಕರ್ನಾಟಕ ರಾಜ್ಯದಿಂದ ಗಡಿಪಾರು ಮಾಡಿದ್ದೇವೆ. ಮತ್ತೆ ಸುಮಾರು ಜನರು ಎನ್‌ಕೌಂಟರ್‌ನಲ್ಲಿ ಸತ್ತಿರತಕ್ಕಂಥದ್ದನ್ನು ನಾವು ಕಂಡಿದ್ದೇವೆ.

ಸಿಸಿಬಿಯವರು ಮಾಡಿದಂಥ ಒಳ್ಳೆಯ ಕೆಲಸದ ಕಾರಣಕ್ಕಾಗಿಯೇ ಸುಮಾರು 15 ಹೊಸ ಗ್ಯಾಂಗ್‌ಗಳು ಇದ್ದವು, ಅವರನ್ನು ಏನು ಪೈರಸಿಗಳು ಎಂದು ಕರೆಯುತ್ತೇವೆ, ಚಲನ ಚಿತ್ರಗಳನ್ನು, ವಿಡಿಯೋಗಳನ್ನು ಮಾಡತಕ್ಕಂಥದ್ದರಲ್ಲಿ ಸುಮಾರು 2 ಕೋಟಿ ರೂ.ಗಳ ಬೆಲೆ ಬಾಳತಕ್ಕಂಥ ಸಾಮಗ್ರಿಗಳನ್ನು ನಾವು ವಶಪಡಿಸಿಕೊಳ್ಳುವುದರ ಜೊತೆಗೆ ಅವರ ಮೇಲೆ ಎಚ್ಚರಿಕೆಯ ಕ್ರಮಗಳನ್ನು ಕೈಗೊಂಡಿದ್ದೇವೆ. ಸುಮಾರು ನಾಲ್ಕುವರೆ ಕೋಟಿ ರೂ.ಗಳಷ್ಟು ಬೆಲೆ ಬಾಳತಕ್ಕಂಥ ನೂರಕ್ಕಿಂತಲೂ ಹೆಚ್ಚು ಕಳ್ಳತನವಾಗಿರತಕ್ಕಂಥ ಕಾರುಗಳನ್ನು ಬೇರೆ ಕಡೆಯಿಂದ ವಶಪಡಿಸಿಕೊಂಡಿರತಕ್ಕಂಥದ್ದು ಕೂಡ ಇದೆ. ನಿಮಗೆ ಗೊತ್ತಿರುವಂತೆ ಇಮ್ರಾನ್ ಅಲಿಯಾಸ್ ಬಿಲಾಲ್ ಇವರನ್ನು ಬಂಧಿಸಿರುವಂಥ ಉಪ ಕ್ರಮಕ್ಕೆ ಕೇಂದ್ರ ಸರ್ಕಾರವು ಕೂಡ ನಮಗೆ ಒಳ್ಳೆಯ ಮಾತನ್ನು ಹೇಳಿದ್ದಾರೆ. ಮೊನ್ನೆ ನಡೆದಿರತಕ್ಕಂಥ ಈ ಕಫೀಲ್ ಮೊದಲಾದಂಥವರು ಕೈಗೊಂಡಿರತಕ್ಕಂಥ ಕ್ರಮದ ಮೂಲಕ ಸ್ವಲ್ಪ ಮಟ್ಟಿಗೆ ಬೆಂಗಳೂರಿನ ಪ್ರತಿಷ್ಠೆಗೆ ಧಕ್ಕೆ ಆಗಿತ್ತು ಎಂದು ಹೇಳಿ ನಾವು ಭಾವಿಸಿಕೊಂಡಿರುತ್ತೇವೆ. ಆದರೆ ಹನೀಫ್‌ರವರು ಯಾವುದೇ ಇಂತಹ ಒಂದು ಕೆಲಸದಲ್ಲಿ ಭಾಗಿಯಾಗಿಲ್ಲ ಎನ್ನತಕ್ಕಂಥ ಮಾರು ನಮಗೆ ನಿಜವಾಗಿಯೂ ಕೂಡ ಸಂತೋಷವನ್ನು ತಂದಿದೆ. ನಿರಪರಾಧಿಗಳಾಗಿರತಕ್ಕಂಥವರು ಯಾವುದೇ ಸಮಯದಲ್ಲಿ ಕಷ್ಟಕ್ಕೆ ಒಳಗಾಗಿರಬಾರದಾಗಿತ್ತು, ಒಳಗಾಗಬಾರದು ಕೂಡ. ಆ ದೃಷ್ಟಿಕೋನದಿಂದ ನಮ್ಮಿಂದ ವಿದ್ಯಾವಂತರಾಗಿ ಇಲ್ಲಿಂದ ಬೇರೆ ಕಡೆಗೆ ಉದ್ಯೋಗ ಅರಸಿಕೊಂಡು ಹೋಗಿರತಕ್ಕಂಥವರು ಭಯೋತ್ಪಾದಕರಿಗೆ ಸಹಕಾರ ಕೊಡುವುದು ಆಗಲಿ, ಅಥವಾ ಅಂತರ ರಾಷ್ಟ್ರೀಯ ಸಂಘಟನೆಗಳ ಜೊತೆಯಲ್ಲಿ ತಮ್ಮನ್ನು ಗುರುತಿಸಿಕೊಳ್ಳುವಂಥದ್ದು ಆಗಲಿ, ಅಥವಾ ಅವರು ರಾಷ್ಟ್ರದ್ರೋಹಿ ಕೆಲಸದಲ್ಲಿ ಅವರು ನಿರತರಾಗಿರತಕ್ಕಂಥದ್ದು ಸರಿಯಾದುದು ಅಲ್ಲ ಎನ್ನುವಂಥ ಕೆಲಸ ಕಾರ್ಯಗಳ ಬಗ್ಗೆ ಪೋಲೀಸ್ ಇಲಾಖೆ ಕಟ್ಟೆಚ್ಚರಿಕೆಯನ್ನು ವಹಿಸಿಕೊಂಡಿದೆ. ಎಲ್ಲವೂ ಸರಿಯಾಗಿದೆ ಎಂದು ನಾನು ಹೇಳಿಲ್ಲ. ಭ್ರಷ್ಟಾಚಾರ ಮುಕ್ತವಾಗಿದೆ ಎಂದು ಕೂಡ ನಾನು ಹೇಳುವುದಿಲ್ಲ. ಆದರೆ ನೂರಕ್ಕೆ ಅನೇಕರು ತಮ್ಮ ಒಳ್ಳೆಯ ಕರ್ತವ್ಯವನ್ನು ಮಾಡತಕ್ಕಂಥವರು

ಕೂಡ ಇದ್ದಾರೆ. ಆ ಕಾರಣಕ್ಕಾಗಿ ಮಾನ್ಯ ವಿರೋಧ ಪಕ್ಷದ ಸದಸ್ಯರು ಎತ್ತಿದಂಥ ಅನೇಕ ಸಮಸ್ಯೆಗಳಿಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಅವರಿಗೆ ವಿಭಿನ್ನವಾಗಿರತಕ್ಕಂಥ ಕೆಲಸ ಕಾರ್ಯಗಳನ್ನು ಕೊಡಬಾರದು. ಯಾವುದೋ ಒಂದು ಉತ್ತಮವಾದ ಸಿನೆಮಾ ಬಂದಿದೆ ಎಂದರೆ ಆ ಸಿನೆಮಾ ಟಿಕೇಟ್ ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಲಾಗಿ ನಿಲ್ಲಿಸುವುದಕ್ಕೆ ಪೊಲೀಸಿನವರನ್ನು ಬಯಸುವುದು. ಯಾರದೋ ದೊಡ್ಡವರ ಮನೆಯಲ್ಲಿ ಮದುವೆ ಆಗುತ್ತದೆಂದು ಹೇಳಿ ಅಲ್ಲಿ ರಸ್ತೆಯ ಸಂಚಾರವನ್ನು ನಿಯಂತ್ರಣ ಮಾಡಿಸಿ ಎನ್ನತಕ್ಕಂಥದ್ದು, ಈ ರೀತಿಯಾದಂಥ ಅವರದಲ್ಲದ ನಾಗರೀಕರು ತಮ್ಮಷ್ಟಕ್ಕೆ ತಾವೇ ಸ್ವಯಂ ನಿಗ್ರಹದ ಮೂಲಕವಾಗಿ ಕಾನೂನಿಗೆ ಅನುಗುಣವಾಗಿ ನಡೆದುಕೊಳ್ಳಬೇಕಾಗಿರತಕ್ಕಂಥದ್ದರಲ್ಲಿ ಈ ಪೊಲೀಸ್‌ರ ಸಹಾಯ ಬೇಡತಕ್ಕಂಥದ್ದು ಒಂದು ಪ್ರಬುದ್ಧ ಸಮಾಜದ ಲಕ್ಷಣವಲ್ಲ. ಆ ರೀತಿಯಾದಾಗ ಮಾತ್ರ ಪೊಲೀಸರ್ ಕರ್ತವ್ಯವನ್ನು ಅವರು ಬಹಳ ಚೆನ್ನಾಗಿ ಕೆಲಸವನ್ನು ನಿರ್ವಹಿಸುವುದಕ್ಕೆ ಆಗುತ್ತದೆನ್ನುವುದನ್ನು ಹೇಳಿ, ನಮ್ಮ ಇಲಾಖೆ ಮಂಡಿಸಿರತಕ್ಕಂಥ ಈ ಬೇಡಿಕೆಯನ್ನು ಮತ್ತು ರಾಜ್ಯ ಸರ್ಕಾರ ಮಂಡಿಸಿರತಕ್ಕಂಥ ಬೇಡಿಕೆಗಳಿಗೆ ಈ ಸದನ ಒಪ್ಪಿಗೆಯನ್ನು ಕೊಡಬೇಕೆಂದು ಪ್ರಾರ್ಥನೆಯನ್ನು ಮಾಡಿ ಸಮಯ ಕೊಟ್ಟಿದ್ದಕ್ಕಾಗಿ ನಿಮಗೆ ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ.ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಅಧ್ಯಕ್ಷರೆ, ಕಾನೂನು ಮತ್ತು ಗೃಹ ಸಚಿವರಿಗೆ ನನ್ನ ಅಭಿನಂದನೆಗಳು. ಒಂದೆರಡು Clarification ಕೇಳುತ್ತೇನೆ. Home Guards ಗಳು ಎಂದು ಈ ಕರ್ನಾಟಕ ರಾಜ್ಯದಲ್ಲಿ ಏನು ಇದ್ದಾರೆ, ನಾನು ಮಂತ್ರಿಯಾಗಿದ್ದಾಗ ಸ್ವಲ್ಪ ಅವರಿಗೆ ಭತ್ಯೆಯನ್ನು ಹೆಚ್ಚಿಗೆ ಮಾಡಲಾಗಿತ್ತು. ಅದು ಸುಮಾರು ವರ್ಷಗಳ ಹಿಂದೆ, ಬೆಂಗಳೂರು ನಗರ ಒಂದರಲ್ಲಿಯೇ ಸುಮಾರು 700–800 ಜನರಿದ್ದಾರೆ. ಅವರು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಪೊಲೀಸ್‌ನವರಷ್ಟೆ ಕೆಲಸವನ್ನು ಮಾಡುತ್ತಾರೆ. ಆದ್ದರಿಂದ ಅವರಿಗೆ ಭತ್ಯೆಯನ್ನು ಹೆಚ್ಚಿಗೆ ಮಾಡತಕ್ಕಂಥದ್ದು. ಮತ್ತು CAR Police quartersಗಳು ಎಂದು ಬೆಂಗಳೂರು ನಗರದ ಒಳಗಡೆ ಇದ್ದಾವೆ. ಮಳೆ ಬಂದರೆ ಆ ನೀರು ಸುರಿಯತಕ್ಕಂಥ ಜಾಗದಲ್ಲಿ ಅವರೆಲ್ಲಾ ಪಾತ್ರೆಗಳನ್ನು ಇಡುತ್ತಾರೆ. ಅಂತಹ ಮನೆಗಳಿಗೆ ಬೆಂಗಳೂರಿನ ಒಳಗಡೆ ಇರತಕ್ಕಂಥವರಿಗೆ ಬೆಂಗಳೂರು ಮಹಾನಗರ ಪಾಲಿಕೆಯಾಗಲಿ, ಸರ್ಕಾರವಾಗಲಿ ಅವರಿಗೆ

ಸ್ಪಂದಿಸುತ್ತಿಲ್ಲ. ಹೋದ ಸಲ ಮಾನ್ಯ ರೇವಣ್ಣವರ ಹತ್ತಿರ ನಾವು ಸುತ್ತಾಡಿದಾಗ 50 ಲಕ್ಷ ರೂ.ಗಳನ್ನು ಕೊಟ್ಟರು. ಅದರಲ್ಲಿ ಕೆಲವು ಮನೆಗಳು ಆದವು, ಇನ್ನು ಕೆಲವು ಆಗಲಿಲ್ಲ. ಅದಕ್ಕೇನಾದರೂ ತಾವು ಒಂದು ಹೆಚ್ಚಿನ ಆದ್ಯತೆಯನ್ನು ಕೊಡತಕ್ಕಂಥದ್ದು ಆಗಬೇಕು. ಅಲ್ಲಿ M.L.A. fund ಏನಿದೆ, ಬೆಂಗಳೂರು ನಗರದಲ್ಲಿ ಕೆಲವು police station ಗಳನ್ನು ಕಟ್ಟಿದ್ದೀರಿ. ಕೆಲವು ಏರಿಯಾಗಳಲ್ಲಿರುವ police station ಗಳನ್ನು ಬಡವರು ವಾಸಮಾಡುವ ಜಾಗದಲ್ಲಿ ಕಟ್ಟುವುದಕ್ಕೆ ಯಾವ ಕಂಪನಿಗಳು ಬರುತ್ತಿಲ್ಲ. ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಇಂತಹ ಪೊಲೀಸ್ ಠಾಣೆಗಳನ್ನು ಸಣ್ಣಪುಟ್ಟ ಪೋಲೀಸ್ ಕ್ವಾರ್ಟರ್ಸ್‌ಗಳನ್ನು ರಿಪೇರಿ ಮಾಡುವುದಕ್ಕೆ ತಾವು ಕಾನೂನಿನಲ್ಲಿ ಅನುವು ಮಾಡಿಕೊಡಬೇಕು. ಈ ಬಿಡದಿ ಪೊಲೀಸ್ ಠಾಣೆ ಎನ್ನುವುದು ರಾಮನಗರ ತಾಲ್ಲೂಕಿನ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿದೆ. ಪಕ್ಕದಲ್ಲಿ ಬಿಡದಿ ಪೊಲೀಸ್ ಸ್ಟೇಷನ್ ವಿಜಯನಗರದ ಸರಹದ್ದಿಗೆ ಬರುತ್ತಿದೆ, ರಾಜರಾಜೇಶ್ವರಿ ಸರಹದ್ದಿಗೆ ಬರುತ್ತಿದೆ, ಒಂದು ಸಣ್ಣ ತೊಂದರೆಯಾದರೆ, 30–40 ಕಿ.ಮೀ. ಹೋಗಬೇಕಾಗುತ್ತದೆ. ಅಲ್ಲೇ ಇರತಕ್ಕಂಥ ಕೆಂಗೇರಿ ಪೊಲೀಸ್ ಠಾಣೆ ಮತ್ತು ಜ್ಞಾನಭಾರತಿ ಪೊಲೀಸ್ ಠಾಣೆ ಮತ್ತು ರಾಜರಾಜೇಶ್ವರಿ ಪೊಲೀಸ್ ಠಾಣೆಗಳಿಗೆ ಬೇರೆ extra ದುಡ್ಡು ಬರುವುದಿಲ್ಲ. ಅದನ್ನು ತಾವು ಏಕೆ ವಿಂಗಡಿಸಿ ಆ ದೊಡ್ಡದಿರುವ ಬಿಡದಿ ಪೊಲೀಸ್ ಠಾಣೆಯನ್ನು ಕಡಿಮೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ವಿಜಯನಗರ ಪೊಲೀಸ್ ಠಾಣೆ ತುಂಬಾ ದೊಡ್ಡದು ಇದೆ, ತಾವು ಇನ್ನೊಂದಿಷ್ಟು ಹೊಸ ಪೊಲೀಸ್ ಠಾಣೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ತಾವು ಅದರಲ್ಲಿ ಇದನ್ನು ಸೇರಿಸಬೇಕು. ಬಿಡದಿ ಪೊಲೀಸ್ ಠಾಣೆಯ ವಿಸ್ತಾರ ಏನಿದೆ, ಅದನ್ನು ದಯಮಾಡಿ, ಕೆಂಗೇರಿ, ಜ್ಞಾನಭಾರತಿ, ರಾಜರಾಜೇಶ್ವರಿ ನಗರ ಪೊಲೀಸ್ ಠಾಣೆಗಳಿಗೆ ತಾವು ಕೆಲವು ಭಾಗವನ್ನು ವರ್ಗವಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಲ್ಲಿ ದಯಮಾಡಿ ಪೊಲೀಸ್ ಕ್ವಾರ್ಟರ್ಸ್‌ಗಳಿಗೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ಒಂದೆರಡು ಪ್ರಶ್ನೆಗಳನ್ನು ಕೇಳಬೇಕು, ನಿಮ್ಮ ಭಾಷಣದಲ್ಲಿ ಉತ್ತರಗಳು ಅವರಿಂದ ಬರದಿದ್ದರೆ ಕೇಳಬೇಕು. ಈ ತರಹ ಇಷ್ಟೊಂದು Clarification ಕೇಳಿದರೆ ಹೇಗೆ?

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಗೃಹ ಸಚಿವರು, ಬಹಳಷ್ಟು ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ನಾನು ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ಇತ್ತೀಚಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ರೌಡಿಗಳ ಕೊಲೆಯಾಗಲಿ ಅಥವಾ ಯಾರ ಕೊಲೆಯೆ ಆಗಲಿ, ಬಹಳಷ್ಟು ಕೊಲೆ ಪ್ರಕರಣಗಳು ಬಂದಿವೆ. ಇದು ರಾಜಧಾನಿ ಇದೆ, IT-BT ಇದೆ, ಹೊರಗಿನ ಜನರು ಬಂದಿದ್ದಾರೆ, ಅದಕ್ಕೆ ಒಂದು ಸ್ಟ್ಯಾಂಡ್ ತರಹ ಮಾಡಿ ಎಲ್ಲಾ ಕಡೆ ರಕ್ಷಣೆ ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ನಕ್ಸಲೈಟ್ ಆಕ್ಟಿವಿಟೀಸ್ ಹೊರಗಡೆ ಕೇಳುತ್ತಿದ್ದೇವೆ, ಅದು ಆ ಒಂದು ಭಾಗದಲ್ಲಿ ನಡೆಯುತ್ತಿದೆ. ಮೊನ್ನೆ ಹೇಳಿದರು, ನಾನು ಅಲ್ಲಿಗೆ ಹೋಗುತ್ತೇನೆ, ಒಂದು ಸಭೆ ನಡೆಸುತ್ತೇನೆ, ಅಲ್ಲಿ ಏನು ನಡೆಯುತ್ತಿದೆ, ಅದನ್ನು ಹಿಡಿತದಲ್ಲಿ ಇಡುವುದಕ್ಕೆ ಸಭೆ ಮಾಡುತ್ತೇನೆ ಎನ್ನತಕ್ಕಂಥದ್ದು, ಅದರ ಬಗ್ಗೆ ಸಭೆ ಮಾಡಿದ್ದಾರೋ ಬಿಟ್ಟಿದ್ದಾರೋ ಅದು ಅವರಿಗೆ ಗೊತ್ತು. ಆದರೆ ನಕ್ಸಲೈಟ್ ಆಕ್ಟಿವಿಟೀಸ್ ನಡೆಯುತ್ತಿದೆ, ಬಿಗಿ ಯಾದ ಕ್ರಮವನ್ನು ಪೊಲೀಸ್ ಇಲಾಖೆ ತೆಗೆದುಕೊಳ್ಳಬೇಕು. That is a socioeconomic problem. That is different. ಒಂದು ಕಡೆ ಅಭಿವೃದ್ಧಿ ಕೆಲಸ ಮಾಡತಕ್ಕಂಥದ್ದು, ಚಿರಂಜೀವಿಸಿಂಗ್ ಮತ್ತು ಘೋರೆಯವರು ಏನು ರಿಪೋರ್ಟ್ ಕೊಟ್ಟಿದ್ದಾರೆ, ಅದನ್ನು ಕೂಡ ಇಂಪ್ಲಿಮೆಂಟ್ ಮಾಡತಕ್ಕಂಥದ್ದು. ಮತ್ತೊಂದು ಕಡೆ ಬಿಗಿಯಾಗಿ ಎಲ್ಲರಿಗೂ ಕೂಡ ರಕ್ಷಣೆ ಇದೆ ಎನ್ನತಕ್ಕಂಥ ಆತ್ಮವಿಶ್ವಾಸ ಕೊಡುವಂಥ ಈ ಎರಡು ಕೆಲಸಗಳನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಮಾತನಾಡುವಾಗ Policeನವರಿಗೆ ಈ risk allowance ನೀಡುವ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅದರ ಬಗ್ಗೆ ಸರ್ಕಾರ ಪ್ರಾಮಾಣಿಕವಾದ ಒಂದು ಚಿಂತನೆಯನ್ನು ಮಾಡಿಲ್ಲ. ASI, Police ದರ್ಜೆಯವರಿಗೆ ಸುಮಾರು 20 ವರ್ಷಗಳಿಂದ ಅವರಿಗೆ ಬಡ್ತಿಯನ್ನು ಕೊಟ್ಟಿಲ್ಲ. ಅವರ ಜೀವನ ಭದ್ರತೆಯ ಬಗ್ಗೆ ಪ್ರಾಮಾಣಿಕವಾದ ಒಂದು ಚಿಂತನೆಯಾಗಿಲ್ಲ. ಇದು ಬಹಳ ಪ್ರಾಮುಖ್ಯವಾದದ್ದು, ನಾವು ಅನೇಕ ಸಲ ಸಂಚಾರಿ ಪೊಲೀಸ್‌ರ ಬಗ್ಗೆ ಚರ್ಚೆ ಮಾಡಿದ್ದೇವೆ. ಬಹಳ ಹೊತ್ತು ಸಂಚಾರಿ ಪೊಲೀಸ್‌ನವರು ಬೀದಿಯಲ್ಲಿ ನಿಂತಿರಬೇಕಾಗುತ್ತದೆ. ಅವರಿಗೆ ನೀವು ವಿಶೇಷವಾದದಂಥ ಭತ್ಯೆ

ಕೊಡುತ್ತೀರಾ ಎಂದು ಕೇಳಿದೆ, ಅದರ ಬಗ್ಗೆ ಮಾನ್ಯ ಗೃಹ ಸಚಿವರು ಉತ್ತರವನ್ನು ಕೊಡಲಿಲ್ಲ. risk allowance ಬಗ್ಗೆ ಉತ್ತರ ಕೊಡಲಿಲ್ಲ. reserve police ನವರು ಏನಿದ್ದಾರೆ, ಅವರ ವಸ್ತು ಸ್ಥಿತಿಯನ್ನು ಮಾನ್ಯ ಗೃಹ ಸಚಿವರಿಗೆ ಹೇಳಿದೆ. ಅವರು 24 ಗಂಟೆ ವಾಹನದಲ್ಲಿ ಕುಳಿತಿರಬೇಕು, ಅವರು ಮನೆ, ಮಠ, ಜನ ಮಾನವೀಯತೆಯನ್ನು ಮರೆತಿರುತ್ತಾರೆ. ಅವರ ಬಗ್ಗೆ ನೀವು ವಿಶೇಷವಾದಂಥ ಭತ್ಯೆಯ ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿದೆ.

ಅಧ್ಯಕ್ಷರು : ಸಮಯ ಕಡಿಮೆ ಇರುವುದರಿಂದ ತಾವು ಮುಖ್ಯವಾದುದನ್ನು ಮಾತ್ರ ಹೇಳಿ. ನೀವು ಎಲ್ಲವನ್ನು ಹೇಳುತ್ತಾ ಹೋದರೆ ಹೇಗೆ? ಭಾಷಣ ಮಾಡಿದ್ದೀರಲ್ಲಾ, ಅದರ ಅರ್ಥ ಇಲ್ಲಿ Clarification ಕೇಳಿ ಬಿಟ್ಟರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದ ಕಿವಿಗೆ ಹೋಗುತ್ತದೆಂದು ಹತ್ತತ್ತು ಸಾರಿ ಹೇಳಿದೆ, ಅಷ್ಟೆ ಇನ್ನೇನು ಇಲ್ಲ.

ಶ್ರೀ ಎ.ಎಸ್.ಬಸವರಾಜು : ಅರಸೀಕೆರೆ ತಾಲ್ಲೂಕಿನಲ್ಲಿ ಮಾಲೇಕತ್ತಿ ತಿರುವು ಎಂದು ಇದೆ, ಇಲ್ಲಿ ಕಳೆದ ಎರಡು ತಿಂಗಳ ಹಿಂದೆ ಅಲ್ಲಿರುವ ಕಾವಲುಗಾರನ ಕೊಲೆಯಾಯಿತು. ಆದರೆ ಗೃಹ ಸಚಿವರನ್ನು ಕೇಳಿದಾಗ, Out-police Station ಕೊಡುತ್ತೇವೆಂದು ಹೇಳಿದ್ದಾರೆ, ದಯವಿಟ್ಟು ಅದನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ನಕ್ಸಲೈಟ್ ಸಮಸ್ಯೆ ಇರಬಹುದು ಅಥವಾ ಬೇರೆ ಬೇರೆ ಸಮಸ್ಯೆ ಇರಬಹುದು. ಪೊಲೀಸ್ ಹತ್ತಿರ ಇರುವಂಥ ಶಸ್ತ್ರಾಸ್ತ್ರ ಬಹಳ ಹಳೆಯ ಕಾಲದ್ದು, ಆಧುನಿಕ ಶಸ್ತ್ರಾಸ್ತ್ರಗಳನ್ನು ಮತ್ತು ವಾಹನಗಳನ್ನು ಕೊಳ್ಳಲಿಕ್ಕೆ ವಿಶೇಷವಾಗಿರತಕ್ಕಂಥ ಹಣವನ್ನು ಕೊಡಬೇಕು. ನಮ್ಮ ಮಂತ್ರಿಗಳ ವಾಹನ ಹೋಗುವಾಗ ಒಂದು ಪೈಲೆಟ್ ವಾಹನ ಹೋಗುತ್ತದೆ, ಅದು 40 ಕಿ.ಮೀ. ಹೋಗುವುದು, ಮಾನ್ಯ ಮಂತ್ರಿಗಳ ಕಾರ್ 100 ಕಿ.ಮೀ.ಸ್ಪೀಡ್‌ನಲ್ಲಿ ಹೋಗುತ್ತದೆ. ಅವರನ್ನು ಹಿಂಬಾಲಿಸುವುದಕ್ಕೆ ಆಗುವುದಿಲ್ಲ. ಹಾಗಾಗಿ ಈ ವಾಹನವನ್ನು ಕೊಳ್ಳಲಿಕ್ಕೆ ವಿಶೇಷವಾಗಿರತಕ್ಕಂಥ ಹಣವನ್ನು ಇವತ್ತು ಕೊಡದೇ ಹೋದರೆ, ಅದರಲ್ಲಿ ಕುಳಿತಿರತಕ್ಕಂಥ ಪೊಲೀಸ್‌ನವರು ದೂಡುತ್ತಿರುತ್ತಾರೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಆ ವಾಹನಗಳು ಓಡಬಾರದು.

ಪೊಲೀಸ್‌ನವರಿಗೆ ಆಧುನಿಕವಾಗಿರತಕ್ಕಂಥ ಬುಲೆಟ್ ಪ್ರೂಫ್ ವಾಹನಗಳನ್ನು ನೀಡಬೇಕು. ಏಕೆಂದರೆ ಇವತ್ತು ಮೈನಿಂಗ್ ವಾಹನಗಳನ್ನು ದಾಟಿ ಹೋಗಬೇಕಾಗುತ್ತದೆ. ಇಂತಹ ಒಂದು ಸಂದರ್ಭವನ್ನು ನಿಭಾಯಿಸುವುದಕ್ಕಾಗಿ ಶಸ್ತ್ರಾಸ್ತ್ರ ಮತ್ತು ವಾಹನಗಳಿಗಾಗಿ ವಿಶೇಷವಾದಂಥ ಹಣವನ್ನು ತೆಗೆದಿಟ್ಟು ತತ್‌ಕ್ಷಣ ಅವರಿಗೆ ಕೊಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ಇದೇ ತಿಂಗಳು 17ನೇ ತಾರೀಖು ಚಾಮರಾಜನಗರ ತಾಲ್ಲೂಕಿನಲ್ಲಿ ಕೊತ್ತಲವಾಡಿ ಗ್ರಾಮದಲ್ಲಿ ಗಣಿಸ್ಫೋಟವಾಯಿತು. ಆ ದುರಂತದಲ್ಲಿ ಆರು ಜನರು ಮೃತಪಟ್ಟರು. ಮಾನ್ಯ ಗೃಹ ಮಂತ್ರಿಗಳು ಘೋಷಣೆಯನ್ನು ಮಾಡಿದರು. ಮಾನವೀಯತೆಯ ದೃಷ್ಟಿಯಿಂದ ಆ ಕೂಲಿ ಕಾರ್ಮಿಕರಿಗೆ ನಾವು ಪರಿಹಾರವನ್ನು ಒದಗಿಸುತ್ತೇವೆ ಎನ್ನತಕ್ಕಂಥದ್ದನ್ನು ಅವರಿಗೆ ಇದುವರೆಗೆ ಪರಿಹಾರ ಸಿಕ್ಕಿಲ್ಲ. ಮಾನ್ಯ ಗೃಹ ಮಂತ್ರಿಗಳು ದಯಮಾಡಿ ಆ ಕೂಲಿ ಕಾರ್ಮಿಕರ ಮೃತ ಕುಟುಂಬಕ್ಕೆ ತಾವು ಪರಿಹಾರವನ್ನು ಅನೌನ್ಸ್ ಮಾಡಬೇಕು. ನಕ್ಸಲೈಟ್ ಸ್ಥಳದಲ್ಲಿ ಯಾವ ರೀತಿ ಪರಿಹಾರವನ್ನು ಘೋಷಣೆ ಮಾಡಿದಿರು, ಆ ರೀತಿ ಇಲ್ಲಿ 6 ಜನ ಮೃತ ಕುಟುಂಬದವರಿಗೆ ಇಷ್ಟು ಹಣವನ್ನು ಕೊಡುತ್ತೇವೆ ಎನ್ನತಕ್ಕಂಥದ್ದು, ತಾವು ಆವತ್ತು ಭರವಸೆಯನ್ನು ಕೊಟ್ಟಿದ್ದೀರಿ, ಅದು ಇನ್ನುವರೆಗೆ ತಲುಪಿಲ್ಲ ಎನ್ನುವಂಥದ್ದು ತಮಗೆ ತಿಳಿಸುತ್ತಾ, ತಾವು ಆದಷ್ಟು ಶೀಘ್ರವಾಗಿ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ.

(1-00 PM)

ಶ್ರೀ ಹೆಚ್.ಆಂಜನೇಯ : ಮಾನ್ಯ ಅಧ್ಯಕ್ಷರೆ, ಹಳ್ಳಿಗಳಲ್ಲಿ ದಳಪತಿಗಳಾಗಿ ಕೆಲಸ ಮಾಡುತ್ತಿದ್ದರು. ಅವರು ಏನು ಮಾಡುತ್ತಿದ್ದರೆಂದರೆ, ಪೊಲೀಸ್‌ನವರಿಗೆ ಹಳ್ಳಿಯಲ್ಲಿ ನಡೆಯತಕ್ಕಂಥ ಘಟನೆಗಳ ಬಗ್ಗೆ ಮತ್ತು ಅವರಿಗೆ ನೆರವಾಗತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ಅಂತಹ ದಳಪತಿಗಳಿಗೆ ಈಗ ಸರ್ಕಾರ ಯಾವುದೇ ರೀತಿಯ ಗೌರವಧನವನ್ನು ಕೊಡತಕ್ಕಂಥ ಕ್ರಮವನ್ನು ಕೈಗೊಂಡಿಲ್ಲ. ಅವರಿಗೆ ಏನಾದರೊಂದು ಭದ್ರತೆಯನ್ನು ಒದಗಿಸುತ್ತಿಲ್ಲ. 5–6 ವರ್ಷಗಳಿಂದ ಆ ಜನ ವಿಧಾನಸೌಧಕ್ಕೆ ಅಲೆಯುತ್ತಲೇ ಇದ್ದಾರೆ. ಆದ್ದರಿಂದ ಅವರಿಗೆ ಗೌರವಧನ ಕೊಡತಕ್ಕಂಥ ಒಂದು ಉಪಕಾರವನ್ನು ಗೃಹ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀಮತಿ ಶಕುಂತಲಾ ಟಿ.ಶೆಟ್ಟಿ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕಿನ ಎರಡು Police Stationಗಳು ಪೂರ್ತಿ ಮಲೆನಾಡಿನ ವ್ಯಾಪ್ತಿಗೆ ಸೇರಿರುವಂಥದ್ದು ಒಂದು ಸುಳ್ಯ ಕ್ಷೇತ್ರದ ಚೋಳಭಟ್ಟಾ-ಕಡಬಾ ಹಾಗೂ ಪುತ್ತೂರಿಗೆ ಸೇರಿದ ಉಪ್ಪಿನಂಗಡಿ, ಉಪ್ಪಿನಂಗಡಿ ವ್ಯಾಪ್ತಿಯಲ್ಲಿ ಮೊನ್ನೆ ಗೋಡೆಬರಹ ಎಲ್ಲ ಕಂಡುಬಂದಿತ್ತು. ಸನ್ಮಾನ್ಯ ಸಚಿವರನ್ನು ತಮ್ಮ ಮುಖಾಂತರ ಕೇಳುವುದೇನೆಂದರೆ, ನಮ್ಮ ಉಪ್ಪಿನಂಗಡಿ-ಕಡಬಾ ನೆಲ್ಲಿಯಾಡಿಗೆ ಹೆಚ್ಚಿನ ಪೊಲೀಸ್ ಬಲವನ್ನು ಕೊಡಬೇಕೆಂದು ಕೇಳಿಕೊಂಡಿದ್ದೆ, ಅದರ ಬಗ್ಗೆ ಅವರು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪುತ್ತೂರು Police quartersಗಳು ಮಳೆಯಾದಾಗ ಪ್ರತಿಯೊಂದು ಸೋರುತ್ತಿವೆ, ಅವರು ಪಾತ್ರೆಗಳನ್ನು ಇಟ್ಟು ಮನೆಯಲ್ಲಿ ಕುಳಿತುಕೊಳ್ಳುವಂಥ ಅವಸ್ಥೆ ಬಂದಿದೆ. ಅದಕ್ಕಾಗಿ ಜನತೆಗೆ ರಕ್ಷಣೆ ಕೊಡತಕ್ಕಂಥ ಪೊಲೀಸ್‌ನವರಿಗೆ ಮನೆಯ ಒಳಗೆ ರಕ್ಷಣೆ ಇಲ್ಲದಂತಾಗಿದೆ. ಅವರಿಗೆ ಹೊಸ ವಸತಿ ಗೃಹಗಳನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಎಂ.ಕೆ.ನಾಗಮಣಿ (ಕಿರುಗಾವಲು) : ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾನು ಬಹಳ ಸಲ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆದಿದ್ದೆ. ನನ್ನ ಕಿರುಗಾವಲು ಕ್ಷೇತ್ರದಲ್ಲಿ ಒಂದು ಚಿಕ್ಕಹೊಡೆದಾಟ ನಡೆದಿತ್ತು. ಇದರ ಬಗ್ಗೆ ಅಲ್ಲಿರುವ ಪೊಲೀಸ್ ಅಧಿಕಾರಿಗಳಿಗೆ ಹೋಗಿ ಹೇಳಿದರೂ ಕೂಡ ಯಾರೂ ಬರದೇ, ಅದರ ಕಡೆ ಗಮನ ಕೊಡಲಿಲ್ಲ. ಇದರ ಬಗ್ಗೆ ನಾನು ಮಂತ್ರಿಗಳ ಗಮನಕ್ಕೆ ಕೂಡ ತಂದಿರುತ್ತೇನೆ. ಆದರೂ ಕೂಡ ಇದರ ಬಗ್ಗೆ ಸಂಬಂಧಪಟ್ಟ ಯಾವ ಕಾನ್‌ಸ್ಟೇಬಲ್‌ಗಳ ಮೇಲೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಜೊತೆಗೆ ಭಾರತಿನಗರದಲ್ಲಿ ಇದುವರೆಗೆ ಒಂದು SI ಇಲ್ಲ, CPI ಇಲ್ಲ, ದಿನನಿತ್ಯ ಅಲ್ಲಿ ಕಳ್ಳತನ ನಡೆಯುತ್ತಿದೆ. ಮಂತ್ರಿಗಳ ಗಮನಕ್ಕೆ ಹಾಗೂ DG ಯವರ ಗಮನಕ್ಕೆ ತಂದರೂ ಕೂಡ ಇದುವರೆಗೆ ಒಬ್ಬರನ್ನು ಹಾಕಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಬಹಳ ಅನುಭವಿಗಳು ಇರುವುದರಿಂದ, ಆದರೂ ಕೂಡ ಪೊಲೀಸ್ ಇಲಾಖೆಯಲ್ಲಿ ಅವರು ಈ ರೀತಿ ಏಕೆ ಎಡವುತ್ತಿದ್ದಾರೆ ಎನ್ನುವುದು ನನಗಂತೂ ಗೊತ್ತಿಲ್ಲ. ಹೆಣ್ಣು ಮಕ್ಕಳು ಇರುವ ಕ್ಷೇತ್ರದಲ್ಲಿ ಜನರು ಬಾಯಿಗೆ ಬಂದಂತೆ ಮಾತನಾಡಿಕೊಳ್ಳುತ್ತಾರೆ. ದಯಮಾಡಿ ತಾವು ಈ ಕಡೆ ಗಮನವನ್ನು ಕೊಟ್ಟು ಸಂಬಂಧಪಟ್ಟ

ಅಧಿಕಾರಿಗಳನ್ನು ತುಂಬಿ ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಿ.ಸುನೀಲ್ ಕುಮಾರ್ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ನಕ್ಸಲ್ ಚಟುವಟಿಕೆಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಎಂದು ಮಾಡಿದ್ದಾರೆ. ANF squad ಅವರಿಗೆ ಇವತ್ತು ವಸತಿ ಗೃಹಗಳು ಇಲ್ಲ. ಯಾವುದಾದರೂ ಹಳೆಯ ಮನೆಯಲ್ಲಿ ಉಳಿದುಕೊಂಡು ಖಾಸಗಿ ಕಟ್ಟಡಗಳಲ್ಲಿ ಆ ವಿಚಿತ್ರವಾದ ಒಂದು ಸನ್ನಿವೇಶದಲ್ಲಿ ಆ ಎಲ್ಲಾ ಪೊಲೀಸ್‌ನವರು ಇವತ್ತು ಇದ್ದಾರೆ. ಆ ANF ಗಳನ್ನು ಇನ್ನಷ್ಟು ಭದ್ರಗೊಳಿಸುವ ನಿಟ್ಟಿನಲ್ಲಿ ಅವರಿಗೆ ಪ್ರತ್ಯೇಕವಾದ ಒಂದು ವಸತಿ ಗೃಹವನ್ನು ಪ್ರಾರಂಭ ಮಾಡುವ ನಿಟ್ಟಿನಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು. ಜೊತೆಯಲ್ಲಿ ಆ ನಕ್ಸಲೇಟ್ ಚಟುವಟಿಕೆ ವ್ಯಾಪ್ತಿಯಲ್ಲಿ ಬರುವಂಥ ಎಲ್ಲಾ ಪೊಲೀಸ್ ಸ್ಟೇಷನ್‌ಗಳಲ್ಲಿ ಖಾಲಿ ಇರುವಂಥ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಏಕೆಂದರೆ ಸಾಕಷ್ಟು ಕಡೆ ಪೊಲೀಸ್ ಹುದ್ದೆಗಳು ಖಾಲಿ ಇವೆ. ಮತ್ತು PSI ಹುದ್ದೆಗಳು ಖಾಲಿ ಇವೆ. ಅವೆರಡನ್ನು ಭರ್ತಿ ಮಾಡತಕ್ಕಂಥ ನಿಟ್ಟಿನಲ್ಲಿ ಕೂಡ ಸರ್ಕಾರ ಇವತ್ತು ಕ್ರಮವನ್ನು ಕೈಗೊಳ್ಳಬೇಕು. ಇತ್ತೀಚೆಗೆ ಪತ್ರಿಕೆಯಲ್ಲಿ ಬಂದಿರುವುದನ್ನು ಮಾನ್ಯ ಗೃಹ ಸಚಿವರು ಗಮನಿಸಿರಬಹುದು. ಗುಜರಾತಿನಲ್ಲಿ ಸಿಕ್ಕಿಬಿದ್ದಂಥ ಭಯೋತ್ಪಾದನೆ ಚಟುವಟಿಕೆಗಳನ್ನು ಮಾಡುತ್ತಾರೆ ಎನ್ನುವ ಒಂದು ಆತಂಕಕಾರಿ ಸುದ್ದಿಯನ್ನು ಪತ್ರಿಕೆಗಳು ಬಹಿರಂಗ ಮಾಡಿವೆ. ಈ ಹಿನ್ನೆಲೆಯಲ್ಲಿ ಕರಾವಳಿಯನ್ನು ಅತ್ಯಂತ ಸುರಕ್ಷಿತವಾಗಿ ಇಡುವ ನಿಟ್ಟಿನಲ್ಲಿ ಸರ್ಕಾರ ಒಂದು ವಿಶೇಷವಾದಂಥ ಕಾಳಜಿಯನ್ನು ವಹಿಸಿ ಆ ಕುರಿತಂತೆ ಗಂಭೀರವಾದ ಆಲೋಚನೆಯನ್ನು ಸರ್ಕಾರ ಮಾಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ತಮ್ಮ constablesಗಳ service conditions ಬಗ್ಗೆ ತಮ್ಮಲ್ಲಿ ನಾನು ಪ್ರಸ್ತಾಪವನ್ನು ಮಾಡಿದೆ. ಅವರ ನೈತಿಕ ಸ್ಥೈರ್ಯವನ್ನು ಹೆಚ್ಚಿಸಬೇಕು. defence services ಗೆ ಮಾಡಿದಂತೆ ಅವರಿಗೆ ಮತ್ತು ಅವರ ಮಕ್ಕಳಿಗೆ higher education ಗೆ particularly professional educationಗೆ reserve ಮಾಡತಕ್ಕಂಥದ್ದು separate ಆಗಿ institutions ಮಾಡತಕ್ಕಂಥದ್ದು ಮತ್ತು ಅವರ post-retirement stage ನಲ್ಲಿ medical facilities

ಕೊಡಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಅವರನ್ನು ಭ್ರಷ್ಟರನ್ನಾಗಿ ಮಾಡುವ ವ್ಯವಸ್ಥೆಯಲ್ಲಿ ಇಡುವುದು ಬೇಡ. ಅವರ ಎಲ್ಲಾ ಅಗತ್ಯತೆಗಳನ್ನು ನಾವು ಪೂರೈಸಿದರೆ, ಆ ರೀತಿ ಮನಸ್ಸು ಹೋಗದೇ ಇರುತ್ತದೆ. ಇಲಾಖೆಯ ಗೌರವ ಕೂಡ ಸಾರ್ವಜನಿಕ ದೃಷ್ಟಿಯಲ್ಲಿ ಸ್ವಲ್ಪ ಹೆಚ್ಚಾಗುತ್ತದೆ ಎನ್ನುವ ಮಾತನ್ನು ಹೇಳಿದೆ. ತಾವು ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಏನು ಹೇಳಲಿಲ್ಲ. ಎರಡನೆಯದಾಗಿ ಮಾನ್ಯ High Courtನ ಮುಖ್ಯ ನ್ಯಾಯಾಧೀಶರು ಕೂಡ ಇತ್ತೀಚೆಗೆ ಎರಡು ಸಲ observe ಮಾಡಿದ್ದಾರೆ. Cases conduct ಮಾಡುವಾಗ witnesses ಕರೆದುಕೊಂಡು ಬರುವುದರಲ್ಲಿ, warrants issue ಮಾಡಿದರೂ ಕೂಡ ಪೋಲೀಸ್‌ನವರು fail ಆಗುತ್ತಾರೆ. ಅವರು ಅಲ್ಲಿಯೂ ಹೋಗಿರುವುದಿಲ್ಲ. ಪತ್ತೆ ಇಲ್ಲ, ಹಾಜರಿಲ್ಲ, ಸಿಗಲಿಲ್ಲವೆಂದು ಬರೆದುಕೊಂಡು ಬರುತ್ತಾರೆ. ಇವರು ಶಾಮೀಲಾಗಿರುತ್ತಾರೆ. ಇದರಿಂದ ಅನೇಕ ವೇಳೆಗೆ cases disposalಗೆ ಕಷ್ಟವಾಗುತ್ತದೆ. Prosecution ಸಹಕಾರ ಮಾಡುತ್ತಿಲ್ಲವೆನ್ನುವ ನೇರವಾದ observationನ್ನು ಮುಖ್ಯನ್ಯಾಯಾ ಧೀಶರು ಮಾಡಿದ್ದಾರೆ. ಇಂತಹ specific cases ತಮ್ಮ ಗಮನಕ್ಕೆ ಬಂದಾಗ ವಿನಾಕಾರಣ ಎಲ್ಲ ಕಡೆಗೆ ಇರತಕ್ಕಂಥವರನ್ನು ತೆಗೆದುಕೊಂಡು ಹೋಗಿ warrants issue ಮಾಡಿದರೂ ಕೂಡ Courtsನಲ್ಲಿ Produce ಮಾಡದೇ fail ಆಗಿರತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು. ಮುಂದಕ್ಕೆ ಅಂಥದ್ದು ಆಗದಂತೆ, ಅವರಿಗೆ ಸೂಕ್ತವಾದ ಎಚ್ಚರಿಕೆಯನ್ನು ಕೊಡತಕ್ಕಂಥದ್ದು ಮಾಡುವುದು ಸಾಧ್ಯವೇ? ನಾನು Judicial services ಬಗ್ಗೆ ಕೂಡ ನಾನು ಹೇಳಿದೆ. ನ್ಯಾಯಾಂಗ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ Judicial Offiicers ಕೂಡ ತಮ್ಮಂತೆ ನಮ್ಮಂತೆ ಮನುಷ್ಯರು. ಅವರು ಕೂಡ ಒಪ್ಪು ತಪ್ಪು ಮಾಡತಕ್ಕಂಥದ್ದು ಸ್ವಾಭಾವಿಕ. ಇವತ್ತು ಬೇರೆ ಕ್ಷೇತ್ರಗಳಲ್ಲಿ, We subject them to servere scrutiny. ಅವರ ಮೇಲೆ ಒಂದು Objective analysis ಇದೆ, agencies ಇವೆ. ಇಲ್ಲಿ ಏನಾಗುತ್ತದೆಂದರೆ, ಯಾವ ವಿಧವಾದಂಥ ನಿಗಾ ಇಡತಕ್ಕಂಥ ವ್ಯವಸ್ಥೆ ಕೂಡ ಇಲ್ಲ. ನಾನು ನನ್ನ ಪದಗಳನ್ನು ಬಹಳ ಜಾಗ್ರತೆಯಿಂದ ಬಳಸುತ್ತಿದ್ದೇನೆ. At least up to the level of Sessions Judges, High Court ನಲ್ಲಿ ಒಂದು ಯೋಚನೆಯನ್ನು ಮಾಡಿ

Independent Judicial Commissionನ್ನೂ review ಮಾಡತಕ್ಕದ್ದು. Judges are not infallible. ಅವರೇನು ದೇವಲೋಕದಿಂದ ಇಳಿದಿಲ್ಲ. ಅವರ official conduct, While in service, from time to time review ಮಾಡುವುದಕ್ಕೆ ಒಂದು ವ್ಯವಸ್ಥೆಯಾಗದೇ ಹೋದರೆ ಏನಾಗುತ್ತದೆಂದರೆ, ಎಲ್ಲೋ ಒಂದು ಕಡೆಗೆ Thay will constitute themselves into a separate priesthood. Such a thing should not happen ಎಂದು ಹೇಳದೆ ತಾವು ಅದರ ಬಗ್ಗೆಯೂ ಏನೂ ಹೇಳಲಿಲ್ಲ. ನನ್ನ ಕ್ಷೇತ್ರದಲ್ಲಿ ನಡೆದಂಥ ದುರ್ಘಟನೆಗಳ ಬಗ್ಗೆ ಮೂರು ಜನ ದುಃಖಕ್ಕೆ ಒಳಗಾಗಿರತಕ್ಕಂಥವರು, ನಷ್ಟಕ್ಕೆ ಒಳಗಾಗಿರತಕ್ಕಂಥವರು ದಲಿತ ಕುಟುಂಬಗಳಿಗೆ ಸೇರಿರತಕ್ಕಂಥವರು ಈಗಾಗಲೇ ಅಲ್ಲಿರತಕ್ಕಂಥ ಸ್ಥಳೀಯ ಅಧಿಕಾರಿಗಳು ಅವರು ಯಾವ ಕಾರಣಕ್ಕೆ ಮಡಿದರು ಎಂದು ಗೊತ್ತಿಲ್ಲ. ಯಾರು ಮರಣ ಹೊಂದಿದ್ದಾರೆ, ಅವರ ತಂದೆ–ತಾಯಿ ಹೆಂಡತಿ ಸ್ಥಳದಲ್ಲಿಯೇ ಇದ್ದು ಅವರು ಹೇಳಿದ ಹೇಳಿಕೆಗಳನ್ನು ಧಿಕ್ಕರಿಸಿದ್ದಾರೆ. Charges-sheets ಕಳುಹಿಸಿದಾಗ ಹೆಚ್ಚು ಕಡಿಮೆ ಮಾಡಿದ್ದಾರೆ. ದಯಮಾಡಿ ಇದನ್ನು ಸಿ.ಓ.ಡಿ.ಗೆ ಒಪ್ಪಿಸಿ ಎಂದು ಹೇಳಿದೆ, ತಾವು ಅದನ್ನು ಒಂದು ರೀತಿ ಒಪ್ಪಿಕೊಂಡ ಹಾಗೆ, ಒಪ್ಪದಿದ್ದ ಹಾಗೆ ಮಾತನಾಡಿದ್ದೀರಿ, suo motu ನಾನು ಜವಾಬ್ದಾರಿಯಿಂದ ಹೇಳುತ್ತಿರುವುದರಿಂದ ಸ್ಥಳೀಯ ಅಧಿಕಾರಿಗಳು fail ಆಗಿರುವುದರಿಂದ even if the charges sheets have been filed, ಸಿ.ಓ.ಡಿ.ಯವರು enquiry ಮಾಡಲಿ, ಒಂದು ವೇಳೆ ಸಿ.ಓ.ಡಿ.ಯವರಿಗೆ ಮನಸ್ಸಿಗೆ ಬಂದರೆ, ಇಂಥದ್ದರಲ್ಲಿ ಅನ್ಯಾಯವಾಗಿದೆ, ನೊಂದವರಿಗೆ ನಾವು ನ್ಯಾಯ ದೊರಕಿಸಿಕೊಡಬೇಕಾ ಗುತ್ತದೆಂದು ಅವರಿಗೆ ಮನವರಿಕೆಯಾದರೆ in the process of enquiry, ಆನಂತರ let them file an additional charge-sheet. ಒಂದು ವೇಳೆ enquiry ಮಾಡಿ, ಇಲ್ಲ, ಅಂಥದ್ದೂ ಏನು ಆಗಿಲ್ಲ, ಅದು ಸರಿಯಿದೆ ಅಂದರೆ ಅದೇ ರಿಪೋರ್ಟ್ ಕೊಡಲಿ, ನಮಗೇನೂ ತೊಂದರೆಯಿಲ್ಲ. ಸಿ.ಓ.ಡಿ.ಯಲ್ಲಿ ವಿಶ್ವಾಸವಿಟ್ಟು ಕೇಳುತ್ತಿದ್ದೇವೆ. ಆ ಮೂರು ಕೇಸುಗಳನ್ನು suo motu ಈಗ ಸಿ.ಓ.ಡಿ.ಗೆ. ರೆಫರ್ ಮಾಡುವಂಥ ಒಂದು statement ಅನ್ನು ತಾವು ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ತಾಲ್ಲೂಕು ಕೇಂದ್ರಗಳಲ್ಲಿ ಏನು ಹಳೆಯ ಸ್ಟೇಷನ್ಸ್ ಇವೆ, ಅಲ್ಲಿರುವ ಪಿ.ಸಿ.ಗಳ strength ಅನ್ನು ಜಾಸ್ತಿ ಮಾಡಬೇಕೆಂದು ನಾನು ಪ್ರಕಾಶ್‌ರವರಲ್ಲಿ ಕೇಳಿದೆ. ಹೊಸ ಸ್ಟೇಷನ್ಸ್‌ಗೆ 40–41 ಜನರನ್ನು ಕೊಡುತ್ತೀರಿ. ಹೊಸ ಜಾಗದಲ್ಲಿ ಆಗುತ್ತದೆ, ಅದನ್ನೇನಾದರೂ ತಾವು ಮಾಡದೇ ಹೋದರೆ ತಾಲ್ಲೂಕುಗಳಲ್ಲಿ ಒಂದೊಂದೇ ಪೊಲೀಸ್ ಸ್ಟೇಷನ್ ಇರುವ ಕಡೆ ಪಿ.ಸಿ.ಗಳೇ ದುರ್ಲಭವಾಗಿದೆ, ಅದನ್ನು ಜಾಸ್ತಿ ಮಾಡುವಿರಾ? ಎರಡನೆಯದಾಗಿ, ಮೈನಿಂಗ್ ಏರಿಯಾಗಳಲ್ಲಿ ವಿಸೇಷ ಪೊಲೀಸ್ ದಳವನ್ನು ನೇಮಕ ಮಾಡಿ law and order ಅನ್ನು maintain ಮಾಡಲಿಕ್ಕಾಗುತ್ತದೆಯೇ? ಲಾರಿಗಳು main roads ಗೆ entry ಆಗುವವರೆಗೆ ಏನಾದರೂ ಒಂದು ವಿಶೇಷವಾಗಿ ಪೊಲೀಸ್ ದಳವನ್ನು ನೇಮಕ ಮಾಡುವಿರಾ ಹೇಳಬೇಕು, ಮೂರನೆಯದಾಗಿ, ಪ್ರಮುಖವಾಗಿ ನಾವು ಕೇಳುವುದು, ಲೋಕಾಯುಕ್ತದವರಿಗೆ ನಾವು ಏನು items file ಮಾಡಬೇಕೆಂಬ ಬಗ್ಗೆ ಒಂದು Form ಅನ್ನು prescribe ಮಾಡುವಿರಾ? ಯಾವ ದಿನಾಂಕಕ್ಕೆ ಮಾಡಬೇಕು, ಹೇಗೆ ಮಾಡಬೇಕೆಂದು ಹೇಳಬೇಕು. ನಾವೇನೂ ಕೊಡುತ್ತೇವೆ, ಆ ಮಾಹಿತಿ ಸರಿಯಿಲ್ಲ, ಈ ಮಾಹಿತಿ ಸರಿಯಿಲ್ಲವೆಂದು ಅವರು ಇನ್ನೊಂದು ಬರೆಯುತ್ತಾರೆ, ತಾವು ಕಾನೂನು ಪ್ರಕಾರ ನಾವು ಏನು file ಮಾಡಬೇಕು, ಯಾವ ದಿನಾಂಕಕ್ಕೆ ಮಾಹಿತಿ file ಮಾಡಬೇಕೆಂಬುದನ್ನು ನಿಗದಿ ಮಾಡುವಿರಾ ಎಂದು ಕೇಳುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೇ, ಕೈಗಾರಿಕಾ ದೃಷ್ಟಿಯಿಂದ ಕೈಗಾರಿಕಾ ದಟ್ಟಣೆಗಳು ಜಾಸ್ತಿಯಾಗುತ್ತಿವೆ. ಒಂದು ಕಡೆ Special Economic Zones ಬರುತ್ತಿವೆ. ಇನ್ನೊಂದು ಕಡೆಗಳಲ್ಲಿ ಸೂಕ್ಷ್ಮ ಪ್ರದೇಶಗಳಾಗಿ ಬೆಳೆಯುತ್ತಿರುವಂಥ ಕರಾವಳಿ ಪ್ರದೇಶಗಳಲ್ಲಿ ತಕ್ಷಣ Police Commissioner ಅನ್ನು ಮಂಗಳೂರಿಗೆ ಒದಗಿಸಬೇಕೆಂಬ ಬೇಡಿಕೆಯನ್ನು ಮಾನ್ಯ ಗೃಹ ಸಚಿವರಲ್ಲಿ ಇಟ್ಟಿದ್ದೆ. ಅವರು ಹಾಗೆ ಮಾಡುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ಅದನ್ನು ತಕ್ಷಣ ಮಾಡಬೇಕೆಂದು ವಿನಂತಿಸುತ್ತೇನೆ. ಅದೇ ರೀತಿ ಕರಾವಳಿ ಕಾವಲು ಪಡೆಯನ್ನು ಆಧುನೀಕರಣಗೊಳಿಸುವ ಬಗ್ಗೆ, ಗುಪ್ತಚರ ಇಲಾಖೆಯನ್ನು ಸಶಕ್ತಗೊಳಿಸುವ ಬಗ್ಗೆ ಹಾಗೂ ಹೆಚ್ಚಿನ ಪೊಲೀಸ್ ವಸತಿ ಗೃಹಗಳನ್ನು ಕೊಡುವ ಬಗ್ಗೆ ನಾನು

ಬೇಡಿಕೆಯನ್ನು ಇಡುತ್ತಿದ್ದೇನೆ, ಮತ್ತೊಂದು ಸಬ್‌ಜೈಲುಗಳಲ್ಲಿ ಬಹುಶಃ ಶಿಕ್ಷೆಯಾದರೆ ಮೂರು ತಿಂಗಳುಗಳಿಗಿಂತ ಹೆಚ್ಚು ಶಿಕ್ಷೆ ಆಗಬಾರದು. ಅಂಥ ಒಂದು under trail ಖೈದಿಗಳು ಒಂದು ವರ್ಷದಿಂದ ಎರಡು ವರ್ಷಗಳವರೆಗೆ ಅಲ್ಲಿದ್ದಾರೆ. ಅವುಗಳಿಗೆ ತಕ್ಷಣಕ್ಕೆ ಏನಾದರೂ ಮುಕ್ತಿ ಕೊಡುವಂಥ ನಿಟ್ಟಿನಲ್ಲಿ ಏನಾದರೂ ಮಾಡುವುದು ಅವಶ್ಯಕತೆ ಇದೆ. ಆಗಸ್ಟ್ 15 ರೊಳಗೆ ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

ಅಧ್ಯಕ್ಷರು : ದಯಮಾಡಿ, ಎಲ್ಲರಿಗೂ ಅವಕಾಶ ಕೊಡಲಿಕ್ಕಾಗುತ್ತದೆಯೇ? ಎಲ್ಲರಿಗೂ Clarification ಕೇಳಲಿಕ್ಕೆ ಅವಕಾಶ ಕೊಡಲಿಕ್ಕಾಗುವುದಿಲ್ಲ, ಮುಂದಕ್ಕೆ ಮುಖ್ಯಮಂತ್ರಿಗಳು ಹೇಳುವಾಗ ಅವರ ಮುಂದೆ ಕೇಳಿ. ದಯಮಾಡಿ ಮಂತ್ರಿಗಳು ಉತ್ತರ ಹೇಳಿ. ಇಲ್ಲ, ದಯಮಾಡಿ ಮುಂದೆ ಅವಕಾಶವನ್ನು ಕೊಡುತೇನೆ. ಕುಳಿತುಕೊಳ್ಳಿ.

ಶ್ರೀ ಕೆ. ಶ್ರೀನಿವಾಸಗೌಡ : ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈಗ ಸಮಯದ ಅಭಾವವಿರುವುದಿಂದ..

ಅಧ್ಯಕ್ಷರು : ಈಗ ಎಲ್ಲರಿಗೂ ಅವಕಾಶ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಈಗ 50 ಜನ ಎದ್ದು ನಿಂತರೆ 50 ಜನಕ್ಕೂ ಅವಕಾಶ ಕೊಡಲಿಕ್ಕಾಗುತ್ತದೆಯೇ? ಇಲ್ಲ, ನಾನು ಗೃಹಮಂತ್ರಿಗಳಿಗೆ ಉತ್ತರ ಹೇಳಲಿಕ್ಕೆ ಕರೆದಿದ್ದೇನೆ, ದಯಮಾಡಿ ಕುಳಿತುಕೊಳ್ಳಿ. ಮುಂದೆ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಒಂದು ಕ್ಲಾರಿಫಿಕೇಷನ್‌ಗೂ ಸಹ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ಈ ಸದನದಲ್ಲಿ ನೀವು ಪ್ರತಿಯೊಂದಕ್ಕೂ ಎಷ್ಟು ಸಲ ಮಾತನಾಡಿದ್ದೀರಿ ರೆಕಾರ್ಡ್ ತೆಗೆಸಿ ನೋಡಿ. ಈಗೇನಾಗಿದೆ, ಹಿಂದಿನವರು ಎಷ್ಟು ಜನ ಮಾತನಾಡಿದ್ದಾರೆ, ಪದೇ ಪದೇ ಯಾರು ಮಾತನಾಡಬಾರದು.

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ No, No, don't test my patience, ನಾನು ಕರೆದಿದ್ದೇನೆ, ಅವರು ಉತ್ತರ ಕೊಡುತ್ತಾರೆ ನೀವು

ಕೊಡುತ್ತಾರೆ ನೀವು ಕುಳಿತುಕೊಳ್ಳಿ, ಎಲ್ಲರಿಗೂ ಅವಕಾಶ ಕೊಡಲಿಕ್ಕಾಗುವುದಿಲ್ಲ. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ದಯಮಾಡಿ ಸಹಕರಿಸಿ.

ಶ್ರೀ ಎನ್.ಧರ್ಮಸಿಂಗ್ : ಗೃಹ ಇಲಾಖೆಯಾಗಿರುವುದರಿಂದ ತಾವು ಸಾಧ್ಯವಾದಷ್ಟು ಎಲ್ಲರಿಗೂ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಒಂದೊಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಸಾಧ್ಯವಾಗುವುದಿಲ್ಲ. ಈ 50 ಜನ ಕೈಎತ್ತುತ್ತಾರೆ. ಎಲ್ಲರಿಗೂ ಅವಕಾಶ ಕೊಡಲಿಕ್ಕಾಗುತ್ತದೆಯೇ? ನೀವು ವಾಸ್ತವತೆಯನ್ನು ಅರ್ಥ ಮಾಡಿಕೊಳ್ಳಬೇಕು. ವಾಸ್ತವವನ್ನು ಅರ್ಥ ಮಾಡಿಕೊಳ್ಳದೆ ಹೀಗೆ ನೀವೆಲ್ಲಾ ಅವಕಾಶ ಕೇಳಿದರೆ ನಾನು ಏನು ಮಾಡುವುದು? ಈಗ ನಾನು ಯಾರನ್ನೂ ಕರೆಯುವುದಿಲ್ಲ. ಏನೂ ಮಾಡುವುದಿಲ್ಲ. ನೀವು ಯಾರು ಬೇಕಾದರೂ, ಏನು ಬೇಕಾದರೂ ಮಾತನಾಡಬಹುದು. This is not correct.

ಶ್ರೀ ಎಂ.ಪಿ.ಪ್ರಕಾಶ್ : ಈಗ ಸಮಯದ ಅಭಾವವಿರುವುದರಿಂದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ...

ಅಧ್ಯಕ್ಷರು : ಆಗುವುದಿಲ್ಲ. ಆಗಲೇ ಮಾತನಾಡಿದ್ದೀರಿ, ನಿಮಗೆಲ್ಲಾ ಇನ್ನೂ ಅವಕಾಶ ಇದೆ, ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.. ಶ್ರೀರಾಮರೆಡ್ಡಿ Party represent ಮಾಡುವುದನ್ನು ನೀವು ಲೋಕಸಭಾ ಸದನದಲ್ಲಿ ಹೋಗಿ ನೋಡಿ. ಎರಡು-ಮೂರು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡುತ್ತಾರೆ. ಸುಮ್ಮನೆ ಹೇಳುತ್ತೀರಿ, ಮಂತ್ರಿಗಳು ಉತ್ತರ ಹೇಳಿ. ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಏತಕ್ಕೆ ಕೊಡುವುದಕ್ಕಾಗುವುದಿಲ್ಲ. ಬೇರೆಯವರಿಗೆ ಅವಕಾಶ ಕೊಟ್ಟಿದ್ದೀರಿ, ಒಂದು ಕ್ಲಾರಿಫಿಕೇಷನ್ ಕೇಳಲಿಕ್ಕೆ ನನಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಏಕೆಂದರೆ ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಶ್ರೀ ಶ್ರೀರಾಮರೆಡ್ಡಿ ಮತ್ತು ಶ್ರೀ **ವಾಟಾಳ್** ನಾಗರಾಜ್ ರವರು ಅಧ್ಯಕ್ಷರ ಪೀಠದ ಬಳಿಗೆ ಹೋಗಿ ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು : ಹೋಗಿ ಲೋಕಸಭೆಯಲ್ಲಿ ನೋಡಿ, ನೀವು ಉತ್ತರ ಹೇಳಿ. ಎಲ್ಲರಿಗೂ ಕೊಡಲಿಕ್ಕೆ ಆಗುವುದಿಲ್ಲ. ಏಕೆಂದರೆ ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಈ ರೀತಿಯಲ್ಲಿ ಸನ್ಮಾನ್ಯ ಸದಸ್ಯರು ವರ್ತಿಸಬಾರದು, ಸಮಯದ ಅಭಾವವಿರುವುದರಿದ ದಯಮಾಡಿ ಸಹಕರಿಸಬೇಕು.

(ಗೊಂದಲ)

ಅಧ್ಯಕ್ಷರು : ನೋಡಿ, ಲೋಕಸಭೆಯಲ್ಲಿ ನಾನು ಸದಸ್ಯರನ್ನು ನೋಡಿದ್ದೇನೆ, ನೀವು ಭಾಷಣ ಮಾಡುವುದಕ್ಕೆ ಒಂದು, ಎರಡು ಗಂಟೆಗಳ ಸಮಯ ತೆಗೆದುಕೊಳ್ಳುತ್ತೀರಿ. ಅಲ್ಲಿ ಅವರಿಗೆ 5 ನಿಮಿಷ ಸಮಯ ಕೊಡುತ್ತಾರೆ. ಕ್ಲಾರಿಫಿಕೇಷನ್‌ಗೆ ಮುಂದೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಈ ರೀತಿಯಾಗಿ ಹಿರಿಯ ಸದಸ್ಯರು ಅಧ್ಯಕ್ಷರ ಪೀಠದ ಹತ್ತಿರ ನಿಂತು ಮಾತನಾಡುವುದು, ವಾದ ಮಾಡುವುದು ಸರಿಯಾದುದಲ್ಲ. ದಯಮಾಡಿ ಹಿರಿಯ ಸದಸ್ಯರಾಗಿದ್ದೀರಿ, ತಾವು ತಮ್ಮ ಸ್ಥಾನಕ್ಕೆ ಬನ್ನಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು) : ಹಿರಿಯ ಸದಸ್ಯರು ತಮ್ಮ ಸ್ಥಾನಕ್ಕೆ ಹಿಂತಿರುಗಿ ಬನ್ನಿ, ಅಲ್ಲಿ ನಿಂತು ಮಾತನಾಡುವುದು ಸರಿಯಲ್ಲ. ತಮ್ಮ ಸ್ಥಾನದಲ್ಲಿ ನಿಂತು ಮಾತನಾಡಬಹುದು.

(ಗೊಂದಲ)

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ನೀವಾದರೂ ಇವರಿಗೆಲ್ಲಾ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡಿ. ಸುಮ್ಮನೆ ಎಲ್ಲರಿಗೂ ಅವಕಾಶ ಕೊಡಿ, ಕೊಡಿ ಎಂದು ಹೇಳಬೇಡಿ, ಅವರಿಗೆ ನೀವು ಮಾರ್ಗದರ್ಶನ ಮಾಡಿ. ಎಲ್ಲರಿಗೂ ಅವಕಾಶ ಕೊಡಲಿಕ್ಕೆ ಆಗುತ್ತದೆಯೆ? ನಾನು ಮುಂದಿನ ಸಾಲಿನಲ್ಲಿ ಕುಳಿತಿರುವವರಿಗೂ, ಹಿಂದಿನ ಸಾಲಿನಲ್ಲಿ ಕುಳಿತಿರುವವರಿಗೂ ಅವಕಾಶ ಕೊಟ್ಟಿದ್ದೇನೆ. ಎಲ್ಲರಿಗೂ ಅವಕಾಶ ಕೊಡಲಿಕ್ಕಾಗುತ್ತದೆಯೇ, ದಯಮಾಡಿ ಹೇಳಿ ನೀವು. ಮುಂದೆ ಅವಕಾಶವನ್ನು

ಕೊಡುತ್ತೇನೆ, ಇನ್ನು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬೇಕು. ಆಗ ಅವಕಾಶವನ್ನು ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಎಲ್ಲರಿಗೂ Clarification ಕೊಡಬೇಕೇ? ಅವರು ಬೇರೆ ಎಂದರೆ, ಅವರು ಸಹ ಸದಸ್ಯರು. ಈಗೇನಾಗಿದೆಯೆಂದರೆ ಕೆಲವರು ಭಾಷಣ ಮಾಡಿಲ್ಲ, ಅವರಿಗೂ ಕೆಲವು ಸಮಸ್ಯೆಗಳಿವೆ. ಆದ್ದರಿಂದ ಹಿಂದಿನವರಿಗೆ ಅವಕಾಶ ಕೊಡುತ್ತಿದ್ದೇನೆ. ನೀವು ಅರ್ಥ ಮಾಡಿಕೊಳ್ಳಬೇಕು. ನಾನು ಸಹಕರಿಸುತ್ತೇನೆ. ನೀವೇನು ಅಂದರೆ as a matter of right, ನಾವು ದೊಡ್ಡವರು, ನಾವು ಹೇಳಿದಂತೆ ನೀವು ಕೇಳಬೇಕೆಂಬ attitude ನಿಮ್ಮಲ್ಲಿ ಇದೆ, ಅದನ್ನು ಮೊದಲು ನಿಮ್ಮ ತಲೆಯಿಂದ ತೆಗೆದು ಹಾಕಿ. ನಿಮ್ಮ ಆ ಭಾವನೆಗಳು ನಿಮ್ಮ ನಡುವಳಿಕೆಯಲ್ಲಿ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಸ್ಥಾನಕ್ಕೆ ಬಂದು ಮಾತನಾಡಿ.

(ಗೊಂದಲ)

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೇ, ಅವರಿಗೆ ಅವಕಾಶ ಕೊಟ್ಟರೆ ನಮಗೂ ಅವಕಾಶ ಕೊಡಬೇಕು, ನಮಗೂ ಮಾತನಾಡಲಿಕ್ಕಿದೆ, ನಾವು ಶಾಸಕರಿದ್ದೇವೆ. ನಮಗೂ ಅವಕಾಶವನ್ನು ಕೊಡಿ. ಅವರಂತೆ ನಾವು ಸಹ ಶಾಸಕರಾಗಿ ಆಯ್ಕೆಯಾಗಿ ಬಂದಿದ್ದೇವೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅವರು ಸಹ ಸದಸ್ಯರು, ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬಾರದೇ? ಮತ್ತೆ, ಕೈಯೆತ್ತಿದವರೆಗೆಲ್ಲಾ ಅವಕಾಶವನ್ನು ಕೊಡಲಿಕ್ಕಾಗುತ್ತದೆಯೇ? ನೀವು ಈ attitude ಅನ್ನು ದಯಮಾಡಿ ಬಿಡಿ. ನೋಡಿ, ನಿಮ್ಮ ಲೋಕಸಭೆಯಲ್ಲಿ ಹೋಗಿ ನೋಡಿಕೊಂಡು ಬನ್ನಿ, ಅಲ್ಲಿ ಒಬ್ಬರು ಇಬ್ಬರು ಸದಸ್ಯರಿಗೆ ಮಾತನಾಡಲಿಕ್ಕೆ 5 ನಿಮಿಷ ಕೊಡುತ್ತಾರೆ. I know it. ಸುಮ್ಮನೆ ಏಕೆ ಮಾತನಾಡುತ್ತೀರಿ. ದಯಮಾಡಿ ಏನು ನಡೆಯುತ್ತದೆ ಅದನ್ನೆಲ್ಲಾ ನನಗೆ ಹೇಳಿಕೊಡಬೇಡಿ. ದಯಮಾಡಿ, This is

too much. ಎಷ್ಟು ಜನಕ್ಕೆ ಅವಕಾಶ ಕೊಡಲಿಕ್ಕಾಗುತ್ತದೆಯೋ ಅಷ್ಟು ಜನಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದು ಸರಿಯಲ್ಲ. ನೀವು ಹಿರಿಯ ಸದಸ್ಯರು ನಿಮ್ಮ ಸ್ಥಾನಕ್ಕೆ ಬನ್ನಿ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು) : ಶ್ರೀ ಶ್ರೀರಾಮರೆಡ್ಡಿ, ವಾಟಾಳ್ ನಾಗರಾಜ್‌ರವರು ಈ ಸದನದ ಹಿರಿಯ ಸದಸ್ಯರಾಗಿದ್ದೀರಿ, ನೀವು ನಮ್ಮ ಹಾಗೆ ಹೊಸದಾಗಿ ಬಂದಿರುವವರಿಗೆ, ಯುವಕರಿಗೆ ಮಾರ್ಗದರ್ಶನ ನೀಡುವಂಥ ಸ್ಥಾನದಲ್ಲಿರುವಂಥವರು. ಇವತ್ತು ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಮಾನ್ಯ ಗೃಹ ಸಚಿವರು ಹೇಳಿಕೆಯನ್ನು ಕೊಟ್ಟ ನಂತರ ಸುಮಾರು 15–20 ಜನ ಸದಸ್ಯರು Clarification ಕೇಳಿದ್ದೀರಿ. ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೊಸದಾಗಿ ಸ್ಟೇಷನ್ಸ್ ಕೊಡುವಂಥದ್ದು, ಮತ್ತೊಂದು, ಮಗದೊಂದು ವಿಷಯವಾಗಿ ತಾವು ಚರ್ಚೆ ಮಾಡುತ್ತೀರಿ, ಜನರಲ್ ಆಗಿದ್ದರೆ ಅದರ ಬಗ್ಗೆ ಚರ್ಚೆ ಮಾಡಿ ಅದರಲ್ಲಿ Clarification ಕೇಳಿ. ಆದರೆ ವೈಯಕ್ತಿಕವಾಗಿ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ಮಂತ್ರಿಗಳೊಂದಿಗೆ ಕುಳಿತು ಅನಂತರ ಚರ್ಚೆ ಮಾಡಿ ಅದಕ್ಕೆ ಏನೋ ಬೇಕು ಅಲ್ಲಿ ಕೆಲಸವನ್ನು ಮಾಡಿಸಲಿಕ್ಕೆ ಸಾಧ್ಯವಿದೆ. ಆ ವಿಷಯಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿ Clarification ಕೇಳುವುದು ಅವಶ್ಯಕತೆ ಇಲ್ಲವೆಂಬುದು ನನ್ನ ಭಾವನೆ. ಆದ್ದರಿಂದ ಈಗ ಶ್ರೀರಾಮರೆಡ್ಡಿಯವರೊಬ್ಬರು Clarification ಕೇಳಲಿ. ಎಲ್ಲರೂ ಕೇಳಲಿಕ್ಕೆ ಹೋದರೆ ಸಮಯದ ಅಭಾವ ಇದೆ. ನಿಮ್ಮೆಲ್ಲರ ಮಾತನ್ನು ಎಲ್ಲಾ ನಮ್ಮ ಹಿರಿಯ ಸಚಿವರು ಆಲಿಸಿದ್ದಾರೆ. ಶ್ರೀರಾಮರೆಡ್ಡಿಯವರು ಕ್ಲಾರಿಫಿಕೇಷನ್ ಕೇಳಲಿ, ನಂತರ ಗೃಹ ಸಚಿವರು ಉತ್ತರ ಕೊಡುತ್ತಾರೆ. ದಯಮಾಡಿ ಸದನದ ಸದಸ್ಯರು ಸಹಕಾರ ಕೊಡಬೇಕು.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ನಾನು ಎರಡು ಕ್ಲಾರಿಫಿಕೇಷನ್ಸ್ ಕೇಳಬಯಸುತ್ತೇನೆ. ಒಂದು ಗಡಿಪ್ರದೇಶಗಳಲ್ಲಿ..

(ಗೊಂದಲ)

ಅಧ್ಯಕ್ಷರು : ಈಗ ಎಲ್ಲರಿಗೂ ಅವಕಾಶ ಇರಬೇಕೆಂಬುದನ್ನು ಒಪ್ಪುತ್ತೇನೆ. ಆದರೆ ಎಲ್ಲರಿಗೂ ಅವಕಾಶವನ್ನು ಕೊಡಲಿಕ್ಕಾಗುವುದಿಲ್ಲ. ಈಗೇನಾಗಿದೆಯೆಂದರೆ ದೊಡ್ಡರಿಗೆ ಮಾತ್ರ ಅವಕಾಶವನ್ನು ಕೊಡುತ್ತಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನನ್ನದು ಎರಡು ಕ್ಲಾರಿಫಿಕೇಷನ್ಸ್ ಮಾತ್ರ ಮಾನ್ಯ ಪ್ರಕಾಶ್‌ರವರೇ, ಪೊಲೀಸಿನವರು ವಾಹನಗಳನ್ನು ಓಡಿಸುವುದು..

ಶ್ರೀ ಎಸ್.ಎಲ್.ಧರ್ಮೇಗೌಡ : ಮಾನ್ಯ ಅಧ್ಯಕ್ಷರೇ, ನಾವು ಖಂಡಿತವಾಗಿ ಬಂದಾಗಿನಿಂದ ಮೂರು ವರ್ಷಗಳಿಂದ ನೋಡುತ್ತಿದ್ದೇವೆ. ಸಭಾಧ್ಯಕ್ಷರ ಪೀಠವನ್ನು ಬಾವಿಗೆ ಬಂದು ಮುಟ್ಟಿ ಮಾತನಾಡಬಹುದೆ ಎಂಬುದರ ಬಗ್ಗೆ ಉತ್ತರ ಕೊಡಬೇಕು. ಜೊತೆಗೆ ಬಾವಿಗೆ ಬಂದಾಗ ನಿಮ್ಮೊಂದಿಗೆ ಸಂವಾದ ಮಾಡಬಹುದೇ, ಇದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ ಎಂಬುದಕ್ಕೆ ಉತ್ತರ ಹೇಳಿ, ದಯವಿಟ್ಟು ಮುಂದಕ್ಕೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕು, ಇದು ನನ್ನ ಮನವಿ.

ಡಾ: ಕೆ.ಅನ್ನದಾನಿ : ಇವರು ಸೀನಿಯರ್ಸ್ ಯಾವ ನಿಯಮಾವಳಿಯನ್ನು ಪಾಲಿಸುತ್ತಾರೆ? ಇವರಿಗೆ ನಿಯಮಾವಳಿ ಇದೆಯೇ? ಇವರಿಗೆ ಯಾವ ನಿಯಮಾವಳಿ ಗೊತ್ತಿದೆ? ಅಧ್ಯಕ್ಷರ ಪೀಠ ಮುಟ್ಟಿ ಮಾತನಾಡುತ್ತಿದ್ದಾರೆ, ಇವರು ಯಾವ ನಿಯಮಾವಳಿಯನ್ನು ಪಾಲಿಸುತ್ತಾರೆ?

(ಗೊಂದಲ)

ಶ್ರೀ ಎಸ್.ಎಲ್ ಧರ್ಮೇಗೌಡ : ದಯವಿಟ್ಟು ನಮಗೆ ಉತ್ತರ ಹೇಳಿ. ಅನಂತರ, ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜ್ : ಮಾತನಾಡಬೇಕೆಂದರೆ.....ದಬ್ಬಾಳಿಕೆಯೇ ಅಸ್ತ್ರವೇ? ದಬ್ಬಾಳಿಕೆ ಮಾಡುವವರಿಗೇ ಅವಕಾಶ ಸಿಗುತ್ತದೆಂದರೆ, ನಾವೂ ದಬ್ಬಾಳಿಕೆ ಮಾಡುತ್ತೇವೆ.

(ಗೊಂದಲ)

ಶ್ರೀ ಎಸ್.ಎಲ್.ಧರ್ಮೇಗೌಡ : ಇಲ್ಲ, ಸ್ವಾಮಿ ಆಗುವುದಿಲ್ಲ. ಎಲ್ಲ ಸಮಯವನ್ನೂ ಇವರೇ ತೆಗೆದುಕೊಂಡಿದ್ದಾರೆ. ಇಡೀ ಸದನ ಇವರಿಗೇ ಪೂರ್ತಿ ಅಲ್ಲ. No.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅಧ್ಯಕ್ಷರೆ, ನಾನು ಸದನದ ಎಲ್ಲ ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಯಾರೂ ತಾಳ್ಮೆ ಕಳೆದುಕೊಳ್ಳುವುದು ಅನಾವಶ್ಯಕ. ಈಗ ಅಧ್ಯಕ್ಷರು ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರಿಗೆ ಮಾತನಾಡುವುದಕ್ಕೆ ಏನು ಅವಕಾಶ ಕೊಟ್ಟಿದ್ದಾರೆ, ಬೇಕಾದರೆ, ಅವರು ಯಾವುದೇ Clarification ಕೇಳಿಕೊಳ್ಳಲಿ. ನಂತರ, ಗೃಹ ಸಚಿವರು ಉತ್ತರ ಕೊಡುತ್ತಾರೆ. ತಾವುಗಳು ಸದನದಲ್ಲಿ ಯಾವುದೇ ರೀತಿಯ ಗೊಂದಲದ ವಾತಾವರಣಕ್ಕೆ ಅವಕಾಶ ಕೊಡುವುದು ಯಾವುದೇ ಸದಸ್ಯರುಗಳಿಗೂ ಶೋಭೆ ತರುವಂಥಾದ್ದಲ್ಲ. ಈಗ ಅಧ್ಯಕ್ಷರು ಶ್ರೀರಾಮರೆಡ್ಡಿ ಯವರನ್ನು ಕರೆದಿರುವುದರಿಂದ ಅವರು ಮಾತನಾಡಲಿ.

ಶ್ರೀ ಆರಗ ಜ್ಞಾನೇಂದ್ರ : ಒಂದು Clarification. ತಾವು ಆದೇಶ ಕೊಟ್ಟಿದ್ದೀರಿ. ಅದನ್ನು ನಾವೆಲ್ಲರೂ ಮಾನ್ಯ ಮಾಡಿದ್ದೇವೆ. ಆದರೆ, ಅಧ್ಯಕ್ಷರಲ್ಲಿ ಒಂದು ಮನವಿ. ಒಂದು, ಸಮಯಾವಕಾಶವನ್ನು ನಿಗದಿಪಡಿಸಿ, ಹಂಚಬೇಕೆಂದು ನಾವು ಮೊದಲಿನಿಂದಲೂ ಕೇಳುತ್ತಾ ಬಂದಿದ್ದೇವೆ. ನಾವು ಇಲ್ಲಿ Ruling Party ಯಲ್ಲಿರುವುದರಿಂದ ಬಾಯಿ ಹೊಲಿದುಕೊಂಡು ಕುಳಿತಿದ್ದೇವೆ. ಅನೇಕ ಹಿರಿಯ ಸದಸ್ಯರುಗಳಿದ್ದು, ಅವರುಗಳೂ ಬಾಯಿ ಹೊಲೆದುಕೊಂಡು ಕುಳಿತಿದ್ದಾರೆ. ಇದೊಂದು ಸಂಪ್ರದಾಯವಾಗಿ ಬಿಟ್ಟಿದೆ. ಇಲ್ಲಿಂದ ಸುತ್ತು ಹಾಕಿಕೊಂಡು ಮತ್ತೆ ಅಲ್ಲಿಗೇ ಬರುತ್ತದೆ! ಅಲ್ಲಿಗೆ ನಿಮ್ಮ ಸಮಯ close. ಅಷ್ಟೊತ್ತಿಗೆ ನಿಮ್ಮ ತಾಳ್ಮೆಯೂ ಮುಗಿದು ಹೋಗಿರುತ್ತದೆ. ಆದರೆ, ಜನರು ನಮ್ಮನ್ನೂ ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿದ್ದಾರಲ್ಲ. ಇಷ್ಟೊಂದು ಜನರನ್ನು ಆಯ್ಕೆ ಮಾಡಿ ಕಳುಹಿಸಿದ್ದಾರಲ್ಲ, ನಮಗೆ ಇಲ್ಲಿ ಯಾವಾಗ ಅಭಿವ್ಯಕ್ತಿ ಸ್ವಾತಂತ್ರ್ಯ ಕೊಡುತ್ತೀರಿ? ಹೇಳಿ. ನಮಗೆ ಅವಕಾಶಗಳೇ ಇಲ್ಲವೇ? ನಾವುಗಳು ಯಾವಾಗ ಮಾತನಾಡಬೇಕು? ಅದನ್ನಾದರೂ ಹೇಳಿ? Clarification ಅವರೇ ಕೇಳುತ್ತಾರೆ, ಪ್ರತಿಯೊಂದು ವಿಷಯಕ್ಕೂ ಅವರೇ ಎದ್ದು ನಿಂತು ಕೇಳುವುದು. ಅವರು ಪಂಡಿತರು ಹೌದು. ಅವರು ಆ ಕುರಿತಂತೆ ಅಧ್ಯಯನ ಮಾಡಿದ್ದಾರೆ. ಅವೆಲ್ಲವನ್ನೂ ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ನಮ್ಮದೂ ಸಣ್ಣಪುಟ್ಟದ್ದು ಇರುತ್ತದಲ್ಲ. ನಾವೂ ಸ್ವಲ್ಪ ಓದಿಕೊಂಡು ಬರುತ್ತೇವಲ್ಲ. ಇಲ್ಲಿ ಕಿರಿಯರೂ ಇರುತ್ತಾರಲ್ಲ. ಯಾವಾಗ ಅವರುಗಳಿಗೆ ತಾವು ಅವಕಾಶ ಕಲ್ಪಿಸಿಕೊಡುತ್ತೀರಿ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು

ಎಲ್ಲಿಯಾದರೂ ಒಂದು ಕಡೆ ಆಲೋಚನೆ ಮಾಡಬೇಕು. ಎಲ್ಲಿಯೋ ಒಂದು ಕಡೆ ನಮ್ಮನ್ನು ಅವಕಾಶ ವಂಚಿತರನ್ನಾಗಿ ಮಾಡಬಾರದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸದಸ್ಯರಾದ ಆರಗ ಜ್ಞಾನೇಂದ್ರರವರು ಕೂಡ ಕೇಳುತ್ತಿದ್ದಾರೆ. ನಿಮಗೂ ಇಲ್ಲಿಯೇ ಕೂರಬೇಕೆಂಬ ಆಸಕ್ತಿ ಇದ್ದರೆ, ಇಲ್ಲವೋ ಪದೇ ಪದೇ ಪ್ರಶ್ನೆಗಳನ್ನು ಕೇಳಬೇಕೆಂದರೆ.........

ಅಧ್ಯಕ್ಷರು : ಖರ್ಗೆಯವರೆ, ಅವರು ಕೇಳುವುದರಲ್ಲೂ ಅರ್ಥವಿದೆ. ಹೌದು, ನಿಜ. House belongs to Opposition ಎನ್ನುವುದು ನಂಬಿಕೆ. ಈಗ ನಾನು ಇತ್ತ ಕಡೆಯಿಂದ ಬಹಳಷ್ಟು ಸದಸ್ಯರುಗಳಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಕೊನೇ ದಿವಸ ಬಿಟ್ಟು ಅವರಲ್ಲಿ ಕೆಲವರು ಆಸಕ್ತಿ ತೋರಿಸಲಿಲ್ಲ. ಆದರೆ, ಹಿಂದಿನ ಬೆಂಚಿನವರು Clarification ಆದರೂ ಕೇಳಿ ಎಂದು ಹೇಳಿದೆ. ಪ್ರತಿಯೊಂದಕ್ಕೂ ಸಹ ಈ ರೀತಿ ನಮ್ಮನ್ನು ಚುಚ್ಚಿದರೆ ಹೇಗೆ? No. ಈಗ ನನಗೆ ಬಹಳ ಬೇಸರವಾಗಿದೆ. ಈಗ ಹಿರಿಯ ಸದಸ್ಯರುಗಳಾದವರು ಮಾರ್ಗದರ್ಶನ ಮಾಡುವುದರ ಬದಲು ನೀವು ನನ್ನ ಜುಟ್ಟು ಹಿಡಿದುಕೊಳ್ಳುತ್ತಿದ್ದೀರಿ. ಅದನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ನೀವು ಮಾರ್ಗದರ್ಶನ ಮಾಡುತ್ತಿಲ್ಲ, ನನ್ನ ಜುಟ್ಟು ಹಿಡಿಯುತ್ತಿದ್ದೀರಿ. ಇದು ಯಾರಿಗೂ ಗೌರವ ತರುವುದಲ್ಲ. ಅದನ್ನು ನಾನು ಹೇಳಬಲ್ಲೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಮಗೆ ಬಿ.ಪಿ. ಜಾಸ್ತಿಯಾಯ್ತೇನೋ?

ಅಧ್ಯಕ್ಷರು : No, No, No. ದಯಮಾಡಿ ನೀವೇ ಯೋಚನೆ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಎಲ್ಲಿಯಾದರೂ ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದ್ದೇನೆಯೇ? ನಿಮ್ಮ ಅನುಮತಿ ಪಡೆದೇ ನಾನು ಮಾತನಾಡಲು ನಿಂತಿದ್ದೇನೆ. ನಾನು ಹೇಳುವುದಿಷ್ಟೇ. ನಾನು lighter wayನಲ್ಲಿ ಏನು ಹೇಳಿದೆ ಎಂದರೆ, ಅವರೂ ಪದೇ ಪದೇ ಎದ್ದು ನಿಂತು ಕೇಳಬೇಕು ಅಥವಾ Opposition leader ಅವರನ್ನು ಕೇಳಬೇಕು. ಜಯಪ್ರಕಾಶ್ ಹೆಗ್ಡೆಯಂತಹ ಕುಳಿತಂತಹವರೇ ಮಾತನಾಡುತ್ತಾರೆ. ತಮಗೆ ಆ ಕಡೆ ಇಚ್ಛೆ ಇಲ್ಲದಿದ್ದರೆ, ದಯವಿಟ್ಟು ಇತ್ತ ಕಡೆ ಬನ್ನಿ. ನಮಗೆ ಅತ್ತ ಕಡೆ ಬರಲು ಅವಕಾಶ ಮಾಡಿ ಕೊಡಿ. Clarification ಕೊಡೋಣ. ಅದು ಬಿಟ್ಟು ಯಾರೂ ಒಪ್ಪಿಲ್ಲ.....

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : Ruling Party ಗೆ ಬನ್ನಿ.

ಅಧ್ಯಕ್ಷರು : ಖರ್ಗೆ ಸಾಹೇಬರೆ, ಈಗ ಏನಾಗಿದೆಯೆಂದರೆ, ನಾವು ಈ ಭಾಗದವರಿಗೆ ಆದಷ್ಟು ಅವಕಾಶ ಕೊಟ್ಟಿದ್ದೇವೆ. ಬಹಳಷ್ಟು ಜನರು ಮಾತನಾಡಿದ್ದಾರೆ. ಮಾತನಾಡುವಾಗ ಏನೇನು ನಡೆಯಿತೆಂಬುದೂ ನಿಮಗೆ ಗೊತ್ತಿದೆ. ಹಿಂದೆ ಕುಳಿತಿರುವವರು ಏನಾದರೂ Clarification ಕೇಳಲಿ ಎಂದರೂ ಈ ರೀತಿ ಅಡ್ಡಿಪಡಿಸಿದರೆ ಹೇಗೆ? ಈಗ ಏನಾಗಿದೆ? ಆಯಿತು, ಉತ್ತರ ಕೊಡಿ. ಅನಂತರ, ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳಿದ್ದಾಗ ಕೇಳಿ ಎಂದರೂ ಬಿಡದೇ, ಹೀಗೆ ನಿರ್ಬಂಧ ವಿಧಿಸಿದರೆ ಹೇಗೆ? ಹಾಗಾದರೆ, ಏನು? ನಿಮ್ಮ dictation ತೆಗೆದುಕೊಂಡು ನಾನು House ನಡೆಸಬೇಕೆ? ಹೇಳಿ ಬಿಡಿ, ಒಂದು dictation ಕೊಟ್ಟು ಬಿಡಿ. ಇದು ಸರಿಯಲ್ಲ. ಈ seatಗೂ ಸ್ವಲ್ಪ ಗೌರವ ಕೊಡಿ ಸ್ವಾಮಿ. ನಮಗೂ ಬಹಳ ಬೇಸರವಾಗಿ ಬಿಟ್ಟಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬೇಸರ ಮಾಡಿಕೊಂಡರೆ ಹೇಗೆ?

ಅಧ್ಯಕ್ಷರು : ಮತ್ತೇನಾಗಿದೆ ಸ್ವಾಮಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏನಾಯ್ತು?

ಅಧ್ಯಕ್ಷರು : ಏನಾಯ್ತು? ನಿಮಗೇನೂ ಆಗಿಲ್ಲ. ನಿಮಗೆ ಏನೂ ಆಗುವುದೇ ಇಲ್ಲ. ನನಗಾಗಿದೆ. ಇವೆಲ್ಲವೂ ಒಂದೊಂದು ಅನುಭವಗಳಷ್ಟೇ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಬೇಡ ಬಿಡಿ ಸರ್, ನಾನು ಕೇಳಿದ್ದೇನೆ, ಉತ್ತರ ಹೇಳುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಸೌಲಭ್ಯಗಳ ಕುರಿತಾಗಿ ಅನೇಕ ವಿಚಾರಗಳನ್ನು ವಾಟಾಳ್ ನಾಗರಾಜ್‌ರವರು, ಬೇರೆ ಸದಸ್ಯರು ಹೇಳಿದ್ದಾರೆ. ನಿಜವಾಗಿಯೂ ಅದರ ಬಗ್ಗೆ ಆಗಸ್ಟ್ 15ರೊಳಗಾಗಿ ಕೆಲವು ವಿಚಾರಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಕ ಪ್ರಕಟಗೊಳಿಸಬೇಕೆಂದು...

ಅಧ್ಯಕ್ಷರು : ನೋಡಿ. ಕಾಂಗ್ರೆಸ್‌ನವರು ಒಟ್ಟು 24 ಗಂಟೆ 30 ನಿಮಿಷ ತೆಗೆದುಕೊಂಡಿದ್ದಾರೆ. ಬಿಜೆಪಿಯವರು 1 ಗಂಟೆ 28 ನಿಮಿಷ, ಇತರರು 7 ಗಂಟೆ 29 ನಿಮಿಷ ತೆಗೆದುಕೊಂಡಿದ್ದಾರೆ. ಅವಕಾಶಗಳನ್ನು ಕೊಟ್ಟಿದ್ದೇವೆ, ಅವಕಾಶಗಳನ್ನು ಕೊಟ್ಟಿಲ್ಲವೆಂದಲ್ಲ. ಆದರೆ, ನಾವು ಅಷ್ಟೊಂದು

ಅವಕಾಶಗಳನ್ನು ಕೊಟ್ಟಿದ್ದರೂ, ಆ ಕಡೆ ನೀವು Ruling Party ಯವರಿದ್ದೀರಿ, ನಿಮಗೇಕೆ ಎಂದು ನಾವು ಇತ್ತ ಕಡೆ ಇರುವವರಿಗೆ ಅವಕಾಶಗಳನ್ನು ಕೊಟ್ಟಿದ್ದರೂ, ನೀವೆಲ್ಲರೂ A.K. 47 ತೆಗೆದುಕೊಂಡು ನಿಲ್ಲುತ್ತೀರಲ್ಲ!

ಶ್ರೀ ಆರಗ ಜ್ಞಾನೇಂದ್ರ : ನೀವು ಹೌಸ್‌ಗೆ ಹೋಗುತ್ತಿದ್ದೀರೋ, ಇಲ್ಲವೋ ಎಂದು ಊರುಗಳಲ್ಲಿರುವವರು ಬಹಳಷ್ಟು ಸದಸ್ಯರುಗಳನ್ನು ಕೇಳುತ್ತಿದ್ದಾರೆ. ನಾವು ಯಾರಾದರೂ ಕಿರಿಯರು ಮಾತನಾಡಿದರೆ, ಅದು ಕೂಡ ಮಾಧ್ಯಮದಲ್ಲೂ ಬರುವುದಿಲ್ಲ. ಇದು ನಮ್ಮ ಸಮಸ್ಯೆ.

ಶ್ರೀ ಎಂ.ಪಿ.ಪ್ರಕಾಶ್ : ಆ ಕಾರಣಕ್ಕಾಗಿಯೇ ಸಮಯದ ಅಭಾವವಿರುವುದರಿಂದ ಇದು ಈ ದಿವಸವೇ ಮುಕ್ತಾಯವಾಗಬೇಕಿದ್ದರಿಂದ, ನಾನು ಅದರ ವಿವರಗಳಿಗೆ ಹೋಗಲಿಲ್ಲ. ಈಗಾಗಲೇ ನಿಮಗೆ ಗೊತ್ತಿರುವಂತೆ, ವೈದ್ಯಕೀಯ ಸೌಲಭ್ಯಕ್ಕಾಗಿಯೇ 10,000 ಸಾವಿರ ರೂಪಾಯಿಗಳನ್ನು ಒಂದು ಬಾರಿಗೆ ಕೊಡುತ್ತೇವೆ. ಇಂಜಿನಿಯರಿಂಗ್ ಮತ್ತು ಇಂತಹ ವಿಚಾರಗಳಿಗೆ ಶೈಕ್ಷಣಿಕ ಸಹಾಯಕ್ಕಾಗಿಯೇ ಒಂದು ಬಾರಿ ಮಾತ್ರ ವೈದ್ಯಕೀಯ ವಿದ್ಯಾಭ್ಯಾಸಕ್ಕೆ 10,000 ರೂಪಾಯಿಗಳು, ಇಂಜಿನಿಯರಿಂಗ್‌ಗೆ 5,000 ರೂಪಾಯಿಗಳಂತೆ ಪ್ರತಿ ವರ್ಷವೂ ಈ ತರಹದಲ್ಲಿ ಸಾವಿರ ಜನರಿಗೆ ಕೊಡುತ್ತಿದ್ದೇವೆ. 'ಆರೋಗ್ಯ ಭಾಗ್ಯ' ಯೋಜನೆಯಡಿಯಲ್ಲಿ ಮಂಜೂರಾದ ಆಸ್ಪತ್ರೆಗಳಿಗೆ ಚಿಕಿತ್ಸೆ ಪಡೆದುಕೊಂಡಿ ರುವವರ ಸಂಪೂರ್ಣ ಖರ್ಚು ವೆಚ್ಚಗಳನ್ನು ಭರಿಸುತ್ತೇವೆ. ಕರ್ತವ್ಯದಲ್ಲಿದ್ದಾಗ, ಅರ್ಹತೆ ಅಥವಾ ದೌರ್ಬಲ್ಯದ ಕಾರಣಕ್ಕೆ ಸತ್ತಂತಹ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗೆ 5 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಮೊನ್ನೆ ವೆಂಕಟೇಶ್‌ರವರು ಸತ್ತಂತಹ ಸಂದರ್ಭದಲ್ಲಿ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಕ್ಸಲೈಟ್ಸ್ ಕಾರ್ಯಾಚರಣೆಯಲ್ಲಿ ತೀವ್ರವಾಗಿ ಗಾಯಗೊಂಡವರಿಗೆ 10,000 ರೂಪಾಯಿಗಳನ್ನು ಕೊಡುತ್ತೇವೆ. ಸಾಮಾನ್ಯವಾಗಿ ಕರ್ತವ್ಯದಲ್ಲಿ ಶಾಶ್ವತವಾಗಿ ಅಂಗವಿಕಲರಾದವರಿಗೆ 1 ಲಕ್ಷ ಕೊಡುತ್ತಿದ್ದೇವೆ. ಕರ್ತವ್ಯದಲ್ಲಿದ್ದಾಗ ತೀವ್ರ ಗಾಯಗಳಿಗೆ ಒಳಗಾದಂತಹವರಿಗೆ 20,000 ರೂಪಾಯಿಗಳು, ಕರ್ತವ್ಯದಲ್ಲಿದ್ದಾಗ ಸಣ್ಣಪುಟ್ಟ ಗಾಯಗಳಿಗೆ 10,000 ರೂಪಾಯಿಗಳು, ಪಡಿತರ ವ್ಯವಸ್ಥೆ 13 ಕೆ.ಜಿ. ಅಕ್ಕಿ, 3 ಕೆ.ಜಿ.ಗೋಧಿ ಕೊಡತಕ್ಕಂಥಾದ್ದು, ಜೀವವಿಮೆ ಮಾಡಿದ್ದೇವೆ, PCಗಳು, HCಗಳು, ಇವರೆಲ್ಲರಿಗೂ ಸಂಬಂಧಪಟ್ಟಂತೆ ಕರ್ತವ್ಯದ ಮೇಲಿದ್ದಾಗ ಮರಣ ಹೊಂದಿದರೆ, ಗುಂಪು ವಿಮಾ ಯೋಜನೆ ರೀತ್ಯಾ ಅವರಿಗೆ 3 ಲಕ್ಷ

ರೂಪಾಯಿಗಳು ಸಂದಾಯವಾಗುತ್ತದೆ. ಇದು ಇಲ್ಲಿಯವರೆಗೆ ಇದ್ದಂಥಾದ್ದು. ಇದರ ಜೊತೆಗೆ, ಈ ವರ್ಷದಲ್ಲಿ ಹಳೆಯ ಕಾಲದಲ್ಲಿದ್ದ Washing allowance ಎಂದು 25 ರೂಪಾಯಿಗಳನ್ನು ಕೊಡುತ್ತಾರೆ. ಅದನ್ನು ನಾವು ಗರಿಷ್ಠ 200 ರೂಪಾಯಿಗಳವರೆಗಾದರೂ ಹೆಚ್ಚಿಸಬೇಕೆಂದಿದ್ದೇವೆ. ಅಧಿಕಾರಿಗಳಿಗೆ 7 ವರ್ಷಕ್ಕೆ 750 ರೂಪಾಯಿಗಳ ಸಮವಸ್ತ್ರದ ಖರ್ಚು ಎಂದು ಕೊಡುತ್ತಿದ್ದಾರೆ. ಅದನ್ನು ಹೆಚ್ಚಿಸಲು ನಿರ್ಧಾರ ತೆಗೆದುಕೊಂಡಿದ್ದೇವೆ. ಹಣಕಾಸು ಇಲಾಖೆಯಿಂದ ಒಪ್ಪಿಗೆ ಪಡೆಯಬೇಕಾಗಿದೆ. Risk Allowance ವಿಚಾರದಲ್ಲಿ ಹೆಚ್ಚಿಗೆ ಕೊಡುವುದರ ಬಗ್ಗೆಯೂ ಯೋಚನೆ ಮಾಡಿದ್ದೇವೆ. ಯಾವುದೇ ಸಂದರ್ಭದಲ್ಲಿ 10 ತಾಸು. 11 ತಾಸುಗಿಂತಲೂ ಹೆಚ್ಚಿಗೆ ಕೆಲಸ ಮಾಡಬಾರದೆಂಬ ಕಾರಣಕ್ಕಾಗಿ ಹೆಚ್ಚುವರಿಯಾಗಿ ಕೆಲಸ ಮಾಡಿರುವ ಪೊಲೀಸ್ ಅಧಿಕಾರಿಗಳಿಗೆ ಆ ವ್ಯವಸ್ಥೆ ಮಾಡಿಕೊಡುತ್ತಿದ್ದೇವೆ. ಅವರು ರಜಾ ದಿವಸಗಳಲ್ಲಿ ಕೆಲಸ ಮಾಡಿದರೆ, ಆ ರಜಾ ದಿವಸಗಳ ಒಟ್ಟು ಮೊತ್ತದಲ್ಲಿ ಒಂದು ವರ್ಷಕ್ಕೆ ಒಂದು ತಿಂಗಳಿನಷ್ಟು ಅವರಿಗೆ ಸೌಲಭ್ಯ ಕೊಡುತ್ತಿದ್ದೇವೆ. ಹೆಚ್ಚುವರಿಯಾಗಿ ಕೆಲಸ ಮಾಡಿದಾಗ ಅವರಿಗೆ 50 ರೂಪಾಯಿಗಳನ್ನು ಭತ್ಯೆಯಾಗಿ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಆದರೆ, ಅವೆಲ್ಲಾ ಕಡಿಮೆ ಇರುವುದರಿಂದ ಹೆಚ್ಚು ಸಮಯ ದುಡಿದಿರುವವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಈಗಾಗಲೇ ಹಣಕಾಸು ಇಲಾಖೆ ಮುಂದೆ ಪ್ರಸ್ಥಾಪ ಇದೆ. ಹಣಕಾಸು ಇಲಾಖೆ ಮುಂದೆ ಪ್ರಸ್ತಾವ ಇಲ್ಲದೆ, ಬರೀ ಆ ಪ್ರಸ್ತಾವದ ವಿಚಾರವನ್ನು ಮಾತ್ರ ಇಲ್ಲಿ ಮಾತನಾಡುವ ಅಗತ್ಯವಿಲ್ಲ. ಆಗಸ್ಟ್ 15ರೊಳಗಾಗಿ ಒಳ್ಳೆಯ ಕಾರ್ಯಕ್ರಮಗಳನ್ನು ಸಾಮಾನ್ಯವಾಗಿ ಕರ್ತವ್ಯ ನಿರತರಾಗಿರತಕ್ಕ ಕೆಳ ಹಂತದ ಪೊಲೀಸ್ ಪೇದೆಗಳು, ಅಧಿಕಾರಿಗಳಿದ್ದಾರೆ, ಅವರಿಗೆ ಖಂಡಿತವಾಗಿಯೂ ಸರ್ಕಾರ ಆ ಕೆಲಸ ಮಾಡಿಕೊಡುತ್ತದೆ. ಇದಲ್ಲದೆ, ಪೊಲೀಸ್ ವ್ಯವಸ್ಥೆಯಲ್ಲಿರುವ ಪ್ರತಿಯೊಬ್ಬರಿಗೂ ಬಿ.ಡಿ.ಎ.ದಿಂದಾಗಲಿ ಅಥವಾ ಪ್ರಾಧಿಕಾರಗಳ ಮೂಲಕವಾಗಲಿ, ನಿವೇಶನಗಳನ್ನು ಕೊಡುವುದರ ಮೂಲಕ ಅವರುಗಳಿಗೆ ನಾವು ಮನೆಗಳನ್ನು ಕಟ್ಟಿಸಿಕೊಡುತ್ತೇವೆ. ಆ ಮನೆಗಳನ್ನು ಅವರಿಗೆ ಬೇಕಾದ ರೀತಿಯಲ್ಲಿ Police Housing Corporation ಮೂಲಕ ಕಟ್ಟಿಸಿಕೊಡು ವಂಥಾದ್ದು ಮತ್ತು ಮರಣ ಹೊಂದಿದ ಸಂಬಂಧಪಟ್ಟವರಿದ್ದಾಗ ಅವರಿಗೆ ಕನಿಷ್ಠ 2 ಲಕ್ಷ ರೂಪಾಯಿ ಮೊತ್ತದ ಒಂದು ಮನೆ ಕಟ್ಟಿಸಿಕೊಡಬೇಕೆಂದು Marty's Day ದಿವಸ

ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು announce ಮಾಡಿದ್ದಾರೆ. ಅದರ ಬಗ್ಗೆಯೂ ವಿಸ್ತೃತವಾದ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದೇವೆ. ಇದು ಹೊಸ ಕಾರ್ಯಕ್ರಮ. ಬೇರಾವುದೇ ರಾಜ್ಯಗಳಲ್ಲೂ ಅವರಿಗೆ ವಸತಿಗಳನ್ನು ಕಟ್ಟಿಸಿಕೊಟ್ಟು ಕಂತುಗಳ ಮೂಲಕ ತೆಗೆದುಕೊಳ್ಳುವ ವ್ಯವಸ್ಥೆ ಇಲ್ಲಿಯವರೆಗೆ ಕೂಡ ಆಗಿಲ್ಲ. ಈ ಎಲ್ಲ ವಿವರಗಳು ಆಗಸ್ಟ್ 15ರೊಳಗೆ ಅಥವಾ ಅದರೊಳಗಾಗಿಯೇ ಮಾನ್ಯ ಮುಖ್ಯಮಂತ್ರಿಗಳು ನಿಮಗೆ ಸಮಾಧಾನವಾಗುವ ರೀತಿಯಲ್ಲಿ ನೀಡುತ್ತಾರೆ.

(1-30 PM)

ನೀವು ಏನು ಪ್ರಸ್ತಾಪ ಮಾಡಿದ್ದೀರಿ, ಬೇರೆ ಬೇರೆ ಪೊಲೀಸ್ ಠಾಣೆಗಳನ್ನು ಕೊಡತಕ್ಕದ್ದು, ಆ ಬಗ್ಗೆ ರಿಪೇರಿಗಾಗಿ ಸುಮಾರು 20 ಕೋಟಿ ರೂಪಾಯಿಗಳನ್ನು ಕಳೆದ ಬಾರಿ ಕಟ್ಟಿದ್ದೆವು. ಆದರೆ 7 ಕೋಟಿ ಮಾತ್ರ ಬಿಡುಗಡೆಯಾಗಿದ್ದರಿಂದ ತೊಂದರೆಯಾಯಿತು. ನರೇಂದ್ರಬಾಬುರವರು ಇಲ್ಲಿರುವ ಅನೇಕ ಪೊಲೀಸ್ ವಸತಿ ಗೃಹಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಬೇರೆ ಕಡೆ ಸಹ ಪ್ರಸ್ತಾಪವಾಗಿದೆ. ಅವರಿಗೂ ಈ ಸಲ ಕನಿಷ್ಟ 20 ಕೋಟಿ ರೂಪಾಯಿ ಆದರೂ ದುರಸ್ತಿ ಕಾರ್ಯಕ್ಕೆ ಕೊಡಬೇಕು ಎಂದು ಕೇಳಿಕೊಂಡಿದ್ದೇವೆ. ಆ ಹಣ ಬಂದೇ ಬರುತ್ತದೆ ಎನ್ನುವಂಥ ನಂಬಿಕೆ ಸಹ ನಮಗಿದೆ. ಇದರ ಜೊತೆಗೆ ಏನು ನೀರಿ, ವಿದ್ಯುತ್ ಬಿಲ್ಲು ಕಟ್ಟಬೇಕಾಗಿರುವುದನ್ನು ಈಗಾಗಲೇ ಕಟ್ಟಿದ್ದೇವೆ. ಯಾವುದೇ ಕಾರಣಕ್ಕೆ ಅದನ್ನು disconnect ಮಾಡಬಾರದು ಎಂದು ಸಂಬಂಧಪಟ್ಟ ನಗರಸಭೆ, ಪುರಸಭೆ, ಮಹಾನಗರ ಪಾಲಿಕೆಗಳಿಗೆ ಕೇಳಿಕೊಂಡಿದ್ದೇವೆ. ಈ ದೃಷ್ಟಿಕೋನದ ಜೊತೆಗೆ ತಾವು ದಳಪತಿಗಳ ವಿಚಾರವನ್ನು ಮಾನ್ಯ ಆಂಜನೇಯರವರು ಎತ್ತಿದರು. ದಳಪತಿಗಳ ಒಂದು ವ್ಯವಸ್ಥೆಯನ್ನು 2002–03ರ ನಡುವೆ ಆ ಕಾನೂನನ್ನು ರದ್ದು ಮಾಡಿದ್ದಾರೆ. ಆದ್ದರಿಂದ ದಳಪತಿಗಳು ಎಂಬ ಹುದ್ದೆ ಇಲ್ಲ. ಆದರೂ ಇವತ್ತು ಅದನ್ನು ನೋಡಿಕೊಂಡು ಹೋಗತಕ್ಕವರ ಬಗ್ಗೆ ನಮ್ಮ ಸರ್ಕಾರ ಚಿಂತನೆ ಮಾಡುತ್ತಿದೆ. ಅದರ ಅವಶ್ಯಕತೆ ಕಂಡುಬಂದಲ್ಲಿ ಮತ್ತೆ ಕಾನೂನನ್ನು ರೂಪಿಸುವ ಮೂಲಕ ದಳಪತಿಗಳನ್ನು ನೇಮಕಾತಿ ಮಾಡಿಕೊಳ್ಳತಕ್ಕದ್ದು, ಗೌರವಧನ ಕೊಡತಕ್ಕದ್ದರ ಬಗ್ಗೆ ಸಹ ಸರ್ಕಾರ ಅನೇಕ ಮನವಿಗಳನ್ನು ಸ್ವೀಕಾರ ಮಾಡಿದಾಗ ಗಂಭೀರವಾಗಿ ಅದರ ಬಗ್ಗೆ ಯೋಚನೆ ಮಾಡುತ್ತದೆ. ಕೆರಗೋಡಿನ ಮಾನ್ಯ ಶಾಸಕಿಯವರು ಅಲ್ಲಿ ಪೊಲೀಸ್ ಸಿಬ್ಬಂದಿ ನೇಮಕಾತಿಯಲ್ಲಿ ವಿಳಂಬವಾಗಿದೆ ಎಂದು ಹೇಳಿದರು. ಇದರ ಬಗ್ಗೆ ನಾನು

ಪೊಲೀಸ್ ಮಹಾ ನಿರ್ದೇಶಕರಿಗೆ ಆವತ್ತೇ ತಿಳಿಸಿದ್ದೇನೆ. ಪ್ರಾಯಶಃ ಇನ್ನು ಒಂದು ವಾರದೊಳಗೆ ಅಲ್ಲಿಯ ನೇಮಕಾತಿಯನ್ನು ಕಂಡಿತವಾಗಿ ಮಾಡಿಕೊಡುತ್ತೇವೆ. ಮಂಗಳೂರಿನಲ್ಲಿ ಪೊಲೀಸ್ ಕಮಿಷನರೇಟ್ ಮಾಡಬೇಕು ಎಂಬ ಪ್ರಸ್ತಾವ ಈಗಾಗಲೇ ಹಣಕಾಸು ಇಲಾಖೆಯಲ್ಲಿದೆ. ತಾವು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಈಗ ಹುಬ್ಬಳ್ಳಿ, ಧಾರವಾಡ, ಬೆಂಗಳೂರು, ಮೈಸೂರಿನಲ್ಲಿದೆ. ಮಂಗಳೂರು ಕೋಮುಗಲಭೆಯ ಸೂಕ್ಷ್ಮ ಪ್ರದೇಶವಾಗಿರುವುದರಿಂದ ಅಲ್ಲಿ ಪೊಲೀಸ್ ಕಮಿಷನರೇಟ್ ಮಾಡಬೇಕು ಎಂಬ ಪ್ರಸ್ತಾವ ಹಣಕಾಸು ಇಲಾಖೆಯಲ್ಲಿದೆ. ಪ್ರಾಯಶಃ ಈ ಸಲ ಅದಕ್ಕೆ ಒಪ್ಪಿಗೆಯನ್ನು ಕೊಡುತ್ತಾರೆ ಎಂದು ನಾನು ಭಾವಿಸಿದ್ದೇನೆ. ವಾಹನಗಳ ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. 4 ಲಕ್ಷ ಕಿಲೋಮೀಟರ್ ಓಡಿದ್ದರೆ ಅಥವಾ 15 ವರ್ಷದಷ್ಟು ಚಾಲನೆಯಲ್ಲಿದ್ದರೆ ಹೊಸ ವಾಹನಗಳನ್ನು ಕೊಡಬೇಕೆಂದು ನಮ್ಮ ನವೀಕರಣ ಯೋಜನೆಯಲ್ಲಿ ಹೆಚ್ಚಿನ ಹಣವನ್ನು ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡುತ್ತೇವೆ. ಸುಮಾರು 5 ಕರಾವಳಿ ಕಾವಲು ಠಾಣೆಗಳನ್ನು ಈಗಾಗಲೇ ನಿರ್ಮಿಸಿದ್ದೇವೆ. ಅದಕ್ಕೆ ಇಲ್ಲಿಯವರೆಗೆ 27 ಕೋಟಿ 11 ಲಕ್ಷ ಹಣವನ್ನು ಖರ್ಚು ಮಾಡಿದ್ದೇವೆ. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಅನಾಥ ಶವ ಸಂಸ್ಕಾರಕ್ಕೆ 900 ರೂಪಾಯಿ ಇದೆ, ಅದು ಸರಿಯಾದುದಲ್ಲವೆಂದು ಹೇಳಿದ್ದೀರಿ. ಅದನ್ನು ಒಂದು ಸಾವಿರ ಮಾಡುತ್ತೇವೆ. ಗ್ರಾಮೀಣ ಪ್ರದೇಶದಲ್ಲೂ ಅಷ್ಟೇ ಖರ್ಚು ಬರಬಹುದು. ಅದನ್ನು ಮಾಡುತ್ತೇವೆ. ಸಾಕ್ಷೀದಾರರ ಭತ್ಯೆಯ ಬಗ್ಗೆ ನಾನು ಈಗಾಗಲೇ ಹೇಳಿದಂತೆ ಬೇರೆ ಕಡೆಗೆ, ಕೊಪ್ಪಳದಲ್ಲಿ 50 ಲಕ್ಷ ರೂಪಾಯಿಗಳ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯವರ ಕಟ್ಟಡದ ನಿಧಿಯಿಂದ ಉಪಯೋಗಿಸಿ ಕೊಂಡು ಮಾಡಿದ್ದಾರೆ. ಬೇರೆ ಬೇರೆ ನ್ಯಾಯಾಲಯಗಳ ಆವರಣದಲ್ಲಿ ಇಂಥ ಸಾಕ್ಷೀದಾರರಿಗೆ ತಂಗುದಾಣಗಳನ್ನು ಏರ್ಪಾಡು ಮಾಡುವ ವ್ಯವಸ್ಥೆಯನ್ನು ಹಂತ ಹಂತವಾಗಿ ತೆಗೆದುಕೊಳ್ಳುತ್ತಿದ್ದೇವೆ. ಹೋಮ್ ಗಾರ್ಡ್ಸ್‌ನಲ್ಲಿ ಸುಮಾರು 17 ಸಾವಿರ ಇರತಕ್ಕದ್ದನ್ನು 25 ಸಾವಿರಕ್ಕೆ ಏರಿಸಬೇಕೆಂದು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ಗೃಹ ಮಂತ್ರಿಗಳು ಅದಕ್ಕೆ ಒಪ್ಪಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಬೆಂಗಳೂರಿನಲ್ಲಿ ಇರತಕ್ಕವರಿಗೆ 125 ರೂಪಾಯಿ, ಬೇರೆ ಕೆಲಸ ಮಾಡತಕ್ಕವರಿಗೆ 100 ರೂಪಾಯಿನಂತೆ ಕರ್ತವ್ಯ ಭತ್ಯೆಯನ್ನು ಕೊಡುತ್ತಿದ್ದೇವೆ, ತರಬೇತಿ ಭತ್ಯೆ ಎಂದು 70 ರೂಪಾಯಿಗಳನ್ನು ಪ್ರತಿಯೊಬ್ಬ ತರಬೇತಿದಾರರಿಗೆ ಕೊಡುತ್ತಿದ್ದೇವೆ. ಕವಾಯಿತು ಭತ್ಯೆ ಎಂದು

ಎರಡೂವರೆ ಗಂಟೆ ಕೆಲಸ ಮಾಡಿರತಕ್ಕವರಿಗೆ 22.50 ರೂ.ನಂತೆ ಒಂದು ಗಂಟೆಗೆ ಕೊಡುತ್ತಿದ್ದೇವೆ. ಪ್ರವಾಸ ಭತ್ಯೆ ಎನ್ನತಕ್ಕದ್ದು ಗೃಹ ರಕ್ಷತೆಯ ಜೇಷ್ಠತೆ ಮತ್ತು ಅವರ ಸ್ಥಾನವನ್ನು ಯೋಚನೆ ಮಾಡಿ ಹಣವನ್ನು ಕೊಡತಕ್ಕದ್ದನ್ನು ಮಾಡಿದ್ದೇವೆ. ಈಗ ಇನ್ನೊಂದು ಹೊಸ ಯೋಜನೆ ಇರತಕ್ಕದ್ದು. ಅವರನ್ನು Security guards ಎಂದು ನಮ್ಮ ಕಾರ್ಖಾನೆಯವರು, ಕೆಲವು ಮನೆಯವರು ತೆಗೆದುಕೊಳ್ಳುತ್ತಿರುತ್ತಾರೆ. ಅದನ್ನು ಖಾಸಗಿ ಮೂಲದಿಂದ ತೆಗೆದುಕೊಳ್ಳುವ ಬದಲು ನಮ್ಮ ಗೃಹ ರಕ್ಷಕ ದಳದಲ್ಲಿರುವ ಮಾಹಿತಿ ನಮ್ಮ ಹತ್ತಿರ ಇರುತ್ತದೆ, ಆ ಕಾರಣಕ್ಕಾಗಿ ಅವರನ್ನು ತೆಗೆದುಕೊಳ್ಳಬೇಕೆಂದು ನಮ್ಮ ಗೃಹ ರಕ್ಷಕ ದಳದ ನಿರ್ದೇಶಕರು ಉದ್ದಿಮೆದಾರರ ಜೊತೆಗೆ ಮಾತನಾಡುತ್ತಿದ್ದಾರೆ. ಅದು ಆದರೆ 350 ರೂಪಾಯಿ ಒಂದು ದಿನಕ್ಕೆ ಕೊಡಬೇಕೆಂದು ಕೇಳಿಕೊಂಡಿದ್ದೇವೆ. 350 ರೂಪಾಯಿಗಳಿಗೆ ಅವರು ಒಪ್ಪಿಗೆ ಕೊಟ್ಟರೆ ಅದರಲ್ಲಿ 50 ರೂಪಾಯಿ ಸರ್ಕಾರ ಇಟ್ಟುಕೊಂಡು 300 ರೂಪಾಯಿ ಅವರಿಗೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಆ ಮಾತುಕತೆ ಮುಗಿದ ನಂತರ ಅದನ್ನು ಪ್ರಕಟಣೆ ಮಾಡುತ್ತೇವೆ. ಶಾಸಕರ ನಿಧಿಯಿಂದ ಪೊಲೀಸ್ ಠಾಣೆಗೆ ಮತ್ತೊಂದಕ್ಕೆ ಕೊಡತಕ್ಕದ್ದಕ್ಕೆ ಬದಲಾವಣೆ ಆಗಬೇಕಾಗಿದ್ದರೆ ಡಿ.ಪಿ.ಎ.ಆರ್.ನಲ್ಲಿ ಪ್ರದೇಶ ಅಭಿವೃದ್ಧಿ ನಿಧಿಯನ್ನು ಕೊಡುವುದರಲ್ಲಿ ಸೂಕ್ತ ಬದಲಾಣೆಗಳನ್ನು ಯೋಚನೆ ಮಾಡಿ ಅದರ ನಿರ್ಧಾರಗಳನ್ನು ನಾವು ಮಾಡುತ್ತೇವೆ. ತಮಗೇನು ಪರಿಹಾರ ಕೊಡಬೇಕು ಎಂಬುದರಲ್ಲಿ ಯಾರು ಈ ಅನಾಹುತಕ್ಕೆ ಕಾರಣರಾಗಿದ್ದಾರೆ, ಅವರ ಮೂಲಕ ಪರಿಹಾರ ಕೊಡತಕ್ಕದ್ದಕ್ಕೆ ಈಗಾಗಲೇ ಪೊಲೀಸ್ ಇಲಾಖೆಯವರು ಕೆಲಸ ಶುರು ಮಾಡಿದ್ದಾರೆ. ಆದರೆ, ಮುಖ್ಯಮಂತ್ರಿಗಳ ನಿಧಿಯಿಂದ ಕೂಡ ಆ 5 ಜನ ಅಮಾಯಕರೇನು ಅಲ್ಲಿ ಸತ್ತಿದ್ದಾರೆ, ಅವರೆಲ್ಲರಿಗೂ ಹಣ ಕೊಡತಕ್ಕ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀ ನೆ.ಲ.ನರೇಂದ್ರಬಾಬು : ಡಾ: ರಾಜ್‌ಕುಮಾರ್‌ರವರ ಗೋಲಿಬಾರ್‌ಗೆ ಸಂಬಂಧಪಟ್ಟ ಸತ್ತಿರುವ ಒಬ್ಬನಿಗೆ ಪರಿಹಾರ ಸಿಕ್ಕಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಸಿ.ಓ.ಡಿ. ವಿಚಾರಣೆಯಲ್ಲಿ ಪ್ರಶ್ನೆ ಏನು ಬಂದಿದೆ ಎಂದರೆ, ಎರಡು ಚಾರ್ಜ್‌ಶೀಟ್‌ನ್ನು ಹಾಕಬೇಕೇ ಎಂಬ ಬಗ್ಗೆ ತಾವು ಯೋಚನೆ ಮಾಡಿ. ಒಂದು F.I.R. ಇರುವುದರಲ್ಲಿ ಮತ್ತೊಂದು F.I.R. ಹಾಕಿದಾಗ ಅದರ ಸಾಕ್ಷ್ಯಾಧಾರಗಳೇನು ಎನ್ನುವುದರಲ್ಲಿ ಸುಪ್ರೀಂಕೋರ್ಟ್‌ನ ನಿರ್ಣಯವಿದೆ. ಒಂದು ಚಾರ್ಜ್‌ಶೀಟ್ ಹಾಕಿ

ದೋಷಾರೋಪಣೆ ಪಟ್ಟಿಯನ್ನು ಕೊಟ್ಟ ಮೇಲೆ ಎರಡನೇ ದೋಷಾರೋಪಣೆ ಪಟ್ಟಿಯನ್ನು ಕೊಟ್ಟಾಗ ಯಾವುದನ್ನು ನಂಬಬೇಕು ಎಂಬ ವಿಚಾರಗಳು ಬರುತ್ತವೆ. ಅದೇನೆ ಆಗಿರಲಿ, ಅಲ್ಲಿ ಕರ್ತವ್ಯ ಲೋಪವಾಗಿದೆ ಎನ್ನುವ ಮಾತನ್ನು ಹೇಳಿದ್ದೀರಿ. AIR-19, 2006 Supreme Courtನ ನಿರ್ಣಯ ಇರುವ ಹಿನ್ನೆಲೆಯಲ್ಲಿ ತಾವು ಮುಖ್ಯಮಂತ್ರಿಗಳ ಮತ್ತು ನನ್ನ ಜೊತೆ ಈ ವಿಚಾರವನ್ನು ಪ್ರಸ್ತಾಪ ಮಾಡಿರುವುದರಿಂದ ಕಂಡಿತವಾಗಿ ಅದನ್ನು ಸಿ.ಓ.ಡಿ.ಗೆ ವಹಿಸಿಕೊಡುತ್ತೇವೆಂದು ಈಗಾಗಲೇ ಹೇಳಿದ್ದೇವೆ. ಇದರಲ್ಲಿ ಯಾವುದೇ ಸಂದಿಗ್ಧತೆ ಇಲ್ಲ. ಅಸ್ಪೃಶ್ಯತೆಯೂ ಇಲ್ಲ.

ಶ್ರೀ ವೈಜನಾಥ್ ಪಾಟೀಲ್ : ಕಳೆದ 30–35 ವರ್ಷಗಳಿಂದ ದಳಪತಿಗಳು ಪ್ರತಿಯೊಂದು ಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ತನಕ ಅವರಿಗೆ ಯಾವುದೇ ಪರಿಹಾರಧನ, ಪಿಂಚಣಿ ಇಲ್ಲ. ಅವರು ಓಡಾಡುತ್ತಾರೆ. ಅದರ ಬಗ್ಗೆ ಹೈಕೋರ್ಟ್ ಸಹ ಒಂದು ಆದೇಶ ಮಾಡಿದೆ. ಅದರ ಬಗ್ಗೆ ಸರ್ಕಾರದ ನೀತಿಯೇನು?

ಶ್ರೀ ಎಂ. ಪಿ. ಪ್ರಕಾಶ್ : ಅದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ದಳಪತಿಗಳು ಎನ್ನುವ ವ್ಯವಸ್ಥೆಯನ್ನು 2002 ರಲ್ಲಿ ತೆಗೆದುಹಾಕಿದ್ದಾರೆ. ಅದರ ಕಾನೂನನ್ನು ಆಗ ತೆಗೆದುಹಾಕಿದ್ದಾರೆ. ಆದರೆ ಮತ್ತೆ ಎಲ್ಲಾ ದಳಪತಿಗಳು ಈ ರೀತಿಯಾದ ಮನವಿಯನ್ನು ಕೊಟ್ಟಿರುವ ಹಿನ್ನೆಲೆಯಲ್ಲಿ ಅವರನ್ನು ಮತ್ತೆ ತೆಗೆದುಕೊಳ್ಳಬೇಕೇ, ಕೊಟ್ಟರೆ ಯಾವ ರೀತಿಯಾದ ಗೌರವಧನ ಕೊಡಬೇಕು, ಅವರ ಸೇವಾ ಅವಧಿ ಈ ವಿಚಾರಗಳ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಯೋಚನೆ ಮಾಡುತ್ತದೆ.

ಶ್ರೀ ವೈದ್ಯನಾಥ ಪಾಟೀಲ್ : ಅವರು ಇಷ್ಟು ವರ್ಷ ಕೆಲಸ ಮಾಡಿದ್ದಾರೆ. ಆದರೆ ಇದುವರೆಗೆ ಯಾವುದೇ ಧನಸಹಾಯ ಕೊಟ್ಟಿಲ್ಲ.

ಅಧ್ಯಕ್ಷರು : ಅದು ಇಲ್ಲ ಎಂದು ಹೇಳಿದ ಮೇಲೆ ಬಿಡಿ.

ಶ್ರೀ ಆರ್.ವಿ.ದೇಶಪಾಂಡೆ : ಇದರ ಬಗ್ಗೆ ಉತ್ತರ ಕನ್ನಡ ಜಿಲ್ಲೆಯ ದಳಪತಿಗಳಿಗೆ ಮಾಶಾಸನ ಕೊಡಬೇಕೆಂದು ಹೈಕೋರ್ಟ್‌ನಲ್ಲಿ order ಆಗಿದೆ. ಕಳೆದ ಬಾರಿ ಸಹ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ : 2002 ರಲ್ಲಿ ತಾವು ಸಚಿವರಾಗಿದ್ದ ಕಾಲದಲ್ಲಿ ಆ ಕಾನೂನನ್ನು ರದ್ದು ಮಾಡಿದ್ದೀರಿ. ಈಗ ದಳಪತಿ ಎಂಬ ಹುದ್ದೆ ಇಲ್ಲ. ಆದ್ದರಿಂದ ಅವರಿಗೆ ಮಾಶಾಸನ ಕೊಡತಕ್ಕ ಪ್ರಶ್ನೆ ಈ ಸಂದರ್ಭದಲ್ಲಿ

ಉದ್ಭವವಾಗುವುದಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ, ನನಗೆ ಮತ್ತು ಬೇರೆ ಬೇರೆ ಶಾಸಕರುಗಳಿಗೆ ದಳಪತಿಗಳು ಕೊಟ್ಟ ಮನವಿಯ ಹಿನ್ನೆಲೆಯಲ್ಲಿ ಅದನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ. ಆ ಕಾನೂನನ್ನು ರಚಿಸಿದ ನಂತರ ಅವರಿಗೆ ಗೌರವಧನ ಮೊದಲಾದವನ್ನು ಕೊಡುತ್ತೇವೆ.

ಶ್ರೀ ಆರ್.ವಿ.ದೇಶಪಾಂಡೆ : ಉತ್ತರ ಕನ್ನಡ ಜಿಲ್ಲೆಯ ದಳಪತಿಗಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಒಂದು ವರ್ಷದ ಹಿಂದೆ ಹೈಕೋರ್ಟ್‌ನ Judgement ಆಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ಇಲಾಖಾ ಬೇಡಿಕೆಗಳ ಚರ್ಚೆಯ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಉತ್ತರವನ್ನು ಕೊಡಲು ನನಗೆ ಅವಕಾಶ ಕೊಟ್ಟಿರುವುದಕ್ಕೆ ಮೊದಲನೆಯದಾಗಿ ನಾನು ತಮಗೆ ಮತ್ತು ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಒಂದು ಸುದೀರ್ಘ ಚರ್ಚೆಯಲ್ಲಿ ಹಲವಾರು ವಿಷಯಗಳ ಬಗ್ಗೆ ಸದನದ ಗಮನವನ್ನು ಸೆಳೆದಿದ್ದಾರೆ ಎಂಬುದನ್ನು ಹೇಳಬಯಸುತ್ತೇನೆ. ಅದರಲ್ಲೂ ಕೆಲವು ಹಿರಿಯ ಸದಸ್ಯರುಗಳು ವಿಶೇಷವಾಗಿ ಕೆಲವು ಇಲಾಖೆಗಳ ವಿಷಯದಲ್ಲಿ ಹೆಚ್ಚಿನ ರೀತಿಯಲ್ಲಿ ಗಮನವನ್ನು ಸೆಳೆದಿದ್ದಾರೆ, ಮಾಧುಸ್ವಾಮಿಯವರು ಮತ್ತು ಅವರ 5 ಜನ ಸಿಂಡಿಕೇಟ್‌ನವರು ಈಗ ಹೊರಗಡೆ ಹೋಗಿದ್ದಾರೆ ಏಕೆ ಹೋದರೋ ಗೊತ್ತಾಗಲಿಲ್ಲ. ಅವರು ವಿಶೇಷವಾಗಿ ರಸ್ತೆಗಳ ಬಗ್ಗೆ ಗಮನ ಸೆಳೆದಿದ್ದಾರೆ. ಸನ್ಮಾನ್ಯ ಸಿದ್ದರಾಮಯ್ಯ ನವರು ಹಣಕಾಸು ಇಲಾಖೆಯ ಬಗ್ಗೆ ಏನು ಅನುಭವವನ್ನು ಹೊಂದಿದ್ದಾರೋ ಆ ಅನುಭವದ ಮುಖಾಂತರ ಸದನದಲ್ಲಿ ಸುದೀರ್ಘವಾಗಿ ಹಣಕಾಸು ಇಲಾಖೆಗೆ ಸಂಬಂಧಪಟ್ಟಂತೆ ಮತ್ತು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಹೆಚ್ಚಿನ ಸಮಯವನ್ನು ಮೀಸಲಿಟ್ಟು ಚರ್ಚೆಯನ್ನು ಮಾಡಿದ್ದಾರೆ. ಸನ್ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂಥ ದೇಶಪಾಂಡೆಯವರು ಹಿಂದೆ ಸುದೀರ್ಘ ಕಾಲಾವಧಿಯಲ್ಲಿ ಕೈಗಾರಿಕಾ ಸಚಿವರಾಗಿ ಕೆಲಸವನ್ನು ಮಾಡಿದ್ದಾರೆ. ಅವರಿಗೆ ಇರತಕ್ಕಂಥ ಅನುಭವದ ಆಧಾರದ ಮೇಲೆ ಕೈಗಾರಿಕೆಗಳ ಬಗ್ಗೆ ತಮ್ಮ ಚರ್ಚೆಯನ್ನು ಹೆಚ್ಚು ಒತ್ತು ಕೊಟ್ಟು ಮಾತನಾಡಿದ್ದಾರೆ. ಅದೇ ರೀತಿ ಹಿರಿಯರಾಗಿರತಕ್ಕಂಥ

ರಮೇಶ್‌ಕುಮಾರ್‌ರವರು ಜ್ಯುಡಿಶಿಯರಿ ಇರಬಹುದು, General Administration ಬಗ್ಗೆ ಇರಬಹುದು, ಅದೇ ರೀತಿ ಇನ್ನೂ ಹಲವಾರು ವಿಷಯಗಳ ಬಗ್ಗೆ, ಇವತ್ತಿನ ಆಡಳಿತದ ವ್ಯವಸ್ಥೆಗಳ ಬಗ್ಗೆ ಇರತಕ್ಕಂಥ ಹಲವಾರು ಲೋಪದೋಷಗಳ ಬಗ್ಗೆ ಗಮನವನ್ನು ಸೆಳೆದಿದ್ದಾರೆ. ಅದೇ ರೀತಿ ಮಲ್ಲಿಕಾರ್ಜುನ ಖರ್ಗೆಯವರು ಕೆಲವು ಅಂಕಿ ಅಂಶಗಳ ಆಧಾರದ ಮೇಲೆ ಕೆಲವು ತಾರತಮ್ಯಗಳಾಗಿರತಕ್ಕಂಥದ್ದರ ಬಗ್ಗೆ ಸದನದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಚರ್ಚೆಯನ್ನು ಮಾಡಿದ್ದಾರೆ. ನಾನು ಈ ಬಾರಿಯು ಇಲಾಖಾ ಬೇಡಿಕೆಗಳ ಬಗ್ಗೆ ಸದನದಲ್ಲಿ ಎಲ್ಲಾ ರೀತಿಯ ಸಹಕಾರ ಮತ್ತು ಈ ಬೇಡಿಕೆಗಳ ಮೇಲೆ ಚರ್ಚೆಯಲ್ಲಿ ಭಾಗವಹಿಸಿರತಕ್ಕಂಥ ಎಲ್ಲಾ ಸದಸ್ಯರುಗಳಿಗೂ ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ, ಹಣಕಾಸು ಸಚಿವರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

(ಶ್ರೀ ಎನ್.ವೈ.ಗೋಪಾಲಕೃಷ್ಣರವರು ಸನ್ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದಕ್ಕೆ ಕಾರಣ ಕಳೆದ ಬಾರಿ ಆಯವ್ಯಯವನ್ನು ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ, ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಯಾವುದೇ ರೀತಿಯ ಚರ್ಚೆಗೆ ಅವಕಾಶವೇ ಸಿಕ್ಕಿರಲಿಲ್ಲ. ಅಂಥ ಒಂದು ಸಂದರ್ಭ ಪುನರಾವರ್ತನೆಯಾಗಬಾರದು ಎನ್ನತಕ್ಕಂಥ ರೀತಿಯಲ್ಲಿ ಈ ವರ್ಷ ಸದನದಲ್ಲಿ ತಮ್ಮ ಅನುಭವಗಳನ್ನು ಇವತ್ತು ಈ ಸದನದ ಮುಖಾಂತರ ತಾವು ವ್ಯಕ್ತ ಮಾಡಿದ್ದೀರಿ. ಆ ದೃಷ್ಟಿಯಿಂದ ಇವತ್ತು ನಾನು ನಿಮಗೆ ಕೃತಜ್ಞತೆಗಳನ್ನು ಸಲ್ಲಿಸಬಯಸು ತ್ತೇನೆಂದು ಹೇಳಬಯಸುತ್ತೇನೆ. ನಾನು ಈ ಸದನದಲ್ಲಿ ಇಂದು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾದರೆ ದಯವಿಟ್ಟು ಯಾರೂ ಅನ್ಯಥಾ ಭಾವಿಸಬಾರದು. ನಾನು ಸತ್ಯವನ್ನು ಹೇಳತಕ್ಕಂಥ ಕೆಲವು ಸಂದರ್ಭದಲ್ಲಿ ಅದು ಕೆಲವರಿಗೆ ಕಹಿಯಾಗಿ ಕಾಣಬಹುದು. ಆದರೆ ಆ ಸತ್ಯವನ್ನು ಹೇಳಬೇಕಾದರೆ ನಾನು ಯಾವುದೇ ರೀತಿಯ ವಾಸ್ತವಾಂಶಕ್ಕೆ ದೂರವಾಗಿ ವಿಷಯವನ್ನು ಪ್ರಸ್ತಾಪ ಮಾಡುವುದಿಲ್ಲ. ಇವತ್ತು ಪ್ರಮುಖವಾಗಿರತಕ್ಕಂಥ ಸದಸ್ಯರುಗಳು ಚರ್ಚೆಯನ್ನು ಮಾಡಿದಾಗ ಅವರುಗಳು financial discipline ಬಗ್ಗೆಯೇ ಹೆಚ್ಚಾಗಿ ಚರ್ಚೆಯನ್ನು ಮಾಡಿದ್ದಾರೆ. ಅಂತಿಮವಾಗಿ ಚರ್ಚೆಯಲ್ಲಿ ಎಲ್ಲರೂ ಈ ವರ್ಷ financial discipline ಅನ್ನು ತರುವುದಕ್ಕೆ

ಸಾಧ್ಯವೇ ಎನ್ನುವುದರ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಆ ದೃಷ್ಟಿಯಿಂದ ನಾನು ಈ ಸಂದರ್ಭದಲ್ಲಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಇವತ್ತು ಸನ್ಮಾನ್ಯ ಸಿದ್ದರಾಮಯ್ಯ ನವರು ಚರ್ಚೆಯಲ್ಲಿ ಭಾಗವಹಿಸಿ ಎಳೆಎಳೆಯಾಗಿ ಈ financial discipline ವಿಷಯವಾಗಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು fiscal deficit ಇರಬಹುದು, ಸರ್ಕಾರಕ್ಕೆ ರೆವಿನ್ಯೂ ರಿಸೋರ್ಸ್‌ನ್ನು ಯಾವ ರೀತಿ ಮೊಬಿಲೈಸ್ ಮಾಡತಕ್ಕಂಥದ್ದು, ಇವತ್ತು ಎಲ್ಲಿ ಎಡವತಕ್ಕಂಥ ಕೆಲಸಗಳಾಗ ಬಹುದು ಎನ್ನುವ ವಿಷಯದಲ್ಲಿ ಚರ್ಚೆಯ ಕಾಲದಲ್ಲಿ ನಮಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ ಮತ್ತು ನಾವು ಯಾವ ರೀತಿಯಲ್ಲಿ ಹೋಗಬೇ ಕೆಂಬುದರ ಬಗ್ಗೆಯೂ ಕೂಡ ಮಾರ್ಗದರ್ಶನವನ್ನು ಕೊಟ್ಟಿದ್ದಾರೆ. ನಾನು ಈ ವಿಚಾರವಾಗಿ ಅವರಿಗೆ ನಿಜಕ್ಕೂ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ನಾನು ಈ ಒಂದು ದೇಶದಲ್ಲಿ ಈ financial discipline ಬಗ್ಗೆ ಚರ್ಚೆ ಯಾವಾಗ ಪ್ರಾರಂಭವಾಯಿತು ಎಂದು ಕೇಳಬಯಸುತ್ತೇನೆ. ಹಲವಾರು ರಾಜ್ಯಗಳಲ್ಲಿ financial discipline ಅನ್ನು ಕಡೆಗಾಣಿಸತಕ್ಕಂಥ ವಾತಾವರಣ ನಿರ್ಮಾಣವಾದಂಥ ಒಂದು ಸನ್ನಿವೇಶದಲ್ಲಿ ಇದರ ಬಗ್ಗೆ ಎಲ್ಲರೂ ಹೆಚ್ಚಿನ ಗಮನವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರು. ಇವತ್ತು ಹಲವಾರು ಸಂದರ್ಭಗಳಲ್ಲಿ ನಮ್ಮ ದೇಶಪಾಂಡೆಯವರು ಚರ್ಚೆಯನ್ನು ಮಾಡಬೇಕಾದರೆ World Bank Reportಗಳ ಆಧಾರದ ಮೇಲೆ ಚರ್ಚೆಯನ್ನು ಮಾಡಿದ್ದಾರೆ. ಯಾವ ಯಾವ ರೀತಿಯಲ್ಲಿ ಇವತ್ತು ಸರ್ಕಾರ ಎಡವುತ್ತಿದೆ ಎಂಬ ಬಗ್ಗೆ ಕೆಲವು ರಿಪೋರ್ಟ್‌ಗಳನ್ನು quote ಮಾಡಿ ಚರ್ಚೆ ಮಾಡಿದ್ದಾರೆ. ಅದೇ World Bank Report ಏನಿದೆಯೋ ಅದರ ಆಧಾರದ ಮೇಲೆ ನಾನು ಕೂಡ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಏಕೆಂದರೆ ನಾನು ಈ ಸದನದಲ್ಲಿ ಅದೂ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತೇನೆಂದು ಅಂದು ನಾನು ತಿಳಿದುಕೊಂಡಿರಲಿಲ್ಲ. ನಾನು ಇನ್ನೂ ಹತ್ತು ವರ್ಷಗಳ ಕಾಲ ಕೊನೆಯ ಬೆಂಚ್‌ನಲ್ಲಿದ್ದುಕೊಂಡೇ ಕೆಲಸವನ್ನು ಮಾಡಬೇಕೆಂದು ಮನಸ್ಸಿನಲ್ಲಿ ಸಂಕಲ್ಪವನ್ನು ಮಾಡಿಕೊಂಡಿದ್ದವನು. ಅಂಥ ಒಂದು ಸಂದರ್ಭದಲ್ಲಿ ಕೆಲವೊಂದು ಆಕಸ್ಮಿಕ ಘಟನೆಗಳಿಂದ ಈ ಜಾಗದಲ್ಲಿ ಬಂದು ಕುಳಿತಿದ್ದೇನೆ. ಮುಖ್ಯಮಂತ್ರಿಯಾಗಿ ಇವತ್ತು ಉತ್ತರವನ್ನು ಕೊಡಬೇಕಾದಂಥ ಜವಾಬ್ದಾರಿಯುತ ಸ್ಥಾನದಲ್ಲಿ ಇಂದು ಕುಳಿತಿದ್ದೇನೆ.

ಇಲ್ಲಿಯವರೆವಿಗೂ ಹಲವಾರು ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆಯಾಗಿದೆ. ಚರ್ಚೆಯಲ್ಲಿ ಪ್ರತಿಯೊಬ್ಬರೂ ಕೂಡ ಅಕ್ಟೋಬರ್ 3ನೇ ತಾರೀಖಿನ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ. ಅಕ್ಟೋಬರ್ 3ನೇ ತಾರೀಖಿನಂದು ಏನಾಗಬಹುದು ಎಂದು ಈ ರಾಜ್ಯದ ಎಲ್ಲರಲ್ಲಿಯೂ ಒಂದು ರೀತಿಯ ಕುತೂಹಲ ಕೆರಳಿಸಿರತಕ್ಕಂಥ ಸಂದರ್ಭ ಏನಿದೆ, ಇವತ್ತು ಈ ಸ್ಥಾನದಿಂದ ಉತ್ತರವನ್ನು ಕೊಡಬೇಕಾದರೆ, ಈ ಸ್ಥಾನಕ್ಕೆ ನಾನು ಬರತಕ್ಕಂಥ ಸಂದರ್ಭದಲ್ಲಿ ನಡೆದಂಥ ಒಂದೆರಡು ಘಟನೆಗಳನ್ನು ಈ ಸಂದರ್ಭದಲ್ಲಿ ನೆನಸಿಕೊಳ್ಳುವುದಕ್ಕೆ ಬಯಸುತ್ತೇನೆ. ಯಾರೂ ಅನ್ಯಥಾ ಭಾವಿಸಿಕೊಳ್ಳುವುದು ಬೇಡ. ನಾನು ಈ ಒಂದು ಸ್ಥಾನಕ್ಕೆ ಬರಬೇಕೆಂದು ಹೇಳಿ ಇಲ್ಲಿರತಕ್ಕಂಥ ನಮ್ಮ ಪಕ್ಷದ ಹಲವಾರು ಜನ ನಮ್ಮ ಶಾಸಕ ಮಿತ್ರರುಗಳು ನನ್ನ ಮೇಲೆ ಒತ್ತಡವನ್ನು ತಂದಾಗ ಆ ಸಂದರ್ಭದಲ್ಲಿ ನಮ್ಮ ಶಾಸಕರ ಜೊತೆ ನಮ್ಮ ಹಿರಿಯ ನಾಯಕರಾಗಿರತಕ್ಕಂಥ ನಮ್ಮ ತಂದೆಯವರು, ನಮ್ಮ ಪಕ್ಷದ ನಾಯಕರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಇವತ್ತು ಈ ಸದನದಲ್ಲಿ ಹಲವಾರು ಹಿರಿಯ ಸದಸ್ಯರುಗಳು ಕುಳಿತಿದ್ದಾರೆ. ನಾನು ಈಗ ಹೇಳುವ ವಿಷಯದಲ್ಲಿ ಯಾವುದೇ ರೀತಿಯ ಸುಳ್ಳು ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. 'ನೀವೆಲ್ಲರೂ ಸೇರಿ ಕುಮಾರಸ್ವಾಮಿಯನ್ನು ಮುಖ್ಯಮಂತ್ರಿ ಮಾಡುವುದಕ್ಕೆ ಹೊರಟಿದ್ದೀರಿ, ಇವನು ನಿಜಕ್ಕೂ ಸದನದಲ್ಲಿ ಒಂದೆರಡು ನಿಮಿಷ ಇಲ್ಲಿ ಕುಳಿತಿರತಕ್ಕಂಥ ಅತಿರಥ ಘಟಾನುಘಟಿ ಗಳೇನಿದ್ದಾರೆ, ರಾಜಕಾರಣದಲ್ಲಿರತಕ್ಕಂಥ ಅನುಭವ, ರಾಜಕಾರಣ ದಲ್ಲಿರತಕ್ಕಂಥ ಅವರ ಸುದೀರ್ಘವಾದ ತಿಳುವಳಿಕೆಗಳೇನಿವೆ, ಅವರ ಮುಂದೆ ಇವನನ್ನು ಮುಖ್ಯಮಂತ್ರಿಯನ್ನಾಗಿ ಆರಿಸುವುದಕ್ಕೆ ಹೊರಟ್ಟಿದ್ದೀರಿ, ಇವನಿಗೆ ಸದನದಲ್ಲಿ ಎರಡು ನಿಮಿಷಗಳ ಕಾಲ ಸದನವನ್ನು ಎದುರಿಸುವುದಕ್ಕೆ ಸಾಧ್ಯವೇ ಎಂದು ಅವರು ನನ್ನ ವಿಷಯದಲ್ಲಿ ಛೇಡಿಸಿ ದುಃಖದಿಂದ ನಮ್ಮ ಶಾಸಕರ ಮಿತ್ರರ ಮುಂದೆ ಕೋಪೋದ್ರಿಕ್ತರಾಗಿ ಚರ್ಚೆಯನ್ನು ಮಾಡಿದರು. ನನಗೆ ಇವತ್ತು ಮನಸ್ಸಿನಲ್ಲಿ ಒಂದು ಆತ್ಮತೃಪ್ತಿ ಇದೆ. ಏನು ಅವತ್ತು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದರು, ಸದನವನ್ನು ಎರಡು ನಿಮಿಷಗಳ ಕಾಲ ಎದುರಿಸುವುದಕ್ಕೆ ಸಾಧ್ಯವಿಲ್ಲವೆಂದು ಅನುಮಾನವನ್ನು ಮತ್ತು ನಮ್ಮ ಶಾಸಕರು ತೆಗೆದುಕೊಂಡಂಥ ನಿರ್ಧಾರದ ಬಗ್ಗೆ ಅತ್ಯಂತ ಕಠೋರವಾಗಿ ಮಾಡಿದ್ದರೋ ಇವತ್ತು ಆ ಒಂದು ವಿಷಯದಲ್ಲಿ ಅಂದು ಪ್ರಸ್ತಾಪ ಮಾಡಿದಂಥ ನಾಯಕರಿಗೆ ಉತ್ತರ ಸಿಕ್ಕಿರಬಹುದು ಎಂದು ನನ್ನ ಮನಸ್ಸಿನಲ್ಲಿ ವಿಶ್ವಾಸವಿದೆ ಎಂದು

ಹೇಳಬಯಸುತ್ತೇನೆ. ಯಾವ ರೀತಿ ಸದನವನ್ನು ನಡೆಸಿದ್ದೇವೆ, ಯಾವ ರೀತಿ ಕಳೆದ ಹದಿನೆಂಟು ತಿಂಗಳುಗಳಲ್ಲಿ ಇಲ್ಲಿ ಯಾರು ಕುಳಿತಿದ್ದಾರೆ ಎಂದು ತಮಗೆ ಗೊತ್ತಿದೆ. ಮೊದಲನೆಯ ಸಾಲಿನಲ್ಲಿ ಕುಳಿತಿರತಕ್ಕಂಥ ಎಲ್ಲ ನಾಯಕರಲ್ಲಿ ಮಾನ್ಯ ಎಂ.ಪಿ.ಪ್ರಕಾಶ್ ಬಿಟ್ಟರೆ ಮಿಕ್ಕವರೆಲ್ಲರೂ ಮೊದಲನೆಯ ಬಾರಿಗೆ ಮಂತ್ರಿಮಂಡಲದಲ್ಲಿ ಸಚಿವರಾಗಿರತಕ್ಕಂಥವರು. ರೇವಣ್ಣನವರು ಹಿಂದೆ ಒಂದು ಬಾರಿ ಸಚಿವರು ಆಗಿದ್ದರು. ಅವರಿಬ್ಬರನ್ನು ಬಿಟ್ಟರೆ ಮಂತ್ರಿಮಂಡಲಕ್ಕೆ ನಾವೆಲ್ಲರೂ ಹೊಸಬರೇ. ಮಾನ್ಯ ಉದಾಸಿಯವರೂ ಕೂಡ ಹಿಂದೆ ಸಚಿವರಾಗಿದ್ದರು. ಎಲ್ಲರಲ್ಲಿಯೂ ಅನುಮಾನವಿತ್ತು. ನಿಜಕ್ಕೂ ಈ ಒಂದು ಮಂತ್ರಿಮಂಡಲ ಈ ರಾಜ್ಯದ ಜನರ ಪರವಾಗಿ ಕೆಲಸವನ್ನು ಮಾಡಬೇಕಾದರೆ ನಿಜಕ್ಕೂ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಾರೋ ಇಲ್ಲವೋ ಎನ್ನುವ ಅನುಮಾನಗಳೇನಿತ್ತು ಆ ಅನುಮಾನಗಳಿಗೆ ಬಹುಶಃ ಈ ಹದಿನೆಂಟು ತಿಂಗಳುಗಳಲ್ಲಿ ಈ ರಾಜ್ಯದ ಜನತೆಗೆ ಉತ್ತರ ಸಿಕ್ಕಿರಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸದನದ ಮೂಲಕ ರಾಜ್ಯದ ಜನತೆಗೆ ತಿಳಿಸಬಯಸುತ್ತೇನೆ. ನೀವು ಇಂದು financial discipline ಆಗಬಹುದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ, ನಾನು ಕೆಲವು ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಯಾವಾಗ ಈ ರಾಜ್ಯದಲ್ಲಿ financial discipline ಪ್ರಾರಂಭವಾಯಿತು? ನಮ್ಮ ರಮೇಶ್‌ಕುಮಾರ್‌ರವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರಿಗೆ ಒಳ್ಳೆಯ Compliments ಕೊಟ್ಟಿದ್ದಾರೆ. ನಾನೂ ಕೂಡ Compliments ಕೊಡುತ್ತೇನೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಇತ್ತೀಚಿನ ವರ್ಷಗಳಲ್ಲಿ ಅವರಿಗೆ 7 ಬಾರಿ ಈ ರಾಜ್ಯದ ಆಯವ್ಯಯವನ್ನು ಮಂಡನೆ ಮಾಡತಕ್ಕಂಥ ಅವಕಾಶ ಸಿಕ್ಕಿತ್ತು. ಬೇರೆ ಯಾರಿಗೂ ಈ ರೀತಿಯ ಅವಕಾಶ ಸಿಕ್ಕಿರಲಿಲ್ಲ. ಮಾನ್ಯ ಸಿದ್ದರಾಮಯ್ಯನವರು ಮಾತನಾಡತಕ್ಕಂಥ ಸಂದರ್ಭದಲ್ಲಿ financial discipline ತಂದಿರತಕ್ಕಂಥದ್ದು, ಈ ಸರ್ಕಾರ ಈ ರೀತಿಯ ಕೆಲಸವನ್ನು ಮಾಡುವುದಕ್ಕೆ ಎಲ್ಲಾ ರೀತಿಯಲ್ಲಿಯೂ ಹಣಕಾಸನ್ನು ಕ್ರೋಢೀಕರಿಸತಕ್ಕಂಥ ಒಂದು ಯೋಜನೆಯನ್ನು ತಂದಂಥ ಕೀರ್ತಿ ನನಗೆ ಮತ್ತು ಸನ್ಮಾನ್ಯ ಎಸ್.ಎಂ.ಕೃಷ್ಣಾರವರಿಗೆ ದೊರಕಬೇಕಾಗುತ್ತದೆ ಎನ್ನುವ ರೀತಿ ಅವರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅವರ ಅಭಿಪ್ರಾಯಕ್ಕೆ ನಾನೂ ಕೂಡ

ಸಹಮತವನ್ನು ವ್ಯಕ್ತ ಮಾಡುತ್ತೇನೆ. ಏಕೆಂದರೆ ಮಾನ್ಯ ಸಿದ್ದರಾಮಯ್ಯನವರು ಎರಡನೆಯ ಬಾರಿಗೆ ಧರ್ಮಸಿಂಗ್‌ರವರ ನಾಯಕತ್ವದಲ್ಲಿ ಹಣಕಾಸಿನ ಸಚಿವರಾಗಿ ಮಾಡಿರತಕ್ಕಂಥ ಕೆಲಸಗಳಿರಬಹುದು, ಮಾನ್ಯ ಕೃಷ್ಣಾರವರು ತಮ್ಮ ಆಡಳಿತದಲ್ಲಿ ತೆಗೆದುಕೊಂಡಂಥ ನಿರ್ಧಾರಗಳಿರಬಹುದು, ಇವತ್ತು ಹಣಕಾಸಿನ ಪರಿಸ್ಥಿತಿ ಸುಭದ್ರ ಸ್ಥಿತಿಗೆ ಬರತಕ್ಕಂಥದ್ದಕ್ಕೆ ಅವರು ಸಲ್ಲಿಸಿರುವಂಥ ಸೇವೆಯನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳತಕ್ಕಂಥದ್ದರಲ್ಲಿ ಹಿಂದೆ ಸರಿಯುವುದಿಲ್ಲ. ಆದರೆ ಈ ಒಂದು indiscipline ಯಾವಾಗ ಶುರುವಾಯಿತು ಎಂದು ಸ್ವಲ್ಪ ನಾವು ನೋಡಬೇಕಾಗುತ್ತದೆ. ಏಕೆಂದರೆ ನನಗೆ ಈ ಆರ್ಥಿಕ ಇಲಾಖೆಗೆ ಸಂಬಂಧಪಟ್ಟಂತೆ ಹೆಚ್ಚಿನ ಅನುಭವಗಳೇನೂ ಆಗಿಲ್ಲ. ನಾನು ಈ ಸಂದರ್ಭದಲ್ಲಿ ಚರ್ಚೆಯನ್ನು ಮಾಡಬೇಕಾದರೆ ನನಗೆ ಯಾವುದೇ ರೀತಿಯ ಅನುಭವಗಳು ಇಲ್ಲದೇ ಇದ್ದರೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ.

ಇವತ್ತು ಮೊದಲ ಬಾರಿಗೆ ಈ ರಾಜ್ಯದಲ್ಲಿ ಫೈನಾನ್ಸಿಯಲ್ ಇನ್ ಡಿಸಿಪ್ಲಿನ್ 1995-96ರಿಂದ ಆರಂಭವಾಯಿತು. ದೇಶಪಾಂಡೆಯವರು ಹೇಳಿದ ಹಾಗೆ, ರಾಮಕೃಷ್ಣ ಹೆಗ್ಡೆಯವರು ಇರಬಹುದು, ರಾಜಶೇಖರ ಮೂರ್ತಿಯವರಿರಬಹುದು, ವೀರೇಂದ್ರ ಪಾಟೀಲ್ ಇರಬಹುದು, ಘೋರ್ಪಡೆಯವರಿರಬಹುದು, ಹೀಗೆ ಹಲವಾರು ನಾಯಕರುಗಳು ಈ ರಾಜ್ಯದ ಹಣಕಾಸಿನ ಇಲಾಖೆಯನ್ನು ನಿರ್ವಹಣೆ ಮಾಡಿದ್ದಾರೆ, ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. 1995ಕ್ಕಿಂತ ಮುಂಚೆ ಆ ಸಂದರ್ಭದಲ್ಲಿ ಅವರ ಸೇವೆಗಳೇನಿವೆ, ಅವರು ತೆಗೆದುಕೊಂಡಿರುವ ಹಲವಾರು ನಿರ್ಧಾರಗಳು, ಇಲಾಖೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸುವಲ್ಲಿ ಅವರ ಕಾಣಿಕೆ ಏನಿವೆ, ಅವನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ. ಈ ಸರ್ಕಾರ ಮುಂದಿನ ದಿವಸಗಳಲ್ಲಿ ಫೈನಾನ್ಸಿಯಲ್ ಇನ್ ಡಿಸಿಪ್ಲಿನ್‌ಗೆ ಹೋಗತಕ್ಕಂಥ ರೀತಿಯಲ್ಲಿ ಹೆಜ್ಜೆಯನ್ನಿಟ್ಟಿದ್ದಾರೆಂದೇನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ನಾವು ಗಮನಹರಿಸಿದ್ದೇವೆ. ಆ ಬಗ್ಗೆ ಗಮನ ಹರಿಸುವುದಕ್ಕೆ ಕಾರಣ, ಹಿಂದೆ ತೆಗೆದುಕೊಂಡ ಹಲವಾರು ನಿರ್ಧಾರಗಳಿಂದ, ವಿಶ್ವಬ್ಯಾಂಕ್‌ನ ಮಾರ್ಗದರ್ಶನ ಹಾಗೂ ಅವರು ಕೊಟ್ಟಂಥ ಕೆಲವು ಕಾಮೆಂಟ್ಸ್‌ಗಳೇನಿದ್ದಾವೆ, ಅದರ ಆಧಾರದ ಮೇಲೆ ಮತ್ತೆ ಇದರ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ನಡೆಸುವ ದಿನಗಳೇನಿದ್ದಾವೆ, ಆ ದೃಷ್ಟಿಯಿಂದ ನಾನು ಇವತ್ತು ಈ ಸದನದ ಗಮನಕ್ಕೆ ತರಬೇಕೆಂದು ಬಯಸಿ

ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಯೇ ವಿನಹ, ಯಾರಿಗೆ ಆಗಲಿ ಈ ವಿಷಯದಲ್ಲಿ ತಪ್ಪು ಹೊರಿಸಕ್ಕಂಥ ವಿಷಯವಾಗಿ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಮ್ಮ ಎಲ್ಲಾ ಹಿರಿಯ ಸದಸ್ಯರುಗಳು ಈ ಫಿಸಿಕಲ್ ಪೊಸಿಷಿನ್ ಬಗ್ಗೆಯೇ ಏನು ಇಷ್ಟೆಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಆ ದೃಷ್ಟಿಯಿಂದಲೇ ನಾನು ಈ ವಿಷಯವನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ, 1995–96ನೇ ಇಸವಿಯಿಂದ ಈ ರಾಜ್ಯದಲ್ಲಿ ಸರ್ಕಾರದ ಆರ್ಥಿಕ ನಿರ್ವಹಣೆಗಳ ಬಗ್ಗೆ ವಿಶ್ವಬ್ಯಾಂಕ್‌ನ ಕಾಮೆಂಟ್ಸ್ ಇರಬಹುದು, ಈ ವಿಷಯಗಳ ಬಗ್ಗೆ ನಾನು 5–10 ನಿಮಿಷಗಳಲ್ಲಿ ಹೇಳುವುದಕ್ಕೆ ಪ್ರಯತ್ನಪಡುತ್ತೇನೆ. 1995–96 ರಿಂದ 2004–2005ರವರೆಗೆ ಈ ರಾಜ್ಯ ಹಣಕಾಸಿನ ಸಚಿವರಾಗಿ ಸನ್ಮಾನ್ಯ ಸಿದ್ದರಾಮಯ್ಯನವರು ಮತ್ತು ಎಸ್.ಎಂ.ಕೃಷ್ಣರವರು ಕೆಲಸ ಮಾಡಿದಂಥವರು. ವಿಶ್ವಬ್ಯಾಂಕ್‌ನ ಡಾಕ್ಯುಮೆಂಟ್ಸ್ ಬಗ್ಗೆ ದೇಶಪಾಂಡೆಯವರೆ, ತಾವು ಯಾವಾಗಲೂ ಚರ್ಚೆ ಮಾಡುತ್ತೀರಿ. ಆ ಒಂದು ಆಧಾರದ ಮೇಲೆ ಕೆಲವೊಂದು ವಿಷಯಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಬಜೆಟ್ ಅನ್ನು ಇಂಪ್ಲಿಮೆಂಟ್ ಮಾಡುವ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಯಾವ ರೀತಿಯಾಗಿ ಹೋಗಬೇಕೆಂದು ನಮಗೆ ಕೆಲವು ತಿಳುವಳಿಕೆಯನ್ನು ಮೂಡಿಸುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆ ಒಂದು ಬಜೆಟ್ ಇಂಪ್ಲಿಮೆಂಟ್ ಬಗ್ಗೆ 1996–97 ರಿಂದ 2002 ರವರೆಗೆ ಏನು ವಿಶ್ವಬ್ಯಾಂಕ್‌ನ ಕಾಮೆಂಟ್ಸ್ ಇದೆ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ:

> "The major factor underlying the State's poor record in implementing the budget is that the budget tends to be Unrealistic."

ಏಕೆಂದರೆ, ಈ ಬಜೆಟ್ ಮಂಡನೆ ಮಾಡುವ ವಿಷಯದಲ್ಲಿ ಏನು ತಮ್ಮ ಹೇಳಿಕೆಗಳಿವೆ, ಆ ದೃಷಿಯಿಂದಲೇ ಇವತ್ತು ಬಜೆಟ್ ಮಂಡನೆ ಮಾಡಬೇಕಾದರೆ ಯಾವುದೇ ರೀತಿಯ ಮುಂದಾಲೋಚನೆ ಇಲ್ಲದೇ ಕ್ರಮವನ್ನು ತೆಗೆದುಕೊಂಡಿಲ್ಲ ಎನ್ನುವ ದೃಷ್ಟಿಯಿಂದಲೇ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಇವತ್ತು ನಾನು ಈ ವಿಷಯಗಳನ್ನು ವಿಶ್ವಬ್ಯಾಂಕ್‌ನವರು ಕೊಟ್ಟಿರುವ ಆಧಾರ ಹಾಗೂ ಅಂಕಿ ಅಂಶಗಳ ಮೇಲೆ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಆ ಒಂದು ಸಂದರ್ಭದಲ್ಲಿ 8

ವರ್ಷಗಳ ಕಾಲ ಇನ್ ಡಿಸಿಪ್ಲಿನ್ ಪ್ರಾರಂಭವಾಯಿತು. ಇವತ್ತೇನು ನಮ್ಮ ಸಿದ್ದರಾಮಯ್ಯ ಮತ್ತು ಎಸ್. ಎಂ.ಕೃಷ್ಣರವರಿಗೆ ಈ ಕೀರ್ತಿ ಸಲ್ಲಬೇಕೆಂದೇನು ಹೇಳಿದ್ದಾರೆ, ನಾವೆಲ್ಲಾ ಹೊಸಬರಿದ್ದೇವೆ, 18 ತಿಂಗಳ ಆಳ್ವಿಕೆ ನಡೆಸಿದ್ದೇವೆ, ಅನುಭವವಿಲ್ಲದೇ ಇದ್ದರೂ, ನೀವು ಹಿಂದೆ ಎಡವಿದಂಥ ತಪ್ಪುಗಳಿಂದಾದ ಇನ್ ಡಿಸಿಪ್ಲೀನ್ ಆಗಬಾರದೆಂದೇನು ನೀವು ನಮಗೆ ಮಾರ್ಗದರ್ಶನ ಕೊಟ್ಟಿದ್ದೀರಿ, ಅದರ ಆಧಾರದ ಮೇಲೆ ನಾವು ಇವತ್ತು ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. Improper forecasting of resources ಎನ್ನುವುದರ ಬಗ್ಗೆ ವಿಶ್ವ ಬ್ಯಾಂಕ್‌ನ ಕಾಮೆಂಟ್ಸ್‌ಗಳೇನಿದ್ದಾವೆ, ಅದನ್ನು ಈ ಸಂದರ್ಭದಲ್ಲಿ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. "Over optimistic revenue forecast ಅವರು ಹೇಳುತ್ತಾರೆ:

> "Karnataka suffers from excessive revenue forecast. These are largely generated bottom up by the various tax departments. There is no central specialized capacity in the Finance Department to assess."

ಈ ಒಂದು ಸಂದರ್ಭದಲ್ಲಿ ಈ ರೆವಿನ್ಯೂ ರೆಸಿಟ್ ಏನಿದೆ, ನಾವು ಬಜೆಟ್‌ನಲ್ಲಿ ರಿಸೋರ್ಸ್ಸ್ ಪ್ರೊಜೆಕ್ಷನ್ ಬಗ್ಗೆ ಏನು ಪ್ರೊಜೆಕ್ಷನ್ ಮಾಡಿದ್ದೇವೆ, 1995 ರಿಂದ ಅವರು ಕೊಟ್ಟಿರುವ ಅಂಕಿ ಅಂಶಗಳನ್ನು ತೆಗೆದಾಗ 85% ರೀಚ್ ಆಗದಿರುವ ವಾತಾವರಣ ಹಿಂದಿನ ದಿನಗಳಲ್ಲಿ ಇತ್ತು. ಅದನ್ನು ಸರಿಪಡಿಸುವುದಕ್ಕೆ ನಂತರ ಏನು ಪ್ರಯತ್ನಗಳಾಗಿದ್ದಾವೆ, ಈ 18 ತಿಂಗಳಲ್ಲಿ ನಾವು ಎರಡು ಆಯವ್ಯಯಗಳನ್ನು ಮಂಡನೆ ಮಾಡುವ ಸಂದರ್ಭದಲ್ಲಿ ನಾವು ಆ ಒಂದು ವ್ಯಾಪ್ತಿಯಲ್ಲೇ ಕೆಲಸವನ್ನು ಮಾಡಿದ್ದೇವೆ. ಇವತ್ತು ನಾವು ರೆವಿನ್ಯೂ ಅನ್ನು ಕ್ರೋಢೀಕರಿಸುವ ಸಂದರ್ಭದಲ್ಲಿ ನಮ್ಮದೇ ರೀತಿಯ ಗುರಿಯನ್ನೇನು ಇಟ್ಟುಕೊಂಡಿದ್ದೇವೆ, ಆ ಗುರಿಯನ್ನು ಮುಟ್ಟುವಲ್ಲಿ ನಾವು ಹಿಂದೆ ಉಳಿದಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಮಾತನಾಡುತ್ತಾ ಕಳೆದ 3 ತಿಂಗಳ ರೆವಿನ್ಯೂ ಕಲೆಕ್ಷನ್ ಬಗ್ಗೆ ಚರ್ಚೆ ಮಾಡಿದರು. ನಾನು ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ, ಈ ಮೂರು

ತಿಂಗಳನ್ನು ಲೀನ್ ಪೀರಿಯಡ್ ಎಂದು ನಾವು ಕನ್ಸಿಡರ್ ಮಾಡಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಕರ್ನಾಟಕ ರಾಜ್ಯದ ಹಣಕಾಸಿನ ಪರಿಸ್ಥಿತಿ ಕೆಡುವುದಕ್ಕೆ ಆರಂಭವಾದುದು 1997, 1998ರಿಂದ ಈಚೆಗೆ. ಏಕೆ ಹಾಗೆ ಆಯಿತೆಂದರೆ, ಡೆಟ್ ಬರ್ಡನ್ ಜಾಸ್ತಿಯಾಯಿತು. ಕೇಂದ್ರ ಸರ್ಕಾರ 5ನೇ ವೇತನ ಆಯೋಗದ ವರದಿಯನ್ನು ಜಾರಿ ಮಾಡಿದ ಮೇಲೆ, ಕರ್ನಾಟದಲ್ಲೂ ಕೂಡ ಅದನ್ನು ಮಾಡಬೇಕಾಗಿ ಬಂತು. ಇಂಟೆರಿಂ ರಿಲೀಫ್, ಅವೆರಡು ಸೇರಿ 1300 ಕೋಟಿ ರೂಪಾಯಿಗಳ ಬರ್ಡನ್ ಇದ್ದಕ್ಕಿದ್ದಂತೆ ಜಾಸ್ತಿಯಾಯಿತು, ನಾವು ಇಂಟೆರಿಂ ರಿಲೀಫ್ ಕೊಟ್ಟೆವು, ಅದಾದ ಮೇಲೆ ಅಂತಿಮದ್ದನ್ನು ಕೊಟ್ಟೆವು, more than 1100 crores ಜಾಸ್ತಿಯಾಯಿತು. 1997–98 ರವರೆಗೂ ರೆವಿನ್ಯೂ ಡೆಫಿಸಿಟ್ ಆಗಿರಲಿಲ್ಲ, ಆದಾದ ಮೇಲೆ ರೆವಿನ್ಯೂ ಡೆಫಿಸಿಟ್ ಆಗುವುದಕ್ಕೆ ಶುರುವಾಯಿತು. ನಾನು ಇವರಿಗೆ ಏತಕ್ಕೆ ಹೇಳಿದೆ ಎಂದರೆ, ಮೀಡಿಯಂ ಫಿಸಿಕಲ್ ಪ್ಲಾನ್ ಅನ್ನು ನೀವೇ ಕೊಟ್ಟಿರುವುದು. ನೀವು ಕೊಟ್ಟಿರುವ ಟ್ಯಾಕ್ಸ್ ರೆಸಿಟ್ಸ್ ನೋಟ್, 2002–03 ರಲ್ಲೆ ಟ್ಯಾಕ್ಸ್ ಗ್ರೋಥ್ 22% ಇದೆ, 2004–05 ರಲ್ಲಿ 30% ಆಗಿದೆ, 2006–07ರಲ್ಲಿ 22% ಗೆ ಬಂದಿದೆ, ಮತ್ತೆ ಅದು ಈಗ 14.84% ಬಂದಿದೆ. ಗ್ರಾಫ್ ಕಡಿಮೆಯಾಗುತ್ತಿದೆ ಎಂದು ಹೇಳುತ್ತಿದ್ದೇನೆಯೇ ಹೊರತು, 3 ತಿಂಗಳೇನಿದೆ, ಅದು ಲೀನ್ ಪೀರಿಯಡ್ ಅಲ್ಲ. ಕಳೆದ ವರ್ಷವೇ ಪೂರ್ಣ ಕಡಿಮೆಯಾಗಿದೆ. 2004–05ರಲ್ಲಿ 30% ನಿಂದ 2005–06ರಲ್ಲಿ 22% ಬಂದು ಮತ್ತೆ 2006–07ಕ್ಕೆ 14.84% ಬಂದಿದೆ. ಆದುದರಿಂದ ಟ್ಯಾಕ್ಸ್ ರೆಸಿಟ್ಸ್ ಕಡಿಮೆಯಾಗಿದೆ, ಹೆಚ್ಚಾಗಿಲ್ಲ. 30% ನಿಂದ 14.84% ಇಳಿದಿದೆ, ಅದು ಕಡಿಮೆಯಾಗಿದೆ ಎಂದು ಹೇಳಿದ್ದು. Development Expenditure, 2003–04ನಲ್ಲಿ ಇದರಲ್ಲಿ ಹಣ ಖರ್ಚಾದದ್ದು 56.72%, 2005–06ಕ್ಕೆ 62.95%, ಕಳೆದ ವರ್ಷ 62.95 ರಿಂದ 63%ಗೆ ಹೋಗಿದೆ. What is the growth? Negligible growth. ಆದುದರಿಂದ Development Expenditureಗೆ ಹಣ ಕಡಿಮೆಯಾಗುತ್ತಿದೆ, Non-development Expenditure ಮತ್ತೆ ಜಾಸ್ತಿಯಾಗುತ್ತಿದೆ, ರೆವಿನ್ಯೂ ಕಡಿಮೆಯಾಗುತ್ತಿದೆ, 2004–05ರಲ್ಲಿ ಪ್ಲಾನ್ ಮತ್ತೆ ನಾನ್ ಪ್ಲಾನ್‌ಗೆ 25,000 ಕೋಟಿ, 2005–06ರಲ್ಲಿ 23,000 ಕೋಟಿ ಚಿಲ್ಲರೆ, ಮತ್ತೆ ಕಳೆದ ವರ್ಷ 28,000

ಚಿಲ್ಲರೆ ಕೋಟಿ ಜಾಸ್ತಿಯಾಗಿದೆ, ನಾನ್ ಪ್ಲಾನ್ ವೆಚ್ಚ ಹೆಚ್ಚಾಗುತ್ತಿದೆ, Non-development Expenditure ಕಡಿಮೆಯಾಗುತ್ತಿದೆ. ಮತ್ತೆ Non-development Expenditure ಕಡಿಮೆಯಾಗುತ್ತಿದೆ. Receipts ಕೂಡ ಕಡಿಮೆಯಾಗುತ್ತಿದೆ. ಹಾಗಾಗಿ Deviation ಆಗುತ್ತಿದೆ.

(2-00 PM)

Reforms ಮಾಡಿ ಏನು ಸುಸ್ಥಿತಿಗೆ ಬಂದಿತ್ತು. ಅದು ಮತ್ತೆ ದಾರಿ ತಪ್ಪಬಾರದು ಎಂದು ಹೇಳಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿದ್ದರಾಮಯ್ಯನವರು ಹೇಳಿದ ಹಾಗೆ ವಾಣಿಜ್ಯ ತೆರಿಗೆಯಲ್ಲಿ growth ಎಷ್ಟು ಕಡಿಮೆ ಆಗಿದೆ ಎನ್ನುವ ವಿಚಾರವನ್ನು ಅವರು ಹೇಳಿದ್ದಾರೆ. ನೀವು ಕೊಟ್ಟಿರುವ ಮಾಹಿತಿಯಲ್ಲಿ 2004–05ರಲ್ಲಿ almost 50%, growth rate 30% ನಿಂದ 14% ಗೆ ಇಳಿದಿದೆ. ಇದಾದ ಮೇಲೆ Non-development Expenditure 2005–06ನೇ ಸಾಲಿನಲ್ಲಿ 11,620 ಕೋಟಿ ಇದ್ದರೆ, 2006–07ನೇ ಸಾಲಿನಲ್ಲಿ 14,240 ಕೋಟಿ ಆಗಿದೆ. 2,620 ಕೋಟಿ Non-development Expenditure ಜಾಸ್ತಿ ಮಾಡಿದರು. ಅದರ ಜೊತೆಗೆ ವಿತ್ತೀಯ ಕೊರತೆ fiscal deficit, ದಯಮಾಡಿ ತಾವು fiscal deficit ನೋಡಬೇಕಾಗುತ್ತದೆ. 2004–05ರಲ್ಲಿ fiscal deficit, 3,253 ಕೋಟಿ ಇದ್ದರೆ, 2005–06ರಲ್ಲಿ 2,878 ಕೋಟಿ ಇದೆ, 2006–07ರಲ್ಲಿ 5,228 ಕೋಟಿ. ನೀವು ಹೇಳಬಹುದು, GSDP ಯಿಂದ 3% ನಾವು ಕೆಳಗಿದ್ದೇವೆಂದು ಹೇಳಿದರೂ ಕೂಡ, ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳು ಮತ್ತು ಸಿದ್ದರಾಮಯ್ಯನವರು ಅರ್ಥಸಚಿವರಾಗಿದ್ದ ಕಾಲದಲ್ಲಿ GSDP 2.85% ಗಿಂತ ಕೆಳಗೆ ಹೋಯಿತು. ಇದರಿಂದ ನಿಮಗೆ ಕೇಂದ್ರ ಸರ್ಕಾರದಲ್ಲಿ incentives ಬಂದಿತ್ತು. Evalutionನಲ್ಲಿ ತಾವು ಸ್ಪಷ್ಟವಾಗಿ ಹೇಳಿದ್ದೀರಿ. The trend of the fiscal deficit ಬಗ್ಗೆ ತಾವು ಇಲ್ಲಿ ಏನು ಹೇಳಿದ್ದೀರಿ, ಇದರಲ್ಲಿ ವಿತ್ತೀಯ ಕೊರತೆ ಹೆಚ್ಚಾಗುತ್ತಿದೆ. 3% ಗಿಂತ ಹೆಚ್ಚು ಹೋಗುವಂತಹ ಸಂದರ್ಭ ಇದೆ. ಇದನ್ನು ತಾವು ದಯಮಾಡಿ ಗಮನಹರಿಸಿ. ಬರೀ Commercial Tax ಮಾತ್ರ ಕಡಿಮೆ ಆಗಿಲ್ಲ. ಮೋಟಾರು ವಾಹನ ತೆರಿಗೆ 2004–05ರಲ್ಲಿ the

growth rate was 22.86%. In 2005-06 the growth rate came down to 17.8%. 2006-07 ರಲ್ಲಿ 10.97% growth rateನಲ್ಲಿ ಕೂಡ ಕಡಿಮೆ ಆಗಿದೆ, ವಾಣಿಜ್ಯ ತೆರಿಗೆಯಲ್ಲಿ ಕಡಿಮೆ ಆಗಿದೆ, stamp duty ಯಲ್ಲಿ ಕೂಡ ಬಹಳ ಕಡಿಮೆ ಆಗಿದೆ. ಈ ವರ್ಷ 2004-05 ರಲ್ಲಿ 24% ಇದ್ದುದು ಈಗ 10% growth rate ಆಗಿದೆ. ಇದರ ಅರ್ಥ ವಾಣಿಜ್ಯ ತೆರಿಗೆ stamp, ಮೋಟಾರು ವಾಹನ ತೆರಿಗೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ತೆರಿಗೆಯನ್ನು collect ಮಾಡುವುದಕ್ಕೆ ಆಗಲಿಲ್ಲ. ಅದರ ಜೊತೆಗೆ fiscal deficit ಮೂರು ವರ್ಷದಲ್ಲಿ ಸುಮಾರು 2200 ಕೋಟಿ ಜಾಸ್ತಿಯಾಗಿದೆ. ಅದಕ್ಕೆ ಸ್ವಲ್ಪ financial indiscipline ಆಗುತ್ತಿದೆ ಎಂದು ಮೇಲ್ನೋಟಕ್ಕೆ ಕಾಣುತ್ತಿದೆ.

ಶ್ರೀ **ಹೆಚ್.ಡಿ.ಕುಮಾರಸ್ವಾಮಿ** : ಮಾನ್ಯ ಉಪಾಧ್ಯಕ್ಷರೆ, ತೆರಿಗೆ ಆದಾಯದಲ್ಲಿ ಯಾವುದೇ ರೀತಿಯಲ್ಲಿ ಕಡಿಮೆ ಆಗಿಲ್ಲ. 2003-04 ರಲ್ಲಿ ತೆರಿಗೆ ಆದಾಯ ಬಂದಿರತಕ್ಕಂಥದ್ದು 12,570 ಕೋಟಿ. ಸರ್ಕಾರದಲ್ಲಿ ಯಾವುದೇ ರೀತಿಯಲ್ಲಿ ತೆರಿಗೆ ಆದಾಯ ಕಡಿಮೆ ಆಗಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ **ಬಸವರಾಜ ರಾಯರೆಡ್ಡಿ** : Growth rate has come down.

ಶ್ರೀ **ಹೆಚ್.ಡಿ.ಕುಮಾರಸ್ವಾಮಿ** : ತೆರಿಗೆ ಆದಾಯ ಕಡಿಮೆ ಆಗಿಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ **ಸಿದ್ದರಾಮಯ್ಯ** : ತೆರಿಗೆ ಗ್ರೋಥ್ ಆಗಿದೆ. What is the percentage of growth? ಅರ್ಥ ಸಚಿವರು ಮೊನ್ನೆ ಅಸೆಂಬ್ಲಿಯಲ್ಲಿ ಕೊಟ್ಟಿರುವ ಟೇಬಲ್. Commercial Taxes 2002-03ರಲ್ಲಿ 3.85% growth. 2003-04ರಲ್ಲಿ 22.49% growth. 2004-05ರಲ್ಲಿ 30.05% growth, 2005-06ರಲ್ಲಿ 22.87% growth. 2006-07ರಲ್ಲಿ 14.8% growth. 30% ಕಡಿಮೆ ಆಗಿದೆ. That means to say 15% growth ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. The question is compared to previous years, 2004-05. 2005-06,ಕ್ಕೆ ಕಂಪೇರ್ ಮಾಡಿದರೆ, 2006-07ರಲ್ಲಿ percentage-wise it has come down. ತಾವು ಯಾವಾಗಲೂ ಕಂಪೇರ್ ಮಾಡುವುದು ಯಾವಾಗ 30,000 ಕೋಟಿ ರೂ.

ಬಂದಿದ್ದರೆ, ಈ ವರ್ಷ 30,000 ಕೋಟಿಯಲ್ಲಿ ಎಷ್ಟು ಪರ್ಸೆಂಟ್ ಬಂದಿದೆ ಎಂದು growth rate ನೋಡುತ್ತೇವೆ.

ಶ್ರೀ ಎಂ.ಪಿ.ಪ್ರಕಾಶ್ : ನೀವು ಹೇಳತಕ್ಕಂಥದ್ದು, growth rate ಕಡಿಮೆ ಆಗಿದೆ ಎನ್ನತಕ್ಕಂಥದ್ದಕ್ಕೆ ಅನೇಕ ಕಾರಣಗಳು ಇವೆ. ಆದರೆ ಅವೆಲ್ಲಾ percentage ಲೆಕ್ಕಕ್ಕೆ ತೆಗೆದುಕೊಳ್ಳಬಾರದು.

ಶ್ರೀ ಆರ್.ವಿ.ದೇಶಪಾಂಡೆ : ನಿಮ್ಮ expenditure receipt ಇದ್ದಾಗ What are you going to do? Fiscal Responsibility Act ಪ್ರಕಾರ.....

ಶ್ರೀ ಎಂ.ಪಿ.ಪ್ರಕಾಶ್ : ಬೇರೆ ಬೇರೆ ಕಾರಣಗಳು ಪರ್ಸೆಂಟೇಜ್‌ನಲ್ಲಿ ವ್ಯತ್ಯಾಸಗಳು ಮಾಡಿರುತ್ತವೆ.

ಶ್ರೀ ಸಿದ್ದರಾಮಯ್ಯ : ಪರ್ಸೆಂಟೇಜ್ ಎಂದರೆ ಏನು, ಕಳೆದ ವರ್ಷ Commercial tax ಎಷ್ಟು ಬಂದಿತ್ತು, ಈ ವರ್ಷ ಎಷ್ಟು ಬಂದಿದೆ, What is the growth ಎಂದು ನೀವೇ ಕೊಟ್ಟಿದ್ದೀರಿ. ಅದರಲ್ಲಿರುವ ಅಂಕಿ ಅಂಶಗಳು ತಪ್ಪಾ ಅದನ್ನು ನಂಬಬಾರದಾ?

ಶ್ರೀ ಎಂ.ಪಿ.ಪ್ರಕಾಶ್ : ಸರಾಸರಿ ಲೆಕ್ಕದಲ್ಲಿ ತೆಗೆದುಕೊಂಡಾಗ ಕಡಿಮೆ ಆಗಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ, ಕೊನೆಯದಾಗಿ clarification ಕೇಳಲಿ. ಮಧ್ಯೆ ಮಧ್ಯೆ interruptions ಬೇಡ. ನೀವು percentage of growth ಬಗ್ಗೆ ನೀವು ಚರ್ಚೆ ಮಾಡುತ್ತಿದ್ದೀರಿ, ಇದಕ್ಕೆ ಮೂಲ ಕಾರಣ VAT introduction ಆದ ನಂತರ ಈ ಸಮಸ್ಯೆ ಉದ್ಭವವಾಗಿದೆ.

ಶ್ರೀ ಆರ್.ವಿ.ದೇಶಪಾಂಡೆ : 100% compensate ಮಾಡಿಕೊಂಡು ಮಾಡುತ್ತಾರಾ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಆ ದೃಷ್ಟಿಯಿಂದಲೇ ತಾವು ಪರ್ಸೆಂಟೇಜ್ ವಿಷಯವನ್ನು ಏನು ಹೇಳುತ್ತಿದ್ದೀರಿ, ಅದಕ್ಕಾಗಿ ನಾನು ಹೇಳುವುದು. ಈ ಸರ್ಕಾರದಿಂದ ಸ್ವೇಚ್ಛಾಚಾರವಾಗಿ ಹಣವನ್ನು ಕೊಡುತ್ತಿರ-ತಕ್ಕಂಥಹ ವಿಷಯದಲ್ಲಿ ಕೆಲವೊಂದು ಅಲೋಕೇಷನ್ ಮಾಡುತ್ತಿರುವ ಬಗ್ಗೆ ಚರ್ಚೆ ಮಾಡುತ್ತೇನೆ. ಕೆಲವು ಇಲಾಖೆಗಳಲ್ಲಿ ಸರಿಯಾದ ರೀತಿಯಲ್ಲಿ

ಹಣವನ್ನು ಕೊಟ್ಟಿಲ್ಲ ಎಂದು ಪ್ರಸ್ತಾಪ ಮಾಡುತ್ತಿದ್ದಾರೆ, ನಮ್ಮ ಸರ್ಕಾರ ಬರುವುದಕ್ಕಿಂತ ಮುಂಚೆ ಶಹಭಾಷ್‌ಗಿರಿ ಪಡೆದುಕೊಂಡಿದ್ದಾರೆ. ನಮ್ಮ World Bank report ಪ್ರಕಾರ ಸುಮಾರು 625 ಕೋಟಿ ರೂಪಾಯಿಯವರೆಗೆ PWD ಮತ್ತು Irrigation department ನಲ್ಲಿ LOC pending ಉಳಿಸಿದ್ದರು. ಹಿಂದಿನ ಸರ್ಕಾರಗಳು ಯಾವ ಯಾವ ರೀತಿ LOC ಗಳನ್ನು ಕೊಡುತ್ತಿದ್ದರು ಎಂಬ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ನಮ್ಮ ಸರ್ಕಾರ ಯಾವ ರೀತಿ ನಡೆದುಕೊಳ್ಳುತ್ತಿದೆ ಎಂಬುದನ್ನು ಈ ಸಂದರ್ಭದಲ್ಲಿ ನಾನು ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಯಾವುದೇ ರೀತಿಯ LOC ಗಳನ್ನು ಉಳಿಸಿಕೊಳ್ಳತಕ್ಕಂತಹ ಕೆಲಸ ಮಾಡಿಲ್ಲ. ಇವತ್ತು ಸರ್ಕಾರದಲ್ಲಿ ಏನು ಸಿದ್ದರಾಮಯ್ಯನವರು ಹೇಳುತ್ತಿದ್ದಾರೆ, ಇವತ್ತು ಬೆಳಿಗ್ಗೆ ಮಾನ್ಯ ಧರ್ಮಸಿಂಗ್ ರವರು ಹೇಳುತ್ತಿದ್ದರು, Irrigationಗೆ ಕಡಿಮೆ ಹಣ ಕೊಡುತ್ತಿದ್ದೀರಿ ಎಂದು ಹೇಳಿದರು. ನೀವು non-plan expenditure ವಿಷಯದಲ್ಲಿ ಹೇಳುತ್ತಿದ್ದೀರಿ, Irrigationಗೆ ನಾವು ಹಣವನ್ನು ಕೊಟ್ಟಿರತಕ್ಕಂಥಾದ್ದು ಯಾವುದೇ ಕಾರಣಕ್ಕೂ ಕಡಿಮೆ ಮಾಡಿಲ್ಲವೆಂದು ಸ್ಪಷ್ಟೀಕರಣ ಕೊಡುತ್ತೇನೆ. ಅವರು ಉತ್ತರ ಕೊಡಬೇಕಾದರೆ ಅಂಕಿ ಅಂಶಗಳನ್ನು ಕೊಡುತ್ತಾರೆ. ಸಾಲವನ್ನು ತೀರಿಸಕ್ಕಂತಹ ಸಂದರ್ಭದಲ್ಲಿ ಯಾವುದೇ ರೀತಿಯಲ್ಲಿ ಸೆಪರೇಟಾಗಿ ಇಟ್ಟಿದ್ದೇವೆ. Non-Plan ನಲ್ಲಿ ಏನು ಹಣವನ್ನು ಬಿಡುಗಡೆ ಮಾಡಿದ್ದೇವೆ, ಇದನ್ನು ತೆಗೆದುಕೊಂಡಾಗ ಯಾವುದೇ ರೀತಿ ನಾವು Irrigation Department ಗೆ ಸಂಬಂಧಪಟ್ಟ ಹಾಗೆ ಹಣವನ್ನು ಕಡಿಮೆ ಕೊಟ್ಟಿಲ್ಲವೆಂದು ಈ ಸಂದರ್ಭದಲ್ಲಿ ಸ್ಪಷ್ಟೀಕರಣ ಕೊಡುವುದಕ್ಕೆ ಬಯಸುತ್ತೇನೆ. Off-budget borrowingನಲ್ಲಿ ಏನು fiscal defict ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಅದರಲ್ಲಿ 3%ಗೆ ನಿಲ್ಲಿಸಬೇಕೆಂಬ guidelines ಏನು ಇಟ್ಟಿದ್ದೇವೆ, 2.5%ಗೆ ಇಷ್ಟೆಲ್ಲಾ ನಾವು ಕೆಲಸಗಳನ್ನು ಮಾಡಿದ್ದರೂ, ಇಷ್ಟೆಲ್ಲಾ ಅಭಿವೃದ್ಧಿಗೆ ಕಡೆಗೆ ಗಮನ ಕೊಟ್ಟಿದ್ದರೂ fiscal defictನ್ನು 2.5% ಗೆ ಇಡತಕ್ಕಂಥದ್ದರಲ್ಲಿ ಯಶಸ್ವಿಯಾಗಿದ್ದೇವೆ ಎನ್ನುವುದನ್ನು ನಮ್ಮ ಹಣಕಾಸಿನ ಸಚಿವರು ಅವರು ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಹೇಳುತ್ತಾರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ಒಂದು budget borrowing ವಿಷಯದಲ್ಲಿ

1999–2000 ಮತ್ತು 2004–05ನಲ್ಲಿ ತಾವು ಏನು ಹೇಳುತ್ತಿದ್ದೀರಿ, off-budget borrowing SPVsನಲ್ಲಿ fiscal deficit ಏನಾದರೂ ಲೆಕ್ಕ ಹಾಕಲಿಕ್ಕೆ ಹೋದರೆ, ಅವತ್ತಿನ ಸಂದರ್ಭದಲ್ಲಿ 5% fiscal deficit ಇತ್ತು, ಅದು ಇನ್ನು ಹೆಚ್ಚಿಗೆ ಆಗತಕ್ಕಂಥಾದ್ದು ನಾವು ಕಾಣುತ್ತಿದ್ದೇವೆ, ಇವತ್ತು SPVs ನಲ್ಲಿ ಏನು borrowings ಇವೆ, ಸಾಲವನ್ನು ತೀರಿಸತಕ್ಕಂತಹ ಕೆಲಸವನ್ನು ಮಾಡುತ್ತಾ ನಾವು ಇವತ್ತು ಅದನ್ನು 2.5%ಗೆ ನಿಲ್ಲಿಸತಕ್ಕಂತಹ ಕೆಲಸವನ್ನು ನಾವು ಏನು ಮಾಡಿದ್ದೇವೆ, ಈ ವಿಷಯವನ್ನು ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, Off-budget borrowings were started in the year 1996. ಕೃಷ್ಣಾ ಭಾಗ್ಯ ಜಲ ನಿಗಮ ಪ್ರಾರಂಭವಾದಾಗಿನಿಂದ ಇದೂ ಪ್ರಾರಂಭವಾಯಿತು. 1996–97 ರಿಂದ ಈ ರೀತಿ ಹೊರಗಡೆಯಿಂದ ಸಾಲ ತೆಗೆದುಕೊಳ್ಳುವುದು ಶುರುವಾಯಿತು. ಆಗ 18% interestಗೆ ಸಾಲವನ್ನು ತೆಗೆದುಕೊಳ್ಳುತ್ತಿದ್ದೆವು. ಅವತ್ತಿನಿಂದ ಅದು ಪ್ರಾರಂಭವಾದ ಮೇಲೆ, 2000ರಲ್ಲಿ ಕರ್ನಾಟಕ ನೀರಾವರಿ ನಿಗಮವಾಯಿತು, ನಂತರ ಕಾವೇರಿ ನೀರಾವರಿ ನಿಗಮ ಪ್ರಾರಂಭವಾಯಿತು. ಇದಕ್ಕೆಲ್ಲಾ off-budget borrowings ಅನ್ನೇ ಮಾಡುತ್ತಿದ್ದೇವೆ. ಅದನ್ನೇನೂ ಪೂರ್ಣವಾಗಿ ನಾವು ನಿಲ್ಲಿಸಿಲ್ಲ. ಕೆಲವೊಂದು budgetary support ಕೂಡ ತೆಗೆದುಕೊಂಡು ಮಾಡುತ್ತಿದ್ದೇವೆ. ಆದರೆ ಅದು ಶುರುವಾದುದು ಆಗಿನಿಂದಲೇ. ನಾವು off-budget borrowings ಅನ್ನು ಕಡಿಮೆ ಮಾಡಬೇಕು, budgetary supportನಿಂದ ಅದನ್ನು ಹೆಚ್ಚು fulfill ಮಾಡಬೇಕು ಎನ್ನುವುದು ಕೂಡ ಪ್ರಾರಂಭವಾಯಿತು. ಅದನ್ನು 2008ಕ್ಕೆ ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಅಥವಾ ನಿಲ್ಲಿಸಬೇಕೆಂದು ಗುರಿ ಇಟ್ಟುಕೊಳ್ಳಲಾಗಿದೆ. 2004–05ರಲ್ಲೇ ಸಾಕಷ್ಟು off-budget borrowings ಅನ್ನು ಕಡಿಮೆ ಮಾಡಿ, budgetary supportನಿಂದಲೇ ಹಣ ಕೊಡತಕ್ಕಂತದ್ದು ಪ್ರಾರಂಭವಾಯಿತು. ಅದು ಈಗಿನಿಂದ ಪ್ರಾರಂಭವಾದುದಲ್ಲ.

ಶ್ರೀ ಎಂ.ಪಿ.ಪ್ರಕಾಶ್ : Rate of interest ನಂತರ ಕಡಿಮೆಯಾಯಿತು.

ಶ್ರೀ ಸಿದ್ದರಾಮಯ್ಯ : ಅದಕ್ಕಾಗಿಯೇ 2600 ಕೋಟಿ ರೂ.ಗಳ debt swamping scheme ಬಂದ ಮೇಲೆ ಕರ್ನಾಟಕಕ್ಕೆ 2000 ಕೋಟಿ ರೂ.ಗಳು

ಉಳಿತಾಯವಾಯಿತು. ಹಾಗಾಗಿಯೇ 968 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಕಡಿಮೆ ಬಡ್ಡಿ ದರಕ್ಕೆ replace ಮಾಡಿ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಯಿತು. ಅದನ್ನೇ ನಾವು finance management ಎಂದು ಹೇಳುತ್ತೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ವಿಷಯದಲ್ಲಿ ಇವತ್ತು ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ನಾವು ಕೆಲಸ ಮಾಡುತ್ತಿದ್ದೇವೆ ಎನ್ನುವುದನ್ನು ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ನಾವು financial indisciplineಗೆ ಹೆಜ್ಜೆ ಇಡುತ್ತಿಲ್ಲ ಎಂದು ಸ್ಪಷ್ಟೀಕರಣ ಕೊಡಲಿಕ್ಕೋಸ್ಕರ ನಾನು ಈ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು 1997–98ರಲ್ಲಿ Pay Commission Report ಜಾರಿಗೆ ತಂದಾಗ ನೌಕರರಿಗೆ ಶೇಕಡ 7ರಷ್ಟು ವೇತನ ಹೆಚ್ಚಳವನ್ನು ಮಾಡಿದಿರಿ ಎಂದು ನನ್ನ ಗಮನಕ್ಕೆ ಬಂದಿದೆ. ಆಗ ನೌಕರರಿಗೆ over all 7% ವೇತನ ಹೆಚ್ಚಳವಾಯಿತು ಎಂದು ನನ್ನ ತಲೆಗೆ ಆ ವಿಷಯವನ್ನು ತುಂಬಿರುವವರು ಹೇಳಿದ್ದಾರೆ. ನಾನು ಸಂಪೂರ್ಣವಾಗಿ ಆ ವಿಷಯದ depthಗೆ ಹೋಗಿಲ್ಲ. ಈ ಸಲ Pay Commission Report ಅನ್ನು ನಾವು ಯಾವ ರೀತಿ ಜಾರಿಗೆ ತಂದಿದ್ದೇವೆ ಎಂದರೆ, ಈ ವಿಷಯದಲ್ಲಿ ನಾವು ಸರ್ಕಾರಿ ನೌಕರರಿಗೆ ಶೇಕಡ 20% ವರೆಗೆ ವೇತನ ಹೆಚ್ಚಳವನ್ನು ಬಜೆಟ್‌ನಲ್ಲೇ ಕೊಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಇವತ್ತು ತಾವು ಈ ವಿಷಯಕ್ಕೆ ಏನು ಹೇಳುತ್ತೀರೋ ಗೊತ್ತಿಲ್ಲ. 20% ಅನ್ನು ನಾವು ತಕ್ಷಣವೇ ತೀರ್ಮಾನ ಮಾಡಿಕೊಟ್ಟೆವು. ಯಾವುದೇ ಧರಣಿಗೆ ಅವಕಾಶ ಕೊಡದೆ, ಸರ್ಕಾರಿ ನೌಕರರು ಪ್ರತಿಭಟನೆಯನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡದೆ ವೇತನ ಆಯೋಗದ ಶಿಫಾರಸ್ಸುಗಳನ್ನು ನಾವು ಜಾರಿಗೆ ತಂದೆವು. ನಾನು ನಮ್ಮ ಹಣಕಾಸಿನ ಸಚಿವರಿಗೆ ಮತ್ತು ನಮ್ಮ ಅಧಿಕಾರಿಗಳಿಗೆ ಈ ವಿಷಯದಲ್ಲಿ ಅಭಿನಂದನೆಗಳನ್ನು ನಾನು ಸಲ್ಲಿಸಬೇಕಾಗುತ್ತದೆ. ಇನ್ನೊಂದು ವಿಷಯವನ್ನು ಕೇಳಲಿಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರ ಕೆಲವು ಬಾರಿ ನಮಗೆ ways and means assistance ಎಂದು ಹಣಕಾಸನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಇವತ್ತು ಹಲವಾರು ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ways and means assistanceದಲ್ಲಿ ಹಣವನ್ನು ಉಪಯೋಗ ಮಾಡಿರತಕ್ಕಂಥ ಘಟನೆ

ನಡೆದಿಲ್ಲ. Reserve Bankನವರು ಅದಕ್ಕೆ 12% ಬಡ್ಡಿಯನ್ನು ವಿಧಿಸುತ್ತಾರೆ. ನಮ್ಮ ಸರ್ಕಾರದಲ್ಲಿ ಕಳೆದ 18 ತಿಂಗಳಿನಲ್ಲಿ ಅದಕ್ಕೆ ನಾವು ಅವಕಾಶ ಮಾಡಿಕೊಟ್ಟಿಲ್ಲ. ಈ ರೀತಿ 12% ಬಡ್ಡಿಗೆ ಹಣವನ್ನು ತರತಕ್ಕ ಕೆಲಸವನ್ನು ನಾವು ಮಾಡಲಿಲ್ಲ ಎನ್ನುವುದನ್ನು ಸದಸ್ಯರ ಗಮನಕ್ಕೆ ತಮ್ಮ ಮುಖಾಂತರ ತರಲಿಕ್ಕೆ ಬಯಸುತ್ತಿದ್ದೇನೆ. ಹಣಕಾಸು ಇಲಾಖೆಗೆ ಸಂಬಂಧಪಟ್ಟ ಉಳಿದ ವಿಚಾರಗಳ ಬಗ್ಗೆ ಮಾನ್ಯ ಹಣಕಾಸು ಸಚಿವರು ಉತ್ತರ ಕೊಡತಕ್ಕಂಥ ಕೆಲಸವನ್ನು ಮಾಡುತ್ತಾರೆಂದು ಹೇಳಬಯಸುತ್ತೇನೆ. ಕೆಲವೊಂದು ಇಲಾಖೆಗಳ ವಿಷಯದಲ್ಲಿ ಹಲವಾರು ಜನ ನಮ್ಮ ಸದಸ್ಯರು ಚರ್ಚೆ ಮಾಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ಬೆಂಗಳೂರು ನಗರದಲ್ಲಿ ಕಂದಾಯ ಇಲಾಖೆಯಿಂದ ಭೂಮಿಯನ್ನು ಮಾರಾಟ ಮಾಡತಕ್ಕಂಥ ವಿಷಯದಲ್ಲಿ ನಾವು ಸ್ವೇಚ್ಛಾಚಾರವಾಗಿ ಕೆಲಸವನ್ನು ಮಾಡಿದ್ದೇವೆ, ಭೂ ಕಾಯ್ದೆಗಳನ್ನೂ ಇವತ್ತು ಧಿಕ್ಕರಿಸಿ ಸರ್ಕಾರ ತೀರ್ಮಾನ ಮಾಡಿದೆ ಎನ್ನುವ ರೀತಿಯಲ್ಲಿ ಹಲವಾರು ಸದಸ್ಯರು ಪ್ರಸ್ತಾಪಿಸಿದರು. ಸುಮಾರು ಕೇವಲ 5 ಜನರ syndicate ಗೆ ಈ ಭೂಮಿಯನ್ನು ಕೊಡತಕ್ಕಂಥ ಕೆಲಸವಾಗಿದೆ, ಇದರಲ್ಲಿ ಬಹಳ ಆಗಬಾರದ ದೊಡ್ಡ ಮಟ್ಟದ ಅವ್ಯವಹಾರಗಳು ಪ್ರಾರಂಭವಾಗಿವೆ ಎಂದು ಕೆಲವು ಸದಸ್ಯರುಗಳು ಅವರ ಭಾವನೆಗಳನ್ನು ಇಲ್ಲಿ ವ್ಯಕ್ತಪಡಿಸಿದರು. ನಾನು ಈ ಸಂದರ್ಭದಲ್ಲಿ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಈಗಾಗಲೇ 2–3 ಬಾರಿ ಸದನದಲ್ಲಿ ಭೂಕಬಳಿಕೆ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಆಗಿರತಕ್ಕಂಥ ಈ ಭೂಕಬಳಿಕೆ ನನ್ನ ಕಾಲದಲ್ಲಿ ಆದಂತಹ ಘಟನೆ ಅಲ್ಲ. ಇದು ಹಿಂದಿನ ಹಲವಾರು ಸರ್ಕಾರಗಳ ನಡೆಸತಕ್ಕಂಥ ಸಂದರ್ಭದಲ್ಲಿ ಆಗಿರತಕ್ಕಂಥದ್ದಾಗಿದೆ. ಈ ಸರ್ಕಾರ ಬಂದ ನಂತರ ನಾವು ಭೂಕಬಳಿಕೆ ಪತ್ತೆ ಹಚ್ಚಲು ನಾವು ಕಠಿಣ ತೀರ್ಮಾನ ಕೈಗೊಂಡೆವು. ಈ ರೀತಿ ತೀರ್ಮಾನ ಮಾಡಿದ ನಂತರ ಇವತ್ತು ಅದಕ್ಕಾಗಿ ಸದನ ಸಮಿತಿಯನ್ನು ರಚನೆ ಮಾಡಲಾಯಿತು. ಸದನದ ಸಮಿತಿಯು ಕಾರ್ಯಾಚರಣೆ ನಡೆಸಿ, ಇವತ್ತು ಬೆಂಗಳೂರು ನಗರದಲ್ಲಿ ನಡೆದಿರತಕ್ಕಂಥ ಹಲವಾರು ಭೂ ಕಬಳಿಕೆ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದಿದೆ. ಈಗಾಗಲೇ ಆ ಬಗ್ಗೆ ಎರಡು ವರದಿಗಳನ್ನೂ ಕೊಟ್ಟಿದೆ. ಈ ಒಂದು ಜಮೀನನ್ನು ನಾವು ಮಾರಾಟ ಮಾಡತಕ್ಕಂಥ ಸಂದರ್ಭದಲ್ಲಿ ಯಾವುದೇ

ರೀತಿಯ ಕಾನೂನನ್ನು ಮೀರಿ ಯಾವುದೇ ತೀರ್ಮಾನ ಮಾಡಲಿಲ್ಲ ಎನ್ನುವುದನ್ನು ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಅದರಲ್ಲಿ ವಿಶೇಷವಾಗಿ ಈ ಭೂ ಕಾಯ್ದೆಯ ಕಾನೂನನ್ನು ಧಿಕ್ಕರಿಸಿದ್ದೇವೆ ಎನ್ನುವಂತಹ ಮಾತನ್ನೇನು ಸದಸ್ಯರುಗಳು ಹೇಳಿದ್ದಾರೆ, ಅದು ನಿಜವಲ್ಲ. ನಾವು ಆ ಕೆಲಸವನ್ನು ಮಾಡಲಿಕ್ಕೆ ಹೋಗಿಲ್ಲ. ಅದು ಸೆಕ್ಷನ್ 79(ಎ) ಇರಬಹುದು, 79(ಬಿ) ಇರಬಹುದು. ಈ ವಿಷಯಗಳನ್ನು ತಾವೆಲ್ಲಾ ಏನು ಪ್ರಸ್ತಾಪ ಮಾಡಿದ್ದೀರಿ, ಅದರ ಒಂದು ವ್ಯಾಪ್ತಿಯೊಳಗೇ ಇವತ್ತು ಕೆಲವು ತೀರ್ಮಾನಗಳು ಆಗಿರತಕ್ಕಂಥದ್ದು ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತೇನೆ. ಒಟ್ಟಾರೆ ಇಲ್ಲಿಯವರೆಗೆ ಸುಮಾರು 18447 ಕಂದಾಯ ಎಕರೆ ಭೂಮಿಯನ್ನು ಕಬಳಿಕೆ ಮಾಡಿರುವುದನ್ನು ಪತ್ತೆ ಹಚ್ಚಿದ್ದೇವೆ. ಅದರಲ್ಲಿ 8924 ಎಕರೆ ಜಮೀನನ್ನು ಇವತ್ತು ಸರ್ಕಾರ ಸ್ವಾಧೀನಪಡಿಸಿಕೊಂಡಿದೆ. ಈ 8924 ಎಕರೆಗಳಲ್ಲಿ 1138 ಎಕರೆ ಜಮೀನನ್ನು ಹರಾಜು ಹಾಕತಕ್ಕಂಥ ಕ್ರಮ ತೆಗೆದುಕೊಳ್ಳಲಾಗಿದೆ. ಇದು ಕೇವಲ 10% ಎನ್ನುವುದನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. 1138 ಎಕರೆ ಹರಾಜು ನಡೆದಿರತಕ್ಕಂಥ ಪ್ರಕರಣಗಳಲ್ಲಿ 567 ಎಕರೆ ಹರಾಜು ಆಗಿರತಕ್ಕಂಥ ಪ್ರಕರಣಗಳನ್ನು ತಿರಸ್ಕಾರ ಮಾಡಿದ್ದೇವೆ, 369 ಎಕರೆಗೆ ಬಿಡ್‌ಗಳೂ ಬಂದಿಲ್ಲ, 297 ಎಕರೆ ಹರಾಜನ್ನು ಸ್ವೀಕಾರ ಮಾಡಿದ್ದೇವೆ. ಅದಕ್ಕೆ ಅವರಿಗೆ ನಾವು 30 ದಿವಸಗಳ ನಂತರ award ಕೊಡುತ್ತೇವೆ. ಯಾರಾದರೂ ಏನಾದರೂ objections raise ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇವೆ. ಇವತ್ತು objection ಬಂದಂತಹ ಸಂದರ್ಭದಲ್ಲಿ ನಾವು ಆ ಜಮೀನನ್ನು ಅವರಿಗೆ ಕೊಡತಕ್ಕಂಥ ಪ್ರಶ್ನೆಯೇ ಇಲ್ಲ. ಅದಕ್ಕೂ ಕಾನೂನಿನ ವ್ಯಾಪ್ತಿಯಲ್ಲಿ ನಾವು ಕ್ರಮ ತೆಗೆದುಕೊಳ್ಳ-ಬೇಕಾಗುತ್ತದೆ. ಇವತ್ತು ಯಾವುದೇ ರೀತಿಯ ಸ್ವೇಚ್ಛಾಚಾರದಲ್ಲಿ ಈ ಕೆಲಸವನ್ನು ಮಾಡಲಿಕ್ಕೆ ಹೋಗಿಲ್ಲ. ಇವತ್ತು 297 ಎಕರೆ ಜಮೀನಿನ ಹರಾಜಿನಲ್ಲಿ ಸುಮಾರು 311 ಕೋಟಿ ರೂ.ಗಳವರೆಗೆ ಆದಾಯ ಬಂದಿರುವುದನ್ನು ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಎಕರೆಗೆ ಸುಮಾರು 1 ಕೋಟಿ ರೂ.ಗಿಂತಲೂ ಹೆಚ್ಚು ಹಣ ಸಂಗ್ರಹ ಆಗಿದೆ. ಇದು ಬೆಂಗಳೂರು ನಗರದ ವ್ಯಾಪ್ತಿಗೆ ಬರತಕ್ಕಂಥದ್ದಲ್ಲ, ಬೆಂಗಳೂರು ನಗರದ ಹೊರಗಡೆ ಇರತಕ್ಕಂಥ ಜಮೀನುಗಳನ್ನು ಹರಾಜು ಹಾಕಿದ್ದರಿಂದ ಈ ರೀತಿಯ ಹಣ ಬಂದಿದೆ. ಇವತ್ತು ಸುಮಾರು 2900 ಪ್ರಕರಣಗಳು

ಹಲವಾರು ವಿವಿಧ ಕೋರ್ಟ್‌ಗಳಲ್ಲಿ ಬಾಕಿ ಇದೆ. ಕೆಲವರು ಇವತ್ತು ಕೋರ್ಟ್‌ನಿಂದ Stay ತರತಕ್ಕಂಥ ಕೆಲಸವನ್ನು ಮಾಡಿದ್ದಾರೆ. ನಮ್ಮ ಸರ್ಕಾರ ಬಂದ ನಂತರ, ನಾವು ಕಾನೂನು ಇಲಾಖೆಯಿಂದ ಇಂತಹ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥ ಪಡಿಸುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಇರುವವರಲ್ಲೇ ನಿಷ್ಠೆಯಿಂದ, ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕವರನ್ನು ಆಯ್ಕೆ ಮಾಡಿ, ಇವತ್ತು ಕೋರ್ಟ್‌ನಲ್ಲಿ ಇರತಕ್ಕಂಥ ಕೇಸ್‌ಗಳನ್ನು ವಿಲೇವಾರಿ ಮಾಡಿಸಲಿಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಅದಕ್ಕಾಗಿ ನಾವು ಈಗಾಗಲೇ ಕೆಲವರು Senior Advocatesಗಳನ್ನು ನೇಮಕ ಮಾಡಿದ್ದೇವೆ. ಅವರ ನೇಮಕದ ಮುಖಾಂತರ ಈಗಾಗಲೇ ಅದರ ಬಗ್ಗೆ ಗಮನವನ್ನು ಹರಿಸಿರುವುದನ್ನು ಈ ಸಂದರ್ಭದಲ್ಲಿ ನಾನು ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. 297 ಎಕರೆ ಜಮೀನನ್ನು ಇವತ್ತು ಹರಾಜು ಮಾಡಿ ಸ್ಥಿರೀಕರಣ ಮಾಡಿದ್ದೇವೆ. ಕೇವಲ 4–5 ಜನ syndicate ಮಾಡಿಕೊಂಡು ಆ ಜಮೀನುಗಳನ್ನು ಹರಾಜಿನಲ್ಲಿ ಖರೀದಿಸಿದ್ದಾರೆ ಎನ್ನುವ ಆರೋಪವನ್ನು ಕೆಲವು ಸದಸ್ಯರು ಸದನದಲ್ಲಿ ಮಾಡಿದ್ದಾರೆ. ಇದರಲ್ಲಿ ಸುಮಾರು 73 ಜನ ಭಾಗವಹಿಸಿರತಕ್ಕಂಥದ್ದನ್ನು ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಹರಾಜಿನಲ್ಲಿ ಯಾರ್‍ಯಾರು ಭಾಗವಹಿಸಿದ್ದಾರೆ ಎನ್ನುವಂತಹ ಲಿಸ್ಟ್ ನನ್ನ ಹತ್ತಿರ ಇದೆ. ನಾನು ಅದನ್ನು ಕೊಡಲಿಕ್ಕೆ ತಯಾರಾಗಿದ್ದೇನೆ. ಇವತ್ತು ಈ ಹರಾಜು ಮಾಡತಕ್ಕಂಥ ಸಂದರ್ಭದಲ್ಲಿ ಯಾವುದೇ ರೀತಿಯ ಸಂಶಯಗಳು ಬರಬಾರದು ಎನ್ನುವಂತಹ ದೃಷ್ಟಿಯಿಂದಲೇ ಪ್ರತಿಯೊಂದು ಹರಾಜು ಮಾಡತಕ್ಕಂಥ ಸಂದರ್ಭದಲ್ಲಿ ನಾವು 5–6 ಪತ್ರಿಕೆಗಳಲ್ಲಿ ಈ ಒಂದು ವಿಷಯದ ಬಗ್ಗೆ advertisement ಮಾಡಿದ್ದೇವೆ, ಇವತ್ತು ಹರಾಜಿನಲ್ಲಿ ಯಾರು ಬೇಕಾದರೂ ಪಾಲ್ಗೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೇವೆ. ಕೆಲವರು ಬೇರೆ ರಾಜ್ಯದಿಂದ ಬಂದು ಹರಾಜಿನಲ್ಲಿ ಭಾಗವಹಿಸಿ ಜಮೀನುಗಳನ್ನು ಖರೀದಿ ಮಾಡಿದ್ದಾರೆ ಎನ್ನುವಂತಹ ಆರೋಪ ಏನಿದೆ, ಇದು ಸತ್ಯಕ್ಕೆ ದೂರವಾಗಿ ರತಕ್ಕಂಥ ವಿಷಯವೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಕೆಲವರು ಸರಿಯಾದ ರೀತಿಯಲ್ಲಿ ಮಾಹಿತಿ ಸಿಗದೆ ಈ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿರಬಹುದು ಎಂದು ನಾನಿಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಸುಮಾರು 3–4 ಜನ ಬೇರೆ ರಾಜ್ಯದವರು ಬಿಟ್ಟರೆ, ಇನ್ನುಳಿದಿರತಕ್ಕಂಥವರು ಕರ್ನಾಟಕದಲ್ಲಿ ನೆಲೆಸಿರತಕ್ಕಂಥವರು, ಕರ್ನಾಟಕದವರು ಎನ್ನುವುದನ್ನು ನಾನು

ಈ ಸಂದರ್ಭದಲ್ಲಿ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಈ ಜಮೀನನ್ನು ಹರಾಜು ಹಾರತಕ್ಕಂಥ ಸಂದರ್ಭದಲ್ಲಿ ನಮಗೆ ಹೆಚ್ಚಿಗೆ ಬೆಲೆ ಬಂದ 2–3 ಉದಾಹರಣೆಗಳನ್ನು ನಾನಿಲ್ಲಿ ಕೊಡಬಯಸುತ್ತೇನೆ. ಇವತ್ತೇನು ನಮ್ಮ guidelines value ಇದೆ, ಅದಕ್ಕಿಂತ 335%, 282%, 321%, 523% ಪಟ್ಟು ಶೇಕಡಾವಾರು ಹೆಚ್ಚಿನ ಹಣ ಹರಾಜಿನಲ್ಲಿ ಭೂಮಿಗೆ ಬಂದಿರುವುದನ್ನು ನಾನಿಲ್ಲಿ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಎಲ್ಲೆಲ್ಲಿ ಇವತ್ತು ಭೂಮಿ ಬೆಲೆ undervalue ವಿನಲ್ಲಿ ಕೂಗುವಂತಹ ಸಂದರ್ಭದಲ್ಲಿ ಆ ಜಮೀನ್ನು ಪರಭಾರೆ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡಿಲ್ಲವೆನ್ನುವ ವಿಚಾರವನ್ನು ನಾನು ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಒಂದು ಪ್ರಕರಣದಲ್ಲಿ 750% ರೈಸ್ ಆಗಿರುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಭೂ ಸುಧಾರಣೆ ಕಾಯಿದೆಯಡಿಯಲ್ಲಿ ಈ ಜಮೀನನ್ನು ಪರಬಾರೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಏನು ಹೇಳಿದ್ದೀರಿ, ಸೆಕ್ಷನ್ 109 ರ ಅಡಿಯಲ್ಲಿ ಇವತ್ತು ಪರಭಾರೆ ಮಾಡುವುದಕ್ಕೆ ಅವಕಾಶ ಇದೆ. ಇವತ್ತು ಹರಾಜು ಹಾಕಿರುವಂತಹ ಸಂದರ್ಭದಲ್ಲಿ ಎರಡು ಮೂರು ಪ್ರಕರಣ ಬಿಟ್ಟರೆ ಇನ್ನೆಲ್ಲಾ ಪ್ರಕರಣಗಳಲ್ಲಿ ಕೃಷಿಯ ಭೂಮಿಯ ಕೆಲಸವನ್ನು ಮಾಡುತ್ತಿರುವಂಥದ್ದರ ಬಗ್ಗೆ ಇದರಲ್ಲಿ ಭಾಗವಹಿಸಿರತಕ್ಕಂಥವರು certificate ಗಳನ್ನು ಸರ್ಕಾರಕ್ಕೆ ನೀಡಿದ್ದಾರೆ. ಇದಕ್ಕೆ 79ರಲ್ಲಿ relaxation ಇದೆ. 108 ಎಕರೆ ಜಮೀನನ್ನು housing scheme ಮತ್ತು ಬೇರೆ ಬೇರೆ scheme ಗಳಿಗೆ ಕೊಡತಕ್ಕಂಥ ವಿಚಾರದಲ್ಲಿ builders ಗೆ ಒಂದು ಕಾಯಿದೆ ಅಡಿಯಲ್ಲಿ ಭಾಗವಹಿಸುವಂತಹ ವಿಚಾರದಲ್ಲಿ ಯಾವುದೇ ರೀತಿಯಲ್ಲಿ ಕಾನೂನುಬಾಹಿರವಾಗಿ ಈ ಕೆಲಸವನ್ನು ಮಾಡುತ್ತಿಲ್ಲವೆಂದು ಹೇಳ ಬಯಸುತ್ತಿದ್ದೇನೆ. ಅದೇ ರೀತಿ ಗೋಮಾಳದ ಜಮೀನನ್ನು ಕೂಡ ಸರ್ಕಾರ ಮಾರಾಟ ಮಾಡಿಕೊಟ್ಟಿದೆ ಎಂದು ಆಪಾದನೆಯನ್ನು ಮಾಡಿದ್ದಾರೆ. ಇವತ್ತು ಗೋಮಾಳದ ಜಮೀನುಗಳ ವಿಷಯದಲ್ಲಿ ಈಗಾಗಲೇ ಒಂದು ವಿಧೇಯಕವನ್ನು ತಂದಿದ್ದೇವೆ. ಇವತ್ತು ನಗರ ಪ್ರದೇಶದ ವ್ಯಾಪ್ತಿಯಲ್ಲಿ ಬರುವಂತಹ ಗೋಮಾಳಗಳನ್ನು ಶಿಕ್ಷಣ ಕ್ಷೇತ್ರಕ್ಕೆ ಅಥವಾ ಆಸ್ಪತ್ರೆಗಳನ್ನು ಕಟ್ಟುವುದಕ್ಕೆ ಬೇರೆ ಬೇರೆ schemeಗಳಲ್ಲಿ ಕೊಡುವುದಕ್ಕೆ ಅವಕಾಶ ಇದ್ದು, ಆ ಒಂದು ವ್ಯಾಪ್ತಿಯೊಳಗೆ ಕೊಟ್ಟಿರುವುದನ್ನು ಬಿಟ್ಟರೆ ಸರ್ಕಾರ ಯಾವುದೇ ಕಾನೂನುಬಾಹಿ ರವಾದಂತಹ ಕೆಲಸಗಳನ್ನು ಮಾಡುವುದಕ್ಕೆ ಅವಕಾಶಗಳನ್ನು

ಕೊಟ್ಟಿಲ್ಲ. ಹರಾಜನ್ನು ಮಾಡುವಂತಹ ಸಂದರ್ಭದಲ್ಲಿ ಪ್ರತಿಸಾರಿ ಸಂಪೂರ್ಣವಾಗಿ ನಮ್ಮ ಅಧಿಕಾರಿಗಳು ವೀಡಿಯೋ ರೆಕಾರ್ಡ್ ಮಾಡಿ ಕ್ಯಾಸೆಟ್‌ಗಳನ್ನು ಇಟ್ಟಿದ್ದಾರೆ. ಏಕೆಂದರೆ ಯಾವುದೇ ಕಾರಣಕ್ಕೂ ಕೂಡ ಯಾರಿಗೂ ಸಂಶಯಗಳು ಬರಬಾರದು. ಸಂಶಯಗಳು ಬಂದು ಸರ್ಕಾರದ ಬಗ್ಗೆ ಕೆಟ್ಟ ಅಭಿಪ್ರಾಯಗಳು ಬರಬಾರದು ಎನ್ನುವ ದೃಷ್ಟಿಯಿಂದ ಸಂಪೂರ್ಣವಾಗಿ ಆ ಪ್ರಕ್ರಿಯೆಗಳು ನಡೆಯುವಂತಹ ಸಂದರ್ಭದಲ್ಲಿ ಅದರ ವಿಡಿಯೋಗ್ರಾಫ್ ಮಾಡಿ ಆ cassette ಗಳನ್ನು ಸರ್ಕಾರ ಭದ್ರವಾಗಿಬಿಟ್ಟಿದ್ದೇವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು 8,900 ಎಕರೆ ಬಗ್ಗೆ ಚರ್ಚೆ ಮಾಡಿದ್ದೇನೆ. ಇದರಲ್ಲಿ 4,500 ಎಕರೆ ಜಮೀನನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ ಕೊಟ್ಟಿರುವುದನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರುತ್ತೇನೆ. 40% ಭೂಮಿಯನ್ನು ಸರ್ಕಾರದ ವಿವಿಧ ಇಲಾಖೆಗಳಿಗೆ ಕೊಡುವಂತಹ ವಿಚಾರದಲ್ಲಿ ತೀರ್ಮಾನ ಮಾಡಬೇಕಾದರೆ ಸ್ವೇಚ್ಛಾಚಾರವಾಗಿ ಈ ತೀರ್ಮಾನಗಳು ಆಗಿಲ್ಲವೆಂದು ಈ ಸಂದರ್ಭದಲ್ಲಿ ಎಲ್ಲರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಏಕೆಂದರೆ ಈ ಒಂದು ವಿಷಯದಲ್ಲಿ ಇವು ಹಿಂದೆ ನಡೆದಿರುವಂತಹ ಘಟನೆಗಳು, ಅವುಗಳು ನನ್ನ ಆಡಳಿತಾವಧಿಯಲ್ಲಿ ನಡೆದಂತಹ ಘಟನೆಗಳಲ್ಲ. ಇವತ್ತು ಈ ರೀತಿಯಾದಂತಹ ಕಠಿಣವಾದಂತಹ ಕ್ರಮಗಳನ್ನು ತೆಗೆದು ಕೊಂಡಂತಹ ಸಂದರ್ಭದಲ್ಲಿ ನನಗೆ ಮೆಚ್ಚುಗೆ ವ್ಯಕ್ತ ಪಡಿಸುವುದು ಬೇಕಿಲ್ಲ. ಕೊನೇ ಪಕ್ಷ ಸರ್ಕಾರ ಮಾಡುತ್ತಿರುವ ಒಳ್ಳೆಯ ಕೆಲಸವನ್ನು ಸದಸ್ಯರು ಒಪ್ಪಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಅವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹಾಗೆ ಚರ್ಚೆಯನ್ನು ಮಾಡಿದ್ದೀರಿ. ಆ ಇಲಾಖೆಗೆ ಸಂಬಂಧಪಟ್ಟ ಹಾಗೆ ಯಾವ್ಯಾವ ವರ್ಷ ಯಾವ್ಯಾವ ರೀತಿ ಹಣವನ್ನು ಕೊಟ್ಟಿದ್ದೇವೆಂದು ಮಾನ್ಯ ಸದಸ್ಯರು ಗಮನಿಸಿದರೆ ತಮಗೆ ಅರ್ಥವಾಗುತ್ತದೆ. ನಾನು 1999 ರಿಂದ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇವತ್ತು amount allocated under tribal sub plan and expenditure including pool fund ನಲ್ಲಿ 2004–05ರಲ್ಲಿ 93 ಕೋಟಿ ರೂಪಾಯಿ ಕೊಟ್ಟಿದ್ದರೆ, 2005–06ರಲ್ಲಿ 159 ಕೋಟಿ ರೂಪಾಯಿ ಇತ್ತು. 2006–07ರಲ್ಲಿ 482 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಈ ವರ್ಷ 1,160 ಕೋಟಿ ರೂಪಾಯಿಯವರೆಗೆ ಅದನ್ನು

ಏರಿಸಿದ್ದೇವೆ. ಸಮಾಜ ಕಲ್ಯಾಣ ಇಲಾಖೆ ಮುಖಾಂತರ ಯಾವ ರೀತಿ ಹಿಂದುಳಿದ ವರ್ಗಗಳಿಗೆ ಮತ್ತು ದಲಿತ ಸಮಾಜದಲ್ಲಿರುವವರಿಗೆ ಇರಬಹುದು, ಅವುಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಹಿಂದಿನ ಹಲವಾರು ವರ್ಷಗಳು ವಸತಿ ನಿಲಯಗಳ ವಿಚಾರದಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರತಿ ವರ್ಷ ಹಣವನ್ನು ಬಜೆಟ್‌ನಲ್ಲಿ allocate ಮಾಡುತ್ತಿದ್ದರು, ಆ ಹಣ ಕಟ್ಟಡಗಳನ್ನು ಕಟ್ಟದೇ ಇರುವಂತಹ ಸಂದರ್ಭದಲ್ಲಿ ಹಣ ವಾಪಸ್ಸು ಹೋಗುವಂತಹ ಸಂದರ್ಭ ಇತ್ತು. ಆದರೆ ನಾನು ಮತ್ತು ಮಾನ್ಯ ಉಪ ಮುಖ್ಯಮಂತ್ರಿಗಳು ಸಭೆಯನ್ನು ಕರೆದು ಚರ್ಚೆಯನ್ನು ಮಾಡಿದಾಗ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಮತ್ತು ಅಧಿಕಾರಿಗಳು ನಮ್ಮ ಗಮನಕ್ಕೆ ತಂದಾಗ ವಸತಿ ನಿಲಯದ ಕಟ್ಟಡಗಳನ್ನು ಕಟ್ಟುವುದಕ್ಕೆ ಕಳೆದ ವರ್ಷ ನಾವು ಬಜೆಟ್‌ನಲ್ಲಿ ಕೊಟ್ಟಂತಹ ಹಣವನ್ನು ಸಂಪೂರ್ಣವಾಗಿ treasury ಯಿಂದ ಆ ಇಲಾಖೆಗೆ transfer ಮಾಡುವುದರ ಮುಖಾಂತರ ಕಟ್ಟಡಗಳ ಕೆಲಸಗಳನ್ನು ಪೂರ್ತಿ ಮಾಡುವುದಕ್ಕೆ ಅವಕಾಶವಾಗುವ ಹಾಗೆ ಮಾಡಿ ಆ ಹಣ ಬಿಡುಗಡೆ ಮಾಡಿ, ಯಾವುದೇ ಕಾರಣಕ್ಕೂ ಕೂಡ ಆ ಹಣ Finance Departmentನವರು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗದೇ ಇರುವಂತಹ ರೀತಿಯಲ್ಲಿ ಪ್ರಥಮ ಬಾರಿಗೆ ಈ ನಿರ್ಧಾರವನ್ನು ಮಾಡಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. 1999 ರಿಂದ 2004–05ರವರೆಗೆ ಹಿಂದಿನ ಸರ್ಕಾರ 450ರಿಂದ 500 ಕೋಟಿ ರೂಪಾಯಿಯನ್ನು ಅಭಿವೃದ್ಧಿ ವೆಚ್ಚಕ್ಕಾಗಿ ಅನುದಾನಕ್ಕಾಗಿ ನೀಡಿದರೆ, ನಮ್ಮ ಸರ್ಕಾರ 2006–07ರಲ್ಲಿ, 1,003 ಕೋಟಿ ರೂಪಾಯಿಗಳು ಮತ್ತು 2007–08ರಲ್ಲಿ, 1,232 ಕೋಟಿ ರೂಪಾಯಿ ಅನುದಾನವನ್ನು ಒದಗಿಸಿದ್ದೇವೆ. 1999ರಿಂದ 2004 ರವರೆಗೆ ರಾಜ್ಯದಲ್ಲಿ 350 ಹೊಸ ವಸತಿ ಶಾಲಗಳನ್ನು ಪ್ರಾರಂಭಿಸಿದ್ದರು, ನಮ್ಮ ಸರ್ಕಾರ ಬಂದ ನಂತರ ಕಳೆದ ಎರಡು ವರ್ಷಗಳಲ್ಲಿ ನಾವು 363 ವಸತಿ ನಿಲಯಗಳನ್ನು ಪ್ರಾರಂಭಿಸುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಈ ಕಟ್ಟಡಗಳ ವಿಷಯದಲ್ಲಿ ವಸತಿ ನಿಲಯಕ್ಕೆ ಸಂಬಂಧಪಟ್ಟ ಹಾಗೆ ಮೂಲಭೂತ ಸೌಕರ್ಯ ಕಲ್ಪಿಸುವುದರ ವಿಚಾರದಲ್ಲಿ 2005ರವರೆಗೆ 127 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು,

ಅದು ನಮ್ಮ ಕಾಲದಲ್ಲಿ 18 ತಿಂಗಳಲ್ಲಿ 190 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದರ ಮುಖಾಂತರ ಈ ಕಟ್ಟಡಗಳಿಗೆ ಹಣವನ್ನು ಒದಗಿಸುವುದರ ಬಗ್ಗೆ ಎಲ್ಲರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವತ್ತು ಮಾನವ ಸಂಪನ್ಮೂಲವನ್ನು ಹೆಚ್ಚಿಸುವುದರ ದೃಷ್ಟಿಯಿಂದ ವೃತ್ತಿ ಶಿಕ್ಷಣ ಕೋರ್ಸ್‌ಗಳಿಗೆ 140 ಕೋಟಿ ರೂಪಾಯಿ ಬಾಕಿ ಇದ್ದಂತಹ ಹಣವನ್ನು ಬಿಡುಗಡೆ ಮಾಡುವುದರ ಜೊತೆಗೆ ಹೊಸದಾಗಿ 60 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿ ಅನುದಾನವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದೇವೆ ಎನ್ನುವುದನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಧರ್ಮಸಿಂಗ್ : 73 ಕೋಟಿ ರೂಪಾಯಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಬ್ಸಿಡಿ ಕೊಡಬೇಕಾಗಿತ್ತು. ಮೊದಲು 25 ಕೋಟಿ ರೂಪಾಯಿ ಕೊಡಬೇಕಾಗಿತ್ತು. ಇಲ್ಲಿಯವರೆಗೆ ಸಮಾಜ ಕಲ್ಯಾಣ ಇಲಾಖೆಯಿಂದ 6.50 ಕೋಟಿ ರೂಪಾಯಿ ಬಿಡುಗಡೆ ಮಾಡಿರುವುದು. ನೀವು ಅದನ್ನು ತರಿಸಿ ನೋಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಈಗಾಗಲೇ ಇದಕ್ಕೆ ಹಣವನ್ನು ಇಟ್ಟಿದ್ದೇವೆ, ಇಲ್ಲಿ ನೀವು ಇಲಾಖೆಯ ಬೇಡಿಕೆಗಳನ್ನು ಸ್ವೀಕಾರ ಮಾಡಿದ ತಕ್ಷಣ ಹಣ ಬಿಡುಗಡೆ ಮಾಡುವುದಕ್ಕೆ ಯಾವುದೇ ಕೊರತೆ ಇಲ್ಲ. ಈಗಾಗಲೇ ಹಣವನ್ನು ಇಟ್ಟಿದ್ದೇವೆ. ಬೇಡಿಕೆಗಳಿಗೆ ಸದನ ಒಪ್ಪಿಗೆ ಕೊಡಬೇಕಲ್ಲ, ಒಪ್ಪಿಗೆ ಕೊಟ್ಟ ತಕ್ಷಣ ಬಿಡುಗಡೆ ಮಾಡುತ್ತೇವೆ. ಇದರಲ್ಲಿ ಯಾವುದೇ ರೀತಿಯಲ್ಲಿ delay ಮಾಡುವಂತಹ ಪ್ರಶ್ನೆ ಇಲ್ಲ.

ಶ್ರೀ ವಿ.ಸೋಮಣ್ಣ : CETಯಲ್ಲಿ ಸೆಲೆಕ್ಷನ್ ಆಗಿರುವಂತಹ ಮಕ್ಕಳು ಏನಿದ್ದಾರೆ, ಆ ಮಕ್ಕಳಿಗೆ private collegeನಲ್ಲಿ ಸೇರಿದವರಿಗೆ ಸಬ್ಸಿಡಿ ಹಣ ಏನು ಕೊಡುತ್ತೀರಿ, ಅದನ್ನು ಕೊಡದಿರುವುದರಿಂದ ಆ ಮಕ್ಕಳ admission ಆಗುತ್ತಿಲ್ಲ. ಅದನ್ನು ಕೂಡ ತಾವು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಬಸವರಾಜ್ ರಾಯರೆಡ್ಡಿ : Land ವಿಚಾರದಲ್ಲಿ...

ಶ್ರೀ ಹೆಚ್.ಡಿ.ಕುಮಾರಸ್ವಾಮಿ : Land ವಿಚಾರದಲ್ಲಿ ಇನ್ನೇನು ಹೇಳಬೇಕು, ಎಲ್ಲಾ records ಇದೆ, ಅದನ್ನು ನಿಮಗೆ ಕೊಟ್ಟುಬಿಡುತ್ತೇನೆ, ನೋಡಿಕೊಳ್ಳಿ. ರಾಜ್ಯದಲ್ಲಿ ಸ್ವೇಚ್ಛಾಚಾರ ನಡೆದುಕೊಂಡು ಬಂದಿತ್ತು. ನಾವು Land ಅನ್ನು ಉಳಿಸಿದ್ದೇವೆ, ನೀವು ಅದಕ್ಕೆ ಶಹಭಾಷ್‌ಗಿರಿ ಕೊಡಿ ಎಂದು

ಕೇಳುವುದಿಲ್ಲ. ಹಲವಾರು ವರ್ಷಗಳಿಂದ ನಡೆದುಕೊಂಡು ಬಂದಂತಹ ಅವ್ಯವಹಾರಗಳು ಏನಿವೆ, ಅದನ್ನು ಈ ಸರ್ಕಾರ ನಿಲ್ಲಿಸುವುದಕ್ಕೆ ಪ್ರಯತ್ನ ಪಟ್ಟಿದೆ.

(2-30 PM)

ಇವತ್ತು ಸೆಕ್ಷನ್ 109ರಲ್ಲಿ ಭಾಗವಹಿಸುವುದಕ್ಕೆ ಅವಕಾಶವಿದೆ. ಆ ವ್ಯಾಪ್ತಿಯಲ್ಲಿ ಬಂದಿದ್ದಾರೆ. ನೀವು clarification ಬೇಕಾದರೆ, ಆಮೇಲೆ ತೆಗೆದುಕೊಳ್ಳಬಹುದು, ಏನು ತೊಂದರೆಯಿಲ್ಲ. ನಾನು ಉತ್ತರ ಕೊಡುವುದಕ್ಕೆ ಸಿದ್ಧನಿದ್ದೇನೆ.

ಉಪಾಧ್ಯಕ್ಷರು : Clarification ಆಮೇಲೆ ಅವಕಾಶ ಕೊಡುತ್ತೇನೆ, ಮಧ್ಯೆ ಯಾವುದು ಬೇಡ. ಮಾನ್ಯ ಬಸವರಾಜ ರಾಯರೆಡ್ಡಿಯವರೆ, ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ವಸತಿ ಇಲಾಖೆಯ ವಿಷಯದಲ್ಲಿ ಚರ್ಚೆ ಮಾಡುತ್ತಾ, ಸಮಿತಿಯು report ಅನ್ನು ಕೊಟ್ಟಿದ್ದಾರೆ. ಆ ಸಮಿತಿ report ಬಗ್ಗೆ ಸರ್ಕಾರದಲ್ಲಿ ಕಾರಣಗಳು ಇವೆ. ಅದನ್ನು ಕೇಳಿ, ನಾವು ಹೇಳುತ್ತೇವೆ. ಅದರ ಮಾಹಿತಿ ತಮಗೆ ಬೇಕೆಂದರೆ, ಅದನ್ನು ಕೊಡುತ್ತೇವೆ. ವಸತಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾನ್ಯ ರಮೇಶ್ ಕುಮಾರ್‌ರವರು.......

ಶ್ರೀ ಆರ್.ಧ್ರುವನಾರಾಯಣ : ಮಾನ್ಯ ಉಪಾಧ್ಯಕ್ಷರೆ, ಬ್ಯಾಕ್‌ಲಾಗ್ ಹುದ್ದೆಗಳು ಭರ್ತಿಯಾಗಿಲ್ಲ.

ಉಪಾಧ್ಯಕ್ಷರು : ಮಾನ್ಯ ಧ್ರುವನಾರಾಯಣರವರೆ, clarification ಆಮೇಲೆ ಕೇಳಿ, ಈಗ ಮಧ್ಯೆ ಏಕೆ ಕೇಳುತ್ತೀರಿ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅದನ್ನು ನೋಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಎಲ್ಲರಿಗೂ clarification ಕೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್ ಕುಮಾರ್‌ರವರು ಚರ್ಚೆ ಮಾಡುವಂಥ ಸಂದರ್ಭದಲ್ಲಿ ನಾನು ಸದನದಲ್ಲಿ ಇದ್ದೆ. ಅವರು ವಸತಿ ಇಲಾಖೆಗೆ ಸಂಬಂಧಪಟ್ಟಂತೆ ಹೆಚ್ಚಿನ ರೀತಿಯಲ್ಲಿ ಬೆಳಕನ್ನು ಚೆಲ್ಲುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಈಗ ಇರುವಂಥಾ ವ್ಯವಸ್ಥೆ ಒಂದು ಪಂಚಾಯತ್ 40 ಮನೆ, 60 ಮನೆಗಳನ್ನು ಕೊಡುವುದರ

ಮುಖಾಂತರ, ಇನ್ನು ಮುಂದಿನ ಹಲವಾರು ವರ್ಷಗಳಾದರೂ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುವಂಥ ಸಂದರ್ಭದಲ್ಲಿ ನನಗೆ ಅವರು ಒಂದು ಮಾರ್ಗದರ್ಶನ ಮೂಡಿಸುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆ ಸಂದರ್ಭದಲ್ಲಿ ಅವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಹಲವಾರು ಹಿಂದಿನ ಮುಖ್ಯಮಂತ್ರಿಗಳ ಉದಾಹರಣೆಯನ್ನು ಆ ಸಂದರ್ಭದಲ್ಲಿ ನನಗೆ ಕೊಡುವಂಥ ಕೆಲಸವನ್ನು ಮಾಡಿದ್ದಾರೆ. ಅದು ಮಾನ್ಯ ನಿಜಲಿಂಗಪ್ಪನವರು ಇರಬಹುದು, ಮಾನ್ಯ ರಾಮಕೃಷ್ಣ ಹೆಗಡೆಯವರು ಇರಬಹುದು, ಮಾನ್ಯ ಜೆ.ಹೆಚ್.ಪಟೇಲ್‌ರವರು ಇರಬಹುದು, ತಾವು ಹಲವಾರು ಹೆಸರುಗಳನ್ನು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ನಿಜಲಿಂಗಪ್ಪನವರ ಬಗ್ಗೆ ನನಗೆ ಹೆಚ್ಚಿನ ಗೌರವವಿದೆ. ಮಾನ್ಯ ನಿಜಲಿಂಗಪ್ಪನವರು ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟರೆಂಬ ವಿಷಯವನ್ನು ಹೇಳಿದ್ದೀರಿ. ಆದರೆ ಆ ಸಂದರ್ಭದಲ್ಲಿ ಆದಂಥ ಒಂದು ಘಟನೆಯನ್ನು ನಾನು ಸ್ಮರಿಸಿಕೊಳ್ಳಬಯ-ಸುತ್ತೇನೆ. ನನಗೆ ಆ ವಿಷಯ ಇನ್ನು ಗೊತ್ತಿಲ್ಲ. ನಾನು ಇದನ್ನು ಬೇರೆ ಬೇರೆ ಕಡತಗಳಲ್ಲಿ ಓದಿರುವಂಥಾದ್ದು. ಇವರು ತಮಿಳುನಾಡಿಗೆ ಮಾನ್ಯ ಕಾಮರಾಜರವರ ಹುಟ್ಟುಹಬ್ಬಕ್ಕೆ ಹೋದಂತ ಸಂದರ್ಭದಲ್ಲಿ, ಅವರು ಅಲ್ಲಿ ಒಂದು ಭಾಷಣವನ್ನು ಮಾಡುತ್ತಾರೆ. ನಿಮಗೆ ನೀರು ಎಷ್ಟು ಬೇಕಾದರೂ ನಾವು ಕೊಡುವುದಕ್ಕೆ ಸಿದ್ಧವಿದ್ದೇವೆ. ನೀವು ಭತ್ತ ಬೆಳೆದು ನಮಗೆ ಕೊಡಿಯೆಂದು, ಅಲ್ಲಿ ಹೇಳಿಕೆಯನ್ನು ಕೊಡುತ್ತಾರೆ. ಇವತ್ತು ಕಾವೇರಿ ವಿಷಯದಲ್ಲಿ ಏನು ನಡೆಯುತ್ತಿದೆ, ಇವತ್ತು ನಾನು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಮಾನ್ಯ ರಮೇಶ್‌ಕುಮಾರ್ ರವರು ಮಾನ್ಯ ದೇವೇಗೌಡರೊಬ್ಬರ ಹೆಸರನ್ನು ಜ್ಞಾಪಕ ಮಾಡಿಕೊಳ್ಳಲಿಲ್ಲ. ಅದು ಏಕೆಂಬುದು ನನಗೆ ಗೊತ್ತಾಗಲಿಲ್ಲ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗುವಂಥ ಸಂದರ್ಭ ಬರುವವರೆಗೆ, ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಯವರು ಬಂದು ಇಲ್ಲಿ ಏನು ಶಂಕು ಸ್ಥಾಪನೆಯನ್ನು ನೆರವೇರಿಸಿ ಹೋದರು, ಆ ಭಾಗಕ್ಕೆ ಕೃಷ್ಣ ನದಿ ನೀರತನ್ನು ಉಪಯೋಗ ಮಾಡುವಂಥದ್ದು ಅದು ಕೇವಲ 30 TMC ನೀರನ್ನು ಉಪಯೋಗ ಮಾಡುವಂಥ ಕೆಲಸವಾಗಿತ್ತು. ಮಾನ್ಯ ದೇವೇಗೌಡರು ಬಂದ ನಂತರ ತೆಗೆದುಕೊಂಡ ಹಲವಾರು ನಿರ್ಧಾರಗಳಿಂದ, ಯಾವ ಮಟ್ಟದ ಪ್ರಗತಿ ಸಾಧನೆಯಾಯಿತೆಂಬುದನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಯಸುತ್ತೇನೆ. ಅದೇ ಕಾವೇರಿ ಅಚ್ಚುಕಟ್ಟು ಪ್ರದೇಶದ

ವಿಷಯದಲ್ಲಿ, ಹೇಮಾವತಿ ವಿಷಯದಲ್ಲಿ ಅವರು ಖಾಸಗಿ ನಿರ್ಣಯವನ್ನು ಮಂಡನೆ ಮಾಡುವಂಥ ಕೆಲಸವನ್ನು ಏನು ಮಾಡಿದರು. ಅದರ ಮುಖಾಂತರ ಹಾರಂಗಿ ಇರಬಹುದು, ಕಬಿನಿ ಇರಬಹುದು, ಈ ವಿಷಯಗಳ ಬಗ್ಗೆ ಮುಂದಿನ ಸರ್ಕಾರಗಳು ಕ್ರಮ ತೆಗದುಕೊಳ್ಳುವುದಕ್ಕೆ ಸಾಧ್ಯವಾಯಿತು. ತಾವು ಅವರನ್ನು ನೆನಪು ಮಾಡಿಕೊಳ್ಳಲಿಲ್ಲ. ನನಗೆ ಅವರನ್ನು ನೆನಪು ಮಾಡಿಕೊಳ್ಳಲಿಲ್ಲವೆಂಬ ಬೇಜಾರು ಇಲ್ಲ. ಆದರೆ ಆ ರೀತಿಯ ಕೆಲಸವನ್ನು ಮಾಡಬೇಕು, ಇಲ್ಲವೆಂದರೆ ನಮ್ಮ ನೀರನ್ನು ನಾವು ಬೇರೆ ರಾಜ್ಯದವರಿಗೆ ನಿಮಗೆ ಎಷ್ಟು ಬೇಕೊ ಕೊಡುತ್ತೇವೆ. ನೀವು ಅಲ್ಲಿಂದ ಬೆಳೆದು ನಮಗೆ ಕೊಡಿಯೆಂದು ನಿರ್ಣಯವನ್ನು ಮಾಡಬೇಕೋ ಅದನ್ನು ತಾವೇ ಹೇಳಬೇಕಾಗುತ್ತದೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ವಸತಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಈ ವಿಷಯದಲ್ಲಿ ತಾವು ಏನು ಹೇಳಿದ್ದೀರಿ. ತಾವು ನಿಜಕ್ಕೂ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಇವತ್ತು ನಾವು ಅಧಿಕಾರ ವಿಕೇಂದ್ರಿಕರಣದ ವ್ಯವಸ್ಥೆಯೊಳಗೆ, ಪಂಚಾಯತ್‌ಗಳು ಫಲಾನುಭವಿಗಳನ್ನು ಗುರುತಿಸುವಂಥ ಕೆಲಸವನ್ನು ಅವರಿಗೆ ಕೊಟ್ಟು, ನಾವು ಅವರಿಗೆ ಇವತ್ತು ಹೆಚ್ಚು ಜವಾಬ್ದಾರಿಯನ್ನು ಕೊಟ್ಟು, ಒಂದು ಪಂಚಾಯತ್‌ಗೆ 40,60 ಮನೆಗಳನ್ನು ಕೊಡುವಂಥ, ಈ ರೀತಿಯ ನಿರ್ಣಯಗಳಿಂದ ಆ ವಸತಿಯ ಸೌಕರ್ಯದಲ್ಲಿ, ನಾವು ಈ ರಾಜ್ಯದ ಜನರಿಗೆ ನ್ಯಾಯವನ್ನು ಕೊಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂಬ ವಿಚಾರವೂ ನನ್ನ ಗಮನಕ್ಕೂ ಬಂದಿರುವುದನ್ನು ನಾನು ಹೇಳಬಯಸುತ್ತೇನೆ. ಆ ದೃಷ್ಟಿಯಿಂದಲೇ ನಾನು ನಮ್ಮ ಅಧಿಕಾರಿಗಳ ಎರಡು, ಮೂರು ಸಭೆಗಳನ್ನು ಕರೆದು ಒಂದು ಮಾತನ್ನು ಹೇಳಿದೆ. ಕನಿಷ್ಟ ವರ್ಷಕ್ಕೆ 6 ಲಕ್ಷದಿಂದ 8 ಲಕ್ಷ ಮನೆಗಳನ್ನು ಇವತ್ತು ಕಟ್ಟುವಂಥ ಕೆಲಸ ಮಾಡುವುದಕ್ಕೆ ಸಿದ್ಧನಾಗಬೇಕೆಂಬ ಮಾತನ್ನು ಹೇಳಿದೆ. ಇವತ್ತು ನಮ್ಮ ವಿರೋಧ ಪಕ್ಷದ ನಾಯಕರು ಯಾವಾಗಲೂ ಒಂದು ಮಾತನ್ನು ಹೇಳುತ್ತಿರುತ್ತಾರೆ. ನೀವು ಗ್ರಾಮ ವಾಸ್ತವ್ಯವನ್ನು ಬಿಡಿ, ವಿಧಾನಸೌಧದಲ್ಲಿ ವಾಸ್ತವ್ಯ ಮಾಡಿಯೆಂದು ಹೇಳುತ್ತಿರುತ್ತಾರೆ. ಇವತ್ತು ನಾನು ಗ್ರಾಮ ವಾಸ್ತವ್ಯಕ್ಕೆ ಹೋದಂಥ ಸಂದರ್ಭದಲ್ಲಿ, ಇವತ್ತು ವಸತಿಗೆ ಸಂಬಂಧಪಟ್ಟ ಹಾಗೆ ಜನರು ಅನುಭವಿಸುತ್ತಿವಂಥ ಆ ನೋವನ್ನು ಕಂಡಿದ್ದೇನೆ. ಇವತ್ತು ಈ ರೀತಿಯ ವ್ಯವಸ್ಥೆಯಿಂದ ಇವತ್ತು ಸರ್ಕಾರಗಳು ಲೋಪಗಳನ್ನು ಎಸಗಿವೆ, ವಸತಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ, ಏನಾದರೂ ಒಂದು ಹೊಸ ರೀತಿಯ ಕಾರ್ಯಕ್ರಮವನ್ನು ಸರ್ಕಾರ

ಕೊಡಬೇಕೆನ್ನುವ ತೀರ್ಮಾನವನ್ನು ಮಾಡಿ. ಈಗ ಆರು ಲಕ್ಷ ಮನೆಗಳ ಗುರಿಯನ್ನು ಹೊಂದಬೇಕೆಂದು ಏನು ಹೇಳಿದೆ, ಇವತ್ತು ಅಂಗವಿಕಲರುಗಳು ಇರಬಹುದು, ದೇವದಾಸಿಯರು ಇರಬಹುದು, HIV ಸೋಂಕಿತರು ಇರಬಹುದು, ಆ ಕುಟುಂಬಗಳಿಗೆ 30,000 ಮನೆಗಳನ್ನು ಕಟ್ಟುವಂಥದ್ದಕ್ಕೆ, ಇವತ್ತು ನೇರವಾಗಿ ಏನು ತೀರ್ಮಾನವನ್ನು ಮಾಡಿದ್ದೇವೆ. ಇವತ್ತು ಈ 30,000 ಮನೆಗಳನ್ನು ಈ ರೀತಿಯ ವರ್ಗಕ್ಕೆ ಸಂಬಂಧಪಟ್ಟಂಥವರು, ಅಂಗವಿಕಲರಿಗೆ, ದೇವದಾಸಿಯವರಿಗೆ, ನೇರವಾಗಿ ಆಯ್ಕೆ ಮಾಡುವಂಥದಕ್ಕೆ ಸರ್ಕಾರ ತೀರ್ಮಾನ ಕೊಟ್ಟಿದ್ದೇವೆ. ನಾವು 2006-07ನೇ ಆರ್ಥಿಕ ವರ್ಷದಲ್ಲಿ 1,73,816 ಮನೆಗಳನ್ನು ಪೂರ್ಣಗೊಳಿಸಿರುವಂಥ ವಿಷಯವನ್ನು ಇಲ್ಲಿ ಹೇಳುತ್ತಿದ್ದೇನೆ. ಕಳೆದ 5 ವರ್ಷಗಳಲ್ಲಿ ಅಂದರೆ 2002, 2003, 2004, 2005, 2006, 2007ರಲ್ಲಿ ವರ್ಷವಾರು ಸಾಧಿಸಲಾದ ಪ್ರಗತಿಯನ್ನು ಗಮನಿಸಿದಾಗ, 2006-07ರಲ್ಲಿ ಇವತ್ತು ಹೆಚ್ಚಿನ ಸಾಧನೆಯನ್ನು ಮಾಡಿದ್ದೇವೆಂಬುದನ್ನು ನಾನು ಹೇಳಬಯಸುತ್ತೇನೆ. ಈ ವರ್ಷ ನಾವು ಆರು ಲಕ್ಷ ಮನೆಗಳನ್ನು ಕಟ್ಟಬೇಕೆಂಬ ಗುರಿಯನ್ನು ಏನು ಹೊಂದಿದ್ದೇವೆ. ಜೂನ್ ತಿಂಗಳ ಅಂತ್ಯದೊಳಗೆ 80,000 ಮನೆಗಳನ್ನು ಪೂರ್ಣಗೊಳಿಸಿದ್ದೇ-ವೆಂಬುದನ್ನು ಹೇಳಬಯಸುತ್ತೇನೆ. ಇದೂ ಅಲ್ಲದೇ 2,23,000 ಮನೆಗಳು ವಿವಿಧ ಹಂತಗಳ ಕಾರ್ಯಗಳಲ್ಲಿರುವಂಥದ್ದು, ಪ್ರಗತಿಯಲ್ಲಿರುವಂಥದ್ದನ್ನು ಸದನದ ಗಮನಕ್ಕೆ ತರಬಯಸುತ್ತಿದ್ದೇನೆ. ಇನ್ನು ಮೂರು ಲಕ್ಷ ಫಲಾನುಭವಿಗಳನ್ನು ಈಗಾಗಲೇ ಗುರುತಿಸಿ ತಿಂಗಳಿಗೆ 50,000 ಟಾರ್ಗೆಟ್ ಅನ್ನು ಇಟ್ಟು ಇವತ್ತು ಕೆಲಸ ಮಾಡಬೇಕೆಂದು ಸರ್ಕಾರವು ಏನು ತೀರ್ಮಾನ ಮಾಡಿದೆ, ಈಗಾಗಲೇ ಅಧಿಕಾರಿಗಳು ಆ ವಿಷಯದಲ್ಲಿ ಗಮನಹರಿಸಿದ್ದಾರೆ. ಇದರ ಜೊತೆಗೆ ಈ ವರ್ಷ 10 ತಾಲ್ಲೂಕುಗಳನ್ನು ಪೈಲೆಟ್ ಪ್ರಾಜೆಕ್ಟ್‌ಗಳಾಗಿ ತೆಗೆದುಕೊಂಡಿದ್ದೇವೆ. 10 ತಾಲ್ಲೂಕುಗಳನ್ನು ಗುಡಿಸಲು ರಹಿತ ತಾಲ್ಲೂಕುಗಳನ್ನಾಗಿ ಮಾಡಬೇಕೆಂಬ ತೀರ್ಮಾನವನ್ನು ಏನು ಮಾಡಿದ್ದೇವೆ, ನಾನು ಕಳೆದ ತಿಂಗಳು ಚಾಮರಾಜನಗರ ಕ್ಷೇತ್ರಕ್ಕೆ ಪ್ರವಾಸ ಹೋದಂಥ ಸಂದರ್ಭದಲ್ಲಿ ಹನೂರು ತಾಲ್ಲೂಕುನಲ್ಲಿ ನಾನು ಪ್ರವಾಸ ಮಾಡಬೇಕಾದರೆ, ಅಲ್ಲಿಯ ವಾತಾವರಣದಲ್ಲಿ ಏನು ಗಮನಿಸಿದೆಯೆಂದರೆ, ಅದು ಜನತಾ ದರ್ಶನ ಇರಬಹುದು, ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ, ಮನೆಗಳ ಬಗ್ಗೆಯೇ ಇವತ್ತಿನ ಕೊರತೆಯನ್ನು ಜನರು ನಮ್ಮ ಮುಂದೆ ಮನವಿಗಳನ್ನು ಕೊಡುತ್ತಿದ್ದಾರೆ. ಅದರ ಕಡೆಗೆ ಸರ್ಕಾರ ಗಮನವನ್ನು ಹರಿಸಬೇಕೆಂದು

ಇವತ್ತು ವಸತಿ ಇಲಾಖೆಯಲ್ಲಿ ಹೆಚ್ಚಿನ ಒಂದು ಪ್ರಗತಿಯನ್ನು ಸಾಧಿಸಬೇಕೆಂಬ ಗುರಿಯನ್ನು ಏನು ಇಟ್ಟಿದ್ದೇವೆಂಬುದನ್ನು ನಾನು ಇಲ್ಲಿ ಇವತ್ತು ಮಾನ್ಯ ಸದಸ್ಯರುಗಳ ಗಮನಕ್ಕೆ ತರಬಯಸುತ್ತೇನೆ. ಸಹಕಾರ ಇಲಾಖೆಗೆ ಬಂದಂಥ ಸಂದರ್ಭದಲ್ಲಿ ಪದೇ ಪದೇ ಇಲ್ಲಿ ಒಂದು ರೀತಿಯ ಗೊಂದಲ ಸೃಷ್ಟಿಯಾಗುತ್ತಿದೆ. ಇವತ್ತು ನಾವು ಸಾಲ ಮನ್ನಾ ಕಾರ್ಯಕ್ರಮವನ್ನು ತರುವುದರ ಮುಖಾಂತರ, ರೈತರಿಗೆ ಸರಿಯಾದ ರೀತಿಯಲ್ಲಿ ಸಾಲ ದೊರೆಯುತ್ತಿಲ್ಲವೆಂದು ವಿಷಯವನ್ನು ಪದೇ ಪದೇ ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಒಂದು ಬಾರಿ ಅತಿವೃಷ್ಟಿಯ ಬಗ್ಗೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳ ಗಮನಕ್ಕೆ ಏನು ತಂದಿದ್ದೆ, ಇವತ್ತು ನಾವು ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಾಗ, ಇವತ್ತು ಹೆಚ್ಚಿನ ರೀತಿಯಲ್ಲಿ ಸಾಲವನ್ನು ಬಿಡುಗಡೆ ಮಾಡಿದ್ದೇವೆ. ಇವತ್ತು ಆ ಒಂದು ವ್ಯಾಪ್ತಿಯಲ್ಲಿ ನಮ್ಮ ಕೃಷಿಕರಿಗೆ ಸಾಲದ ವ್ಯವಸ್ಥೆಯನ್ನು ಏನು ತಂದಿದ್ದೇವೆ, ಈ ವರ್ಷ ಅಲ್ಪಾವಧಿ ಬೆಳೆ ಸಾಲ, ಮಧ್ಯಮಾವಧಿ ಸಾಲ, ಮತ್ತು ದೀರ್ಘಾವಧಿ ಸಾಲ, ಈ ಮೂರು ವ್ಯಾಪ್ತಿಯೊಳಗೆ, ದಿ: 01-04-2007 ರಿಂದ ದಿ: 27-7-2007 ರವರೆಗೆ ಈ ಮೂರು ತಿಂಗಳುಗಳಲ್ಲಿ 5,46,814 ಫಲಾನುಭವಿಗಳಿಗೆ ಇವತ್ತು ಸುಮಾರು 1,299 ಕೋಟಿ ರೂಪಾಯಿಗಳನ್ನು ಸಾಲ ಪಡೆಯುವಂಥದ್ದಕ್ಕೆ ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ಸಾಲವನ್ನು ಪಡೆದಿದ್ದಾರೆಂಬ ವಿಚಾರವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರಬಯಸುತ್ತೇನೆ. ಇವತ್ತು ಹಣವನ್ನು ಬಿಡುಗಡೆ ಮಾಡಲಿಲ್ಲವೆಂಬ ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇವತ್ತು ಇಲ್ಲಿ ಇಲಾಖೆಗಳ ಬೇಡಿಕೆಗಳು ಇವೆ. ಇದಕ್ಕೆ ತಾವು ಒಪ್ಪಿಗೆ ಕೊಟ್ಟ ತಕ್ಷಣವೇ, ಮುಂದಿನ ಒಂದು ವಾರದೊಳಗೆ ಈ ಹಣವನ್ನು ಬಿಡುಗಡೆ ಮಾಡುವುದಕ್ಕೆ ತೀರ್ಮಾನವನ್ನು ಮಾಡುತ್ತಿದ್ದೇವೆ. ಇದರಲ್ಲಿ ಯಾವ ಅನುಮಾನಗಳು ಬೇಕಾಗಿಲ್ಲ, ಯಾರಿಗೂ ಆತಂಕ ಬೇಕಾಗಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ತಾವು 1,600 ಕೋಟಿ ರೂಪಾಯಿಗಳನ್ನು ರಿಲೀಜ್ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾವು ಸಿದ್ಧವಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ : ತಾವು ಏನು ಹೇಳಿದ್ದೀರಿ, ಅದನ್ನು ನಾವು welcome ಮಾಡುತ್ತೇವೆ. ಆ ಸಂಸ್ಥೆಗಳು ಉಳಿಯುತ್ತವೆ. You have to release 1,600 crores in seven days.

ಶ್ರೀ ಎನ್.ಧರ್ಮಸಿಂಗ್ : ಮಾನ್ಯ ಮುಖ್ಯಮಂತ್ರಿಯವರೆ, ನಾನು ಹೇಳುತ್ತೇನೆ. ಮಾನ್ಯ ಜಿ.ಟಿ.ದೇವೇಗೌಡರು ಹೇಳುತ್ತಾರೆ. ಅಪೆಕ್ಸ್ ಬ್ಯಾಂಕ್‌ನ ಚೇರ್ಮನ್‌ರು ಹೇಳುತ್ತಾರೆ. ನೀವು ಸಾಲ ಮನ್ನಾ ಮಾಡುವುದಕ್ಕೆ ಇಲ್ಲಿಯವರೆಗೂ ನೀವು 750 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥದ್ದು. ನೀವು ಹಳ್ಳಿಗೆ ಹೋಗಿ, ದೆಹಲಿಗೆ ಹೋಗಿ, ತಾಲ್ಲೂಕುಗಳಲ್ಲಿ ರೈತರ ಪರಿಸ್ಥಿತಿಯನ್ನು ನೋಡಿ. ಸುಮ್ಮನೆ ಸಾಲ ಮನ್ನಾಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರೆ ಹೇಗೆ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ನಿಮಗಿಂತ ಹೆಚ್ಚಿಗೆ ನಾನು ಜನಗಳ ಮಧ್ಯದಲ್ಲಿ ಇರುವವನು, ಈ ಸದನದ 224 ಜನ ಸದಸ್ಯರುಗಳ ವಿಷಯದಲ್ಲಿ ನಾನು ಚರ್ಚೆ ಮಾಡುವುದಾದರೆ, ನಾನು 224 ಜನ ಸದಸ್ಯರಿಗಿಂತಲೂ ಹೆಚ್ಚಾಗಿ ಜನಗಳ ಮಧ್ಯೆ ನಿಂತು ಕೆಲಸ ಮಾಡುತ್ತಿದ್ದೇನೆಂಬ ವಿಚಾರವನ್ನು ಮಾನ್ಯ ವಿರೊಧ ಪಕ್ಷದ ನಾಯಕರ ಗಮನಕ್ಕೆ ತರಬಯಸುತ್ತೇನೆ.

ಹಾಗೆ ನಾನು ಹೋದಂಥ ಸಂದರ್ಭದಲ್ಲಿ, ನನಗೆ ಸಾಲ ಸಿಕ್ಕಿಲ್ಲ ಎಂದು ನನ್ನ ಮುಂದೆ ಯಾರೂ ಅರ್ಜಿ ಕೊಟ್ಟಿಲ್ಲ ಎಂದು ನಾನು ಸ್ಪಷ್ಟೀಕರಣ ಕೊಡಲು ಬಯಸುತ್ತೇನೆ. ನಾನು ಪ್ರತಿನಿತ್ಯ ಜನರ ಮಧ್ಯದಲ್ಲಿದ್ದು ಕೆಲಸ ಮಾಡುತ್ತಿದ್ದೇನೆ. ನಾನು ಪೋಲೀಸಿನವರ ರಕ್ಷಣೆಯಲ್ಲಿ, ಜನರನ್ನು ದೂರ ಇಟ್ಟಿಲ್ಲ. ಈ ರಾಜ್ಯದಲ್ಲಿರತಕ್ಕಂಥ ಯಾವ ಬಡವರು ಬಂದರೂ ಅವರು ನೇರವಾಗಿ ನನ್ನನ್ನು ಭೇಟಿ ಮಾಡತಕ್ಕಂಥ ಒಂದು ವಾತಾವರಣವನ್ನು ನಾನು ನಿರ್ಮಾಣ ಮಾಡಿದ್ದೇನೆ. ಸಲದ ವಿಷಯದಲ್ಲಿ ಇವತ್ತು ನನ್ನ ಹತ್ತಿರ ಜನಸಾಮಾನ್ಯರು ಯಾರೂ ಚರ್ಚೆ ಮಾಡಿಲ್ಲ ಎನ್ನುವುದನ್ನು ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ. ಏಕೆಂದರೆ, ಹೋದ ವರ್ಷ ಇದೇ ಅವಧಿಯಲ್ಲಿ ಕೊಟ್ಟಿರತಕ್ಕಂಥಾದ್ದು ಒಂಭೈನೂರ ಕೋಟಿ ಚಿಲ್ಲರೆ ರೂಪಾಯಿಗಳು. ಈ ವರ್ಷ ಇದೇ ಅವಧಿಯಲ್ಲಿ ನಾವು 1,097 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ನಾವೇನು ಮಾಡಿದ್ದೇವೆ ಎನ್ನುವುದನ್ನು ಅಂಕಿಅಂಶವೇ ತೋರಿಸುತ್ತದೆ. ನಾವು ಯಾವ ವಿಷಯದಲ್ಲಿ ಎಡವಿದ್ದೇವೆ ಎನ್ನುವುದನ್ನು ಹೇಳಬೇಕಾಗುತ್ತದೆ. ಆಲದ ಮೇಲಿನ ಬಡ್ಡಿದರ 6.5% ಎಂದು notice ಕೊಟ್ಟಿದ್ದಾರೆ ಎಂದು ತಾವು ಹೇಳಿದಿರಿ. ಮೈಸೂರಿನ ಸಮಾರೋಪ ಸಮಾರಂಭದಲ್ಲಿ ಈಗಾಗಲೇ ಹಣಕಾಸು ಸಚಿವರು ಹೇಳಿದ್ದಾರೆ,

ಮಂಗಳೂರು ಜಿಲ್ಲೆಯಲ್ಲಿ ಈ ವಿಷಯವಾಗಿ ಹೊರಡಿಸಿದ್ದಂಥ circular ಅನ್ನು ಈಗಾಗಲೇ ನಾವು withdraw ಮಾಡಿದ್ದೇವೆ. ನಬಾರ್ಡ್‌ನವರು ಮಾಡಲಿಕ್ಕೆ ಹೊರಟಿರುವ ಹೆಚ್ಚಿನ ಬಡ್ಡಿಯನ್ನು ಸರ್ಕಾರದವರೇ ಭರಿಸಲು ಸಿದ್ಧರಾಗಿದ್ದೇವೆ ಎಂದು ಹೇಳಿ, 4% ಮೇಲೆ ಬಡ್ಡಿಯನ್ನು ತೆಗೆದು ಕೊಳ್ಳಬಾರದು ಎಂದು ನಾವು ಈಗಾಗಲೇ circular ಅನ್ನು ಕಳುಹಿಸಿ ಅವರಿಗೆ instruction ಕೊಟ್ಟಿದ್ದೇವೆ ಎನ್ನುವುದನ್ನು ಸದಸ್ಯರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಈ ಸರ್ಕಾರದಲ್ಲಿ ಒಬ್ಬರಿಗೊಬ್ಬರಿಗೆ ಅನ್ಯೋನ್ಯತೆ ಇಲ್ಲ, ಒಬ್ಬರಿಗೊಬ್ಬರಿಗೆ understanding ಇಲ್ಲದಂತೆ ಕೆಲಸವಾಗುತ್ತಿದೆ ಎಂದು ಹೇಳುತ್ತಾರೆ. ಹೌದು, ನಾವು ಈ ಸರ್ಕಾರವನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ನಮ್ಮ ಪಕ್ಷಗಳ ideologyಗಳು ಬೇರೆ ಬೇರೆ ಇದ್ದವು. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಬೇರೆ ಬೇರೆ ideology ಗಳಿದ್ದರೂ ಈ 18 ತಿಂಗಳುಗಳಲ್ಲಿ ನಾವು ಮಾಡಿರತಕ್ಕಂಥ ಕೆಲಸಗಳು ಏನಿವೆ, ಅವುಗಳನ್ನು ಒಂದೇ ಪಕ್ಷ ಅಧಿಕಾರದಲ್ಲಿದ್ದಾಗಲೂ ಮಾಡದೇ ಇರತಕ್ಕಂಥ ರೀತಿಯಲ್ಲಿ ನಿರ್ಣಯಗಳನ್ನು ಮಾಡಿದ್ದೇವೆ. ಇವತ್ತು ನಮ್ಮಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯಕ್ಕೆ ನಾವು ಅವಕಾಶ ಕೊಟ್ಟಿಲ್ಲ. ನಾನು ಸದನದ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ, ಒಂದೇ ಪಕ್ಷದ ಸರ್ಕಾರ ಅಧಿಕಾರ ನಡೆಸುತ್ತಿದಂಥ ಸಂದರ್ಭದಲ್ಲಿ, ಮೇಜು ಕುರ್ಚಿಗಳನ್ನು ಹಿಡಿದುಕೊಂಡು ಒಬ್ಬರಿಗೊಬ್ಬರು ಹೊಡೆದಾಟ ಮಾಡಿದಂಥ ಘಟನೆಗಳನ್ನೂ ನಾನು ಈ ರಾಜ್ಯದಲ್ಲಿ ನೋಡಿದ್ದೇವೆ. ಆದರೆ, ಬೇರೆ ಬೇರೆ ideology ಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿರುವಂಥ ನಾವುಗಳು ಆ ರೀತಿಯ ಘಟನೆಗಳು ನಡೆಯಲು ಅವಕಾಶ ಕೊಟ್ಟಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಮೇಜು ಕುರ್ಚಿಗಳನ್ನು ಹಿಡಿದುಕೊಂಡು ಹೊಡೆದಾಡುತ್ತಿದ್ದರು. ಆದರೆ ನೀವು ಚೂರಿಗಳನ್ನು ಹಿಡಿದುಕೊಂಡಿದ್ದೀರಿ, ಹಿಂದಿನಿಂದ ಚುಚ್ಚುವುದಕ್ಕೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಬೆಳಗ್ಗೆ ಮಾತನಾಡುವಾಗ ಹಿರಿಯ ನಾಯಕರು ಒಂದು ಮಾತನ್ನು ಹೇಳಿದರು, ಅಕ್ಟೋಬರ್ ಮೂರನೇ ತಾರೀಖು ಯಡಿಯೂರಪ್ಪನವರಿಗೆ ಅಧಿಕಾರ ಸಿಗುತ್ತದೋ, ಇಲ್ಲವೋ ಎಂದು ಹೇಳಿದರು. ಈ ವಿಷಯದಲ್ಲಿ ನಮಗಿಂತಲೂ ಹೆಚ್ಚಾಗಿ, ಯಾವ ಯಾವ ಪಕ್ಷಗಳು, ಯಾವ ಯಾವ ನಾಯಕರುಗಳು, ಯಾವ ಯಾವ ವ್ಯಕ್ತಿಗಳು,

ಯಾವ ಯಾವ ರೀತಿ ಏನೇನು ಚರ್ಚೆಯನ್ನು ಅಂತರಂಗದಲ್ಲಿ ಮಾಡುತ್ತಾರೆ, ಬಹಿರಂಗವಾಗಿ ಯಾವ ರೀತಿ ನಡೆದುಕೊಳ್ಳುತ್ತಾರೆ ಎನ್ನುವುದನ್ನು ನಾನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮಿಬ್ಬರಲ್ಲಿ ಆಗಿರತಕ್ಕಂಥ ಒಡಂಬಡಿಕೆ ಬಗ್ಗೆ. ಬೇರೆ ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಿದರೂ ಕೊನೆಗೆ ಅಲ್ಲಿಗೇ ಬರುತ್ತಿದ್ದಾರೆ. ಏತಕ್ಕೋಸ್ಕರವಾಗಿ ಈ ಒಂದು ಆತಂಕ?

ಶ್ರೀ ಆರ್.ವಿ.ದೇಶಪಾಂಡೆ : ಆ ಪ್ರಕಾರವಾದ ವಾತಾವರಣದ ಸೃಷ್ಟಿ ತಮ್ಮ ಪಕ್ಷ ಮತ್ತು ಅವರ ಪಕ್ಷದಿಂದ ಆಗಿದೆ. ಹಾಗಾಗಿ ಮಾಡುತ್ತಿದ್ದೇವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಯಾವ ಆತಂಕಗಳೂ ಬೇಡ, ಅಂಥ ಯಾವ ವಾತಾವರಣದ ಸೃಷ್ಟಿಯೂ ಆಗಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ನಾನೇನು ಮಾತನಾಡುತ್ತಿಲ್ಲ. ನಿಮ್ಮ cabinet collegue, ನಿಮ್ಮ M.L.A. ಗಳು ಏನು ಹೇಳುತ್ತಿದ್ದಾರೆಂದು ಕೇಳಿ.

ಶ್ರೀ ಬಿ.ಶಿವರಾಂ : ಡಿ.ಟಿ.ಜಯಕುಮಾರ್‌ರವರು ಏನು ಹೇಳಿದ್ದಾರೆ ಎಂದು ಹೇಳಿ.

ಶ್ರೀ ಧರ್ಮಸಿಂಗ್ : ನಿಮ್ಮವರು ಸಾರ್ವಜನಿಕವಾಗೇ ಮಾತನಾಡು ತ್ತಾರೆ, ಡಿ.ಟಿ.ಜಯಕುಮಾರ್‌ರವರು ಮಾತನಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಮಾಡತಕ್ಕಂಥ ಭಾಷಣ, ಕೊಟ್ಟಂಥ ಆಶ್ವಾಸನೆಗಳು, ಹೇಳತಕ್ಕಂಥ ನುಡಿಗಳನ್ನು ನೋಡಿದರೆ, ನೀವೇನು ಅಧಿಕಾರ ಬಿಡುವುದಿಲ್ಲ, ನೀವೇ continue ಆಗುತ್ತೀರಿ, ಅಧಿಕಾರ ಹಸ್ತಾಂತರವೇನೂ ಆಗುವುದಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾನು ಈ ಸದನದಲ್ಲಿ ವರದಿಗಳನ್ನು ಕೊಡುತ್ತಿರುವುದು ಇದುವರೆಗೂ ಮಾಡಿರತಕ್ಕಂಥ ಕೆಲಸಗಳ ಬಗ್ಗೆ. ಮುಂದೆ ಮಾಡಲು ನಮಗೂ ಜವಾಬ್ದಾರಿ ಇದೆ. ನಾನು ಈ ಜಾಗದಲ್ಲಿ ಕುಳಿತು ಕೆಲಸ ಮಾಡಬಹುದು ಅಥವಾ ಅವರು ಈ ಜಾಗಕ್ಕೆ ಬಂದು ಕೆಲಸ ಮಾಡಬಹುದು. ಈ ಸರ್ಕಾರವನ್ನು ಮುಂದುವರೆಸತಕ್ಕಂಥಾದ್ದು ನಮ್ಮಿಬ್ಬರ ಜವಾಬ್ದಾರಿಯಾಗಿದೆ. ಆ ಜವಾಬ್ದಾರಿಯ ಸೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ನಿಮ್ಮ ಜಾಗಕ್ಕೆ ಬರಬಹುದು, ಆಗ ನೀವು ಎಲ್ಲಿ ಹೋಗುತ್ತೀರಿ? ಇದು ನಮ್ಮ ಪ್ರಶ್ನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಸಮ್ಮಿಶ್ರ ಸರ್ಕಾರವನ್ನು ನಡೆಸತಕ್ಕಂಥ ಅನುಭವ ಧರ್ಮಸಿಂಗ್‌ರವರಿಗೂ ಆಗಿದೆ. ಎಲ್ಲರಿಗಿಂತ ಹೆಚ್ಚಾಗಿ ಕೇಂದ್ರದಲ್ಲಿರುವ ಮನಮೋಹನಸಿಂಗ್‌ರವರಿಗೂ ಆಗಿರಬಹುದು. ಏಕೆಂದರೆ, ಅವರು ಬೆಳಿಗೆ ತೆಗೆದುಕೊಂಡಂಥ ಒಂದು ನಿರ್ಣಯದ ಬಗ್ಗೆ ಒಂದು ಪಕ್ಷದವರು ಮಧ್ಯಾಹ್ನ ಏನಾದರೊಂದು threat ಮಾಡಿದ ತಕ್ಷಣ, ಯಾವ ರೀತಿಯ ನಿರ್ಣಯಗಳಾಗುತ್ತವೆ ಎನ್ನುವುದು ಎಲ್ಲರಿಗೂ ಗೊತ್ತು. ತಮಿಳುನಾಡಿನಲ್ಲಿ ಒಂದು ನಿರ್ಣಯವಾದಂಥ ಸಂದರ್ಭದಲ್ಲಿ, ಡಿ.ಎಂ.ಕೆ. ಪಕ್ಷದವರು ಹೇಳಿದ ತಕ್ಷಣ 24 ಗಂಟೆಗಳಲ್ಲಿ ಏನಾಯಿತು? ಇವೆಲ್ಲವನ್ನು ಇವತ್ತು ನಾವು ಇಲ್ಲಿ ಚರ್ಚೆ ಮಾಡತಕ್ಕಂಥಾದ್ದು ಅನಾವಶ್ಯಕ ಅಂದು ಕೊಳ್ಳುತ್ತೇನೆ. ಏಕೆಂದರೆ, ಸಮ್ಮಿಶ್ರ ಸರ್ಕಾರವನ್ನು ನಡೆಸುವಾಗ ಸೂಕ್ಷ್ಮ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕಾಗುತ್ತದೆ. ಅಂಥ ಒಂದು ಸಂದರ್ಭದಲ್ಲಿ ಕಳೆದ 18 ತಿಂಗಳಲ್ಲಿ ನಾವು ಸರ್ಕಾರವನ್ನು ನಡೆಸಬೇಕಾದರೆ, ಜನಗಳಲ್ಲಿ ಯಾವುದೇ ರೀತಿಯ ಅನುಮಾನ ಇರಬಹುದು, ಈ ಸರ್ಕಾರ ಅಭದ್ರ, ಈ ಸರ್ಕಾರ ಎಷ್ಟು ದಿವಸ ಇರುತ್ತದೋ, ಇಲ್ಲವೋ ಎನ್ನತಕ್ಕಂಥ ರೀತಿಯಲ್ಲಿ ಕೆಲವರು ಸೃಷ್ಟಿ ಮಾಡಲು ಹೊರಟರೂ ಸಹ ಈ ಸರ್ಕಾರ ಸುಭದ್ರವಾಗಿದ್ದು, ಕಲ್ಲುಬಂಡೆಯ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದೇವೆ. ಮುಂದೆಯೂ ಅದೇ ರೀತಿ ನಡೆಯುತ್ತೇವೆ. ಹಾಗಾಗಿ, ಈ ವಿಷಯಕ್ಕೆ ಹೆಚ್ಚಿನ ಮಹತ್ವ ಕೊಡುವುದು ಬೇಡ. ಆರಗ ಜ್ಞಾನೇಂದ್ರವರು ಮಾತನಾಡುವ ಸಂದರ್ಭದಲ್ಲಿ ಖರ್ಗೆಯವರು, ನಿಮಗೆ ಜನಾದೇಶವಾಗಿಲ್ಲ ಎನ್ನುವ ಮಾತನ್ನು ಹೇಳಿದರು. ಈ ಒಂದು ವಿಧಾನಸಭೆಗೆ ಯಾವುದೇ ಪಕ್ಷಕ್ಕೂ ಜನಾದೇಶವಾಗಿಲ್ಲ. ಜನರು ಯಾವ ಪಕ್ಷಕ್ಕೂ ಬಹುಮತ ಕೊಟ್ಟಿಲ್ಲ. ಇದು ಅತಂತ್ರ ವಿಧಾನಸಭೆ. ಕಳೆದ ಚುನಾವಣೆಯಲ್ಲಿ ಮತದಾರರು ಕೊಟ್ಟಿರತಕ್ಕಂಥಾದ್ದು ಅತಂತ್ರ ವಿಧಾನಸಭೆಯ ಆದೇಶ. ಇಂಥ ಒಂದು ಸನ್ನಿವೇಶದಲ್ಲಿ ಇವತ್ತು ಈ ಸರ್ಕಾರ ಭದ್ರವಾಗಿ ಹೋಗತಕ್ಕಂಥ ರೀತಿಯಲ್ಲಿ ಕೆಲಸವನ್ನು ಮಾಡಿದೆ. ಮಾಧುಸ್ವಾಮಿಯವರು ಈಗ ಇಲ್ಲಿ ಇಲ್ಲ. ಮೊನ್ನೆ ಅವರು ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ K.R.D.C.L. ಸಂಸ್ಥೆಯ ಬಗ್ಗೆ ಒಂದು ಪ್ರಸ್ತಾಪ ಮಾಡಿದರು. ಹೊರಗಡೆ ಜನ ಬೀದಿಯಲ್ಲಿ ಜನರು ಕುಮಾರಸ್ವಾಮಿ, ರೇವಣ್ಣ, ದೇವೇಗೌಡ, ಚನ್ನಮ್ಮ ಎಂದು ಚರ್ಚೆ ಮಾಡುತ್ತಾರೆ ಎಂದು ಹೇಳಿದರು. ಅವರು ಕುಮಾರಸ್ವಾಮಿ, ರೇವಣ್ಣ, ದೇವೇಗೌಡ, ಚನ್ನಮ್ಮ ಎಂದ ತಕ್ಷಣ ಆ ಕಡೆಯ ಬಹಳ ಜನ

ಚಪ್ಪಾಳೆ ಹೊಡೆದರು ಎನ್ನುವದೂ ನನಗೆ ಗೊತ್ತು. ಅದನ್ನು ಅವರು ಮೇಜು ಕುಟ್ಟಿ ಸ್ವಾಗತ ಮಾಡಿದರು. ನಮ್ಮ ಮೂರು ಜನರ ಮೇಲೆ ಹೇಳಲಿ, ತೊಂದರೆಯಿಲ್ಲ. ಏಕೆಂದರೆ ನಾವು ರಾಜಕಾರಣದಲ್ಲಿ ರತಕ್ಕಂಥವರು. ಕುಮಾರಸ್ವಾಮಿ, ರೇವಣ್ಣ, ದೇವೇಗೌಡರ ಹೆಸರನ್ನು ಹೇಳಲಿ. ದೇವೇಗೌಡರ ಬಗ್ಗೆ ಚರ್ಚೆಗಳು ಹಲವಾರು ರೀತಿಯಲ್ಲಿ ನಡೆಯುತ್ತವೆ. ಅವರಂಥ controversial ರಾಜಕಾರಣಿ ಈ ದೇಶದಲ್ಲೇ ಇಲ್ಲ. 50 ವರ್ಷಗಳಿಂದ ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಅವರದ್ದು ರಾಜಕಾರಣವೇ. ಅವರ ಹೆಸರನ್ನೂ ತೆಗೆದುಕೊಂಡು ಚರ್ಚೆ ಮಾಡೋಣವಂತೆ. ಆದರೆ ಚನ್ನಮ್ಮನವರು ಈ ಸದನದ ಸದಸ್ಯರೂ ಅಲ್ಲ. ಮಾಧುಸ್ವಾಮಿಯವರು ನಮ್ಮೆಲ್ಲರಿಗಿಂತ ಹಿರಿಯ ಸದಸ್ಯರು, ಅನುಭವವಿರುವವರು. ಅವರು ಹಲವಾರು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾದರೆ ತುಂಬಾ ಪರಿಣಾಮಕಾರಿಯಾಗಿ ಚರ್ಚೆ ಮಾಡುತ್ತಾರೆ. ಇವತ್ತು ನಾನು ಮುಖ್ಯಮಂತ್ರಿಯಾಗಿ ಅಲ್ಲ, ಒಬ್ಬ ತಾಯಿಯ ಮಗನಾಗಿ ಒಂದು ವಿಷಯವನ್ನು ಕೇಳಲಿಕ್ಕೆ ಬಯಸುತ್ತೇನೆ. ಸದನದಲ್ಲಿ ಎಲ್ಲ ಹಿರಿಯ ಸದಸ್ಯರುಗಳು ಕುಳಿತಿದ್ದೀರಿ. ಆ ಭಾಗದಲ್ಲಿ ಕುಳಿತಿರುವ ಹಲವಾರು ಜನರಿಗೂ ಚನ್ನಮ್ಮನವರ ಬಗ್ಗೆ, ಅವರ ನಡವಳಿಕೆ ಬಗ್ಗೆ ಅನುಭವ ಇದೆ. ಸನ್ಮಾನ್ಯ ಸಿಂಧ್ಯರವರು ಈಗ ಇಲ್ಲಿ ಇಲ್ಲ. ಸೋಮಣ್ಣನವರು ಇದ್ದಾರೆ. ಚನ್ನಮ್ಮನವರು ಯಾವ ರೀತಿ 50 ವರ್ಷಗಳು ಜೀವನ ಸಾಗಿಸಿದ್ದಾರೆ ಎಂದರೆ, ಮನೆಗೆ ಯಾರಾದರೂ ಹೋದರೆ, ಅವರು ಅವರ ಜೀವನದಲ್ಲಿ ಯಾವತ್ತೂ ರಾಜಕೀಯ ಪ್ರಸ್ತಾಪ ಮಾಡಿಲ್ಲ. ಊಟ ಮಾಡಿದೆಯಪ್ಪಾ, ಊಟ ಮಾಡು ಎಂದು ಹೇಳುತ್ತಾರಷ್ಟೇ. ಇಷ್ಟನ್ನು ಬಿಟ್ಟರೆ, ಅವರು ಯಾವ್ಯಾವ ರೀತಿಯಲ್ಲಿ ರಾಜಕಾರಣದಲ್ಲಿ ಇದುವರೆಗೂ ತಲೆ ಹಾಕಿಲ್ಲ. ಮಾಧುಸ್ವಾಮಿಯಂಥ ಒಬ್ಬ ಹಿರಿಯ ಸದಸ್ಯರು ಯಾವ ದೃಷ್ಟಿಯಿಂದ ಚನ್ನಮ್ಮನವರ ಹೆಸರನ್ನು ಇಲ್ಲಿಗೆ ತಂದರೋ ನನಗೆ ಅರ್ಥವಾಗಲಿಲ್ಲ. ನನಗೆ ನೋವಾಯಿತಷ್ಟೇ. ನಾವು ರಾಜಕಾರಣದಲ್ಲಿದ್ದೇವೆ, ನಮ್ಮ ಮೇಲೆ ಎಲ್ಲಾ ತರಹದ ಟೀಕೆಗಳನ್ನು ಮಾಡಲಿ. ಅದಕ್ಕೆ ಉತ್ತರ ಕೊಡೋಣವಂತೆ. ಆದರೆ, ತಮ್ಮ ಜೀವನದಲ್ಲಿ ಯಾವತ್ತೂ ಮನೆಯಿಂದ ಹೊರಗಡೆ ಬರದೇ ಇರತಕ್ಕಂಥ ಚನ್ನಮ್ಮನವರ ಬಗ್ಗೆ ಅವರು ಹೇಳಿದ್ದು ಸೂಕ್ತವಲ್ಲ ಎಂದು ನನಗೆ ಅನ್ನಿಸಿತು. ಆ ದೃಷ್ಟಿಯಿಂದ ಈ ಸಂದರ್ಭದಲ್ಲಿ ನಾನು ನೊಂದು ಈ ವಿಷಯವನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಇವತ್ತು ಅಧಿಕಾರದ ಹಸ್ತಾಂತರದ

ಚರ್ಚೆಯಾಗಿದೆ. ನಾನು ಒಂದು ವಿಷಯ ಹೇಳಲಿಕ್ಕೆ ಬಯಸುತ್ತೇನೆ. ಈ ರಾಜ್ಯದಲ್ಲಿ ಕಳೆದ 50 ವರ್ಷಗಳಿಂದ ಮುಖ್ಯಮಂತ್ರಿಗಳಾಗಬೇಕೆಂದು ಹಲವಾರು manipulation, ಹೋರಾಟ, ಇವೆಲ್ಲವನ್ನು ಮಾಡಿಕೊಂಡು ಬಂದಿದ್ದಾರೆ. ನಾನು ಮುಖ್ಯಮಂತ್ರಿ ಆಗಬೇಕೆಂದು 50 ವರ್ಷ ಅಲ್ಲ, 5 ದಿವಸ ಕೂಡ ಯೋಚನೆ, manipulation, ಮಾಡಿರಲಿಲ್ಲ. ಆಕಸ್ಮಿಕವಾಗಿ ಬಂದು ಈ ಜಾಗದಲ್ಲಿ ಕುಳಿತಿದ್ದೇನೆ. ಕಳೆದ 18 ತಿಂಗಳುಗಳಲ್ಲಿ ಯಾವುದೇ ರೀತಿಯ manipulation, ಮಾಡದೇ ಯಾವುದೋ ದೈವಾನುಗ್ರಹವೋ ಅಥವಾ ನಮ್ಮ ಶಾಸಕ ಮಿತ್ರರ ಒತ್ತಡಕ್ಕೋ ಏನೋ ಇವತ್ತು ಈ ಜಾಗದಲ್ಲಿದ್ದೇನೆ. ನಾನು ಒಂದು ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಜವಾಗಿ ನಿಮಗೆ ಲಾಟರಿ ಬಂದಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಹೌದೌದು, ನನಗೆ ಲಾಟರಿಯಲ್ಲೇ ಬಂದದ್ದು, ದೇವೇಗೌಡರು ಲಾಟರಿಯಿಂದಲೇ ಪ್ರಧಾನ ಮಂತ್ರಿಗಳಾದದ್ದು. ಅವರು ಲಾಟರಿ ಪ್ರಧಾನಮಂತ್ರಿಯೇ, ನಾನು ಲಾಟರಿ ಮುಖ್ಯಮಂತ್ರಿಯೇ, Actually, ಅದರಲ್ಲಿ ತಪ್ಪೇನೂ ಇಲ್ಲ. ಇವತ್ತಿನ ರಾಜಕಾರಣ ಆ ರೀತಿ ಆಗಿದೆ. ನಮ್ಮ ಅಧಿಕಾರದ ಹಸ್ತಾಂತರದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ನನಗೆ ಅಧಿಕಾರ ನಗಣ್ಯ. ಅಧಿಕಾರ ಕೊಟ್ಟ ಸಂದರ್ಭದಲ್ಲಿ ನಾನು ಯಾವ ರೀತಿಯ ಕೆಲಸ ಮಾಡುತ್ತೇನೆ ಎನ್ನುವ ಅರಿವು ಇಲ್ಲದೇ ಇದ್ದರೂ. . .

ಶ್ರೀ ಕೆ.ಆರ್.ರಮೇಶ್‌ಕುಮಾರ್ (ಶ್ರೀನಿವಾಸಪುರ) : ಬಹಳ ಉತ್ಸುಕದಿಂದ serious ಆಗಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. 1978ರಲ್ಲಿ ಏನಾಯಿತೆಂದರೆ, 1977ರಲ್ಲಿ ಕೇಂದ್ರದಲ್ಲಿ ಜನತಾ ಅಧಿಕಾರಕ್ಕೆ ಬಂದಿತ್ತು. ಇಲ್ಲಿ ರಾಜ್ಯದಲ್ಲಿ ದಿವಂಗತ ದೇವರಾಜ ಅರಸುರವರು ಅಂದು ಮುಖ್ಯಮಂತ್ರಿಯಾಗಿದ್ದರು. ಆ Delhi Special Police Actಗೆ ರಾಜ್ಯ ಸರ್ಕಾರದ consent withdraw ಮಾಡಬೇಕೆಂದು motion move ಮಾಡಿದಾಗ ಇಲ್ಲಿ ಚರ್ಚೆ ನಡೆಯುತ್ತಿತ್ತು. ದಿವಂಗತ ಅರಸುರವರು ನೀವು ಕುಳಿತ (ಮುಖ್ಯಮಂತ್ರಿ ಆಸನ) ಜಾಗದಲ್ಲಿ ಕುಳಿತು serious ಆಗಿ 'ಏನೆಲ್ಲ ಮಾಡಿದರು ಕೇಂದ್ರ ಸರ್ಕಾರದವರು, ನನ್ನ ಮನೆ, ನನ್ನ ತೋಟ, ನನ್ನ friends ಮನೆಗಳಲ್ಲಿ ಏನೂ ಬಿಡಲಿಲ್ಲ. ಹುಣಸೂರಿನಲ್ಲಿ ಬಂದು ನಮ್ಮ ಹೊಲ ಎಲ್ಲ ಅಗೆದುಬಿಟ್ಟರು. ಏನೂ ಸಿಗಲಿಲ್ಲ' ಎಂದು ಹೇಳಿದರು. ಆಗ

ದಿವಂಗತ ಜೆ.ಹೆಚ್.ಪಟೇಲರು ವಿರೋಧ ಪಕ್ಷದ ಕಡೆಯಲ್ಲಿ ಕುಳಿತಿದ್ದರು. 'ದಡ್ಡರು, ಅವರಿಗೆ ಗೊತ್ತಿಲ್ಲ' ಎಂದು ಹೇಳಿ, 'ಎಲ್ಲಿಟ್ಟಿದ್ದೀರಿ ನನಗೆ ಹೇಳಿ' ಎಂದು ಹೇಳಿದರು. ಪಾಪ, ಹೇಗಾಯಿತು ಎಂದರೆ, ಆಮೇಲೆ ಅರಸರು– ಕಂಡಿತ ಹೇಳುವುದಾಗಿದ್ದರೆ ನಿಮಗೇ ಹೇಳುತ್ತೇನೆಂದು ಹೇಳಿದರು. ಪಟೇಲ್ರು ಅಷ್ಟು ಹಾಸ್ಯಾಸ್ಪದವಾಗಿ 'ಎಲ್ಲೋ ನೀವು ಇಟ್ಟಿದ್ದೀರಿ, ಅದು ಯಾರ ಕೈಗೂ ಸಿಗಲಿಲ್ಲವೆಂದು' ಹೇಳಿದರು. ಹಾಗೆ, ನಾವು ನಿಮಗೆ ಕೇಳುವುದೇನೆಂದರೆ, ಅಧಿಕಾರದ ಹಸ್ತಾಂತರದ ಬಗ್ಗೆ ಎಲ್ಲ ಬಹಳ ಚೆನ್ನಾಗಿ ಹೇಳಿದಿರಿ. Actual ಆಗಿ ಏನು ಮಾಡುತ್ತೀರಿ ಎನ್ನುವುದನ್ನು ಸ್ವಲ್ಪ ಹೇಳಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾನು ಹಲವಾರು ಬಾರಿ ಸ್ಪಷ್ಟೀಕರಣ ನೀಡಿದ್ದೇನೆ. ನನಗೆ ಮತ್ತು ಯಡಿಯೂರಪ್ಪನವರಿಗೆ ಅದರ ಬಗ್ಗೆ ಚಿಂತೆ ಇಲ್ಲ. ಆದರೆ ಬೇರೆಯವರಿಗೆ, ವಿರೋಧ ಪಕ್ಷದಲ್ಲಿ ಕುಳಿತವರಿಗೆ ಚಿಂತೆ ಜಾಸ್ತಿ ಇದೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ರಾಜ್ಯದ ಸಮಸ್ಯೆ ಇದೆಯಲ್ಲ. ನಿಮ್ಮ internal arrangements ಏನೇ ಇರಬಹುದು. ನಿಮ್ಮ internal arrangements ಏನಾದರೂ ಮಾಡಿಕೊಂಡಿರಬಹುದು. But ಖಾಸಗಿ statement ನಿಂದ problem ಆಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಹಿರಿಯ ಸದಸ್ಯರುಗಳು ಪ್ರಸ್ತಾಪ ಮಾಡಿದ ವಿಷಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಳೆದ 8–10 ತಿಂಗಳುಗಳಿಂದ ಈ ಅಧಿಕಾರದ ಹಸ್ತಾಂತರ ವಿಷಯದಲ್ಲಿಯೇ ಪ್ರತಿನಿತ್ಯ ಹಲವಾರು ರೀತಿಯ ಪ್ರಮುಖವಾದ ಪತ್ರಿಕೆಗಳಲ್ಲಿ ವಿಶ್ಲೇಷಣೆಗಳು, ವಿರೋಧ ಪಕ್ಷದ ಪ್ರಮುಖವಾಗಿರುವ ನಾಯಕರುಗಳು ಸಾರ್ವಜನಿಕ ಸಭೆಗಳಲ್ಲಿ ಚರ್ಚೆ ಮಾಡಬೇಕಾದರೆ ಅವರೇನು ಭವಿಷ್ಯಗಳನ್ನು ನುಡಿಯುತ್ತಿದ್ದಾರೆ ಇದರಿಂದ ಅಧಿಕಾರ ನಡೆಸುತ್ತಿರುವ ಸಂದರ್ಭದಲ್ಲಿ ಅಧಿಕಾರಿಗಳಲ್ಲಿ ಸರ್ಕಾರದ ಬಗ್ಗೆ ಯಾವ ರೀತಿಯ ವಿಶ್ವಾಸವಿರುತ್ತದೆ, ಜನಗಳಲ್ಲಿ ವಿಶ್ವಾಸವಿರುತ್ತದೆ ಎನ್ನುವುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಈ ವಿಷಯ ಕಳೆದ 8 ತಿಂಗಳಿಂದಲೇ ಪ್ರಾರಂಭವಾಗಿದೆ. ಇನ್ನೂ 2 ತಿಂಗಳು ಬಾಕಿ ಇದೆ. ಈಗಲೂ ಇದರ ವಿಷಯವನ್ನು ಚರ್ಚೆ ಮಾಡುತ್ತಿದ್ದರೆ ಈ ಸರ್ಕಾರ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರತಕ್ಕಂಥದ್ದಕ್ಕೆ ಯಾವ ರೀತಿ ನಾವು ಕೆಲಸ ಮಾಡಬೇಕೆನ್ನುವುದನ್ನು ತಾವೇ ಹೇಳಬೇಕು. ಅದಕ್ಕೋಸ್ಕರವೇ ನಾನು

ಅಧಿಕಾರದ ಹಸ್ತಾಂತರದ ವಿಷಯದಲ್ಲಿ ಹಲವಾರು ಬಾರಿ ಏನು ಸ್ಪಷ್ಟೀಕರಣ ಕೊಟ್ಟಿದ್ದೇವೆ, ನಮ್ಮಿಬ್ಬರ ಮಧ್ಯೆ ಆಗಿರುವ ಒಡಂಬಡಿಕೆ ಏನಿದೆ, ನಮಗೆ ಸೇರಿರುವುದರಿಂದ ನಾವು ಕುಳಿತು ತೀರ್ಮಾನ ಮಾಡಿಕೊಳ್ಳುತ್ತೇವೆ. ನನಗೆ ಇನೂ ಚಿಕ್ಕ ವಯಸ್ಸು ಇದೆ. ಹಲವಾರು ಜನ ಬೇರೆ ಬೇರೆ ರೀತಿಯ ವ್ಯಾಖ್ಯಾನ ಮಾಡುತ್ತಿರಬಹುದು. ನಾನು ಈ ಅಧಿಕಾರಕ್ಕೆ ಬಂದ ದಿವಸದಿಮದಲೇ ಮನಸ್ಸಿನಲ್ಲಿ ತೀರ್ಮಾನ ಮಾಡಿಯೇ ಕುಳಿತಿದ್ದೇನೆ. ಅಧಿಕಾರ ಯಾವುದೇ ಕಾರಣಕ್ಕೂ ಶಾಶ್ವತವಲ್ಲವೆನ್ನುವುದು ನನಗೆ ಗೊತ್ತಿದೆ. ಈ ರಾಜ್ಯದ ಜನರಲ್ಲಿ ಒಬ್ಬ ಮುಖ್ಯಮಂತ್ರಿಯಾಗಿ ಕೆಲಸ ಮಾಡಿರತಕ್ಕಂಥವರು ಯಾವ ರೀತಿ ನಡೆದುಕೊಂಡ ಎನ್ನುವುದರ ಬಗ್ಗೆ ಇತಿಹಾಸಕಾರರು ಬರೆಯಬೇಕೆನ್ನುವ ಕೆಲಸ ಮಾಡಬೇಕೆನ್ನುವುದು ನನ್ನ ಮನಸ್ಸಿನ ಸಂಕಲ್ಪವಾಗಿದೆ. ಇವತ್ತು ನಮ್ಮ ideology different ಆಗಿ ಇರಬಹುದು, ತಂದೆ ಮಕ್ಕಳು ನಾವು ನಾಟಕವನ್ನೇ ಆಡಿರಬಹುದು. ಅದನ್ನೇ ನೀವು ಇಟ್ಟುಕೊಂಡುಬಿಡಿ. ಆದರೆ, ತಂದೆಯ ವಿರೋಧವನ್ನು ಕಟ್ಟಿಕೊಂಡು ನಾನು ಈ ಪಕ್ಷವನ್ನು ಉಳಿಸುವುದಕ್ಕೆ ಆವತ್ತು ತೀರ್ಮಾನ ಮಾಡಿದೆವು. ಹೌದು. ನಮ್ಮ ಶಾಸಕರು ನಮಗೆಲ್ಲ ಒತ್ತಡ ತಂದರು. ಆ ಒತ್ತಡದ ಮೇಲೆ ನಮ್ಮ ತಂದೆಯವರ ವಿರೋಧ ಕಟ್ಟಿಕೊಂಡು ಈ ಜಾಗದಲ್ಲಿ ಏನು ಕುಳಿತಿದ್ದೇನೆ, ಬಹಶಃ ಇತಿಹಾಸದಲ್ಲಿ ತಂದೆಯ ವಿರೋಧವನ್ನು ಕಟ್ಟಿಕೊಂಡು ಈ ರೀತಿ ಮಾಡಿರುವುದು ನಾನೇ ಇರಬಹುದು. ಆದರೆ ಆವತ್ತು ತೆಗೆದುಕೊಂಡಂಥ ನಿರ್ಧಾರಗಳು ಮುಂದಿನ ದಿನಗಳಲ್ಲಿ ನನಗೊಂದು ಸವಾಲು ಇದೆ. ಈ ರಾಜ್ಯದ ಜನರ ವಿಶ್ವಾಸವನ್ನು ಗಳಿಸಬೇಕೆನ್ನುವ ದೃಷ್ಟಿಯಿಂದಲೇ ಪ್ರಮಾಣಿಕವಾಗಿ ದುಡಿಯುವ ಕೆಲಸವನ್ನೇನು ಮಾಡಿದ್ದೇನೆ, ವಿಧವಾವೇತನ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನ 100 ರೂ., ಇದ್ದುದನ್ನು ಕಳೆದ ವರ್ಷ 200 ರೂಪಾಯಿಗಳಿಗೆ ಏರಿಸಿ, ಈ ವರ್ಷ 400 ರೂಪಾಯಿಗಳಿಗೆ ಏರಿಸಬೇಕಾದರೆ ಇವತ್ತು ನಾನು ಗ್ರಾಮ ವಾಸ್ತವ್ಯ ಮಾಡದೇ ವಿಧಾನಸೌಧದಲ್ಲಿ ವಾಸ್ತವ್ಯ ಮಾಡಿದ್ದರೆ ಈ ರೀತಿ ಮಾಡುವುದಕ್ಕಾಗುತ್ತಿರಲಿಲ್ಲ. ಇವತ್ತು ಯಾರು ಹಳ್ಳಿಯಲ್ಲಿ ಆ ಧ್ವನಿ ಇಲ್ಲದಿರತಕ್ಕಂಥ ಜನ ಇದ್ದಾರೆ, ಅದರಲ್ಲಿ ಯಾವ ಜಾತಿಗೆ ಸಂಬಂಧ ಪಟ್ಟವರು ಎನ್ನುವುದಕ್ಕೆ ಸೀಮಿತ ಇರುವುದಿಲ್ಲ. ಅಲ್ಲಿ ಎಲ್ಲಾ ಸಮಾಜಕ್ಕೆ ಸೇರಿರತಕ್ಕಂಥವರಿದ್ದಾರೆ. ಈಗ ಎರಡೂವರೆ ಸಾವಿರ ಕೋಟಿ ರೂಪಾಯಿ ಗಳವರೆಗೆ ಸಾಲ ಮನ್ನಾ ತರಲಿಕ್ಕೆ ನಾನು ಮತ್ತು ಯಡಿಯೂರಪ್ಪನವರು

ತೀರ್ಮಾನ ಮಾಡಿದೆವು, ಕಬ್ಬು ಬೆಳೆಗಾರರ ವಿಷಯದಲ್ಲಿ ನಾವೇನು ತೀರ್ಮಾನ ಮಾಡಿದ್ದೇವೆ, ಇವೆಲ್ಲ ಮಾಡಲಿಕ್ಕೆ ಕಾರ ನಾನು ಹಳ್ಳಿಗಳಿಗೆ ಭೇಟಿ ಕೊಟ್ಟು ಗ್ರಾಮ ವಾಸ್ತವ್ಯ ಮಾಡಿದುದರ ಹಿನ್ನೆಲೆ ಎಂದು ಮತ್ತೊಮ್ಮೆ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ದೇಶಪಾಂಡೆಯವರು ಸದನದಲ್ಲಿ ಕುಳಿತಿದ್ದಾರೆ. ನಾನು ಅವರ ತಾಲ್ಲೂಕಿಗೆ ಹೋಗಿಬಂದೆ. ನೀವು ಕೈಗಾರಿಕೆಗಳ ಬಗ್ಗೆ ಬಹಳ ಚರ್ಚೆ ಮಾಡಿದಿರಿ. ಹಲವಾರು ರೀತಿಯ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ನೀವು ಸುದೀರ್ಘವಾಗಿ ಕೈಗಾರಿಕಾ ಸಚಿವರಾಗಿ ಕೆಲಸ ಮಾಡಿದ್ದೀರಿ. ಆದರೆ, ನಿಮ್ಮ ಕ್ಷೇತ್ರದಲ್ಲಿಯೇ ಇರುವ 2 ಕೈಗಾರಿಕೆಗಳ ಬಗ್ಗೆ ರಾತ್ರಿ 9–10 ಗಂಟೆಯಲ್ಲಿ 8–10 ಸಾವಿರ ಜನ ಏತಕ್ಕೋಸ್ಕರವಾಗಿ ಅಲ್ಲಿ ಅಕ್ರೋಶ ವ್ಯಕ್ತಪಡಿಸತಕ್ಕಂಥ ಕೆಲಸ ಮಾಡಿದರು? NGEF ಇರಬಹುದು, ಹಲವಾರು ರೀತಿಯ public sector ಗಳು ಮುಚ್ಚುವ ಕೆಲಸ ಯಾರ ಕಾಲದಲ್ಲಿ ಯಾವಾಗ ಆಯಿತು? ಇದೆಲ್ಲದರ ಬಗ್ಗೆ ಕುಳಿತು ಯೋಚನೆ ಮಾಡಬೇಕಾಗುತ್ತದೆ. ಒಂದು ಕಡೆ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಬೇಕೆಂದು ನಾವು ಹೇಳುತ್ತೇವೆ. ಯಾವ ಕಾರಣಕ್ಕೋಸ್ಕರವಾಗಿ ಈ ರೀತಿ ಸರ್ಕಾರವು ನಡೆಸುತ್ತಿದ್ದ ಸಂಸ್ಥೆಗಳು ಹಳಾಗುತ್ತಿವೆ? ಇವೆಲ್ಲ ನನ್ನ ಅಧಿಕಾರಾವಧಿಯ 18 ತಿಂಗಳು ಆಗಿರುವಂಥವು ಇಲ್ಲ. ಈ ಬಗ್ಗೆ ನಾವೆಲ್ಲ ಮುಕ್ತವಾದ ಮನಸ್ಸಿನಿಂದ ಚರ್ಚೆ ಮಾಡಬೇಕಾಗಿದೆ. ಈ ವಿಷಯವನ್ನು ಸರ್ಕಾರ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಸಮಯದಲ್ಲಿ ನಾನು ಎಲ್ಲರ ಸಹಕಾರವನ್ನು ಕೋರುತ್ತೇನೆ. ಮೊನ್ನೆ ಲೋಕಾಯುಕ್ತದವರ ವಿಷಯದಲ್ಲಿ ಕೆಲವರು ಚರ್ಚೆ ಮಾಡಿದರು. ಲೋಕಾಯುಕ್ತದವರು ನಮ್ಮ ಸದಸ್ಯರುಗಳಿಗೆ ಅವರ ಮತ್ತು ಅವರ ಕುಟುಂಬದ ಆಸ್ತಿ ಬಗ್ಗೆ ವಾರ್ಷಿಕ ವಿವರಗಳನ್ನು ಏನು ಕಳುಹಿಸಿದ್ದಾರೆ, ಮತ್ತೆ ನಮ್ಮ ಹತ್ತಿರ Clarification ಏನು ಕೇಳಿದ್ದಾರೆ, ನನಗೂ ಕೂಡ Clarification ಕೇಳಿ ವಾಪಸ್ಸು ಕಳುಹಿಸಿದ್ದಾರೆ. ಇವತ್ತು ನಾವು ಕರ್ತವ್ಯವನ್ನು ನಿರ್ವಹಿಸುವ ಸಂದರ್ಭದಲ್ಲಿ ಲೋಕಾಯುಕ್ತವೆನ್ನುವ ಸಂಸ್ಥೆಯನ್ನು ನಾವು ತಂದಿದ್ದೇವೆ. ನನ್ನ ಹತ್ತಿರ ರಾಮಕೃಷ್ಣ ಹೆಗಡೆಯವರ ಆ ಕಾಲದಲ್ಲಿ ಏನು ಭಾಷಣ ಮಾಡಿದ್ದಾರೆ, ಅದರ ಕಾಪಿಯನ್ನು ಇಲ್ಲಿ ತಂದು ಇಟ್ಟುಕೊಂಡಿದ್ದೇನೆ. ನಾನು ಅದನ್ನೆಲ್ಲ ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ. ಅದನ್ನೆಲ್ಲ ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಅತ್ಯಂತ ಮಹತ್ವವಾದ ನಿರ್ಣಯವನ್ನು ಏನು ನಾವು ಮಾಡಿದ್ದೇವೆ, ಇವತ್ತು ಈ ಒಂದು

ಲೋಕಾಯುಕ್ತವನ್ನು ಸದೃಢಗೊಳಿಸುವ ಕೆಲಸ ಮಾಡಿದ್ದೇವೆ, ಇವತ್ತು ಮುಖ್ಯಮಂತ್ರಿಗಳು ಸೇರಿದ ಹಾಗೆ ಆ ವ್ಯಾಪ್ತಿಗೆ ತರುತ್ತೇವೆಂದು ಆವತ್ತು ದಿವಂಗತ ರಾಮಕೃಷ್ಣ ಹೆಗಡೆಯವರು ಈ ಸಭೆಯಲ್ಲಿ ಈ ಸ್ಥಾನದಲ್ಲಿ ನಿಂತು ಏನು ಭಾಷಣ ಮಾಡಿದ್ದಾರೆ, ಅದೆಲ್ಲವನ್ನು ನಾನು ಓದಿದ್ದೇನೆ. ಇವತ್ತು ಲೋಕಾಯುಕ್ತ ಸಂಸ್ಥೆ ಕೆಸ ಮಾಡಬೇಕಾದರೆ, ಆ ಗೌರವಯುತವಾದ ಸಂಸ್ಥೆಯ ಬಗ್ಗೆ ನಾವು ಚರ್ಚೆ ಮಾಡುವ ಸಂದರ್ಭದಲ್ಲಿ ನಮ್ಮ ಜವಾಬ್ದಾರಿ ನಿರ್ವಹಿಸಬೇಕಾದರೆ ನಾವೇನು ಜನರಿಂದ ನೇರವಾಗಿ ಆರಿಸಿ ಬರುತ್ತೇವೆ, ಜನರ ಮುಂದೆ ನಮ್ಮ ತಪ್ಪುಗಳಿರಬಹುದು, ಸರಿಯಾದ ನಡವಳಿಕೆ ಇರಬಹುದು, ಸ್ಪಷ್ಟೀಕರಣ ಕೊಡಬೇಕಾದಂಥ ಸ್ಥಾನದಲ್ಲಿ ನಾವಿದ್ದೇವೆ. ಅದು ಯಾವ್ಯಾವ ರೀತಿಯ ವಿಷಯಗಳು ಪ್ರಸ್ತಾಪವಾಗುತ್ತವೆ, ಯಾವ್ಯಾವ ರೀತಿಯ ಆಪಾದನೆಗಳು ಬರುತ್ತವೆ, ಅಧಿಕಾರಿಗಳು ಕೂಡ ಇದಕ್ಕೆ ಉತ್ತರ ಕೊಡುವ ಸ್ಥಾನದಲ್ಲಿಲ್ಲ. ಅತ್ಯಂತ ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸತಕ್ಕಂಥ ಜನಪ್ರತಿನಿಧಿಗಳಾದ ನಾವೇನಿದ್ದೇವೆ. ನಮ್ಮ ಬಗ್ಗೆ ಏನೇ ಟೀಕೆ ಬರಲಿ, ಆ ಟೀಕೆಗಳಿಗೆ ಸಮಜಾಯಿಷಿ ಕೊಡುವುದಕ್ಕೆ ನಾವು ಅವುಗಳನ್ನು ಸ್ವೀಕಾರ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ, ಯಾವುದೇ ಕಾರಣಕ್ಕೂ ನಾವು ಕೆಲವು ಸಂಸ್ಥೆಗಳ ರಚನೆಯನ್ನು ಏನು ಮಾಡಿರುತ್ತೇವೆ, ಆ ಸಂಸ್ಥೆಗಳ ಬಗ್ಗೆ ಚರ್ಚೆಯನ್ನು ಮಾಡಬೇಕಾದರೆ ಸಾರ್ವಜನಿಕವಾಗಿ ಒಂದು ರೀತಿಯ ಅನುಮಾನಗಳು, ಒಂದು ರೀತಿಯಾಗಿ ಆ ಸಂಸ್ಥೆಗಳ ಬಗ್ಗೆ ಕೆಟ್ಟ ಅಭಿಪ್ರಾಯ ಬರದಿರುವ ರೀತಿಯಲ್ಲಿ ನಾವು ನಮ್ಮ ಚರ್ಚೆಯನ್ನು ಇಟ್ಟುಕೊಳ್ಳುವುದು ಒಳ್ಳೆಯದು.

(3-00 PM)

ಶ್ರೀ ಕೆ.ಆರ್.ರಮೇಶ್‌ಕುಮಾರ್ : Proceedings ತೆಗೆಸಿ. ಈ ಸದನ ಅದನ್ನು ಪಾಸ್ ಮಾಡಿದೆ. ನಮಗೆ ಅದರ ಬಗ್ಗೆ ಗೌರವವಿದೆ ಎಂದು ಎಲ್ಲವನ್ನೂ ಹೇಳಿ ಕೆಲವು ವಿವರಣೆಗಳನ್ನು, ಕರ್ತವ್ಯಗಳನು ನಿರ್ವಹಣೆ ಮಾಡಿದ್ದಾದ ಮೇಲೆ ಆ ವಿವರಣೆಗಳನ್ನು ಕೇಳುವ ಹಂತದಲ್ಲಿ ಮಾಧ್ಯಮಗಳ ಮೂಲಕ ನಮ್ಮನ್ನು villains ತರಹ ರೀತಿ ತೋರಿಸುವುದು, ಇವರೇನೋ ಬಚ್ಚಿಟ್ಟಿದ್ದಾರೆ, ಇವರೆಲ್ಲ ಈ ತರಹದವರೇ ಎನ್ನುವ ಪ್ರಯತ್ನ ಮಾಡುವುದನ್ನು ನಾನು ಟೀಕ್ ಮಾಡಿದ್ದೇನೆ. ಉಳಿದ ಹಾಗೆ ಲೋಕಾಯುಕ್ತ institution, ಅವರ ಬಗ್ಗೆ ನಾವೇನೂ ಮಾತನಾಡಿಲ್ಲ. ಮಾಧ್ಯಮದವರು ಅದನ್ನು

ಪ್ರತಿಬಿಂಬಿಸುವಾಗ ಅವರು ತಮ್ಮದೇ ಆದ ಶೈಲಿಯಲ್ಲಿ ಅವರು ಮಾಡಿದ್ದಾರೆ. ಈಗಲೂ ಕೂಡ ನನ್ನ ಅಭಿಪ್ರಾಯಕ್ಕೆ ನಾನು ಬದ್ಧನಾಗಿದ್ದೇನೆ. ಈಗ ನಮ್ಮ ಹತ್ತಿರ ಏನೇನಿದೆ ಎಂದು ನಾವು ವಿವರಗಳನ್ನು ಕೊಡುತ್ತೇವೆ. 60 ವರ್ಷಗಳ ಕೆಳಗೆ ನನ್ನ ತಂದೆ ಯಾವುದೋ ಜಮೀನು ಮಾಡಿದರೆ, ಅದು ಹೇಗೆ ಬಂತು ಹೇಳಿ? Returns file ಮಾಡುತ್ತಿರಲಿಲ್ಲ. File ಮಾಡಬೇಕು. ನಮ್ಮ ಆಸ್ತಿ, ಸಾಲ ಸೋಲ, ನಮ್ಮ ಹತ್ತಿರ ಇದ್ದದ್ದನ್ನು ಒಪ್ಪಿಸಬೇಕು. We are accountable to Lokayukta. ಅದಕ್ಕೆ ನಾನು ಹಿಂದೆ ಹೋಗುವ ಪ್ರಶ್ನೆಯೇ ಇಲ್ಲ. ಅದೇ ಸಮಯದಲ್ಲಿ ನಾನು ಹೇಳಿದೆ, 3–3, 4–4 generation ಗೆ ಬೇಕಾಗಿರುವಷ್ಟು ಮಾಡಿ ನುಂಗಿ ನೀರು ಕುಡಿದವರಿಗೇನೂ ಶಿಕ್ಷೆಯೇ ಇಲ್ಲ. ಹೆದರಿ, ಭಯಭಕ್ತಿಯಿಂದ ಎಲ್ಲ ಲೆಕ್ಕ ಕೊಟ್ಟು, ನಮ್ಮ ಹತ್ತಿರ ಏನೇನಿದೆ, ಚೈನ್ ಎಷ್ಟು, ಉಂಗುರ ಎಷ್ಟು ಎಂದು ಲೆಕ್ಕ ಕೊಟ್ಟರೆ, ನಮ್ಮನ್ನು ಇವರು ಬೇಟೆಯಾಡುವುದಕ್ಕೆ ಶುರು ಮಾಡಿದರೆ ಇಲ್ಲಿ ಈ ರಾಜ್ಯ, ದೇಶದಲ್ಲಿ ಯಾರು ಯಾರಿಗೆ ಶಿಕ್ಷೆಯಾಗಿದೆ? ನಮ್ಮ ಎದುರಿಗೆ ಎಲ್ಲ ಮಾಡಿಕೊಂಡು 10–15 ವರ್ಷಗಳ ಕೆಲಗೆ ಏನೂ ಇಲ್ಲದವರು ಇವತ್ತು ಕೋಟ್ಯಾಧೀಶರಾಗಿ ಮೆರೆಯುತ್ತಿದ್ದಾರೆ. ನಮ್ಮಲ್ಲೇನು ಬೇರೆ ಬೇರೆ Certificate ಕೊಡುತ್ತಾರೆಯೇ? ಬೇರೆ ಬೇರೆ Chairಗಳನ್ನು ಹಾಕುತ್ತಾರೆಯೇ? ಒಳಗಡೆ ಬರಬೇಕಾಗಿದ್ದರೆ ಭ್ರಷ್ಟರಿಗೆ ಏನಾದರೂ Scanning machine ಇದೆಯೇ? ಯಾರು honest, ಯಾರು dishonest? ಈ ವಿಚಾರಗಳನ್ನು ನಾನು ಮಾತನಾಡುವಾಗ ಹೇಳಿದ್ದೇನೆ. ನಮ್ಮನ್ನೂ ಒಳಪಡಿಸಿಕೊಂಡು ನಾನು ಹೇಳುತ್ತಾ, ಆ details ಬಹುಶಃ ಅದು ಲೋಕಾಯುಕ್ತದವರೆಗೂ ಹೋಗಿರುತ್ತದೆ ಎನ್ನುವುದಕ್ಕೋಸ್ಕರ ಕೆಳಗಿನ ಹಂತದಲ್ಲಿರುವವರಿಗೆ ಕುಚೇಷ್ಟೆ ಮಾಡುವುದು ಎಂದು ನಾನು ಹೇಳಿದೆ. ನಾನು ಎಮ್ಮೆಯನ್ನು ಇಟ್ಟುಕೊಂಡಿದ್ದೇನೆ. ಕುರಿ ಇಟ್ಟುಕೊಂಡಿದ್ದೇನೆ. ನಾಳೆ ದಿವಸ ಇವರು ಮನಃ ವಿವರಣೆ ಕೇಳಿದರೆ, ಇದರಲ್ಲಿ ಲದ್ದಿ ಎಷ್ಟು ಹಾಕಿತು? ಅದರ ಮೌಲ್ಯವೆಷ್ಟು? ಅದನ್ನು ಯಾರಿಗೆ ಮಾರಿದಿರಿ? ನಿಮ್ಮ ಹೊಲಕ್ಕೆ ಹಾಕಿದಿರಾ? ಎಂದು ಕೇಳಿದರೆ ನಾನು details ಅನ್ನು ಎಲ್ಲಿ ತಂದು ಕೊಡಲಿ? ಈ ವಿಚಾರವನ್ನು ನಾನು ಹೇಳಿದೆ. ಲೋಕಾಯುಕ್ತರವರನ್ನು ಅಗೌರವಿಸಬೇಕು, ಆ ಸಂಸ್ಥೆಯನ್ನು ಕಡೆಗಾಣಿಸಬೇಕು ಅಥವಾ ನಾವು ಎಂಎಲ್ಎಗಳು ಪಾಳೇಗಾರರು, ನಮ್ಮ ಲೆಕ್ಕ

ಕೇಳಬಾರದು ಎನ್ನತಕ್ಕಂಥ ಅಭಿಪ್ರಾಯದಿಂದಲ್ಲ. ದೇವರ ಪುಣ್ಯಕ್ಕೆ ನೀವು ಸ್ಪಷ್ಟೀಕರಣಕ್ಕೆ ಕೇಳಿದ್ದು ಒಳ್ಳೆಯದಾಯಿತು. ಈಗಲಾದರೂ ಅವರು ಆ ವಿಧಾನವೇನಿದೆ, ಅಪೂರ್ಣ ಲೆಕ್ಕ ಕೊಟ್ಟಂಥ ಶಾಸಕರ ಪಟ್ಟಿ ಎಂದು ಟಿ.ವಿ.ಯಲ್ಲಿ ಹಾಕುವುದು, ಪೇಪರ್‌ನಲ್ಲಿ ಬರೆಯುವುದು, ಸರಿಯಲ್ಲ ಜನರಿಗೆ ಏನಾಗುತ್ತದೆಂದರೆ, ಅವರಿಗೆ ಈ details ಗೊತ್ತಾಗುವುದಿಲ್ಲ. ಇವರು ಕಳ್ಳರು ಏನೋ ಬಚ್ಚಿಟ್ಟಿದ್ದಾರೆಂದು ಭಾವಿಸುತ್ತಾರೆ. ಏನು ಬಚ್ಚಿಟ್ಟುಕೊಂಡಿದ್ದೇವೆ? ನಾವೀಗ ಯಾವ ಸ್ಥಿತಿಗೆ ತಲುಪಿದ್ದೇವೆಂದರೆ, extra ಹೊಡೆದವರೇನಾದರೂ ಕೊಡುತ್ತಾರೆನೋ, ಅದನ್ನು ತೆಗೆದುಕೊಳ್ಳೋಣವೆನ್ನುವ stage ನಲ್ಲಿ ನಾವಿದ್ದೇವೆ. ಎಲ್ಲಿ ಬಚ್ಚಿಡುವುದು ನಾವು? ಪ್ರಕಾಶ್‌ರವರೇ, ನಾನು ಲೆಕ್ಕ ಕೊಟ್ಟಿದ್ದೇನೆ. 6 ಉಂಗುರ, 3 ಸರ, ಬೆಳ್ಳಿಯ 6 ಲೋಟ ಇವೆ, 3 ತಟ್ಟೆ ಇವೆ, ಅದಕ್ಕಿಂತಲೂ ಹೆಚ್ಚು ಏನಾದರೂ ಇದ್ದರೆ ನೀವೇ ತೆಗೆದುಕೊಂಡು ಹೋಗಿ ಸಾರ್. Chief Minister Relief Fund ಗೆ ಹಾಕಿಕೊಂಡುಬಿಡಿ. ನಮಗೆ ಇಷ್ಟೂ ಯೋಗ್ಯತೆ ಇರುವುದಿಲ್ಲವೇ? ಅದಕ್ಕೆ ಅವರು ತೂಕ ಎಂದು ಲೆಕ್ಕ ಕೇಳಿದರೆ, ಈಗಾಗಲೇ ನಾವು ಮನೆಯಲ್ಲಿ ಬಯ್ಯಿಸಿಕೊಳ್ಳುತ್ತಿದ್ದೇವೆ. "ಅವರು ಹೀಗಿದ್ದಾರೆ, ಇವರು ಹೀಗಿದ್ದಾರೆ, ಅವರ ಹತ್ತಿರ ಹೊಂಡಾ ಸಿಟಿ ಕಾರ್ ಇದೆ, ಇವರದು palace orchard ನಲ್ಲಿ ಮನೆ ಇದೆ, ಅವರ ವರಾಂಡವನ್ನು ನಮ್ಮ ಮನೆ ಇಲ್ಲ," ಎಂದು ಹೇಳುತ್ತಾರೆ. ಬಾಡಿಗೆ ಮನೆ ಸಾರ್ ನಮ್ಮದು. ಅದರ ಜೊತೆಗೆ ಇದೊಂದು ನೋಟೀಸ್ ಬಂದರೆ ನಮ್ಮ ಗತಿ ಏನಾಗುತ್ತದೆ? ಇದು ಮಾಡುವ ಸ್ಥಿತಿಯಲ್ಲಿಲ್ಲ ನಾವು. ಈಗಲೇ ಇದೆಲ್ಲ ವಯಸ್ಸಾದ ಮೇಲೆ ಈ ರಾಮಾಯಣಗಳು ಮನೆಯಲ್ಲಿ ಶುರುವಾಗುವುದು. ವಯಸ್ಸಿದ್ದಾಗ ಕವರ್ ಅಪ್ ನಾವು ಮಾಡಿಕೊಂಡು ಬಿಡುತ್ತೇವೆ. ಅದರ ಕಡೆ ಗಮನ ಇರುವುದಿಲ್ಲ. ಈಗ ಹೆಚ್ಚು activities ಇರುವುದಿಲ್ಲ. ಅದೇನು ಮಾಡಿದಿರಿ, ಇದೇನು ಮಾಡಿದಿರಿ ಎಂದು ಇವೆಲ್ಲ ಕೇಳುತ್ತಾರೆ. ನಮ್ಮ ಕಷ್ಟ ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ನಿಮಗೆ ನಮ್ಮಷ್ಟು ಇನ್ನೂ ವಯಸಾಗಿಲ್ಲ. ನೀವು ನಿಮ್ಮದೇ ಲೋಕದಲ್ಲಿದ್ದೀರಿ. ನಮ್ಮ ಕಷ್ಟವನ್ನೂ ಸ್ವಲ್ಪ ಅರ್ತ ಮಾಡಿಕೊಳ್ಳಿ. ನಮ್ಮದೇ ಈ ಪರಿಸ್ಥಿತಿ ಹೀಗಾದರೆ, ಪ್ರಕಾಶ್‌ರವರ ಪರಿಸ್ಥಿತಿ ಏನಾಗಬೇಕು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ರಮೇಶ್‌ಕುಮಾರ್‌ರವರ ಮನಸ್ಸಿನ ನೋವು ನನಗೆ ಅರ್ಥವಾಗುತ್ತದೆ. ಈ ರೀತಿ ಸಾರ್ವಜನಿಕವಾಗಿ ಹೆಸರುಗಳು ಪತ್ರಿಕೆಗಳಲ್ಲಿ ಬರುವ ಮುಖಾಂತರ ಎಲ್ಲ ಸರಿಯಾದ ರೀತಿ ವಿವರಣೆ

ಕೊಡಲಿಲ್ಲ, ಮಾಡಲಿಲ್ಲವೆಂದು ಬಂದಾಗ ನಮ್ಮಂಥವರಿಗೆ ಬಹಳ ನೋವಾಗುತ್ತದೆಂದು ತಾವೇನು ಭಾವನೆ ವ್ಯಕ್ತಪಡಿಸಿದ್ದೀರಿ, ಅದಕ್ಕೆ ನನ್ನ ಸಹಮತ ಇದೆ. ಇಲ್ಲವೆಂದು ಹೇಳಲ್ಲ. ಆದರೆ, 150 ಕೋಟಿ ರೂ. ತಿಂದಿದ್ದೇನೆಂದು ನನ್ನ ಮೇಲೆ ಈ ರಾಜ್ಯದಲ್ಲಿ ನಡೆಯಿತಲ್ಲ, ನಾನು ಎಷ್ಟರಮಟ್ಟಿಗೆ ಮಾನಸಿಕವಾಗಿ ಕುಗ್ಗಿರಬೇಕು ಎನ್ನುವುದನ್ನು ನಿಮ್ಮಂಥ ಹಿರಿಯರೇ ನನಗೆ ಸಲಹೆ ಕೊಟ್ಟುಬಿಟ್ಟರೇ. . . .

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಅದಕ್ಕೇ ನೀವೇ ಏನಾದರೂ ಲೋಕಾಯುಕ್ತದವರಿಗೆ ಹೇಳಿ ಈ ಕೆಲಸ ಮಾಡಿಸಿದ್ದೀರಾ?

ಶ್ರೀ ಡಿ.ಕೆ.ಶಿವಕುಮಾರ್ : ಅಧಿಕಾರದಲ್ಲಿರುವವರಿಗೇ ಬಯ್ಯದೇ ಇಲ್ಲಿರುವವರನ್ನು ಅನ್ನುತ್ತಾರೆಯೇ? ಅಧಿಕಾರದಲ್ಲಿದ್ದಾಗ ಅದನ್ನು ಕೇಳಲೇಬೇಕಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅಧಿಕಾರದಲ್ಲಿದ್ದವರಿಗೆ ಬಯ್ಯಿತಕ್ಕಂಥದ್ದು, ಬಯ್ಯಿಸಿಕೊಳ್ಳುವುದು ಅವರ ಹಣೆಬರಹ, ಅದೇನೂ ಮಾಡಲಿಕ್ಕಾಗುವುದಿಲ್ಲ. ಆದರೆ, ವಾಸ್ತವಾಂಶಕ್ಕೇ ಹತ್ತಿರವಿಲ್ಲದಿರುವ ರೀತಿಯಲ್ಲಿ, ಮಾತನಾಡಿದರೆ ಹೇಗೆ? ಅದು ವಾಸ್ತವಾಂಶಕ್ಕೇ ಹತ್ತಿರವಿರಲಿಲ್ಲ. ಪ್ರತಿ ನಿತ್ಯ ನಡೆದುಹೋಯಿತು. ಇರಬೇಕು. ನಮ್ಮ ರೇವಣ್ಣನವರನ್ನು ಕೇಳಬೇಕು. ಅವರು ಹೊರಟುಹೋದರೇನೋ?

ಶ್ರೀ ಎಂ.ಪಿ.ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) : ಅಧಿಕಾರದಲ್ಲಿದ್ದಾಗ ನಿರಾಧಾರ ಆಪಾದನೆಗಳು ಬರುತ್ತವೆ, ಒಪ್ಪಿಕೊಳ್ಳುತ್ತೇವೆ. ಅನೇಕ ಸಂದರ್ಭಗಳಲ್ಲಿ ಆ ರೀತಿ ಆಗುತ್ತವೆ. ಆದರೆ, ಅದು ನಿರಾಧಾರ ಎಂದು ಹೇಳಿ ಗೊತ್ತಿದ್ದಾಗ ಅವುಗಳಿಗೆ ಪ್ರೋತ್ಸಾಹ ಕೊಡುವಂಥ ವಾತಾವರಣ ಮತ್ತು ಅದಕ್ಕೆ ಬೇಕಾದಂಥ ಮಾಹಿತಿ ಇವೆಲ್ಲ ಮಾಡುವುದರಿಂದ ಎಷ್ಟರಮಟ್ಟಿಗೆ ಅದು ಸಮಂಜಸವೆಂದು ನಾವು ತಿಳಿದುಕೊಳ್ಳಬೇಕು. ಅದಕ್ಕೆ ನಾವು ರಾಜಕಾರಣವೆಂದ ತಕ್ಷಣವೇ ಆಪಾದನೆ ಮಾಡತಕ್ಕಂಥವರು ತಪ್ಪಾಗಿ ಆಪಾದನೆ ಮಾಡಿದ್ದಾರೆಂದು ಗೊತ್ತಿದ್ದೂ ಕೂಡ ಅದಕ್ಕೆ ಪ್ರೋತ್ಸಾಹ ಕೊಡುವುದು ಕೂಡ ನಾವು ರಾಜಕಾರಣಿಗಳು ನಿರ್ಮಾಣ ಮಾಡಿದ್ದೇವೆ. ನಾವು ರಾಜಕಾರಣಿಗಳು ನಿರ್ಮಾಣ ಮಾಡಿಕೊಂಡು ಈ ಕಡೆ ಕುಳಿತವರು ಆ ಕಡೆ ಕೆಸರೆರಚುವುದು, ಆ ಕಡೆ ಕುಳಿತವರು ಈ ಕಡೆಗೆ ಎಸೆಯುವುದು

ಮಾಡಿದರೆ ಯಾರಿಗೂ ಭೂಷಣವಾಗುವುದಿಲ್ಲ. ಅಂತಿಮವಾಗಿ ನಾವೆಲ್ಲರೂ ಕಳ್ಳರು ಎಂದು ಹೇಳಿ ಜನತೆಯಲ್ಲಿ ಪ್ರತಿಬಿಂಬವಾಗುತ್ತದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾನು ಅಂತಿಮ ಮಾಡುತ್ತೇನೆ, ಏಕೆಂದರೆ, ಅವರು ಸುದೀರ್ಘವಾಗಿ ಉತ್ತರ ಕೊಡಬೇಕಾಗುತ್ತದೆ. ಇವತ್ತಿನ ರಾಜಕಾರಣದಲ್ಲಿ ನಾನು ಇವತ್ತು ಸದನದಲ್ಲಿ ಈ ಪ್ರಶ್ನೆಯನ್ನು ನಮ್ಮ ಎಲ್ಲ ಹಿರಿಯ ಸದಸ್ಯರು, ಕಿರಿಯ ಸದಸ್ಯರಿದ್ದೀರಿ, ತಮಗೆ ಕೇಳುತ್ತೇನೆ, ನಾವೆಲ್ಲ ಬಿಳಿ ಬಟ್ಟೆ ಹಾಕುತ್ತೇವೆ. ಏಕೆಂದರೆ, ಅದು ಸ್ವಚ್ಛವೆಂದು ಹಾಕಿಕೊಳ್ಳುತ್ತೇವೆ. ಇವತ್ತು ನಾವು ಯಾರಾದರೂ ಬಿಳಿ ಬಟ್ಟೆ ಎನ್ನುವ ರೀತಿಯಲ್ಲಿ ನಾವು purity maintain ಮಾಡಿದ್ದೇವೆ ಎಂದು ಯಾವ ರಾಜಕಾಣಿಗಳೂ ಇವತ್ತಿನ ರಾಜಕಾರಣದಲ್ಲಿ ಹೇಳಲಿಕ್ಕೆ ಸಾಧ್ಯವಿಲ್ಲವೆಂದು ನಾನೊಬ್ಬ ಯುವಕನಾಗಿಯೇ ಹೇಳಲಿಕ್ಕೆ ಬಯಸುತ್ತಿದ್ದೇನೆ. ಇವತ್ತಿನ ರಾಜಕಾರಣ ಆ ರೀತಿ ಇದೆ. ನಾನೂ ನಿಮ್ಮ ತರಹ ಬಿಳಿ ಬಟ್ಟೆಯನ್ನೇ ಹಾಕುತ್ತಿರಲಿಲ್ಲ. ಕೆಲವರು ಒತ್ತಾಯ ಮಾಡಿ ಬಿಳಿ ಬಟ್ಟೆ ಹಾಕಿಸುವುದಕ್ಕೆ ಶುರು ಮಾಡಿದರು. ಏಕೆಂದರೆ, ಈ ಜಾಗದಲ್ಲಿ ಕುಳಿತಾಗ ಬಿಳಿ ಬಟಟೆ ಇರಬೇಕೆಂದು ಎಂದು ಹಾಗೆ ಮಾಡಿದರು. ನನಗೂ ಇದರ ಮೇಲೆ ನಂಬಿಕೆ ಇಲ್ಲ. ಎಲ್ಲಾ ಸದಸ್ಯರೂ ಅಂತಿಮವಾಗಿ ಮಾತನಾಡುವ ಸಂದರ್ಭದಲ್ಲಿ ಪ್ರಮುಖವಾಗಿ ನಮ್ಮ ವಿರೋಧ ಪಕ್ಷದ ನಾಯಕರುಗಳೆಲ್ಲ ಪ್ರಮುಖವಾಗಿರುವವರು ಅಂತಿಮವಾಗಿ ಈ ಇಲಾಖಾ ಬೇಡಿಕೆಗಳನ್ನು ಯಾವತ್ತು, ಏತಕ್ಕೋಸ್ಕರವಾಗಿ ನಾವು ನಿಮಗೆ ಪಾಸ್ ಮಾಡಬೇಕು? ಇದರಲ್ಲಿ ನೀವು ಪಾಸ್ ಆಗುವ ರೀತಿಯಲ್ಲಿ ಕೆಲಸ ಮಾಡಿಲ್ಲ. ಇದೆಲ್ಲ ಪ್ರಸ್ತಾಪ ಮಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಹಲವಾರು ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಹಲವಾರು ರೀತಿಯ ನಿರ್ಣಯಗಳನ್ನು ಕೈಗೊಂಡಿದ್ದೇನೆ. ಹಿಂದಿನ ಸರ್ಕಾರಗಳೂ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಿರಬಹುದು ಅಥವಾ ಮಾಡಲಿಕ್ಕೆ ಪ್ರಯತ್ನ ಪಟ್ಟಿರಬಹುದು, ಅದರಲ್ಲಿ ಯಶಸ್ಸು ಸಿಕ್ಕಿಲ್ಲದಿರಬಹುದು, ಆದರೆ, ಇವತ್ತು ನಾವು ಒಳ್ಳೆಯ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆ, ವಸತಿ ಇಲಾಖೆ, ನೀರಾವರಿ ಇಲಾಖೆ ಇರಬಹುದು, ಯಾವುದೇ ರೀತಿಯ ಪ್ರಗತಿಯನ್ನು ಸಾಧನೆ ಮಾಡುವ ಸಂದರ್ಭದಲ್ಲಿ ನಾವು ಹಿಂದೆ ಹೆಜ್ಜೆಯನ್ನಿಟ್ಟಿಲ್ಲ. ಇವತ್ತು ಒಳ್ಳೆಯ ರೀತಿಯಲ್ಲಿ ಹೆಜ್ಜೆಯನ್ನಿಟ್ಟಿದ್ದೇವೆ. ನಾನು ಯಾವುದೇ ರೀತಿಯಿಂದ ಕಲ್ಮಶ ಮನೋಭಾವ-ದಿಂದ ನೋಡದೇ, ಇರತಕ್ಕಂಥ ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಮಾಡಿದ್ದೇನೆ. ಏಕೆಂದರೆ, ಬೆಳಿಗ್ಗೆ ನನಗೆ ಗಾಬರಿಯಾಯಿತು. ಸಾರಿಗೆ

ವಿಷಯದಲ್ಲಿ ನಮ್ಮ ಚಲವರಾಯಸ್ವಾಮಿಯವರು ಉತ್ತರ ಕೊಡಬೇಕಾದರೆ ನಮ್ಮ ಹಿರಿಯ ನಾಯಕರು ಎದ್ದು walk out ಮಾಡಿದರು. ಅದೇ ರೀತಿ ಏನಾದರೂ ಇವತ್ತು ನಮ್ಮ ಬಜೆಟ್ ವಿಷಯದ ಮೇಲೆ walk out ಮಾಡುವ ತೀರ್ಮಾನವನ್ನೇ ನಾದರೂ ಮೊದಲೇ ಕೈಗೊಂಡಿದ್ದಾರೆನೋ ಎಂದು ನನಗೆ ಭಯವಾಯಿತು. ಬಹುಶಃ ಈ ಒಂದು ಬೇಡಿಕೆ ವಿಷಯದಲ್ಲಿ ನಿಮ್ಮೆಲ್ಲರ ಸಹಕಾರ ನನಗೆ ಸಿಗುವ ಮುಖಾಂತರ ನಾವು ಮತ್ತು ಉಪಮುಖ್ಯಮಂತ್ರಿಯವರು ಇನ್ನೂ ಒಳ್ಳೆಯ ಉತ್ತಮವಾದ ಕೆಲಸವನ್ನು ಮಾಡಲಿಕ್ಕೆ ತಮ್ಮಿಂದ ಪ್ರೋತ್ಸಾಹ ಸಿಗುತ್ತದೆಂದು ಈ ಸಂದರ್ಭದಲ್ಲಿ ನಂಬಿದ್ದೇನೆ. ಅದರ ಜೊತೆಗೆ, SEZ ಬಗ್ಗೆ ನಾಳೆ, ನಾಡಿದ್ದರಲ್ಲಿ ವಿಶೇಷವಾಗಿ ಅದರ ಬಗ್ಗೆ ಚರ್ಚೆ ಮಾಡಬೇಕೆಮದು ನಿರ್ಣಯ ಮಾಡಿದ್ದೀರೋ, ಏನೋ ಗೊತ್ತಿಲ್ಲ. ಏನಾದರೂ ಮಾಡಿದ್ದರೆ, ಅದರ ಬಗ್ಗೆ ನಾನು ಸಂಪೂರ್ಣವಾಗಿ ಮಾಹಿತಿಯನ್ನು ಕೊಡಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ಕೆ.ಶ್ರೀನಿವಾಸಗೌಡ : Adjournment motion ಇದೆ. ಆಗಲೇ ಉತ್ತರ ಕೊಡಿ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಆ time ನಲ್ಲೇ ಕೊಡುತ್ತೇನೆ. ಏಕೆಂದರೆ, ನಾನು ಹೆಚ್ಚಿನ ಸಮಯ ತೆಗೆದುಕೊಳ್ಳುವುದು ಬೇಡ ಎಂದು ಇದ್ದೇನೆ. SEZ ವಿಷಯದಲ್ಲಿ ಇವತ್ತು ನೀವು ಏನೇನು ಸಾರ್ವಜನಿಕವಾಗಿ ಚರ್ಚೆ ಮಾಡಿದಿರಿ, ಅದರ ಬಗ್ಗೆ Adjournment motion ತಂದಿರುವುದು ಒಳ್ಳೆಯದು. ನಾನು ಸ್ವಾಗತ ಮಾಡುತ್ತೇನೆ.

ಶ್ರೀ ವಿ.ಸೋಮಣ್ಣ : ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದ್ದೀರಿ. ಬೆಂಗಳೂರು ನಗರವನ್ನು ಇವತ್ತಿನ ಬೆಂಗಳೂರು ಎಂದು ಮಾಡಿ ಸ್ವಲ್ಪ ಹಣವನ್ನು ತಾವು ಕೊಟ್ಟಿರಿ. ಕೊಟ್ಟಿರುವ ಹಣ ನಮಗೆ ಇವತ್ತಿನ ಬೃಹತ್ ಬೆಂಗಳೂರಿನ ಮೂಲ ಸೌಕರ್ಯಗಳಿಗೆ ತುಂಬಾ ಅನಾನುಕೂಲವಾಗುತ್ತದೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಂದೇ ಒಂದು ಸಣ್ಣ ಕೆಲಸವೂ ಕೂಡ ನಡೆಯುತ್ತಿಲ್ಲ. ತಮ್ಮ ಕನಸಿನ ಬೃಹತ್ ಬೆಂಗಳೂರು ಏನಿದೆ, ಇದಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವುದಕ್ಕೆ ತಾವೊಂದು ಸೂಚನೆಯನ್ನು ಕೊಡಬೇಕು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಸದ್ಯದಲ್ಲೇ ಬೆಂಗಳೂರು ನಗರದ ಶಾಸಕರ ಸಭೆ ಕರೆಯುತ್ತಿದ್ದೇನೆ. ತಮ್ಮ ಅಭಿಪ್ರಾಯವನ್ನೂ ಕ್ರೋಢೀಕರಿಸಿ

ಬೃಹತ್ ಬೆಂಗಳೂರು ಅಭಿವೃದ್ಧಿಯ ವಿಷಯದಲ್ಲಿ ಕೆಲವು ತೀರ್ಮಾನಗಳನ್ನು ಮಾಡಲು ಮುಂದೆ ನಾವು ಕಾರ್ಯಕ್ರಮ ಜಾರಿಗೆ ತರುತ್ತೇವೆ. ಈ ಒಂದು ಸಂದರ್ಭದಲ್ಲಿ ತಾವು ಸದನದಲ್ಲಿ ಅಭಿಪ್ರಾಯಗಳನ್ನು ಮತ್ತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಉತ್ತರವನ್ನು ಕೊಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ. ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಪ್ರಸ್ತಾಪಿಸಿದಿರಿ. old age pension ಸುಮಾರು 400 ರೂಪಾಯಿಗೆ ಏರಿಸಿದಿರಿ. ಇದು ಸರಿ ಏಕೆಂದರೆ, ಬಡವರಿಗೆ, ನಿರ್ಗತಿಕರಿಗೆ, ಅನುಕೂಲವಾಗುತ್ತದೆ. ಬಜೆಟ್ ಮೇಲೆ ನಾನು ಮತ್ತು ಮಾನ್ಯ ಸಿದ್ದರಾಮಯ್ಯ–ನವರು ಹಾಗೂ ವಿರೋಧ ಪಕ್ಷದ ನಾಯಕರು ಹಾಗೂ ಎಲ್ಲರೂ ಕೂಡ ಪ್ರಸ್ತಾಪಿಸಿದೆವು, ಜೊತೆಗೆ ಈಗಲೂ ಪ್ರಸ್ತಾಪಿಸಿದೆವು. ಏನೆಂದರೆ, ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳಿಗೆ ನಾವು ಖರ್ಚು ಮಾಡುವುದು, ಅದು OBC ಇರಲಿ, SC:ST ಇರಲಿ, ಮೈನಾರಿಟೀಸ್ ಇರಲಿ, ಜನರಲ್ ಹಾಸ್ಟೆಲ್ ಇರಲಿ, ಎಲ್ಲದಕ್ಕೂ ಕೂಡ ನಾವು ಕೊಡುತ್ತಿರುವುದು 400 ರೂಪಾಯಿ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

Old age ನವರಿಗೆ ಕೊಡುವಷ್ಟೆ ಆಹಾರಧಾನ್ಯವನ್ನು ವಿದ್ಯಾರ್ಥಿಗಳಿಗೆ ಕೊಡಲಿಕ್ಕೆ ನಾವು ಹಣವನ್ನು ಕೊಡುತ್ತಿದ್ದೇವೆ. ಅದಕ್ಕಾಗಿ ಇದನ್ನು ಹೆಚ್ಚಿಗೆ ಮಾಡಬೇಕೆನ್ನುವುದು ನನ್ನ ಬೇಡಿಕೆ ಇದೆ. 400 ರೂಪಾಯಿ ನಿಂದ ಪ್ರತಿ ವಿದ್ಯಾರ್ಥಿಗೆ ಅಟ್ ಲೀಸ್ಟ್ ಅವನಿಗೆ ಒಳ್ಳೆಯದಾಗುತ್ತದೆ. ಯಾವಾಗ ನೀವು old age pension ಅನ್ನು 200 ನಿಂದ 400 ರೂಪಾಯಿ ಮಾಡಬಹುದು, ವಿದ್ಯಾರ್ಥಿಗಳು ಒಳ್ಳೆಯ ರೀತಿಯಿಂದ ವಿದ್ಯಾಭ್ಯಾಸ ಮಾಡಲಿಕ್ಕೆ ಅವರಿಗೆ ಅವಕಾಶವಾಗಬೇಕಾದರೆ ಹೆಚ್ಚಿಗೆ ಮಾಡುವುದು ಬಹಳ ಮುಖ್ಯ. ದಯವಿಟ್ಟು ಇದು ಎಲ್ಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಅದು ಒಂದು ಕೆಲಸ ನೀವು ಮಾಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್.ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಮಾತನಾಡತಕ್ಕಂಥ ಕಾಲದಲ್ಲಿ ನೀರಾವರಿಗೆ ಎಷ್ಟು ಹಣ

ಕೊಡುತ್ತೀರಿ ಎಂಬುದನ್ನು ಹೇಳಲಿಲ್ಲ. ಸನ್ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾದಾಗ ನೀರಾವರಿಗೆ 3024 ಕೋಟಿ ಕೊಟ್ಟಿದ್ದರು. ನಾನು ಮುಖ್ಯಮಂತ್ರಿಯಾದಾಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನೀರಾವರಿ ಸಚಿವರಾಗಿದ್ದರು. ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವ ಎಲ್ಲಾ ಪ್ರಾಜೆಕ್ಟ್ Complete ಆದವು ಏಕೆಂದರೆ, ಮುಲ್ಲಾಮಾರಿ, ಬೆಣ್ಣೆತೊರಾ, ಕಾರಂಜಾ ಪ್ರಾಜೆಕ್ಟ್‌ಗೆ ಎಲ್ಲಾ ಆದವು. Have increased 900 crores ಅಂದರೆ 3924 ಕೋಟಿ ರೂಪಾಯಿಗಳನ್ನು ನೀಡಿದೆವು. ಆಗ ನಮ್ಮ ಸಿದ್ದರಾಮಯ್ಯನವರು ಫೈನಾನ್ಸ್ ಮಿನಿಸ್ಟ್ರ ಇದ್ದರು. ನಾವು ನೀರಾವರಿಗೆ 29% ಕೊಟ್ಟಿದ್ದೇವೆ. ನಿಮ್ಮ ಕಾಲದಲ್ಲಿ that has to been reduced to 17%. ಇವತ್ತು ಏನಾಗಿದೆ, irrigation & power & agriculture ಗೆ ಹಾಗೂ core sector ಗೆ ತಾವು ಹೆಚ್ಚಿನ ಆದ್ಯತೆ ಕೊಡಬೇಕು. ಈ ರೀತಿಯಾದಾಗ development ಆಗುತ್ತದೆ. ಸಾಲ ಮನ್ನಾ ಮಾಡುತ್ತೇವೆಂದು ತಾವು ಹೇಳಿದಿರಿ. ಈಗ ಸೀಷನ್ ಎಲ್ಲಾ ಓವರ್ ಆಗಿ ಹೋಗಿದೆ. 2300 ಕೋಟಿಯಲ್ಲಿ, ಮೊನ್ನೆ ತಾವು ಮಾನ್ಯ ಶರದ್ ಪವಾರ್ ಎದುರಿನಲ್ಲಿ ಇರುವಂಥ ಸಂದರ್ಭದಲ್ಲಿ ನಾವೇ ಹೇಳಿದ್ದೇವೆ, ಇಲಲಿತವರೆಗೆ ರಿಲೀಸ್ ಮಾಡಿದ್ದು 750 ಕೋಟಿ. ಸಾರಾಯಿ ನಿಷೇಧದಿಮದ 1902 ಕೋಟಿ ನಷ್ಟವಾಗುತ್ತದೆ. ಇವತ್ತು ತಾವು ಹೇಗೆ ಎಲ್ಲ ಆಕಡೆಗೆ ಭರಿಸತಕ್ಕಂಥ ರೀತಿಯಲ್ಲಿ 5000 ಕೋಟಿ ರೂಪಾಯಿಗಳ resource mobilization ತಾವು ಮಾಡಬೇಕು. ಅದೇ ರೀತಿಯಾಗಿ, popular scheme ಗಳನ್ನು ತಾವೇನು ಗೋಷಣೆ ಮಾಡಿದ್ದೀರಿ, ಇವತ್ತು ಸಾಮಾಜಿಕ ನ್ಯಾಯ ಕೊಡುವ ರೀತಿಯಲ್ಲಿ ವಿಧಾನ ಪರಿಷತ್ತಿನಲ್ಲಿ ಹೇಳಿದ್ದೀರಿ. ನಾನು ಬ್ಯಾಕ್‌ವರ್ಡ್ ಕ್ಲಾಸ್ ಪರ್ಮೆನೆಂಟ್ ಕಮಿಷನ್ ಮಾಡಿದ್ದೇನೆ. ಮೈನಾರಿಟಿ ಕಮಿಷನ್ ಏಕೆ ತಾವು ಕಾನ್‌ಸ್ಟಿಟ್ಯೂಟ್ ಮಾಡಲಿಲ್ಲ? ತಾವು ಬಂದ ನಂತರ ಇಲ್ಲಿಯವರೆಗೆ ಅಲ್ಪಸಂಖ್ಯಾತರ, ಮೈನಾರಿಟೀಸ್ ಕಮಿಷನ್ ಅನ್ನು ನೀವು ಇಲ್ಲಿಯವರೆಗೆ you have not constituted. ಈ ಎಲ್ಲಾ ವಿಚಾರಗಳು ಇವೆ. ನಾವೇನು ನಿಮ್ಮ ಗ್ರಾಮಕ್ಕೆ ವಾಸ್ತವ್ಯಕ್ಕೆ ಬರುವುದಿಲ್ಲ. ನೀವು ಅಲ್ಲಿ ಹೋಗಿ ಪೂರ್ಣ ಪ್ರಮಾಣದಲ್ಲಿ ಕುಳಿತು ಮಾಡಬೇಕು. ನೀವು ಅಲ್ಲಿ ಹೀದಾಗ ಎರಡು ತಾಸು ಇರಿತ್ತೀರಿ, ನಿಮಗೆ ಸಮಸ್ಯೆ ಏನು ಗೊತ್ತಾಗುತ್ತದೆ? ಅದಕ್ಕೆ ನಾನು ಏನು ಹೇಳಿದೆ ಎಂದರೆ, ಎಷ್ಟು ಗ್ರಾಮಗಳ ವಾಸ್ತವ್ಯ ಮಾಡಿದಿರಿ, ಒಂದು White paper publish ಮಾಡಿ. ಎಷ್ಟು ಆದೇಶ ಹೊರಡಿಸಿದ್ದೀರಿ?

ಎಷ್ಟು ಸಮಸ್ಯೆಗಳು ಇವೆ? ಅದಕ್ಕೆ ಹೇಳಿದ್ದು. ತಾವ್ಯಾಕೆ ಹೇಳುತ್ತೀರಿ, ಎಲ್ಲಾ ಮುಗಿದೇ ಹೋಗಿದೆಯಲ್ಲ. ಉಪ ಮುಖ್ಯಮಂತ್ರಿಗಳೇ ಈಗ ಮೂರು ಗಂಟೆಯಾಗಿದೆ, ಎಲ್ಲಾ ಬೇಡಿಕೆಗಳ ಮೇಲೆ ಅವರೇ ಹೇಳಿದ್ದಾರೆ, ಅದಕ್ಕೆ ಊಟಕ್ಕೆ ವಿರಾಮ ಕೊಟ್ಟು ನಂತರ ಮಾಡಿ.

ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಓದುತ್ತಿರುವಂಥ ಹಾಸ್ಟೆಲ್‌ಗಳಿಗೆ ಒದಗಿಸುವ ಅನುದಾನದ ಬಗ್ಗೆ ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸರ್ಕಾರ, ಅನುದಾನ ಪಡೆಯತಕ್ಕಂಥ ಹಾಸ್ಟೆಲ್‌ಗಳಲ್ಲಿ ಕುಕ್ಕರ್‌ಗೆ ಕೊಡುವ ಸಂಬಳ ತಿಂಗಳಿಗೆ 75 ರೂಪಾಯಿ. ಎರಡನೇ ಕುಕ್ಕರ್‌ಗೆ ಕೊಡುತ್ತಿರುವುದು 100 ರೂಪಾಯಿ. ಮೇಲ್ವಿಚಾರಕರಿಗೆ ಕೊಡುತ್ತಿರುವುದು 125 ರೂಪಾಯಿ. ಇಲ್ಲಿ ಆಗಾಗ ಸಾಕಷ್ಟು ಅವ್ಯವಹಾರ ನಡೆಯುತ್ತಿದೆ ಎಂದು ಹೇಳಬಹುದು. ತಾವು ಅರ್ಥಮಾಡಿಕೊಳ್ಳಬೇಕು. ಇವತ್ತಿನ ದಿವಸದಲ್ಲಿ 75 ರಿಂದ 100 ರೂಪಾಯಿ ಸಂಬಳ ತೆಗೆದುಕೊಂಡು ಕುಕ್‌ನ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ದಯಮಾಡಿ, ಇವತ್ತೇನು ನೀವು ಸಕಾರಿ ನೌಕರರಿಗೆ ಕೊಡುತ್ತಿದ್ದೀರಿ ಮೂರು ಸಾವಿರ ರೂಪಾಯಿ, ಆ ರೀತಿ ಕೊಟ್ಟರೆ ಸುಸೂತ್ರವಾಗಿ ಹಾಸ್ಟೆಲ್‌ನಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳಿಗೆ ಒಳ್ಳೆಯದಾಗುತ್ತದೆ, ಹಣಕಾಸಿನ ಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ, ಗೋಮಾಳ ಜಮೀನನ್ನು ಏನು ಹರಾಜು ಹಾಕಿದ್ದಾರೆ, ಅದನ್ನು ಅವರು ಡಿಫೆಂಡ್ ಮಾಡಿ ಮಾತನಾಡಿದರು. ಕಂದಾಯ ಇಲಾಖೆಯ 2006–07ನೇ ವಾರ್ಷಿಕ ವರದಿಯಲ್ಲಿ ಏನು ಹೇಳುತ್ತಾರೆಂದರೆ,

"ಗೋಮಾಳ ಜಮೀನಿನ ಕುರಿತು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು". ಉಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ನಾನು ಈ ವರ್ಷದ ವಾರ್ಷಿಕ ವರದಿಯಲ್ಲಿರುವುದನ್ನೇ ಹೇಳುತ್ತಿದ್ದೇನೆ.

"ಸರ್ಕಾರವು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು ಮೇಲೆ ತಿಳಿಸಿದ ಮೇಲ್ಮನವಿಯ ತೀರ್ಪಿನ ಹಿನ್ನೆಲೆಯಲ್ಲಿ ಈ ಹಿಂದೆ ಸರ್ಕಾರ ಹೊರಡಿಸಿದ ಸುತ್ತೋಲೆ ಸಂಖ್ಯೆ: ಕಂಇ 74 ಎಲ್‌ಜಿಪಿ 2005, ದಿನಾಂಕ:

24–12–05ನ್ನು ಪರಿಷ್ಕರಿಸಿ, ಸರ್ಕಾರದ ಸುತ್ತೋಲೆ ಸಂ: ಆರ್‌ಡಿ 89 ಎಲ್‌ಜಿಪಿ 2006, ದಿನಾಂಕ: 5–1–2007ರಲ್ಲಿ ಈ ಕೆಳಕಂಡಂತೆ ಸೂಚನೆಗಳನ್ನು ನೀಡಿರುತ್ತದೆ".

1) ಎಲ್ಲಾ ಜಿಲ್ಲಾಧಿಕಾರಿಗಳು ರಾಜ್ಯದಲ್ಲಿನ ಗೋಮಾಳ, ಗಾಯರಾಣ, ಹಿಲ್ಲುಬನ್ನಿ, ಜಮೀನುಗಳನ್ನು ಗುರುತಿಸಿ ಆ ಜಮೀನುಗಳ ವಿಸ್ತೀರ್ಣ ಅಗತ್ಯಕ್ಕಿಂತ ಕಡಿಮೆ ಆಗಿದೆಯೇ ಎಂಬುದನ್ನು ಹಾಗೂ ಜಾನುವಾರುಗಳ ಸಂಖ್ಯೆಗಳ ಅನುಸಾರ ಆ ವಿಸ್ತೀರ್ಣವನ್ನು ಉಳಿಸಿಕೊಳ್ಳುವ ಅವಶ್ಯಕತೆ ಇದೆಯೆ? ಎಂಬುದನ್ನು ಪರಿಶೀಲಿಸುವುದು.

2) ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಜಮೀನುಗಳ ವಿಸ್ತೀರ್ಣವು ಕರ್ನಾಟಕ ಭೂ ಕಂದಾಯ ನಿಯಾಮಾವಳಿಗಳ ನಿಯಮ 97(1) ಕ್ಕಿಂತ ಮೀರಿದ ಪ್ರಕರಣಗಳಲ್ಲಿ ಮಾತ್ರ ಆ ಜಮೀನಿನಲ್ಲಿ ಯಾರಾದರೂ ಅಕ್ರಮವಾಗಿ ಸಾಗುವಳಿ ಮಾಡಿಕೊಂಡ ಸ್ವಾಧೀನದಲ್ಲಿದ್ದು, ಅವರು ಸದರಿ ಜಮೀನನ್ನು ಪಡೆಯಲು ಅರ್ಹರಾಗಿದ್ದು, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಎ, 94ಬಿ, 94ಸಿ, ರಡಿಯಲ್ಲಿ ನಿಗದಿತ ಅವಧಿಯಲ್ಲಿ ಜಮೀನಿನ ಸಕ್ರಮೀಕರಣಕ್ಕಾಗಿ ಅರ್ಜಿ ಸಲ್ಲಿಸಿದಲ್ಲಿ ಅವುಗಳನ್ನು ಸಕ್ರಮಗೊಳಿಸಲು ಸೂಕ್ತ ನಿರ್ಧಾರಕ್ಕಾಗಿ ಸರ್ಕಾರ ರಚಿಸಿರುವ ರಚಿಸುವ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಇಡತಕ್ಕದ್ದು.

3) ಗೋಮಾಳ, ಗಾಯರಾಣ, ಹುಲ್ಲುಬನ್ನಿ, ಜಮೀನುಗಳನ್ನು ಯಾವುದೇ ಖಿಶಗಿ ಸಂಸ್ಥೆಗಾಗಲಿ, ಖಾಸಗಿ ವ್ಯಕ್ತಿಗಳಿ ಅಥವಾ ಖಾಸಗಿ ಗಣಿಗಾರಿಕೆ ಉದ್ದೇಶಕ್ಕಾಗಿ ಮಂಜೂರು ಮಾಡಬಾರದು ಮತ್ತು ಇಂಥ ಜಮೀನುಗಳನ್ನು ಖಾಲಿ ಇದ್ದು ಸಕ್ರಮೀಕರಣಕ್ಕಾಗಿ ಯಾವುದೇ ಅರ್ಜಿ ಬಾಕಿ ಇಲ್ಲದಿದ್ದಲ್ಲಿ ಅಂಥ ಜಮೀನುಗಳನ್ನು ಗ್ರಾಮೀಣ ಸಮುದಾಯದ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸತಕ್ಕದ್ದು.

ಜಾಮ್‌ದಾರ್‌ರವರು ಸಹಿ ಮಾಡಿ ಉಚ್ಚನ್ಯಾಯಾಲಯದ ಪ್ರಕಾರ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಹೀಗಾಗಿ ನಾನು ಆ ದಿವಸ ಹೇಳಿದ್ದು ಏನೆಂದರೆ, ಗೋಮಾಳ ಜಮೀನುಗಳನ್ನು ನೀವು ಹರಾಜು ಮಾಡಲಿಕ್ಕೆ ಬರುವುದಿಲ್ಲ. unless notification ಮಾಡಿ ಜಾನುವಾರುಗಳ ಸಂಖ್ಯೆ ಎಷ್ಟು ಇದೆ ಎಂದು ನೋಡಬೇಕಾಗುತ್ತದೆ. ಅದಕ್ಕೆ ತರಾತುರಿಯಲ್ಲಿ ನೀವು ಕಾನೂನು

ಬಾಹಿರವಾಗಿ ಮಾಡಿದ್ದೀರಿ ಎನ್ನುವುದನ್ನು ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಇನ್ನೊಂದು, ಮೊನ್ನೆ ಸಮಿತಿ ವರದಿ ಕೊಟ್ಟಿದೆ. ಇದು ಬಹಳ ಪ್ರಮುಖವಾದ ವಿಚಾರ. ಸೆಕ್ಷನ್ 79ಬಿ ಪ್ರಕಾರ ಇದು ತಪ್ಪಿಲ್ಲ ಎಂದು ಹೇಳಿದ್ದೀರಲ್ಲ, ಸಮಿತಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

"ಕರ್ನಾಟಕ ಭೂ ಸುಧಾರಣಾ ಕಾಯಿದೆ, 79ಬಿ. ಕೆಲವು ವ್ಯಕ್ತಿಗಳು ವ್ಯವಸಾಯ ಭೂಮಿಯನ್ನು ಹೊಂದುವುದಕ್ಕೆ ನಿಷೇಧ.

(1) ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ ಜಾರಿಗೆ ಬರುವಂತೆ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವ ಹೊರತು,

(ಎ) ಸ್ವತಃ ಭೂಮಿಯು ಸಾಗುವಳಿ ಮಾಡುವ ವ್ಯಕ್ತಿಯ ಹೊರತಾಗಿ ಇತರ ಯಾವ ವ್ಯಕ್ತಿಯೂ ಭೂಮಿಯನ್ನು ಹೊಂದಿರತಕ್ಕದ್ದಲ್ಲ. ಸಮಿತಿ ವರದಿಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಒತ್ತುವಾರಿದಾರರಿಂದ ಹಿಂತೆಗೆದುಕೊಂಡಿರುವಂತಹ ಜಮೀನುಗಳ ಬಳಕೆಗೆ ಒಂದು ಮಾಸ್ಟರ್ ಪ್ಲಾನ್:

ಆದುದರಿಂದ ಸಮಿತಿಯು ಅಭಿಪ್ರಾಯಪಡುವುದೇನೆಂದರೆ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ತಜ್ಞರಿರುವಂತಹ ಮತ್ತು ವಿವಿಧ ಇಲಾಖೆಗಳ ಪ್ರತಿನಿಧಿಗಳಿರುವಂತಹ ಒಂದು ಸಮಿತಿಯು ಪುನಃ ಸ್ವಾಧೀನಕ್ಕೆ ತೆಗೆದುಕೊಂಡ ಒತ್ತುವರಿಯಾದ ಪ್ರದೇಶದ ಸಂಖ್ಯೆ ಮತ್ತು ವಿಸ್ತಾರಗಳನ್ನು ಪರಿಗಣನೆಗೆ ತೆಗದುಕೊಂಡು ಭವಿಷ್ಯದಲ್ಲಿ ಈ ಭೂಮಿಗಳ ಬಳಕೆಯ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ತಯಾರಿಸಬೇಕು. ಒಂದೊಂದೇ ಇಲಾಖೆಗೆ ಗೊತ್ತುಗುರಿ ಇಲ್ಲದೇ ಮತ್ತು ಮನಸ್ಸಿಗೆ ಬಂದಂತೆ ಹಂಚಿಕೆ ಮಾಡುವುದು ಸೂಕ್ತವಲ್ಲ. ಆ ಭೂಮಿಗಳನ್ನು ಒಂದು ವಿಸ್ತಾರವಾದ ನಕಾಶೆಯಲ್ಲಿ ಗುರುತಿಸಬೇಕು. ಭವಿಷ್ಯದಲ್ಲಿ ಆಗುವ ಬೆಳವಣಿಗೆಗಳು ಮತ್ತು ಮೂಲ ಸೌಲಭ್ಯಗಳ ಅವಶ್ಯಕತೆಗಳನ್ನು ಹಾಗೂ ಸ್ಟೇಡಿಯಂಗಳು, ಉದ್ಯಾನವನಗಳು, ಶಾಲೆಗಳು, ಆಟದ ಮೈದಾನಗಳು ಮುಂತಾದ ಅವಶ್ಯ ಸೌಲಭ್ಯಗಳನ್ನು ಕಲ್ಪಿಸಿಕೊಡುವುದನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಬೆಂಗಳೂರು ಪ್ರತಿ ವರ್ಷ ಶೇಕಡ 3.3ರಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದೆ. ಇಷ್ಟು ಭಾರಿ ಪ್ರಮಾಣದಲ್ಲಿ ಭವಿಷ್ಯದಲ್ಲಿ ಬೆಳವಣಿಗೆಯಾಗುತ್ತಿರುವಾಗ ಸರ್ಕಾರಕ್ಕೆ ಮತ್ತು

ಇತರ ಸ್ಥಳೀಯ ಸಂಸ್ಥೆಗಳಿಗೆ ಅಗಾಧ ಪ್ರಮಾಣದಲ್ಲಿ ಭೂಮಿ ಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಬಿಲ್ಡರ್‌ಗಳಿಗೆ ಅನುಕೂಲವಾಗುವಂತೆ ದೊರೆತ ಸರ್ಕಾರಿ ಭುಮಿಯನ್ನೆಲ್ಲಾ ಆತುರಾತುರವಾಗಿ ಹರಾಜು ಮಾಡಿಬಿಟ್ಟರೆ ಭವಿಷ್ಯದ ನೈಜ ಅವಶ್ಯಕತೆಗೆ ಬೇಕೆಂದಾಗ ಯಾವ ಭೂಮಿಯನ್ನು ಉಳಿಯುವುದಿಲ್ಲ." ನಾಳಿನ ಅಗತ್ಯದ ಬಗ್ಗೆ ಮಾಸ್ಟರ್ ಪ್ಲಾನನ್ನು ಮಾಡಬೇಕಾಗಿದೆ.

ಕಮಿಟಿಯವರು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಹರಾಜು ಮಾಡುವುದಕ್ಕೆ ನೀವು ತೆಗೆದುಕೊಂಡಿರುವ ನಿರ್ಣಯ ಒಳ್ಳೆಯ ಕೆಲಸವೆಂದು ನಾನು ಅವತ್ತೇ ಹೇಳಿದ್ದೇನೆ. ಆದರೆ, ಹರಾಜಿನಲ್ಲಿ ಏನಾಗಿದೆ ಎಂದರೆ, ಒಂದು ಎಕರೆ ಭೂಮಿಗೆ 20 ರಿಂದ 25 ಲಕ್ಷ ರೂಪಾಯಿಗೆ ಹೋಗಿದೆ. ದಯವಿಟ್ಟು ಇದ ಬಗ್ಗೆ ತಾವು ಗಮನಹರಿಸಬೇಕು. ಈ ಭೂಮಿಯನ್ನು ಹರಾಜು ಮಾಡಬಾರದೆಂದು ಕಮಿಟಿ ಕೂಡ ಹೇಳಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ತಾವು ಒಂದು ನಿಮಿಷ ಕುಳಿತುಕೊಂಡರೆ ಅದೇ ವಿಷಯವನ್ನು ಹೇಳುತ್ತೇನೆ. ನಾನು ಈಗಾಗಲೇ ಇದರ ಬಗ್ಗೆ ಸ್ಪಷ್ಟೀಕರಣ ಕೊಡುವಾಗ ತಾವು ಇದೀರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಗೈಡೆನ್ಸ್ ವ್ಯಾಲ್ಯುಗಿಂತ ಅಂಡರ್ ವ್ಯಾಲ್ಯುಗೆ ಹೋಗುವಂಥ ಸಂದರ್ಭ ಬಂದಾಗ ಜಮೀನನ್ನು ಯಾರಿಗೂ ಕೊಡತಕ್ಕಂಥ ಕೆಲಸವನ್ನು ನಾವು ಮಾಡಿಲ್ಲ. ಮತ್ತೆ ಆ ಹರಾಜನ್ನು ನಾವು ನಿಲ್ಲಿಸಿದ್ದೇವೆ. 25 ಲಕ್ಷ ರೂಪಾಯಿಗೆ ಯಾವುದೇ ಜಮೀನನ್ನು ನಾವು ಕೊಟ್ಟಿಲ್ಲ. ಇದರ ಬಗ್ಗೆ ನಾನು ಸ್ಪಷ್ಟೀಕರಣ ಕೊಡುತ್ತೇನೆ. ಮತ್ತೆ ಸರ್ಕಾರಿ ಸ್ವಾಮ್ಯಕ್ಕೆ ಜಮೀನು ಬೇಕಾಗುತ್ತದೆ. ಆದರೆ, ಇವರು ಸ್ವೇಚ್ಛಾಚಾರವಾಗಿ ಜಮೀನನ್ನು Auction ಹಾಕುವುದಕ್ಕೆ ಹೊರಟ್ಟಿದ್ದೀರೆಂದು ಹೇಳುತ್ತಿದ್ದೀರಿ. ಸದರಿ ವಿಷಯದ ಬಗ್ಗೆ ನೀವು ಅಥವಾ ಮಾನ್ಯ ನರೇಂದ್ರ ಬಾಬುರವರು ಕೇಳಿರತಕ್ಕಂಥ ಪ್ರಶ್ನೆಗೆ ಇದಕ್ಕೆ ಸಂಬಂಧಪಟ್ಟಂಥ ಎಲ್ಲ ವರದಿಯನ್ನು ನಾನು ಕೊಟ್ಟಿದ್ದೇನೆ. ಅಂದರೆ, ಈಗಾಗಲೇ ಒಂದು ಸಾರಿ ಸದನದ ಮುಂದಿಟ್ಟಿದ್ದೇನೆ. ಬಿಡಿಎಗೆ 320 ಎಕರೆ, ಹೌಸಿಂಗ್ ಬೋರ್ಡ್‌ಗೆ 580 ಎಕರೆ, ಬಿಬಿಎಂಪಿಗೆ 1100 ಎಕರೆ, ಬಿಎಂಟಿಸಿ ಗೆ 1000 ಎಕರೆ, ಕೆಪಿಟಿಸಿಎಲ್ ಗೆ 200 ಎಕರೆ, ಸ್ಲಮ್ ಬೋರ್ಡ್‌ಗೆ 400 ಎಕರೆ, ಕೆಎಸ್‌ಎಸ್‌ಐಡಿಸಿ ಗೆ 300 ಎಕರೆ, ವೇರ್ ಹೌಸಿಂಗ್ ಕಾರ್ಪೋರೇಷನ್‌ಗೆ 180 ಎಕರೆ ಮತ್ತು ಆರ್ಕಿಯಾಲಜಿ ಸರ್ವೆ ಆಫ್ ಇಂಡಿಯಾಗೆ 50 ಎಕರೆ ಮತ್ತು ಸಮಾಜ ಕಲ್ಯಾಣ ಇಲಾಖೆಗೆ 50 ಎಕರೆ,

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 80 ಎಕರೆ ಹಾಗೂ BWWSSB ಗೆ 300 ಎಕರೆ ಕೊಟ್ಟಿದ್ದೇವೆ. ಆದ್ದರಿಂದ ಸ್ವೇಚ್ಛಾಚಾರವಾಗಿ ಯಾರಿಗೋ ನಾಲ್ಕು ಜನರಿಗೆ ಅನುಕೂಲವಾಗುವ ದೃಷ್ಟಿಯಿಂದ ಮಾಡಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ. ಹರಾಜು ಮಾಡಿರುವುದರಲ್ಲಿ ಇವತ್ತಿನ ದಿವಸ 287 ಎಕರೆ ಮಾತ್ರ ಕ್ಲಿಯರ್ ಮಾಡಿದ್ದೇವೆ. ಯಾರಾದರೂ ಅಬ್ಜೆಕ್ಷನ್ ಮಾಡುವುದಿದ್ದರೆ ಅವರಿಗೆ ಅವಕಾಶ ಕೊಡುವುದಕ್ಕೋಸ್ಕರ ನೋಟಿಫಿಕೇಶನ್ ಇಷ್ಯೂ ಮಾಡಿದ ಮೇಲೆ ಅಬ್ಜೆಕ್ಷನ್ ಕೊಡುವುದಕ್ಕೆ 30 ದಿವಸ ಅವಕಾಶ ಕೊಡುತ್ತೇವೆ. ಎರಡು-ಮೂರು ಪ್ರಕರಣ ಬಿಟ್ಟರೆ ಬಿಡ್‌ದಾರರು 79 ಎ ಅಡಿಯಲ್ಲಿ ಕೃಷಿ ಸರ್ಟಿಫಿಕೇಟ್ ತಂದು ಇದರಲ್ಲಿ ಭಾಗವಹಿಸಿದ್ದಾರೆ. ಮತ್ತೆ ಗೋಮಾಳದ ಜಮೀನಿನ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಹೊಸ ತಿದ್ದುಪಡಿ ತರುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಆದ್ದರಿಂದ, ಈಗ ಗೋಮಾಳದ ಜಮೀನನ್ನು ಹರಾಜು ಹಾಕಿಲ್ಲ. ಕೇವಲ ಬೆಂಗಳೂರು ನಗರವಲ್ಲದೆ ಎಲ್ಲಾ ನಗರ ಪ್ರದೇಶಗಳಲ್ಲಿ. . .

ಶ್ರೀ ಬಸವರಾಜ ರಾಯರೆಡ್ಡಿ : ಗೋಮಾಳ ಜಾಗವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಹರಾಜು ಆಗಿರುವಂಥದ್ದು ಗೋಮಾಳ ಜಾಗವೆಂದು ಪತ್ರಿಕೆಯಲ್ಲಿ ಬಂದಿವೆ. ಆದ್ದರಿಂದ, ನಮ್ಮ ಪ್ರಶ್ನೆ ಏನೆಂದರೆ, ಮಾನ್ಯ ರಾಮಸ್ವಾಮಿಯವರ ಸಮಿತಿ ಇನ್ನೂ ಅಂತಿಮವಾದ ವರದಿಯನ್ನು ಕೊಟ್ಟಿಲ್ಲ. ಮತ್ತೆ ಈಗಾಗಲೇ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ಬಗ್ಗೆ ಅವರು ಅಂತಿಮ ವರದಿಯಲ್ಲಿ ಏನು ಶಿಫಾರಸ್ಸು ಮಾಡುತ್ತಾರೆಂಬುದು ಇನ್ನೂ ಗೊತ್ತಿಲ್ಲ. ಈಗಾಗಲೇ ಸರ್ಕಾರ ಸುಮಾರು 8 ಸಾವಿರ ಎಕರೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಿದೆ ಮತ್ತೆ ಉಳಿದಿರತಕ್ಕಂಥ ಕೆಲವು ಜಮೀನುಗಳು ಇನ್ನೂ ಬೇರೆ ಬೇರೆ ಹಂತಗಳಲ್ಲಿವೆ. ಅವುಗಳನ್ನು ಏನು ಮಾಡಬೇಕು ಎಂಬುದರ ಬಗ್ಗೆ ಅಂದರೆ, ಅವುಗಳನ್ನು ಮಾರಾಟ ಮಾಡಿ ರಿಸೋರ್ಸಸ್ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಕೂಡ ಏನೂ ಹೇಳಿಲ್ಲ. ಆದರೆ, ಇವುಗಳನ್ನು ಕೊಡುವುದಕ್ಕಾಗಿ ನೀವು ಆತುರ ಆತುರವಾಗಿ ಹರಾಜು ಮಾಡುವುದಕ್ಕೆ ಹೋಗಿರತಕ್ಕಂಥದ್ದು ಸರಿಯಲ್ಲವೆಂದು ಹೇಳುತ್ತಿದ್ದೇವೆ. ಗೈಡೆನ್ಸ್ ವ್ಯಾಲ್ಯುಗಿಂತ ಕಡಿಮೆ ಇದ್ದರೆ ರದ್ದು ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ. ಆದರೆ, ಗೈಡೆನ್ಸ್ ವ್ಯಾಲ್ಯುಗೂ ಮತ್ತು ಮಾರ್ಕೆಟ್ ವ್ಯಾಲ್ಯುಗೆ ಸಂಬಂಧವಿಲ್ಲ. ಇವತ್ತಿನ ದಿವಸ ಜಮೀನಿಗೆ

ಮಾರ್ಕೆಟ್ ಬೆಲೆ 1.5 ಕೋಟಿಯಿಂದ 2 ಕೋಟಿ ರೂಪಾಯಿಗಳವರೆಗೆ ಇದೆ. ಆದರೆ ಅಲ್ಲಿ 15, 20, 30, 40, ಲಕ್ಷ ರೂಪಾಯಿಗಳಿಗೆ ಹರಾಜಾಗಿದೆ. ಇದರಲ್ಲಿ transparency ಇಲ್ಲವೆಂದು ನಾವು ಹೇಳುತ್ತಿದ್ದೇವೆ. ಮತ್ತೆ ಇದರಲ್ಲಿ ಸುಮಾರು 73 ಜನ ಭಾಗವಹಿಸರಬಹುದು. ಆದರೆ, ಹರಾಜಿನಲ್ಲಿ ಹೆಚ್ಚಾಗಿ ಭಾಗವಹಿಸಿರುವಂಥವರು ನಾಲ್ಕೈದು ಬಿಲ್ಡರ್ಸ್ ಅಷ್ಟೆ. ಅವರುಗಲೇ ಪದೆ ಪದೇ ಎಲ್ಲಾ ಹರಾಜಿನಲ್ಲಿ ಭಾಗವಹಿಸಿದ್ದಾರೆ. ಇವರೆಲ್ಲರೂ ಒಂದು ಸಿಂಡಿಕೇಟ್ ಮಾಡಿಕೊಂಡು ನೀನು ಇದು ಕೂಗು, ನಾನು ಅದನ್ನು ಕೂಗುತ್ತೇನೆಂದು ಮೊದಲೇ ತೀರ್ಮಾನ ಮಾಡಿಕೊಂಡಿದ್ದಾರೆ. ಈ ರೀತಿಯಾಗಿ ಅವರು ಮಾಡಿಕೊಂಡಿದ್ದರಿಂದ ಸರ್ಕಾರಕ್ಕೆ ಬರಬೇಕಾಗಿರತಕ್ಕಂಥ ಹೆಚ್ಚು ಆದಾಯ ಹೋಗಿದೆ. ಈ ವಿಷಯವನ್ನು ನಾವು ಪ್ರಸ್ತಾಪ ಮಾಡಿದ್ದೇವಷ್ಟೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗೈಡೆನ್ಸ್ ವ್ಯಾಲ್ಯು ಬಗ್ಗೆ ಈಗ ಪ್ರಸ್ತಾಪ ಮಾಡಿದ್ದಾರೆ. ಈಗ Confirmation ಆಗಿರತಕ್ಕಂಥದ್ದು ಗೈಡೆನ್ಸ್ ವ್ಯಾಲ್ಯುಗಿಂತ 335%ಗೆ ಹೋಗಿರತಕ್ಕಂಥದ್ದು..

(ಗೊಂದಲ)

ಅಧ್ಯಕ್ಷರು : ಅವರು ಉತ್ತರ ಹೇಳಲಿ, ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : 10, 25, 30 ಲಕ್ಷ ರೂಪಾಯಿಗೆ ಹರಾಜು ಹಾಕಿರುವುದನ್ನು ನಿಲ್ಲಿಸಿದ್ದೀರಾ?

ಅಧ್ಯಕ್ಷರು : ಆಯಿತು, ಅವರಿಗೆ ಉತ್ತರ ಹೇಳುವುದಕ್ಕೆ ಬಿಡಿ. ಈಗ ಏನಾಗಿದೆ ಎಂದರೆ, ಕೆರೆ, ಗುಂಡುತೋಪು ಎಲ್ಲವನ್ನು ರೆಕಾರ್ಡ್ಸ್ ಫೋರ್ಜರಿ ಮಾಡಿ ಒತ್ತುವರಿ ಮಾಡಿದ್ದಾರೆ. ಅದಕ್ಕೆ ಏನಾದರೂ ಮಾಡಬೇಕಲ್ಲವೇ? ದಯಮಾಡಿ ಇದರ ಬಗ್ಗೆ ಏನಾದರೂ ಯೋಜನೆ ಮಾಡಿ. ಈಗ ಅವುಗಳೆಲ್ಲವನ್ನು ಉಳಿಸಿಕೊಳ್ಳುತ್ತೀರಿ. ಆದರೆ, ಮತ್ತೊಂದು ಸಾರಿ ನಕಲಿ ರೆಕಾರ್ಡ್ ಮಾಡಿ ಮಾರಾಟ ಮಾಡುವುದಿಲ್ಲ ಎನ್ನತಕ್ಕಂಥದ್ದಕ್ಕೆ ಏನು ಗ್ಯಾರಂಟಿ ಇದೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಸರ್ಕಾರ ಇದರ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು. ಕಾನೂನಿನ ಅಗತ್ಯತೆ ಇದ್ದರೆ ಅಮೆಂಡ್‌ಮೆಂಟ್ ಮಾಡಿ. ಕಳ್ಳರು ಮತ್ತೆ ತಪ್ಪಿಸಿಕೊಳ್ಳುವುದಕ್ಕೆ ಸರ್ಕಾರ ಬಿಡಬಾರದು. ಎಲ್ಲಾ ಕಳ್ಳರು ಸೇರಿಕೊಂಡು ಇಡೀ ಬೆಂಗಳೂರನ್ನು ಕೊಳ್ಳೆ ಹೊಡೆಯುತ್ತಿದ್ದಾರೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಿಗೆ ಇದರ ಬಗ್ಗೆ ಅನುಮಾನ ಇದೆ ಮತ್ತು ಈಗ ಮಾಡಿರತಕ್ಕಂಥ ಕ್ರಮ ಸರಿಯಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ, ಈಗಾಗಲೇ ಮಾಡಿಟ್ಟಿರತಕ್ಕಂಥ ವಿಡಿಯೋ ಕ್ಯಾಸೆಟ್‌ನ್ನು ತಮಗೆ ಹ್ಯಾಂಡ್ ಓವರ್ ಮಾಡುತ್ತೇವೆ. ಮಾನ್ಯ ಸದಸ್ಯರುಗಳಿಗೆ ಅದನ್ನು ಒಂದು ಸಾರಿ ತೋರಿಸಿ.

ಶ್ರೀ ಧರ್ಮಸಿಂಗ್ : ತಾವು ಪವರ್ ಸೆಕ್ಟಾರ್ ಮತ್ತು ನೀರಾವರಿ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಪವರ್ ಸೆಕ್ಟಾರ್ ಬಗ್ಗೆ ಈಗಾಗಲೇ ಹೇಳಿದ್ದೇನೆ. ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳ ಬಗ್ಗೆ ಹೇಳುವುದಾದರೆ, ಈಗಾಗಲೇ 400 ರೂಪಾಯಿ ಇದ್ದಂಥದ್ದನ್ನು 450 ರೂಪಾಯಿಗೆ ಮತ್ತು 500 ರೂಪಾಯಿ ಇದ್ದಂಥದ್ದನ್ನು 550 ರೂಪಾಯಿಗೆ ಹೆಚ್ಚಿಸಲಾಗಿದೆ.

ಶ್ರೀ ಸಿದ್ದರಾಮಯ್ಯ : 2004–05ರಲ್ಲಿ ಪ್ರೀ ಮೆಟ್ರಿಕ್‌ಗೆ 400 ರಿಂದ 450 ರೂಪಾಯಿಗೆ ಜಾಸ್ತಿ ಮಾಡಲಾಗಿದೆ. 450 ರಿಂದ 500 ರೂಪಾಯಿಗೆ ಪೋಸ್ಟ್ ಮೆಟ್ರಿಕ್‌ಗೆ ಜಾಸ್ತಿ ಮಾಡಲಾಗಿದೆ. ಇದಾದ ಮೇಲೆ ಮತ್ತೆ ಹೆಚ್ಚು ಮಾಡಿಲ್ಲ. ಮತ್ತೆ ಹಾಸ್ಟೆಲ್‌ಗಳಿಗೆ ಬಿಪಿಎಲ್ ಕಾರ್ಡ್‌ನ ಅಕ್ಕಿ ಕೊಡಲಾಗುತ್ತಿತ್ತು. ಆದರೆ, ಈಗ ಬಿಪಿಎಲ್ ಕಾರ್ಡ್‌ನ ಅಕ್ಕಿ ಕೊಡುವುದನ್ನು ನಿಲ್ಲಿಸಲಾಗಿದೆ. ಬಿಪಿಎಲ್ ಕಾರ್ಡ್‌ನಲ್ಲಿಯಾಗಿದ್ದರೆ ಅವರಿಗೆ 3 ರೂಪಾಯಿಗಳಲ್ಲಿ ಅಕ್ಕಿ ಸಿಗುತ್ತಿತ್ತು. ಈಗ 11, 12, 15 ರೂಪಾಯಿ ಕೊಟ್ಟು ಅಕ್ಕಿಯನ್ನು ತರುವಂಥ ಸ್ಥಿತಿಯಾಗಿದೆ. ಆದ್ದರಿಂದ, ಪ್ರೀ ಮೆಟ್ರಿಕ್ ಗೆ ಕೊಡುತ್ತಿರುವ 450 ರೂಪಾಯಿಗಳನ್ನು ಈಗ ಕನಿಷ್ಠ 600 ರೂಪಾಯಿಗಳನ್ನಾದರೂ ಮಾಡಬೇಕು. ಇಲ್ಲದಿದ್ದರೆ ಅವರಿಗೆ ಪೌಷ್ಠಿಕವಾದಂಥ ಆಹಾರ ಸಿಗುವುದಿಲ್ಲ. ಮತ್ತೆ ಬ್ರೇಕ್ ಫಾಸ್ಟ್ ಮತ್ತು ಮೊಟ್ಟೆಯನ್ನು ಕೂಡ ಕೊಡುವುದಕ್ಕೆ ಆಗುವುದಿಲ್ಲ. ಪೋಸ್ಟ್ ಮೆಟ್ರಿಕ್ ರವರಿಗೆ 500 ರೂಪಾಯಿ ಇದೆ. ಇಲ್ಲಿಯೂ ಕೂಡ 150 ರೂಪಾಯಿ ಹೆಚ್ಚು ಮಾಡಬೇಕಾಗುತ್ತದೆ. ಏಕೆಂದರೆ, ಇವತ್ತಿನ ದಿವಸ ಹಾಸ್ಟೆಲ್‌ಗಳಿಗೆ ಬಡವರ ಮಕ್ಕಳು ಹೋಗುತ್ತಾರೆಯೇ ಹೊರತು ಅನುಕೂಲಸ್ಥ ಮಕ್ಕಳ್ಯಾರು ಹೋಗುವುದಿಲ್ಲ. ಇವತ್ತಿನ ದಿವಸ ಸುಮಾರು 2 ಲಕ್ಷ ಮಕ್ಕಳು ಹಾಸ್ಟೆಲ್‌ನಲ್ಲಿದ್ದಾರೆ. ಆದರಿಂದ, ಹೆಚ್ಚು ಮಾಡಿದರೆ ಅವರಿಗೆ ಅನುಕೂಲ-ವಾಗುತ್ತದೆ. ಆದ್ದರಿಂದ, ಈಗ ಹಾಸ್ಟೆಲ್‌ಗೆ ಕೊಡುತ್ತಿರುವ ಹಣವನ್ನು ಹೆಚ್ಚು ಮಾಡಬೇಕೆಂಬ ಸಲಹೆಗಳನ್ನು ಇವರು ಕೊಟ್ಟಿದ್ದಾರೆ, ಮತ್ತೆ ನಾನೂ ಸಹ ಕೊಟ್ಟಿದ್ದೇನೆ. ಹಾಸ್ಟೆಲ್‌ಗಳಲ್ಲಿ ಇರದೇ ಇರತಕ್ಕಂಥ ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ವರ್ಗಗಳ ಪ್ರೀ ಮೆಟ್ರಿಕ್ ಮಕ್ಕಳಿಗೆ 75 ಮತ್ತು ಪೋಸ್ಟ್ ಮೆಟ್ರಿಕ್ ಮಕ್ಕಳಿಗೆ 100 ರೂಪಾಯಿ ಸ್ಕಾಲರ್ ಶಿಪ್ ನೀಡಲಾಗುತ್ತಿದೆ. ಇದನ್ನೂ ಕೂಡ ಹೆಚ್ಚು ಮಾಡಬೇಕೆಂಬ ಸಲಹೆಗಳಿವೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ತಾವು ಈಗ ಕೊಟ್ಟಿರುವ ಸಲಹೆ ಬಗ್ಗೆ ಆರ್ಥಿಕ ಇಲಾಖೆಯ ಸಚಿವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಉತ್ತರವನ್ನು ನೀವೇ ಹೇಳಿದ್ದೀರಿ. ಆರ್ಥಿಕ ಸಚಿವರು ಉತ್ತರ ಹೇಳುವುದಕ್ಕೆ ಏನಿದೆ? ಪ್ಲಾನ್ ಬಗ್ಗೆ ರೆವಿನ್ಯು ರೆಸಿಟ್ ಮತ್ತು ಡೆಫಿಸಿಟ್ ಎಲ್ಲಾ ನೀವೇ ಹೇಳಿದ್ದೀರಿ. ಮತ್ತೆ ನೀವು ಹೇಳುವುದಕ್ಕೆ ಏನೂ ಉಳಿಯುವುದಿಲ್ಲ. ಎಲ್ಲವನ್ನು ಅವರೇ ಹೇಳಿದ್ದಾರೆ. ನೀವು ಈಗ ಉತ್ತರ ಕೊಟ್ಟರೆ ನಿಮ್ಮ ಪ್ರಚಾರ ಪತ್ರಿಕೆಗಳಲ್ಲಿ ಏನು ಬರುವುದಿಲ್ಲ.

ಶ್ರೀ ಎನ್.ಧರ್ಮಸಿಂಗ್ : ಮೈನಾರಿಟಿ ಕಮೀಷನ್‌ನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ತೀವ್ರವಾಗಿ ಮಾಡಿ, ಅಲ್ಪಸಂಖ್ಯಾತರು ನಿಮಗೆ ಬೆಂಬಲ ಕೊಡುತ್ತಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮೈನಾರಿಟಿ ಕಮೀಷನ್‌ನ್ನು ಬಗ್ಗೆ ವಿರೋಧ ಪಕ್ಷದ ನಾಯಕರು ಏನು ಬೆಳಕು ಚೆಲ್ಲಿದ್ದಾರೆ, ಅದರ ಬಗ್ಗೆ ತಕ್ಷಣವೇ ತೀರ್ಮಾನ ಮಾಡುತ್ತೇವೆ.

ಶ್ರೀ ಎ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇಲ್ಲಿಯೇ ಇರುವುದರಿಂದ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಹಿಂದುಳಿದ ವರ್ಗಗಳ ಸೆನ್ಸಸ್‌ಗೆ ಆಬರತ ಸರ್ಕಾರ ಹಣ ಕೊಟ್ಟಿದೆ ಮತ್ತೆ ನಮ್ಮ ಸರ್ಕಾರ ಕೂಡ ಇದಕ್ಕಾಗಿ ಬಜೆಟ್‌ನಲ್ಲಿ ಹಣ ಇಟ್ಟಿದೆ. ಇದರ ಬಗ್ಗೆ ಇದುವರೆಗೂ ಏನು ಕ್ರಮ ತೆಗೆದುಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇದರ ಬಗ್ಗೆ ತಿಳಿಸಬೇಕು. ಮತ್ತೆ ಇದರ ಬಗ್ಗೆ ಕಾರ್ಯೋನ್ಮುಖರಾಗಬೇಕೆಂದು ಕೇಳಿಕೊಳ್ಳುತ್ತೇನೆ ಜಾತಿವಾರು ಜನಗಣತಿ ಮಾಡುವುದಕ್ಕೆ ಭಾರತ ಸರ್ಕಾರ 21 ಕೋಟಿ ರೂಪಾಯಿ ಕೊಟ್ಟಿದೆ. ಮತ್ತೆ ಬಜೆಟ್‌ನಲ್ಲಿ ನಮ್ಮದು 2 ಕೋಟಿ ರೂಪಾಯಿಗಳನ್ನು ತೋರಿಸಲಾಗಿದೆ. ಒಟ್ಟು ಇದಕ್ಕಾಗಿ 23 ಕೋಟಿ ರೂಪಾಯಿಗಳಷ್ಟು ದುಡ್ಡು ಇಟ್ಟುಕೊಂಡು ಆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಆಗಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಮೇಲೆ ದಯಮಾಡಿ ಬೆಳಕು ಚೆಲ್ಲಬೇಕೆಂದು ಕೇಳಿಕೊಳ್ಳುತ್ತೇನೆ.

(3-30 PM)

ಶ್ರೀ ಆರ್.ಧ್ರುವನಾರಾಯಣ್ : ಬ್ಯಾಕ್‌ಲಾಗ್ ಹುದ್ದೆಗಳು ಮಂದ ಗತಿಯಲ್ಲಿ ಭರ್ತಿಯಾಗುತ್ತಿದೆ, ದಯಮಾಡಿ ಬ್ಯಾಕ್‌ಲಾಗ್ ಹುದ್ದೆಗಳನ್ನು ತಕ್ಷಣ ತುಂಬಬೇಕೆಂಬ ಒತ್ತಾಯವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸರ್ಕಾರದ ವಿವಿಧ ಇಲಾಖೆಗಳಲ್ಲಿರುವ 44 ಸಾವಿರ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಈಗಾಗಲೇ ತೀರ್ಮಾನ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಈ ಬಗ್ಗೆ ಏನು ಗಮನವನ್ನು ಸೆಳೆದಿದ್ದಾರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸೂಚನೆ ಕೊಡುತ್ತೇನೆ.

ಶ್ರೀ ಎ.ಕೃಷ್ಣಪ್ಪ : ಹೊಸ ಸೆನ್ಸಸ್‌ಗೆ ಭಾರತ ಸರ್ಕಾರ 21 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ನಾವು ಬಜೆಟ್‌ನಲ್ಲಿ 2 ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿದ್ದೇವೆ. ಕಾರ್ಯ ಪ್ರಾರಂಭ ಆಗಲಿಲ್ಲ. ಅದು ಕಾರ್ಯ ಪ್ರಾರಂಭ ಮಾಡುವ ಬಗ್ಗೆ ತಾವು ಸ್ವಲ್ಪ announcement ಮಾಡಬೇಕು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಸಮಿತಿ ಏನು ರಚನೆ ಮಾಡಿದ್ದೇವೆ, ಅದರ ಬಗ್ಗೆ ಏನು ಕ್ರಮವನ್ನು ತೆಗದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ : ನೀವು ಬಂದ ಮೇಲೆ 18 ತಿಂಗಳಿಂದ ಪ್ರಾರಂಭವಾಗಿದ್ದ ಕೆಲಸ ನಿಂತು ಹೋಗಿದೆ. ಇನ್ನು ಮೆಂಬರ್‌ಗಳು ಆಗಿಲ್ಲ. ಒಬ್ಬರೇ ಸದಸ್ಯರು ಒಬ್ಬರು ಛೇರ್ಮನ್ ಆಗಿದ್ದಾರೆ, ಇನ್ನು 4 ಜನ ಮೆಂಬರ್‌ಗಳು ಆಗಬೇಕು.

ಡಾ: ಕೆ.ಅನ್ನದಾನಿ : ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮನವಿ, ನಮ್ಮ ಗ್ರಾಮ ಸಹಾಯಕರ ಬಗ್ಗೆ ಅವರನ್ನು permanent ಮಾಡುವ ಬಗ್ಗೆ ಹಾಗೂ ಅವರನ್ನು class-IV employee ಎಂದು ಅವರನ್ನು ಮಾಡುವುದರ ಬಗ್ಗೆ ತಾವು ಹೇಳಬೇಕು.

ಶ್ರೀ ವಿನಯ್ ಕುಲಕರ್ಣಿ : ಈಗಾಗಲೇ 23 ದಿನಗಳಿಂದ ನಮ್ಮ ಲೈಬ್ರರಿ ಮೇಲ್ವಿಚಾರಕರು ಕಂಟಿನ್ಯೂ ಆಗಿ strike ಕುಳಿತಿದ್ದಾರೆ, ಅವರಿಗೆ ದಯವಿಟ್ಟು ನ್ಯಾಯವನ್ನು ಒದಗಿಸಕೊಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಪ್ರತಿಷ್ಠಿತ ನಮ್ಮ ಸದನದ ಗೌರವಾನ್ವಿತ ಪ್ರತಿ ಪಕ್ಷದಲ್ಲಿರುವಂತಹ ಮೊದಲನೆ ಸಾಲಿನಲ್ಲಿ ಕುಳಿತಿರುವಂತಹ ಅನೇಕ ಪ್ರಮುಖರು ಮತ್ತು ಅನೇಕ ಸದಸ್ಯರು ಮುಂಗಡ ಪತ್ರದ ಬಗ್ಗೆ ಆಳವಾಗಿ ಚರ್ಚಿಸಿ ಮಾರ್ಗದರ್ಶನವನ್ನು ತಾವು ಮಾಡಿದ್ದೀರಿ, ನೀವು ಮಾಡಿರುವಂತಹ ಟೀಕೆ ಟಿಪ್ಪಣಿಗಳನ್ನು ಮುಕ್ತ ಮನಸ್ಸಿನಿಂದ ನಾನು ಸ್ವೀಕಾರ ಮಾಡಿದ್ದೇನೆ. ನಿಮ್ಮ ಸಲಹೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸಹ ನಾನು ಮಾಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ವಿಷಯಕ್ಕೂ ಸಂಬಂಧಪಟ್ಟ ಹಾಗೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿ ಅದರ ಬಗ್ಗೆ ತಾವು ಕೆಲವು clarification ಸಹ ತಾವು ಕೇಳಿದ್ದೀರಿ. ಒಂದು ರೀತಿ ಅವರು ನನ್ನ ಭಾರವನ್ನು ಕಡಿಮೆ ಮಾಡಿದ್ದಾರೆ. ನಾನು ನನ್ನ ಮುಂಗಡಪತ್ರದಲ್ಲಿ ಅಲ್ಲಮ ಪ್ರಭುಗಳು ಹೇಳಿರುವಂತಹ ಒಂದು ಮಾತನ್ನು ಹೇಳುತ್ತೇನೆ.

"ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ, ನಿಂದ ಹೆಜ್ಜೆಯನ್ನು ಅರಿಯಬಾರದು" ಎಂದು, ಅಂದರೆ ನಮ್ಮ ಹಿಂದಿನ ಹೆಜ್ಜೆಯನ್ನು ವಿಮರ್ಶೆ ಮಾಡಿ ವರ್ತಮಾನವನ್ನು ಅರ್ಥೈಸುವಂತಹದ್ದು ಸಮರ್ಪಕವಲ್ಲ ಎಂಬ ಎಚ್ಚರಿಕೆಯ ಮಾತನ್ನು ಅವರು ಹೇಳಿದ್ದಾರೆ. ನಾನು 16–03–2006 ರಂದು ಈ ಸದನದಲ್ಲಿ 2006--07ನೇ ಸಾಲಿನ ಮುಂಗಡಪತ್ರವನ್ನು ಮಂಡಿಸಿ 4 ತಿಂಗಳ ಅವಧಿಗೆ ಲೇಖಾನುದಾನವನ್ನು ಪಡೆದಿದ್ದೆ. ನಾನು ಈ ಹಿಂದೆ ಹೇಳಿದಂತೆ 2006--07ನೇ ಸಾಲಿನಲ್ಲಿ ಬಜೆಟ್‌ನಲ್ಲಿ ನಾವೇನು ಆಶ್ವಾಸನೆ ಗಳನ್ನು ಕೊಟ್ಟಿದ್ದೆವು, ಏನೇನು ಕಾರ್ಯಕ್ರಮಗಳನ್ನು ರೂಪಿಸುತ್ತೇವೆಂದು ಭರವಸೆಯನ್ನು ಕೊಟ್ಟಿದ್ದೇವೋ, ಅದನ್ನು 100 ಕ್ಕೆ 95 ರಷ್ಟು ಕಾರ್ಯರೂಪಕ್ಕೆ ತಂದಿದ್ದೇವೆ. ಸರ್ಕಾರಿ ಆಜ್ಞೆಗಳು ಹೊರಬಿದ್ದಿದೆ. ಸುಮಾರು 50 ಲಕ್ಷಕ್ಕೂ ಹೆಚ್ಚು ಜನರು ಫಲಾನುಭವಿಗಳಿಗೆ ಆ ಸವಲತ್ತುಗಳನ್ನು ಒದಗಿಸುವಂತಹ ಪ್ರಯತ್ನವನ್ನು ಮಾಡಿದ್ದೇವೆ. ಅನಿರೀಕ್ಷಿತವಾಗಿ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿ ಯವರು ಹೇಳಿದಂತೆ ಬಿಜೆಪಿ ಮತ್ತು ಜೆಡಿ(ಎಸ್) ಸಮ್ಮಿಶ್ರ ಸರ್ಕಾರ 18 ತಿಂಗಳ ಹಿಂದೆ ಅಸ್ತಿತ್ವಕ್ಕೆ ಬಂದ ನಂತರ 18 ತಿಂಗಳು ಪೂರ್ಣ ಮಾಡಿದ್ದೇವೆ. ಒಪ್ಪಂದದಂತೆ ಉಳಿದ 2 ತಿಂಗಳು ಮುಖ್ಯಮಂತ್ರಿ ಗಳಾಗಿ ಕುಮಾರಸ್ವಾಮಿಯವರು ಮುಂದುವರಿಯುತ್ತಾರೆ. ಒಪ್ಪಂದದಂತೆ ಉಳಿದ 20 ತಿಂಗಳು ಅಧಿಕಾರ ಹಸ್ತಾಂತರವಾಗಿ ಒಟ್ಟು 40 ತಿಂಗಳು ಅಧಿಕಾರವನ್ನು ಪೂರ್ಣಮಾಡುತ್ತೇವೆಂಬ ವಿಶ್ವಾಸ ನನಗಿದೆ. ನಾವು

ಮಾತುಕೊಟ್ಟಂತೆ "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬ ತತ್ವದ ಬೆಳಕಿನಲ್ಲಿ ಕೆಲಸವನ್ನು ಮಡುತ್ತಿದ್ದೇವೆ. ಈ ಎರಡು ಆಯವ್ಯಯದಲ್ಲಿ ಮೂಡಿಬಂದಂತಹ ಕ್ರಾಂತಿಕಾರಿ ಕಾರ್ಯಕ್ರಮಗಳು ಸುಮಾರು 50 ಲಕ್ಷಕ್ಕೂ ಹೆಚ್ಚು ನರಿಗೆ ನೇರವಾಗಿ ಫಲ ದೊರಕಿದೆ. ಅವರು ಬದುಕಿನಲ್ಲಿ ನೆಮ್ಮದಿಯಿಂದ, ಗೌರವದಿಂದ, ಸ್ವಾಭಿಮಾನದಿಂದ ಬದುಕುವಂತಹ ಅವಕಾಶವಾಗಿದೆ. ಒಂದು ರೀತಿಯಾಗಿ ಈ 18 ತಿಂಗಳ ಪಯಣ ಪರಸ್ಪರ ಹೃದಯಗಳನ್ನು ಬೆಸೆದಿವೆ, ವಿಶ್ವಾದಿಂದ ಮುನ್ನಡೆದಿದ್ದೇವೆ, ಅದೇ ರೀತಿಯಾಗಿ ಇನ್ನು 22 ತಿಂಗಳು ಪುರ್ಣ ಮಾಡುತ್ತೇವೆನ್ನುವಂತಹ ಮಾತನ್ನು ನಾವು ಪುನರುಚ್ಚಿಸುತ್ತೇವೆ. ಈ "ನಂಬಿ ಕೆಟ್ಟವರಿಲ್ಲ" ಎನ್ನುವಂತಹ ಉಕ್ತಿಯಲ್ಲಿ ನನಗೆ ಶ್ರದ್ಧೆ ಮತ್ತು ಭಕ್ತಿ ಕೂಡ ಇದೆ. ಈ ನಂಬಿಕೆಯ ಆದರ್ಶವೇ "ನಂಬಿ ಕೆಟ್ಟವರಿಲ್ಲ", ಎಂಬ ಉಕ್ತಿಯಲ್ಲಿ ನನಗೆ ಶ್ರದ್ದೆ ಇದೆ, ನಂಬಿಕೆ ಇದೆ, ತಾವು ಯಾವ ವಿಷಯ ಬೇಕೆಂದು ಹೇಳುತ್ತಿದ್ದೀರಿ, ಅದರ ಬಗ್ಗೆ ನಾನು ಕೊನೆಯಲ್ಲಿ ಉತ್ತರ ಕೊಡುತ್ತೇನೆ. ನಿಮ್ಮ ಉತ್ಸಾಹ, ನೀವು ಯಾವ ಪ್ರಶ್ನೆಯನ್ನು ನಿರೀಕ್ಷೆ ಮಾಡುತ್ತೀರೋ, ಅದಕ್ಕೆ ನಾನು ಕೊನೆಯಲ್ಲಿ ಉತ್ತರವನ್ನು ಕೊಡುತ್ತೇನೆ. ನಾನು ಹಣಕಾಸು ಹಾಗೂ ಅಬ್ಕಾರಿ ಇಲಾಖೆಯನ್ನು ವಹಿಸಿಕೊಂಡ ಮೇಲೆ ಇದು ಒಂದು ರೀತಿ ಹಗರಣ ಮುಕ್ತ ಇಲಾಖೆ ಆಗಿದೆ. ಒಂದು ಪಾರದರ್ಶಕವಾದ ಆಡಳಿತವನ್ನು ಕೊಟ್ಟಿದ್ದೇವೆ. ನಮ್ಮ ಇತರೆ ಸಚಿವರು ಸಹ ಅದೇ ರೀತಿಯಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಈ ನಾಡಿನ ಜನರಿಗೆ ನೆಮ್ಮದಿಯಿಂದ ಬದುಕುವಂತಹ ಕಾರ್ಯಕ್ರವನ್ನು ರೂಪಿಸಿದ್ದಾರೆ. ಚರ್ಚೆಯ ಸಂದರ್ಭದಲ್ಲಿಯೂ ಕೂಡ ನಮ್ಮ ಪ್ರತಿಪಕ್ಷದ ನಾಯಕರು ಹಣಕಾಸಿನ ಇಲಾಖೆಯ ಬಗ್ಗೆಯಾಗಲಿ, ಅಬ್ಕಾರಿ ಇಲಾಖೆಯ ಬಗ್ಗೆಯಾಗಲಿ, ಯಾವುದೇ ಒಂದು ಸ್ಕ್ಯಾಂಡಲ್ ನಡೆದಿದೆ ಎನ್ನುವಂತಹ ಮಾತನ್ನು ಹೇಳಿಲ್ಲ. ಅದಕ್ಕಾಗಿ ನಾನು ಎಲ್ಲಾ ಪ್ರತಿಪಕ್ಷದ ನಾಯಕರಿಗೆ ವಿರೋಧ ಪಕ್ಷದ ಶಾಸಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಒಂದು ಮಾತನ್ನು ಬಜೆಟ್‌ನ್ನು ಮಂಡನೆ ಮಾಡಿದಾಗ "ಯಡಿಯೂರಪ್ಪನವರೆ ಇದು ಚುನಾವಣೆಯ ಬಜೆಟ್, ಇದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಹಣ ಎಲ್ಲಿದೆ? ಇದು ಅಸಾಧ್ಯ" ಎನ್ನುವ ಮಾತನ್ನು ಹೇಳಿದ್ದರು. ಅದಕ್ಕಾಗಿ ನಾನು ಮಧ್ಯದಲ್ಲಿ ಮಾತನಾಡುವಂತಹ ಕಾಲದಲ್ಲಿ ಅತ್ಯಂತ ವಿನಯದಿಂದ ನಿಮ್ಮಲ್ಲಿ ಪ್ರಾರ್ಥನೆ ಮಾಡಿದೆ. 2006–07ರ ಆಯವ್ಯಯದಲ್ಲಿ ನಾವೇನೂ ಕಾರ್ಯಕ್ರಮವನ್ನು ರೂಪಿಸಿದ್ದೆವೋ, ಯಾವುದು ಕಾರ್ಯರೂಪಕ್ಕೆ

ಬಂದಿಲ್ಲವೆಂದು ನನ್ನ ಗಮನಕ್ಕೆ ತಂದರೆ ಅದನ್ನು ತಾವು ನನಗೆ ಮನವರಿಕೆಯನ್ನು ಮಾಡಿ, ಸರಿಪಡಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡುತ್ತೇನೆಂದು ಹೇಳಿದ್ದೇನೆ. ಒಂದು ರೀತಿಯಾಗಿ ನಾವು ಹೇಳಿದಂತಹ 2006-07ನೇ ಸಾಲಿನ ಆಯವ್ಯದಲ್ಲಿ ಅನೇಕ ಕಾರ್ಯಕ್ರಮಗಳು ಜಾರಿಗೆ ಬಂದಿದೆ ಎಂದು ನಿಮಗೆ ಮನವರಿಕೆಯಾದು ದರಿಂದಲೇ ಆ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವಂತಹ ಪ್ರಯತ್ನವನ್ನು ತಾವು ಮಾಡಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ದೇಶದಲ್ಲಿ 4% ಬಡ್ಡಿಗೆ ರೈತರಿಗೆ ಸಹಕಾರಿ ಸಂಸ್ಥೆಗಳಿಂದ ಸಾಲ ಕೊಡುವಂತಹ ತೀರ್ಮಾನ ಈ ದೇಶದಲ್ಲಿ ಬೇರೆ ಯಾವುದೇ ರಾಜ್ಯ ಸರ್ಕಾರ ಮಾಡುವಂತಹ ಪ್ರಯತ್ನವಾಗಲಿಲ್ಲ.

ಸನ್ಮಾನ್ಯ ಮುಖ್ಯಮಂತ್ರಿಗಳು ಹಳ್ಳಿಗಳಲ್ಲಿ ವಾಸ ಮಾಡಿ ಜನರ ಸಮಸ್ಯೆಯನ್ನು ತಿಳಿದುಕೊಳ್ಳುತ್ತಿದ್ದಾರೆ. ನಾನು ಕಳೆದ 40 ವರ್ಷಗಳಿಂದ ಹಳ್ಳಿಹಳ್ಳಿಗಳಲ್ಲಿ ಸುತ್ತಿದ್ದೇನೆ, ರೈತ, ಕೃಷಿ ಕಾರ್ಮಿಕ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮಧ್ಯೆ ಇದ್ದೇನೆ. ನಾನು ಯಾವುದೇ ಯೂನಿವರ್ಸಿಟಿಯಲ್ಲಿ ಡಿಗ್ರಿ ಪಡೆದಿಲ್ಲ. ಆದರೆ ರೈತರ ಮಧ್ಯೆ ಜನರ ಮಧ್ಯೆ ಆ ಯೂನಿವರ್ಸಿಟಿಯಲ್ಲಿ ಅನುಭವವನ್ನು ಪಡೆದಿದ್ದೇನೆ. ಅದರ ಪರಿಣಾಮವೇ ಇವತ್ತು ನಾನು ಈ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಸಾಧ್ಯವಾಯಿತು. ನಮ್ಮ ಸಚಿವ ಸಂಪುಟದ ಸದಸ್ಯರು ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ನಾನು ಆರ್ಥಿಕ ತಜ್ಞ ಎಂದು ಹೇಳಿಲ್ಲ. ರಾಜಕೀಯ ಮುತ್ಸದ್ದಿ ಎಂದು ಹೇಳಿಕೊಂಡಿಲ್ಲ. ಆದರೆ ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ದೇವೇಗೌಡರ ನಂತರ ಈ ನಾಡಿನಲ್ಲಿ ಹಳ್ಳಿಹಳ್ಳಿಯಲ್ಲಿ ಸುತ್ತಿರುವುದು ಯಡಿಯೂರಪ್ಪ ಎಂದು ಮಾನ್ಯ ದೇವೇಗೌಡರೇ ಅನೇಕ ಬಾರಿ ನನಗೆ ಹೇಳುತ್ತಿದ್ದರು. ಇದರ ಅನುಭವದಿಂದ ಅನೇಕ ಕಾರ್ಯಕ್ರಮಗಳನ್ನು ನಾನು ಮಾಡಿದ್ದೇನೆ. ಇವತ್ತು ಲೋಕಸಭೆ ಯೊಳಗಡೆ ಕೇಂದ್ರದ ಕೃಷಿ ಸಚಿವರಾದ ಶ್ರೀ ಶರದ್‌ಪವಾರ್‌ರವರು ಇಡೀ ದೇಶದಲ್ಲಿ ರೈತರಿಗೆ ಈ ರೀತಿಯಾಗಿ ಕಡಿಮೆ ಬಡ್ಡಿದರದಲ್ಲಿ ಸಾಲ ಕೊಡುವಂತಹ ಚಿಂತನೆಯಾಗಬೇಕೆಂದು ಪ್ರಸ್ತಾಪ ಮಾಡುವಂತಹದ್ದು, ಮೊನ್ನೆ ದಿವಸ ಮೈಸೂರಿನಲ್ಲಿ ಸಹಕಾರಿ ಕಾರ್ಯಕ್ರಮಕ್ಕೆ ಬಂದಾಗ ಮುಖ್ಯಮಂತ್ರಿಗಳ ಸಮಕ್ಷಮ ಇದ್ದಾಗ, ಕರ್ನಾಟಕ ರಾಜ್ಯದಲ್ಲಿ ನಾವು ತೆಗೆದುಕೊಂಡಿರುವ ನಿಲುವಿನ ಬಗ್ಗೆ ಪ್ರಸ್ತಾಪ ಮಾಡಿರುವಂತಹದ್ದು, ಬಹುಶಃ

ದೇಶದಲ್ಲಿಯೇ ಪ್ರಥಮ. ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ಪಡೆದಿದ್ದಕ್ಕೂ ಸಹ 4% ಸಾಲ ಕೊಡುವಂತಹ ಚಿಂತನೆ ಮಾಡುವಂತಹ ರೀತಿಯಲ್ಲಿ ಈ ರಾಜ್ಯ ಸರ್ಕಾರ ಈ ಸಮ್ಮಿಶ್ರ ಸರ್ಕಾರ ರೈತರ ಪರವಾಗಿ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಬಹುಶಃ ಈ ದೇಶದಲ್ಲಿ ಸ್ವಾತಂತ್ರ ಬಂದು ಇಷ್ಟು ವರ್ಷಗಳಾದರೂ ಸಹ ರೈತನ ಸ್ಥಿತಿ ಸುಧಾರಣೆಯಾಗಲಿಲ್ಲವೆಂದು ಗೊತ್ತಾದ ಮೇಲೆ ನಾನು ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ರೈತನಿಗೆ ಸಿಗಬೇಕಾದಂತಹ ಅನೇಕ ರೀತಿಯ ಸವಲತ್ತುಗಳನ್ನು ಕೊಡಿಸುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡುವಂತಹ ಕಾಲದಲ್ಲಿ 7% ಬಡ್ಡಿಗೆ ಸಾಲವನ್ನು ಕೊಡುವಂತಹದ್ದು ಬಡ್ಡಿ ಏರಿಕೆಯಾಗುವುದರ ಬಗ್ಗೆ ಮಾತನ್ನು ನಾನು ಮೈಸೂರು ಪತ್ರಿಕೆಯಲ್ಲಿ ನೋಡಿದೆ. ಆದರೆ ನಾನು ಈ ಸದನದ ಮೂಲಕ ನಾಡಿನ ರೈತ ಸಮೂಹಕ್ಕೆ ಭರವಸೆಯನನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರೈತ, ನಮ್ಮ ನೇತಾರ, ನಮ್ಮ ಮೀನುಗಾರ, ಸಹಕಾರಿ ಸಂಘಗಳಿಂದ ಪಡೆಯುವಂತಹ ಸಾಲಕ್ಕೆ ಅದೆಷ್ಟೇ ಸರ್ಕಾರದ ಖಜಾನೆಯ ಮೇಲೆ ಭಾರ ಬೀಳಲಿ, 4% ಬಡ್ಡಿಗೆ ಸಾಲವನ್ನು ಕೊಡುವುದಕ್ಕೆ ನಾವು ಬದ್ಧರಿದ್ದೇವೆ ಎನ್ನುವಂತಹ ಭರವಸೆಯನ್ನು ಈ ಸದನದ ಮೂಲಕ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ಸಂದರ್ಭದಲ್ಲಿ ನಾವೆಲ್ಲರೂ ಒಟ್ಟಾಗಿ ಸೇರಿ ಏನು ರೈತನ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ, ಅವನು ನೆಮ್ಮದಿಯಿಂದ ಬದುಕಬೇಕೆಂದು ಇದ್ದರೆ ರಾಷ್ಟ್ರೀಕೃತ ಬ್ಯಾಂಕಿನಲ್ಲಿಯೂ ಸಹ 4% ಗೆ ಸಾಲ ಸಿಗುವಂತೆ ಎಲ್ಲಾ ರೀತಿಯ ಒತ್ತಡವನ್ನು ನಾವು ತರಬೇಕಾಗುತ್ತದೆ. ಆ ಕೆಲಸವನ್ನು ನಾವು ಒಟ್ಟಾಗಿ ಮಾಡೋಣವೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಲಾಟರಿ ನಿಷೇಧದಿಂದ ಯಾರು ವರ್ಕಿಂಗ್ ಕ್ಲಾಸ್ ಜನರು ಇದ್ದಾರೆ, ಇವತ್ತು ಅವರು ನೆಮ್ಮದಿಯಿಂದ ನಿಟ್ಟುಸಿರು ಬಿಡುತ್ತಿದ್ದಾರೆ. ನಾನು ಆಯವ್ಯಯವನ್ನು ಮಂಡನೆ ಮಾಡುವಂತಹ ಕಾಲದಲ್ಲಿ ಒಂದು ತಿಂಗಳು ಮುಂಚೆ ಮಾನ್ಯ ದೇಶಪಾಂಡೆಯವರೆ, 4–5 ಜನ ಹೆಣ್ಣುಮಕ್ಕಳು ಬಂದರು. ಅವರು ಕಣ್ಣೀರು ಇಡುತ್ತಾ ಕಾಲಿಡಿದು ಮೇಲೆ ಹೇಳಲಿಲ್ಲ. ನಾನು ಏನು ಸಮಸ್ಯೆ ಇದೆ ಎಂದು ಕೇಳಿದೆ. ಅವರು ನಮ್ಮ ಯಜಮಾನರು ಬಾಡಿಗೆ ಆಟೋರಿಕ್ಷಾವನ್ನು ಓಡಿಸುತ್ತಾರೆ ಎಂದರು. ನಿಮಗೆ ತೊಂದರೆ ಏನು ಎಂದು ಕೇಳಿದೆ. "ಯಡಿಯೂರಪ್ಪನವರೆ, ದಿವಸಕ್ಕೆ 200–300 ದುಡಿಮೆ ಮಾಡುತ್ತಾರೆ. ಬೆಳಿಗ್ಗೆ

6 ಗಂಟೆಯಿಂದ 2 ಶಿಫ್ಟ್ ಕೆಲಸ ಮಾಡುತ್ತಾರೆ. ಆದರೆ ಮನೆಗೆ ಹಣವನ್ನು ತರುವುದಿಲ್ಲ. ಅದೇನು ಹಾಳು ಲಾಟರಿ ಇದೆಯಲ್ಲಾ, ಅದನ್ನು ಆಡಿ ಬರೀ ಕೈಯಲ್ಲಿ ಬರುತ್ತಾರೆ. ಕೆಲವು ದಿವಸ ಪೆಟ್ರೋಲ್‌ಗೆ ದುಡ್ಡು ಇಲ್ಲದೆ ಮಧ್ಯಾಹ್ನ ಬಂದು ನನ್ನನ್ನು ಕಾಡಿಸಿ ಹಣವನ್ನು ತೆಗೆದುಕೊಂಡು ಹೋಗುತ್ತಾರೆ. ಅವರಿಗೆ ಬೇರೆ ದುಶ್ಚಟಗಳು ಇಲ್ಲ. ನೀವು ಲಾಟರಿಯನ್ನು ಮನ್ನಾ ಮಾಡುತ್ತೀರೆಂದು ಪತ್ರಿಕೆಯಲ್ಲಿ ಓದಿದೆ, ಖಂಡಿತವಾಗಿ ಮನ್ನಾ ಮಾಡುತ್ತೀರಾ? ನಾವು ನೆಮ್ಮದಿಯಿಂದ ಬದುಕಬಹುದೇ?" ಎಂದು ಕಣ್ಣೀರು ಇಟ್ಟು ಮನವಿ ಮಾಡಿದಂತಹ ಪ್ರಸಂಗಗಳು ನಮ್ಮ ಕಣ್ಮುಂದೆ ಇದೆ. ಇದರ ಪರಿಣಾಮವೇ ನಾವೆಲ್ಲರೂ ಒಟ್ಟಾಗಿ ಸೇರಿ, ಕೆಲಸ ಮಾಡಬೇಕಾಗಿದೆ. ನಾನು ಈ ಮನೆಯಲ್ಲಿ ಒಂದು ಮಾತನ್ನು ಸ್ಪಷ್ಟ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಕಾರ್ಯಕ್ರಮಗಳನ್ನು ನಾವು ಮಾಡಿದ್ದರೆ ಒಂದು ಗುಲಗಂಜಿ ಹೆಚ್ಚು ಮುಖ್ಯಮಂತ್ರಿಗಳು ಕ್ಲೈಮು ಮಾಡುವ ಹಾಗಿಲ್ಲ, ಒಂದು ಗುಲಗಂಜಿಯಷ್ಟು ಉಪಮುಖ್ಯಮಂತ್ರಿಯಾದ ನಾನು ಕ್ಲೈಮು ಮಾಡುವ ಹಾಗಿಲ್ಲ. ಇದು ಸಮಪಾಲು. ಸಮ್ಮಿಶ್ರ ಸರ್ಕಾರ ಒಟ್ಟಾಗಿ ಈ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಪರಸ್ಪರ ಆತ್ಮೀಯತೆಯಿಂದ ಅವರು ನಡೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಹೇಳಿದದ್ದು, ದೇವರು ಸ್ವಪ್ನದಲ್ಲಿ ಬಂದು ನಿಮ್ಮ ಮುಖ್ಯಮಂತ್ರಿಯವರಾದ ಶ್ರೀ ಕುಮಾರಸ್ವಾಮಿಯವರು ಅನ್ಯಾಯ ಮಾಡುತ್ತಾರೆಂದರೆ ಅದನ್ನು ನಾನು ನಂಬುವುದಿಲ್ಲವೆನ್ನುವಂತಹ ಮಾತನ್ನು ಹೇಳಿದ್ದೇನೆ. ಆ ವಿಶ್ವಾಸ ನನಗೆ ಇದೆ. ಆ ರೀತಿಯಲ್ಲಿ ಅವರು ಈ ನಿಮಿಷದವರೆಗೂ ಕೂಡ ನಡೆದುಕೊಂಡಿದ್ದಾರೆ. ಅದೇ ರೀತಿಯಾಗಿ ನಡೆದುಕೊಳ್ಳುತ್ತಾರೆಂಬ ವಿಶ್ವಾಸ ಈ ನಾಡಿನ ಜನರಿಗೆ ಇದೆ. ಬಹುಶಃ ಇವತ್ತು 18 ತಿಂಗಳಿಂದ ಉಪಮುಖ್ಯಮಂತ್ರಿಯಾಗಿ ನನ್ನ ಸ್ವಭಾವಗಳು ಏನಿದೆ, ಈ ರಾಜಕೀಯ ಪರಿಸ್ಥಿತಿಯಿಂದ ಆ ಅನುಭವದಿಂದ ಶಾಂತಿ ಸಮಾಧಾನದಿಂದ, ಒಂದು ಪಾಠವನ್ನು ಇಲ್ಲಿ ಕಲಿತಿದ್ದೇನೆ. ನನ್ನ ಸ್ವಭಾವವನ್ನೇ ಬದಲಾವಣೆ ಮಾಡಿಕೊಳ್ಳುವ ಪ್ರಯತ್ನ ಈ 18 ತಿಂಗಳಲ್ಲಿ ಆಗಿದೆ. ನಾನು ಈ ರೀತಿಯಾಗಿ ಬದಲಾವಣೆ ಆಗಬಹುದು ಎಂದು ನಿರೀಕ್ಷೆಯನ್ನು ಮಾಡಿರಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಯಡಿಯೂರಪ್ಪನವರು ಹೇಳಿದರು, ಈ 18 ತಿಂಗಳಲ್ಲಿ ಶಾಂತಿ, ಸಮಾಧಾನ, ತಾಳ್ಮೆಯಿಂದ ನಾನು ಇಲ್ಲಿ ಕುಳಿತಿದ್ದೇನೆ ಎಂದು ಹೇಳಿದರು. ಅಧಿಕಾರಕ್ಕೋಸ್ಕರ ತಾಳ್ಮೆ, ಶಾಂತಿಯಿಂದ ಇರಬೇಕಾಗುತ್ತದೆ. ಎಲ್ಲವನ್ನು ಸಹಿಸಬೇಕಾಗುತ್ತದೆ.

ಅಧ್ಯಕ್ಷರು : ಅಧಿಕಾರವನ್ನು ನಡೆಸುವವರಿಗೆ ತಾಳ್ಮೆ ಇರಬೇಕು, ಅದಕ್ಕೋಸ್ಕರ ಅವರು ಅಭ್ಯಾಸ ಮಾಡಿಕೊಂಡಿದ್ದಾರೆ. ಏತಕ್ಕಾಗಿ ತಾವು ಈ ರೀತಿಯಾಗಿ ಮಾತನಾಡುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧಿಕಾರಕ್ಕೋಸ್ಕರ ಅಲ್ಲ, ಶಾಂತಿ, ತಾಳ್ಮೆ, ಸಮಾಧಾನವನ್ನು ನಾನು ಹೊಂದಿದ್ದೇನೆ. ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತು ಕೆಲಸ ಮಾಡುವಾಗ ನನಗೆ ಏನು ಅನುಭವವಿತ್ತು, ಅದನ್ನು ಕಾರ್ಯರೂಪಕ್ಕೆ ತರುವಂತಹ ಒಂದು ಜವಾಬ್ದಾರಿ ಸ್ಥಾನದಲ್ಲಿ ಕುಳಿತಾಗ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆಗ ಉಗ್ರನರಸಿಂಹ, ಆವಾಗ ಉಗ್ರರು, ಏನು ಮಾತನ್ನು ಎತ್ತಿದರೆ ಫೈಟ್ ಮಾಡುತ್ತಿದ್ದರು. ಎಲ್ಲಿ ಇವರು ನಮಗೆ ಹೊಡೆಯುತ್ತಾರೆಂದು ಸಂಶಯ ಬರುತ್ತಿತ್ತು.

ಶ್ರೀ ಬಿ.ಎಸ್.ಯಡಿಯೂರಪ್ಪ : ಅವರು ಹೇಳಿದಂತಹ ಮಾತು ಸರಿಯಾಗಿದೆ. ಇಷ್ಟು ಸುಧೀರ್ಘವಾದಂತಹ ಅನುಭವವಿರುವಂತಹ ಹಿರಿಯರಾದಂತಹ ಮಲ್ಲಿಕಾರ್ಜುನ ಖರ್ಗೆಯವರು ಪ್ರತಿಪಕ್ಷದಲ್ಲಿದ್ದಾಗ ನಾನು ನೋಡಿದ್ದೆ. ನಾನು ಹೋರಾಟದ ಹಿನ್ನೆಲೆಯಲ್ಲಿ ಬಂದಂತಹವನು. ಅಲ್ಲಿದ್ದಾಗ ನಾನು ನನ್ನ ಕರ್ತವ್ಯವನ್ನು ಮಾಡಬೇಕಾಗಿತ್ತು. ಅನಿರೀಕ್ಷಿತವಾಗಿ ನಾನು ಮತ್ತು ಮಾನ್ಯ ಕುಮಾರಸ್ವಾಮಿಯವರು ಮಾತನಾಡಿ ಈ ಕುರ್ಚಿಯಲ್ಲಿ ಕುಳಿತಾಗ ಏನು ಈ ನಾಡಿನ ಜನರಿಗೆ 40 ವರ್ಷಗಳಿಂದ ಅನೇಕ ಭರವಸೆಯನ್ನು ಕೊಟ್ಟಿದ್ದೆವು. ಆ ಭರಸವೆಯನ್ನು ಈಡೇರಿಸುವಂತಹ ಒಂದು ಸೌಭಾಗ್ಯ ನನಗೆ ಸಿಕ್ಕಿದಾಗ ನಾನು ಶಾಂತಚಿತ್ತದಿಂದಲೇ ಕೆಲಸವನ್ನು ಮಾಡಬೇಕೆಂದು ಕೊಂಡಿದ್ದೇನೆ. ಅದು ಕುರ್ಚಿಗಾಗಲಿ, ಅಧಿಕಾರಕ್ಕಾಗಲಿ, ಅಲ್ಲ, ಇವತ್ತು 5th Pay Commission ವರದಿಯನ್ನು ಯಾವುದೇ ಗೊಂದಲಕ್ಕೆ ಅವಕಶವನ್ನು ಕೊಡದೆಯೇ ಸರ್ಕಾರಿ ನೌಕರರ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ವಿಳಂಬಕ್ಕೆ ಅವಕಾಶವನ್ನು ಕೊಡದೆಯೇ ಅನುಷ್ಠಾನಕ್ಕೆ ತಂದಿದ್ದೇವೆ. ಇವತ್ತು ನಾನು ಸರ್ಕಾರಿ ನೌಕರರಿಗೆ ಮಾಡಿರುವಂತಹ ಉಪಕಾರವೆಂದು ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಇದು ನಮ್ಮ ಕರ್ತವ್ಯವಾಗಿದೆ. ಆದರೆ ನಾನು ಈ ಮನೆಯ ಮೂಲಕ ವಿನಮ್ರದಿಂದ ಮನವಿಯನ್ನು ಮಾಡಿಕೊಳ್ಳುವುದೇನೆಂದರೆ, ಈ ರೀತಿಯ ಅನೇಕ ಪರಿಸ್ಥಿತಿಯ ಒತ್ತಡದ ಮಧ್ಯೆ ಹಣಕಾಸಿನ ಸ್ಥಿತಿಗಳನ್ನು ತೂಗಿಸಿಕೊಂಡು ಹೋಗುವಂತಹ ಕಾಲದಲ್ಲಿ ಹಿಂದೆ ಈ ರೀತಿಯಾಗಿ ವರದಿಯನ್ನು ಕೊಟ್ಟಾಗ

ಅದನ್ನು ಅನುಷ್ಠಾನಗೊಳಿಸುವ ಬಗ್ಗೆ ಅನೇಕ ಹೋರಾಟಗಳನ್ನು ನಮ್ಮ ಸರ್ಕಾರಿ ನೌಕರರು ಮಾಡಬೇಕಾಯಿತು. ಆದರೆ ಈಗ ಅದಕ್ಕೆ ನಾವು ಅವಕಾಶವನ್ನು ಕೊಡಲಿಲ್ಲ. ಅದಕ್ಕಾಗಿ ಅವರಲ್ಲಿ ವಿನಂತಿ ಮಾಡುವಂಥದ್ದು, ಈ ಸರ್ಕಾರದ ಯೋಜನೆಗಳನ್ನು ತಡಮಾಡದೆಯೇ ಜನರಿಗೆ ತಲುಪಿಸು ವಂತಹ ಕೆಲಸವನ್ನು ಮಾಡಿದರೆ ಬಹುಶಃ ನಾವು 5th Pay Commission ಅನ್ನು ತಡಮಾಡದೆಯೇ ಅನುಷ್ಠಾನಗೊಳಿಸಿದ್ದು ಸಾರ್ಥಕವಾಗುತ್ತದೆ, ಆ ಕೆಲಸವನ್ನು ನಮ್ಮ ಸರ್ಕಾರಿ ನೌಕರರು ಮಾಡುತ್ತಾರೆಂಬ ವಿಶ್ವಾಸ ನನಗೆ ಇದೆ. ಇವತ್ತು ಲಾಟರಿ ನಿಷೇಧದ ಬಗ್ಗೆ ನಾನು ಹೇಳಿದ್ದೇನೆ. ಸಾರಾಯಿ ನಿಷೇಧದ ಬಗ್ಗೆ ಯಾರಿಗೆ ಲಾಭವಾಯಿತು? ಯಾರು ಗುಡಿಸಲಿನಲ್ಲಿ ವಾಸ ಮಾಡುತ್ತಾರೆ, ಯಾರು ಕಡುಬಡವರು ಇದ್ದಾರೆ, ಯಾರು ಗ್ರಾಮೀಣ ಪ್ರದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಹೆಣ್ಣುಮಕ್ಕಳು ಇದ್ದಾರೆ, ಅವರು ನೆಮ್ಮದಿಯಿಂದ ನಿಟ್ಟುಸಿರು ಬಿಡುವಂತಹ ಒಂದು ವಾತಾವರಣ ಸೃಷ್ಟಿಯಾಗಿದೆ.

ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಅಲ್ಲಲ್ಲಿ ಇವತ್ತು ಸಾರಾಯಿ ನಿಷೇಧ ಆದಮೇಲೂ ಸಹ ನಮ್ಮ ನಾಯಕರು, ಅನೇಕ ಸದಸ್ಯರು ಹೇಳಿದಂತೆ ಅದು ಅಲ್ಲಲ್ಲಿ ಇನ್ನು ಉಂಟು. ವಾಮ ಮಾರ್ಗದಲ್ಲಿ, ಕಳ್ಳ ಮಾರ್ಗದಲ್ಲಿ ನಡೆಯುತ್ತಿದೆ ಯಡಿಯೂರಪ್ಪನವರೇ ಎಂದು ಹೇಳಿದ್ದಾರೆ, ಅದಕ್ಕೆ ನಿಮ್ಮ ಸಂಪೂರ್ಣ ಸಹಕಾರ ಬೇಕು, ಆ ರೀತಿ ನೀವು ಅಹಕಾರ ಕೊಟ್ಟರೆ. ನಾವು ಈಗಾಗಲೇ ನಮ್ಮ ಅಬಕಾರಿ ಇಲಾಖೆಯಿಂದ ಸಾಕಷ್ಟು ಬಿಗಿ ಕ್ರಮ ತೆಗೆದುಕೊಳ್ಳವುದಕ್ಕೆ ಪ್ರಯತ್ನವನ್ನು ಮಾಡಿದ್ದೇವೆ. ಖಂಡಿತಾ ಅದನ್ನು ಬಿಗಿಗೊಳಿಸುವುದರಲ್ಲಿ ಯಶಸ್ವಿ ಆಗುತ್ತದೆಂಬ ವಿಶ್ವಾಸ ನನಗಿದೆ, ದಿವಂಗತ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ ಶ್ರೀ ರಾಜಶೇಖರ್ ಮೂರ್ತಿಯವರು ಹಣಕಾಸಿನ ಸಚಿವರು ಆಗಿದ್ದರು. ಆ ಸಂದರ್ಭದಲ್ಲಿ ಸೋರಿಕೆಯನ್ನು ತಡೆದು ಖಜಾನೆಗೆ ಹಣವನ್ನು ತುಂಬುವಂತಹ ಪ್ರಯತ್ನವನ್ನು ಮಾಡಿ, ಅಂದು ವೀರೇಂದ್ರ ಪಾಟೀಲ್‌ರವರು ಪ್ರತಿ ತಿಂಗಳು ಎಷ್ಟೆಷ್ಟು ಹಣ ಬರುತ್ತದೆಂಬ ಬಗ್ಗೆ ಲೆಕ್ಕವಿಟ್ಟು ಇಷ್ಟು ಹೆಚ್ಚು ಹಣ ಬೊಕ್ಕಸಕ್ಕೆ ಬಂದಿದೆಯೆಂದು ನೋಡಿ ಹೊಸ ಕಾರ್ಯಕ್ರಮಗಳನ್ನು ಮಾಡಿ ಎಂದು ಹೇಳಿದಂಥ ಪ್ರಸಂಗವನ್ನು ನಾನು ಇಲ್ಲಿ ಕುಳಿತು ನೋಡಿದ್ದೇನೆ. ಇವತ್ತು ಈ ರಾಜ್ಯದ, ಉಪ ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರು ಆಗಿ ಈ ಸಮ್ಮಿಶ್ರ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಘೋಷಣೆ ಮಾಡುತ್ತಿದ್ದೇವೆ,

ಸೋರಿಕೆಯನ್ನು ತಡೆದು ಖಜಾನೆ ತುಂಬಿರುವುದರ ಪರಿಣಾಮ ಇವತ್ತು ಈ ಕೆಲಸ ಆಗಿದೆ. ಒಂದು ಉದಾಹರಣೆಯನ್ನು ನಿಮಗೆ ಕೊಡುತ್ತೇನೆ. ಅಬಕಾರಿ ಇಲಾಖೆಯಲ್ಲಿ ವೀರೇಂದ್ರ ಪಾಟೀಲರವರ ಕಾಲದಲ್ಲಿ 25 ವರ್ಷಗಳ ಹಿಂದೆ ಅಬಕಾರಿ ಇಲಾಖೆಯಲ್ಲಿ ಶೇಕಡಾ 30 ಕ್ಕಿಂತ ಹೆಚ್ಚಳ ಆಗಿತ್ತು, ವೀರೇಂದ್ರ ಪಾಟೀಲರು, ರಾಜಶೇಖರ್ ಮೂರ್ತಿಯವರು ಹಣಕಾಸಿನ ಸಚಿವರು ಆಗಿದ್ದ ಕಾಲದಲ್ಲಿ. ಅದಾದ ಮೇಲೆ 2006-07ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಲ್ಲಿ ಶೇ. 30 ರಷ್ಟು ಆದಾಯ ಹೆಚ್ಚಾಗಿದೆ. ಕಳೆದ 25 ವರ್ಷಗಳಲ್ಲಿ ಶೇಕಡ 30 ರಷ್ಟು ಆದಾಯ ಅಬಕಾರಿ ಇಲಾಖೆಯಲ್ಲಿ ದಾಟಿರುವಂಥ ದಾಖಲೆ ಈಗ 2006-07ನೇ ಸಾಲಿನಲ್ಲಿ ನಾವು ಮಾಡಿದ್ದೇವೆ. ಇದು ನಮ್ಮ ಹೆಗ್ಗಳಿಕೆ. ಅದೆಷ್ಟು ಒತ್ತಡ ಬಂತು. ಇವತ್ತು Wholesale dealers ಅನ್ನು ರದ್ದು ಮಾಡಬೇಕೆಂದು ಯೋಚನೆ ಮಾಡಿದಾಗ ಅನೇಕ ರೀತಿಯ ಒತ್ತಡಗಳು ಬಂತು. ಸುಮಾರು 200-00 ಕೋಟಿ Whole sale dealers ಅನ್ನು ರದ್ದು ಮಾಡುವುದರಿಂದ ನಮ್ಮ ಸರ್ಕಾರದ ಖಜಾನೆಗೆ ಆದಾಯ ಜಾಸ್ತಿ ಬಂತು. ಆ ಕೆಲಸವನ್ನು ನಾವು ಮಾಡಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ : Mid term fiscal plan ನಮಗೇನೂ ಸದನದಲ್ಲಿ ಕೊಟ್ಟಿದ್ದೀರಿ, ಆ ಪ್ರಕಾರ ನಿಮ್ಮ growth actual ಆಗಿ 2005-06 ನಲ್ಲಿ 20.52, 2006-07ರಲ್ಲಿ 21.29. ತಾವು ಸದನದ ಮುಂದೆ ಇಟ್ಟಿದ್ದು ತಮ್ಮ ಗಮನಕ್ಕೆ ತರುತ್ತಿದ್ದೇನೆ. Because he is a Finance Minister, ಅವರ ವಿಚಾರವಿದು. Mid term fiscal plan ಅವರು ಇಟ್ಟಿರುವುದರಿಂದ ಅವರಿಗೆ ಹೇಳುತ್ತಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ : ಅವತ್ತಿಗೂ ಇವತ್ತಿಗೂ ಕುಡಿಯುವರ ಸಂಖ್ಯೆ ಜಾಸ್ತಿಯಾಗಿದೆ. 25 ವರ್ಷಗಳ ಹಿಂದೆ ಕುಡಿಯುವವರು ಎಷ್ಟು ಜನ ಇದ್ದರು? ಈಗ ಎಷ್ಟು ಜನ ಇದ್ದಾರೆ? ಅದರ percentage ಹೇಳಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ದೇಶಪಾಂಡೆಯವರೇ ಅಂಕಿಅಂಶಗಳಲ್ಲಿ ತಪ್ಪು ಇದೆ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ, ಅಬಕಾರಿ ಇಲಾಖೆಯ ಬಗ್ಗೆ ಮಾಹಿತಿ ಇದೆ, ಮಹಾಲೇಖಾಪಾಲರವರ ಕಛೇರಿಯಿಂದ ದೃಢಪಟ್ಟಿರುವಂತೆ 2006-07ನೇ ಸಾಲಿನಲ್ಲಿ ಅಬಕಾರಿ ಬಾಬ್ತು, ಸಂಗ್ರಹಣೆಯಾದಂಥ ಆದಾಯ 4,528 ಕೋಟಿ 99 ಲಕ್ಷ ರೂ.ಗಳು ನಾನು ಅದನ್ನು ಕರೆಕ್ಷನ್ ಮಾಡಿಸುತ್ತೇನೆ. 2005-06ನೇ ಸಾಲಿನಲ್ಲಿ ಸಂಗ್ರಹಣೆಯಾದಂಥ ಹಣ 3,414

ಕೋಟಿ 94 ಲಕ್ಷ ರೂ.ಗಳು, Account General ಕೊಟ್ಟಂಥ ಮಾಹಿತಿಯ ಪ್ರಕಾರ ಮತ್ತೆ ತಮಗೆ ನಾನು ಹೇಳುತ್ತಿದ್ದೇನೆ. ಒಂದೇ ವರ್ಷದಲ್ಲಿ 1,114.05 ಕೋಟಿ ರೂ.ಗಳ ಆದಾಯ ಹೆಚ್ಚಾಗಿದೆ, ಅಂದರೆ 25 ವರ್ಷಗಳ ನಂತರ ಅಂದರೆ ಶ್ರೀ ವೀರೇಂದ್ರ ಪಾಟೀಲರ ನಂತರ 32%ಗಿಂತ ಏರಿಕೆ ಈ ಅಬಕಾರಿ ಇಲಾಖೆಯಲ್ಲಿ ಆಗಿದೆಯೆನ್ನುವಂಥ ಮಾತನ್ನು ಅತ್ಯಂತ ವಿನಯದಿಂದ ಹೇಳಲಿಚ್ಛಿಸುತ್ತೇನೆ. ಇಲ್ಲಿ ಬಹಳ ಪ್ರಮುಖವಾದಂಥ ವಿಷಯ ಚರ್ಚೆಯಾಗುತ್ತಿದೆ. ರೈತರ ಬಗ್ಗೆ ಸಾಲ ಮನ್ನಾ ಮಾಡಿದಿರಿ, ಯಾರಿಗೆ ಲಭವಾಯಿತು? ಎಲ್ಲಿ ಅನುಕೂಲವಾಗಿದೆ? ಈ ಪ್ರಶ್ನೆಯನ್ನು ನನ್ನ ಮುಂದೆ ನೀವು ಇಟ್ಟಿದ್ದೀರಿ? ರೂ. 25,000/– ಒಳಗಿರುವವರೆಗೆ ಸಾಲ ಮನ್ನಾ ಆದುದರಿಂದ 10,45,286 ರೈತರಿಗೆ ಸವಲತ್ತು ದೊರೆತಿದೆ. ಒಂದು ನಿಮಿಷ, ಕಿವಿಯಿದ್ದರೂ ಕೇಳಿಸದಂತೆ, ಕಣ್ಣಿದ್ದರೂ ಕಾಣಿಸದಂತೆ ಇದ್ದರೆ ಹೇಗೆ ಗೊತ್ತಾಗುತ್ತದೆ, ಕಾಣುವುದಿಲ್ಲ.

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಈಗ ಸಾರ್ವಜನಿಕ ಭಾಷಣ ಮಾಡುವುದು ಬೇರೆ, ಮಠಗಳಲ್ಲಿ ಭಾಷಣವನ್ನು ಮಾಡುವುದು ಬೇರೆ, ಸದನದಲ್ಲಿ ಹೇಳುವಾಗ ಅಂಕಿ ಅಂಶಗಳು ಸರಿಯಾಗಿರಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಹೇಳುತ್ತಿರುವ ಅಂಕಿ ಅಂಶಗಳಲ್ಲಿ ಹೆಚ್ಚು ಕಡಿಮೆ ಇದ್ದರೆ ನಾನು ನಿಮ್ಮ ಮುಂದೆಯೇ resign ಮಾಡಿ ಹೊರಗಡೆ ಹೋಗುತ್ತೇನೆ. ನಾನು ಹಣಕಾಸಿನ ಸಚಿವನಾಗಿ ಜವಾಬ್ದಾರಿಯಿಂದ ಮಾತಾಡುತ್ತಿದ್ದೇನೆ, ಈ ಮನೆಯಲ್ಲಿ ನಾನು ಹೇಳುವಂಥ ಒಂದೊಂದು ಮಾತು ದಾಖಲೆಗೆ ಹೋಗುತ್ತದೆ. ಹಾಗಾಗಿ ನಾನು ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ಸ್ವಲ್ಪ wait ಮಾಡಿ, ನೀವು ಹಿರಿಯರಿದ್ದೀರಿ. 25,000–00 ರವರೆಗೆ ಇರುವ ಈ ರಾಜ್ಯದ ರೈತರಿಗೆ ಸಾಲವನ್ನೇನು ಮನ್ನಾ ಮಾಡಿದ್ದೇವೆ, ಒಟ್ಟು 10,45,286 ರೈತರಿಗೆ ಈ ಸವಲತ್ತು ದೊರಕಿದೆ. 909 ಕೋಟಿ 13 ಲಕ್ಷ ರೂ.ಗಳ ಸಾಲ ಮನ್ನಾ ಆಗಿದೆ. 25,000/– ರೂ.ಗಳ ಮೇಲ್ಪಟ್ಟು, 4,05,430 ಜನರಿಗೆ ಸಾಲ ಮನ್ನಾ ಆಗಿದೆ. ಇದು ಒಂದು ಸಾವಿರದ ಹದಿಮೂರು ಕೋಟಿ ಎಪ್ಪತ್ತಮೂರು ಲಕ್ಷ ಅನುಕೂಲವಾಗಿದೆ ಒಂದು, ಒಂಬೈನೂರ ಒಂಭತ್ತು ಕೋಟಿ ಹದಿಮೂರು ಲಕ್ಷ ಒಂದು, ದೀರ್ಘಾವಧಿ ಸಾಲ 43,163 ರೈತರಿಗೆ ಅನುಕೂಲವಾಗಿದೆ.

ಶ್ರೀ ಕೆ.ಶ್ರೀನಿವಾಸಗೌಡ : ವಸೂಲು ಆದಮೇಲೆ ಆ 25,000–00 ಅವರಿಗೆ adjust ಆಗುತ್ತದೆ, ವಸೂಲು ಆಗದೇ ಇರುವುದನ್ನು ಏನು ಮಾಡುತ್ತಿದ್ದೀರಿ? ಹೇಳಿ. ನೀವು ಬಹಳ ಚೆನ್ನಾಗಿ ಹೇಳುತ್ತಿದ್ದೀರಿ. ನೇರವಾಗಿ ಹೇಳಿ, ನಾನು ಅದನ್ನು ವಿರೋಧ ಮಾಡುವುದಿಲ್ಲ, ಹಾಗಾಗಿ ಅದನ್ನು ಹೇಳಲಿ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಹೇಳುತ್ತಾರೆ, ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಯಾವ ವಿಚಾರವನ್ನು ಕೊಡುತ್ತಿದ್ದೇನೆ, ಆ ಅಂಕಿ ಅಂಶಗಳ ಬಗ್ಗೆ, ಹೊಸದಾಗಿ ಈ ಸಾಲ ಮನ್ನಾ ಯೋಜನೆ ಜಾರಿಗೆ ಬಂದ ಮೇಲೆ ಸಾಲ ಮನ್ನಾದಿಂದ ಹೊಸ ಸಾಲ ಪಡೆಯಲಿಕ್ಕೆ ಅಡ್ಡಿಯಾಗಿದೆಯೆಂಬ ಮಾತನ್ನು ಗೌರವಾನ್ವಿತ ಸದಸ್ಯರು ಹೇಳಿದರು. ಕಳೆದ ವರ್ಷ 2006–07ನೇ ಸಾಲಿಗೆ ಜುಲೈ 20ಕ್ಕೆ ಸನ್ಮಾನ್ಯ ಪ್ರತಿ ಪಕ್ಷದ ನಾಯಕರಿಗೆ ಹೇಳಬಯಸುತ್ತೇನೆ. ಕಳೆದ ವರ್ಷ 2006–07ನೇ ಸಾಲಿನ ಜುಲೈ 20ರವರೆಗೆ 1,171,54 ಕೋಟಿ ರೂ.ಗಳ ಸಾಲ ವಿತರಣೆ ಆಗಿದೆ. ಈ ವರ್ಷ ಜುಲೈ 20ರವರೆಗೆ, 1,600,700, 300 ಏನು ಬೇಕೋ ಅದನ್ನು ಹೇಳುತ್ತಿದ್ದೀರಿ, ಈ ವರ್ಷ ಜುಲೈ 20ರವರೆಗೆ 1,299.87 ಕೋಟಿ ರೂ.ಗಳಷ್ಟು ಸಾಲ ವಿತರಣೆಯಾಗಿದೆ. ಅಂದರೆ ಹೋದ ವರ್ಷಕ್ಕಿಂತ 128 ಕೋಟಿ 33 ಲಕ್ಷ ರೂ.ಗಳಷ್ಟು ಹೆಚ್ಚು ಸಾಲವನ್ನು ನಾವು ವಿತರಣೆ ಮಾಡಿದ್ದೇವೆ. ಕಳೆದ ವರ್ಷ ಜುಲೈ 20 ರವರೆಗೆ 4,13,867 ಮಂದಿ ರೈತರು ಸಾಲ ಪಡೆದಿದ್ದರೆ ಈ ವರ್ಷ ಇದೇ ಅವಧಿಯಲ್ಲಿ 5,46,814 ಮಂದಿ ರೈತರು ಸಾಲ ಪಡೆದಿದ್ದಾರೆ, ಅಂದರೆ 1,32,947 ರಷ್ಟು ಹೆಚ್ಚು ರೈತರು ಸಾಲ ಸೌಲಭ್ಯವನ್ನು ಪಡೆದಿದ್ದಾರೆ.

(4-00 PM)

ಆದ್ದರಿಂದ, ಸಾಲ ಮನ್ನಾ ಯೋಜನೆಯಲ್ಲಿ ಅನಾನುಕೂಲವಾಗಿದೆ ಎಂಬುದು ಸತ್ಯಕ್ಕೆ ದೂರವಾದ ಸಂಗತಿ ಎಂಬ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಾವು ಸಾಲ ಮನ್ನಾ ಮಾಡಬೇಕೆಂಬ ಪ್ರಶ್ನೆ ಬಂದಾಗ ಸುಮಾರು ಸಾವಿರ ಕೋಟಿಯೊಳಗೆ 25,000 ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿದರೆ ಭಾರ ಬೀಳಬಹುದೆಂದು ತಿಳಿದಿದ್ದೆವು. ಈ ಮನೆಯಲ್ಲಿ ಚರ್ಚೆಯಾಯಿತು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಹೋದ ವರ್ಷ ಪೂರಕ ಬೇಡಿಕೆಯಲ್ಲಿ 500 ಕೋಟಿ ರೂಪಾಯಿಗಳನ್ನು ನಾನು ತೆಗೆದಿಟ್ಟಿದ್ದೆ. ದೇಶಪಾಂಡೆಯವರಿಗೆ ಇದು ತಮಗೆ

ಗೊತ್ತಿದೆ. ಇದಾದ ಮೇಲೆ ಎಲ್ಲ ರೈತರಿಗೂ 25,000 ರೂಪಾಯಿಗಳವರೆಗೆ ಸಾಲ ಮನ್ನಾ ಮಾಡಬೇಕೆಂಬ ಒತ್ತಡ ಈ ಮನೆಯ ಎಲ್ಲ ಸದಸ್ಯರಿಂದಲೂ ಬಂತು. ಅದನ್ನು ನಾವು ಒಪ್ಪಿಕೊಂಡೆವು. ಇದರ ಪರಿಣಾಮ ಇವತ್ತು ಸುಮಾರು 2,000ಕ್ಕೂ ಮೇಲ್ಪಟ್ಟು 2,100 ಕೋಟಿ ರೂಪಾಯಿಗಳವರೆಗೂ ನಮಗೆ ಭಾರ ಬೀಳುತ್ತಿದೆ. ಹೋದ ವರ್ಷ ಪೂರಕ ಬೇಡಿಕೆಯಲ್ಲಿ 500 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೆ. ಈ ವರ್ಷ ಬಜೆಟ್‌ನಲ್ಲಿ 500 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೆ. 250 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇನೆ. ಇವತ್ತು ಮಂಜೂರಾತಿ ಸಿಕ್ಕಿದ ತಕ್ಷಣವೇ 250 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ. ಅಲ್ಲಿಗೆ 1,000 ಕೋಟಿ ರೂಪಾಯಿಗಳಾಯಿತು. ಪೂರಕ ಬೇಡಿಕೆಯಲ್ಲಿ ಇನ್ನು ಹೆಚ್ಚು ಹಣ ಅಂದರೆ, ಸುಮಾರು 750 ಕೋಟಿ ರೂಪಾಯಿಗಳನ್ನು ಪೂರಕ ಬೇಡಿಕೆಯಲ್ಲಿ ಕೊಡುವುದರ ಮೂಲಕ ಸುಮಾರು 1,750 ಕೋಟಿ ರೂಪಾಯಿಗಳನ್ನು ಈ ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ರೈತನ ಸಾಲ ಮನ್ನಾ, ಬಡ್ಡಿ ಮನ್ನಾಕ್ಕೆ ನಾವು ವ್ಯವಸ್ಥೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಏನೇ ಆಗಲಿ, ಕೆಲವು ಸಲ ಇದರಿಂದಾಗಿ ಅಭಿವೃದ್ಧಿ ಕಾರ್ಯಗಳಿಗೆ ಕುಂಠಿತವಾಗಬಹುದು, ಬೇರೆ ಯೋಜನೆಗೆ ಹಣ ಸಿಗದೇ ಇರಬಹುದು. ಸ್ವಲ್ಪ ಹಣಕಾಸಿನ ಮುಗ್ಗಟ್ಟು ಆಗಬಹುದೆಂದು ನೀವು ಹೇಳಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ನಮ್ಮ Commitment ಏನಿದೆ, ಈ ರಾಜ್ಯದ ರೈತರಿಗೆ ನಾವು ಏನು ಭರವಸೆ ಕೊಟ್ಟಿದ್ದೇವೆ, ಅದನ್ನು ಈಡೇರಿಸುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವಿತ್ತೀಯ ಕೊರತೆ ಬಗ್ಗೆ ಹೇಳಿದ್ದಾರೆ. ಇವತ್ತು ಕೇಂದ್ರ ಸರ್ಕಾರ ವಿತ್ತೀಯ ಕೊರತೆ ಶೇಕಡ 3ಕ್ಕಿಂತಲೂ ಒಳಗಡೆ ಇರಬೇಕೆಂಬ ಮಾತನ್ನು ಏನು ಹೇಳಿದೆ, ಅದನ್ನು ಬಹಳ ಎಚ್ಚರಿಕೆಯಿಂದ ನಾವು ಪರಿಪಾಲಿಸಿಕೊಂಡು ಬರುತ್ತಿದ್ದೇವೆ. 2004–05ರಲ್ಲಿ ಶೇಕಡಾ 2.42ರಷ್ಟು ವಿತ್ತೀಯ ಕೊರತೆಯಿದ್ದರೆ, 05–06ರಲ್ಲಿ ಶೇಕಡಾ 2.16, 06–07ರಲ್ಲಿ ಶೇಕಡಾ 2.77, 07–08ರಲ್ಲಿ ಶೇಕಡಾ 2.87 ರಷ್ಟಾಗಬಹುದು ಎನ್ನುವುದು ನಮ್ಮ ಕಣ್ಮುಂದಿದೆ. ಆದರೆ, 2007–08ನೇ ಸಾಲಿನ ರಾಜ್ಯದ GSDP ಒಟ್ಟು 2 ಲಕ್ಷದ 20 ಸಾವಿರದ 6 ಕೋಟಿ ಆಗಬಹುದೆಂದು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ವಿತ್ತೀಯ ಕೊರತೆ 6,600 ಕೋಟಿ ರೂಪಾಯಿಗೆ

ಮೀರದಂತೆ, ಅಂದರೆ, ಶೇಕಡಾ 3ಕ್ಕೆ ಮೀರದಂತೆ ನಾವು ನಿರ್ವಹಣೆ ಮಾಡುತ್ತೇವೆಂಬ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತಿದ್ದೇನೆ. ಒಂದು ಮಾತು, ರಾಜಸ್ವದ ಕೊರತೆ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಸನ್ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಿಂದ ರಾಜ್ಯ ತನ್ನ ಹಣಕಾಸು ನಿರ್ವಹಣೆಯಲ್ಲಿ ಹಿಂದಿನಂತೆ ರಾಜಸ್ವ ಕೊರತೆಯನ್ನು ಹೊಂದಿರದೆ, ರಾಜಸ್ವ ಹೆಚ್ಚಳ ಹೊಂದಿರುವ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. 2006–07ನೇ ಸಾಲಿನಲ್ಲಿ ಈ ರಾಜಸ್ವ ಹೆಚ್ಚಳ 2,832 ಕೋಟಿ ಆಗಿತ್ತು. 07–08ನೇ ಸಾಲಿನಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ವೇತನ ಪರಿಷ್ಕರಣೆ ಮಾಡಿದ್ದರಿಂದ 1,500 ಕೋಟಿ ರೂಪಾಯಿಗಳ ರಾಜಸ್ವ ವೆಚ್ಚವನ್ನು ನಾವು ಹೆಚ್ಚಾಗಿ ಮಾಡಬೇಕಾಗಿರುವುದನ್ನು ನಿಮ್ಮ ಗೌರವಾನ್ವಿತ ಎಲ್ಲ ಮಾನ್ಯ ಸದಸ್ಯರುಗಳಿಗೂ ಗೊತ್ತಿದೆ. ಇದಲ್ಲದೆ, ಸಾರಾಯಿ ನಿಷೇಧ ಮಾಡಿದ್ದರಿಂದ 1,900 ಕೋಟಿ ರೂಪಾಯಿಗಳ ರಾಜಸ್ವ ಸ್ವೀಕೃತಿಯಲ್ಲಿ ಕಡಿಮೆಯಾಗುತ್ತಿರುವಂಥಾದ್ದು ಸಹ ಈ ಮನೆಯ ಎಲ್ಲ ಗೌರವಾನ್ವಿತ ಸದಸ್ಯರುಗಳಿಗೆ ಗೊತ್ತಿದೆ. ಇಂತಹ ಪರಿಸ್ಥಿತಿಯಲ್ಲೂ ಸುಮಾರು 1,627 ಕೋಟಿ ರೂಪಾಯಿಗಳ ರಾಜಸ್ವ ಹೆಚ್ಚಳವನ್ನು ಸಾಧಿಸಬೇಕೆಂಬ ದೃಢ ನಿಶ್ಚಯವನ್ನು ನಾವು ಮಾಡಿದ್ದೇವೆ. ಹಿಂದಿನ ಹಣಕಾಸು ಸಚಿವರಾದ ಹಿರಿಯರಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು ಈ ಬಗ್ಗೆ ತಮ್ಮ ಕಳಕಳಿಯನ್ನು ಏನು ವ್ಯಕ್ತಪಡಿಸಿದ್ದೀರಿ, ರಾಜಸ್ವದ ಕೊರತೆ ಹೆಚ್ಚಾಗಬಾರದು, ಇತ್ತ ಕಡೆ ನೀವು ವಿಶೇಷ ಗಮನ ಕೊಡಬೇಕೆಂದು ಹೇಳಿದ್ದೀರಿ. ಏತಕೋಸ್ಕರ, ಇವತ್ತು ಈ ಪರಿಸ್ಥಿತಿ ಬಂತು ಎಂಬ ಮಾತನ್ನು ಹೇಳುತ್ತಿದ್ದೇನೆ. ಎರಡು ನಿಮಿಷಗಳು. ಒಂದು, 5ನೇ ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರಿ ನೌಕರರಿಗೆ ಸಂಬಳ ಹೆಚ್ಚು ಮಾಡಿದ್ದರಿಂದ, ಭಾರ ಬಿದ್ದಿದ್ದರಿಂದ 1,500 ಕೋಟಿ ರೂಪಾಯಿಗಳು. ಇನ್ನೊಂದು ಸಾರಾಯಿ ನಿಷೇಧದಿಂದ ನಮ್ಮ ಮೈಮೇಲೆ ಬರುತ್ತಿರುವಂತಹ 1,900 ಕೋಟಿ, ಇಂತಹ ಪರಿಸ್ಥಿತಿಯಲ್ಲೂ ಸಹ ನಾವು ಈ ಸಾಧನೆ ಮಾಡುತ್ತೇವೆಂಬ ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ಒಂದು ಸಂಗತಿಯನ್ನು ಹಿರಿಯರಾದ ವಿರೋಧ ಪಕ್ಷದ ನಾಯಕರಿಗೆ ಮತ್ತು ದೇಶಪಾಂಡೆಯವರಿಗೆ, ಸಿದ್ಧರಾಮಯ್ಯನವರಿಗೆ ನಾನು ತಿಳಿಸಬೇಕೆಂದಿರುವು ದೇನೆಂದರೆ, ಅಭಿವೃದ್ಧಿ ವೆಚ್ಚದ ವಿಶ್ಲೇಷಣೆ ಬಗ್ಗೆ. ಈ ರಾಜ್ಯದ ಅಭಿವೃದ್ಧಿ ವೆಚ್ಚದ ಬೆಳವಣಿಗೆ ಸಾಕಷ್ಟು ತೀವ್ರವಾಗಿಲ್ಲ. ಅಭಿವೃದ್ಧಿಯೇತರ ವೆಚ್ಚ ಜಾಸ್ತಿಯಾಗುತ್ತಿದೆ ಎಂಬ

ಮಾತುಗಳನ್ನು ಹೇಳಿದ್ದೀರಿ. ನಾನು ಇಲ್ಲವೆಂದೇನೂ ಹೇಳುತ್ತಿಲ್ಲ. ಆದರೆ, ಆ ರೀತಿ ಏಕಾಯಿತು? ಪರಿಸ್ಥಿತಿ ಬಗ್ಗೆ ನಿಮಗೆ ಹೇಳುತ್ತೇನೆ. 06–07ನೇ ಸಾಲಿನಲ್ಲಿ ಈ ಅಭಿವೃದ್ಧಿಯೇತರ ವೆಚ್ಚವೆಂದು ನೀವು ಏನು ಭಾವಿಸುತ್ತಿದ್ದೀರಿ, ಅದು ಯಾವಾವ ಇಲಾಖೆಗಳು? ನಾವು ಯಾವುದಕ್ಕೆ ಮಾಡಿದ್ದೇವೆ? ಉದಾಹರಣೆಗೆ, 05–06ನೇ ಸಾಲಿನಲ್ಲಿ ರಸ್ತೆ ಮತ್ತು ಸೇತುವೆ ನಿರ್ವಹಣೆಗೆ 300 ಕೋಟಿ ರೂಪಾಯಿಗಳಷ್ಟು ವೆಚ್ಚವಾಗಿದೆ. ಇವತ್ತು ರಸ್ತೆ ಮತ್ತು ಸೇತುವೆ ಅಭಿವೃದ್ಧಿ ವಿಚಾರದಲ್ಲಿ ರೇವಣ್ಣನವರು ಇಲ್ಲಿಯೇ ಇದ್ದಾರೆ. ಕಳೆದ ವರ್ಷ 300 ಕೋಟಿ ರೂಪಾಯಿಗಳು ವೆಚ್ಚವಾಗಿದ್ದರೆ, 06–07ನೇ ಸಾಲಿನಲ್ಲಿ 762 ಕೋಟಿ ವೆಚ್ಚವಾಗಿದೆ. ಅಂದರೆ, 462 ಕೋಟಿ ರೂಪಾಯಿಗಳನ್ನು ನಾವು ಹೆಚ್ಚು ಖರ್ಚು ಮಾಡಿದ್ದೇವೆ.

Sri Siddaramaiah : Construction of Roads, Bridges, ಇವೆಲ್ಲವೂ non-development ನಲ್ಲಿ ಬರುತ್ತದೆಯೇ? Non-planನಲ್ಲಿ ಏಕೆ ಬರುತ್ತದೆ? Why it is coming under non-plan? ಹಾಗಾದರೆ, ಹೊಸ ಲೆಕ್ಕವೇನಾದರೂ ಶುರು ಮಾಡಿದ್ದೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ : ಇದು non-plan ನಲ್ಲಿ ಸೇರಿದೆ ಎಂದು ಹೇಳುತ್ತಿದ್ದೇನೆ. ಏತಕ್ಕೋಸ್ಕರ ಮೇಲ್ನೋಟಕ್ಕೆ ಈ ಪರಿಸ್ಥಿತಿ ಬಂದಿದೆ ಎಂದರೆ, ಒಂದು, ಸೇತುವೆ, ರಸ್ತೆ ನಿರ್ವಹಣೆಯಲ್ಲಿ ಕಳೆದ ವರ್ಷಕ್ಕೂ ಈ ರ್ಷಕ್ಕೂ 462 ಕೋಟಿ ರೂಪಾಯಿಗಳು ಹೆಚ್ಚಾಗಿರುವಂಥಾದ್ದು. ಮತ್ತು ರೇವಣ್ಣನವರು ಇಲ್ಲಿಯೇ ಇದ್ದಾರೆ. ರಾಜ್ಯದ ವಿದ್ಯುತ್ ಪ್ರಸರಣ ಸಂಸ್ಥೆಗೆ ಒದಗಿಸಿರುವ ಸಹಾಯಧನ 1,752 ಕೋಟಿ.....

ಶ್ರೀ ಆರ್.ವಿ.ದೇಶಪಾಂಡೆ : ರೇವಣ್ಣನವರಿಗೆ ಕೊಟ್ಟಿರಿ, PWDಗೆ ಕೊಟ್ಟಿರಿ, ಹಾಗಾದರೆ, ಬೇರೆ ಮಂತ್ರಿಗಳು ಏನು ಮಾಡಬೇಕು? Irrigation Minister ಏನು ಮಾಡಬೇಕು?

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರೆ, 1,750 ಕೋಟಿ ರೂಪಾಯಿ KEBಗೆ ಸಬ್ಸಿಡಿ ಪ್ರತಿ ವರ್ಷವೂ ಕೊಡುತ್ತಾ ಬಂದಿದ್ದೇವೆ. ಇದು ಹೊಸದೇನಲ್ಲ. ಹೋದ ವರ್ಷ ಕೊಟ್ಟಿದ್ದಲ್ಲ. ಈ ವರ್ಷ ಇಟ್ಟಿರುವುದೂ ಅಲ್ಲ. 1,800 ಕೋಟಿ ರೂಪಾಯಿಗಳನ್ನು ಮೊದಲಿನಿಂದಲೂ ಇಟ್ಟುಕೊಂಡು ಬರಲಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ಪ್ರತಿ ವರ್ಷ 1,700 ಕೋಟಿ ರೂಪಾಯಿಗಳೆಂದು ಲೆಕ್ಕ ತೋರಿಸುತ್ತಿದ್ದರು. ಆದರೆ, ಕೊಡುತ್ತಿದ್ದುದು 1,200 ಕೋಟಿ ರೂಪಾಯಿಗಳಷ್ಟೇ. ಬೇಕಾದರೆ, ತೆಗೆದು ನೋಡಿ ಸರ್.

ಶ್ರೀ ಸಿದ್ದರಾಮಯ್ಯ : ಅವರು ಹೇಳುತ್ತಿರುವುದನ್ನು ನೋಡಿ. ತೋರಿಸ, ಕೊಟ್ಟಿಲ್ಲವೆಂದು ನಿಮಗೆ ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ನಿಮಗೆ ಹೇಳಿದ್ದು.

ಶ್ರೀ ಸಿದ್ದರಾಮಯ್ಯ : ಹೋದ ವರ್ಷ ಸರಿಯಾಗಿ ಕೊಟ್ಟಿರಾ?

ಶ್ರೀ ಹೆಚ್.ಡಿ.ರೇವಣ್ಣ : ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ, ಅದರ ಆಚೆ ವರ್ಷದ ಲೆಕ್ಕ ಕೊಡಿ. ಎಲ್ಲಿದೆ? ನೀವು ಕೊಡಿ. ಸುಮ್ಮನೆ ನೀವು ಆ ರೀತಿ ಹೇಳಬಾರದು. You are a Senior Minister, don't make a Statement like that.

ಶ್ರೀ ಹೆಚ್.ಡಿ.ರೇವಣ್ಣ : ಬೇಕಾದರೆ, ತೆಗೆದು ನೋಡಿ. ಇವತ್ತೇ ಬೇಕಿದ್ದರೆ, ಇನ್ನು ಐದು ನಿಮಿಷಗಳಲ್ಲಿ ನಾನು ಹೇಳುತ್ತೇನೆ. ಯಾವ್ಯಾವ ವರ್ಷ, ಹಣ ಎಷ್ಟು ಇಟ್ಟಿದ್ದರು? ಎಷ್ಟು ಕೊಟ್ಟರು? ಎಂಬುದನ್ನು ಬೇಕಾದರೆ ಇನ್ನು ಐದು ನಿಮಿಷಗಳಲ್ಲಿ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಅವರು ಕೊಟ್ಟಿರುವ ಲೆಕ್ಕದ ಪ್ರಕಾರ ಕಳೆದ ವರ್ಷ ಕೂಡ ನೀವು ಸಬ್ಸಿಡಿಯನ್ನು.....1,800 ಕೋಟಿ, ಎಷ್ಟೋ ಕೊಟ್ಟಿದ್ದೀರಿ. ಈ ವರ್ಷವೂ ಕೂಡ 1,800 ಕೋಟಿ ರೂಪಾಯಿಗಳ ಸಬ್ಸಿಡಿಯಷ್ಟನ್ನೇ ಇಟ್ಟುಕೊಂಡಿದ್ದೀರಿ. ಬೇರೆ development works ಗೂ ಕೇಂದ್ರ ಸರ್ಕಾರದಿಂದ ಬಂದಿರುವ ಹಣ, ಎಲ್ಲವನ್ನೂ ಸೇರಿಸಿಕೊಂಡು ಹೇಳಿದ್ದೇವೆ. ಆದರೆ, ಕಳೆದ ವರ್ಷಕ್ಕಿಂತಲೂ ಈ ವರ್ಷ ನೀವು ಪ್ಲಾನ್‌ನಲ್ಲಿ ಕಡಿಮೆ ಇಟ್ಟಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ಮಾತು ಸ್ಪಷ್ಟಪಡಿಸುತ್ತೇನೆ. ಸರಿಯಾದ ರೀತಿಯಲ್ಲಿ ರೆಕಾರ್ಡ್ ಆಗಬೇಕು. ರಸ್ತೆಗಳ ನಿರ್ವಹಣೆಗಾಗಿ non-plan ನಲ್ಲಿ ಮಾಡಿರುವ ವೆಚ್ಚ. ಇದಲ್ಲದೆ, ರಸ್ತೆಗಳ ಅಭಿವೃದ್ಧಿ ಪ್ಲಾನ್ ಬೇರೆ ಇದೆ. ವಿದ್ಯುತ್ ಸಹಾಯಧನ 05–06ರಲ್ಲಿ 1,752 ಕೋಟಿ ಕೊಟ್ಟಿದ್ದರೆ, 06–07ರಲ್ಲಿ 2,417 ಕೋಟಿ ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : Entire amount is not subsidy.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾವು ಕೊಟ್ಟಿರುವ ಸಹಾಯಧನದ ಬಗ್ಗೆ ಹೇಳುತ್ತಿದ್ದೇನೆ. ನಾನು ಏನು ಹೇಳಲು ಹೊರಟಿದ್ದೇನೆಂದರೆ, ಇದು non-plan ನಲ್ಲಿ ಸೇರಿದೆ.

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರೆ, ಸಬ್ಸಿಡಿ ಎಂದರೆ, ನೀವು ಯಾವುದಕ್ಕೆ ಕೊಡುತ್ತಿದ್ದೀರೆಂದರೆ..... ಆ ಬಗ್ಗೆ Clarification ಕೇಳುತ್ತಿದ್ದೇನೆ. ಇವೆಲ್ಲವೂ ಏನಾಗುತ್ತಿದೆಯೆಂದರೆ, ಪಂಪುಸೆಟ್ಟುಗಳಿಗೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಪಂಚಾಯತಿಗಳಿಗೆಲ್ಲಾ 25% ಸಬ್ಸಿಡಿ ಕೊಡುತ್ತೇವೆಂದು ಹೇಳಿದ್ದೀರಿ.

ಕುಠೀರ ಜ್ಯೋತಿಯದ್ದು 18 ಯೂನಿಟ್ ಮಾತ್ರ ಉಳಿದುದಕ್ಕೆಲ್ಲ ಹಣ ಕೊಡುತ್ತೇವೆಂದು ಹೇಳಿದ್ದೀರಿ. ಇದಲ್ಲದೆಯೇ ಪಂಪ್‌ಸೆಟ್‌ಗೆ ಖರ್ಚು ಮಾಡತಕ್ಕದ್ದು, ಸುಮಾರು 42% ವಿದ್ಯುತ್ ಪಂಪ್‌ಸೆಟ್‌ಗೋಸ್ಕರವೇ ಹೋಗುತ್ತದೆ ಎಂದು ಅದಕ್ಕೋಸ್ಕರ ರಾಜ್ಯ ಸರ್ಕಾರ ಸಬ್ಸಿಡಿ ಕೊಡುತ್ತಿದ್ದೇವೆಂದು ಕೊಡುತ್ತಿದ್ದೀರಿ. ಅದು ಒಂದು ಬೇರೆ. ಅದನ್ನು ಬಿಟ್ಟು ಬೇರೆಯದಕ್ಕೆ ಕೊಟ್ಟಿರುವುದು ಇದು.

ಶ್ರೀ ಬಿ.ಎಸ್.ಯಡಿಯೂರಪ್ಪ : ಗೌರವಾನ್ವಿತ ಸದಸ್ಯರು ಅಭಿವೃದ್ಧಿ ವೆಚ್ಚವೇನು ಜಾಸ್ತಿಯಾಗಿದೆಯೆಂದು ಹೇಳಿದ್ದೀರಿ ಅದರಲ್ಲಿ, ನಾನು ಹೇಳುತ್ತಿರುವುದು non-plan expenditure accountಗೆ ಯಾವುದು ಜಮಾ ಆಗಿದೆ, ಇದು ಪ್ಲಾನ್‌ಗೆ ಸೇರಿಲ್ಲ. ಒಂದು ರಸ್ತೆ ನಿರ್ವಹಣೆಯದ್ದು.

ಶ್ರೀ ಸಿದ್ದರಾಮಯ್ಯ : ಏಕೆ ಆ ಪದ್ಧತಿಯನ್ನು ಮಾಡಿದ್ದೀರಿ?

ಅಧ್ಯಕ್ಷರು : ಸಿದ್ದರಾಮಯ್ಯನವರೆ, let him explain. ಅವರು ಹೇಳಿದ ಮೇಲೆ ತಾವು ಕೇಳುವಿರಂತೆ. Point to Point you can't…

ಶ್ರೀ ಸಿದ್ದರಾಮಯ್ಯ : ಅದೆಲ್ಲ ರೆಕಾರ್ಡ್‌ಗೆ ಹೋಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ವಿದ್ಯುತ್ ಪ್ರಸರಣ ಸಂಸ್ಥೆಗೆ ಒದಗಿಸಿರುವ ಸಹಾಯಧನ ಹಿಂದಿನ ವರ್ಷ 1752 ಕೋಟಿ ಇದ್ದರೆ 2006-07ರಲ್ಲಿ 2417 ಕೋಟಿಯಾಗಿದೆ. ಅಂದರೆ 665 ಕೋಟಿ ಹೆಚ್ಚುವರಿ ಯಾಗಿ ವೆಚ್ಚವಾಗಿದೆ. ನಗರ ಪ್ರದೇಶದ ಸ್ಥಳೀಯ ಪ್ರದೇಶಗಳಿಗೆ ನೀಡುತ್ತಿದ್ದ ಅನುದಾನ ಹಿಂದಿನ ವರ್ಷ 116 ಕೋಟಿಯಿಂದ ಈ ವರ್ಷ 1530 ಕೋಟಿಗೆ ಏರಿದೆ. ಅಂದರೆ 360 ರೂ, ಕೋಟಿ ಹೆಚ್ಚು ವೆಚ್ಚವಾಗಿದೆ. ನಾನು ಈಗಾಗಲೇ ಹೇಳಿದಂತೆ ರಾಜ್ಯ ಸರ್ಕಾರದ 6 ಲಕ್ಷ ನೌಕರರಿಗೆ 2006-07ರಲ್ಲಿ

ಮಧ್ಯಂತರ ಪರಿಹಾರಕ್ಕಾಗಿ 800 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ಎಲ್ಲಾ ಕಾರಣಕ್ಕಾಗಿ ಅಭಿವೃದ್ಧಿಯೇತರ ಯೋಜನೆಯ ಬಾಬಿನಲ್ಲಿ 2006–07ನೇ ಸಾಲಿನಲ್ಲಿ ಸ್ವಲ್ಪ ಹೆಚ್ಚಾಗಿರುವುದು ನಿಜ. ತಾವೇ ಹೇಳಿದಂತೆ ಇವೆಲ್ಲಾ ಅಭಿವೃದ್ಧಿ ಕಾರ್ಯಕ್ಕಾಗಿ ಉಪಯೋಗ ಮಾಡಿರುವಂಥ ಹಣ. ನಮ್ಮ ಗೌರವಾನ್ವಿತ ಸದಸ್ಯರು ಗಮನಿಸಬೇಕಾದ ಪ್ರಮುಖವಾದ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ರಾಜ್ಯದ ಪ್ರಮುಖ ಅಭಿವೃದ್ಧಿ ಇಲಾಖೆಗಳಿಗೆ ಯಾವ ರೀತಿ ಹಣವನ್ನು ಕೊಟ್ಟಿದ್ದೇವೆ, ಯಾವ ರೀತಿ ಏರಿಕೆಯಾಗಿದೆ ಎಂಬುದನ್ನು ಗೌರವಾನ್ವಿತ ಸದಸ್ಯರುಗಳು ಗಮನಿಸಬೇಕು ಮತ್ತು ಈ ನಾಡಿನ ಜನತೆಗೂ ಗೊತ್ತಾಗಬೇಕು. ಉದಾಹರಣೆಗೆ, ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ 2005–06ನೇ ಸಾಲಿನಲ್ಲಿ 4,623 ಕೋಟಿ ಕೊಟ್ಟಿದ್ದರೆ 2006–07ರಲ್ಲಿ 5,415 ಕೋಟಿ, 2007–08ರಲ್ಲಿ 6,699 ಕೋಟಿ 87 ಲಕ್ಷ ಕೊಟ್ಟಿದ್ದೇವೆ. ಅಂದರೆ 2005–06ಕ್ಕೆ ಹೋಲಿಕೆ ಮಾಡಿದರೆ 20,76 ಕೋಟಿ ಹೆಚ್ಚಾಗಿ ಶಿಕ್ಷಣಕ್ಕೆ ಕೊಟ್ಟಿದ್ದೇವೆ. ಅಂದರೆ ಯಾವ ಪ್ರಮಾಣಕ್ಕೆ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದೇವೆ ಎಂಬುದು ಈ ಅಂಕಿಅಂಶದಿಂದ ಗೊತ್ತಾಗುತ್ತದೆ. ಆರೋಗ್ಯ ಸೇವೆಗಳು, 2005–06ರಲ್ಲಿ 1146 ಕೋಟಿ 54 ಲಕ್ಷ ಇದಕ್ಕಾಗಿ ಇಟ್ಟಿದ್ದೆವು. 2006–07ರಲ್ಲಿ 1353 ಕೋಟಿ 20 ಲಕ್ಷ ಕೊಡಲಾಗಿತ್ತು. ಈ ವರ್ಷ 1934 ಕೋಟಿ 05 ಲಕ್ಷ ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ತಾವು ಯಾವುದನ್ನು ನೋಡಿ ಹೇಳುತ್ತಿದ್ದೀರೋ ಗೊತ್ತಿಲ್ಲ. ನೀವೇ ನಮಗೆ Financial Statement ಕೊಟ್ಟಿರತಕ್ಕದ್ದು. ಒಂದೇ ವರ್ಷ ಶಿಕ್ಷಣಕ್ಕೆ 2000 ಕೋಟಿ ಎಂದು ಹೇಳಿಬಿಡುತ್ತಿದ್ದೀರಿ. ಒಟ್ಟು Economic Services ಗೆ 2005–06ರಲ್ಲಿ 7,947 ಕೋಟಿ, 2006–07ರಲ್ಲಿ 8,578 ಕೋಟಿ, ಹಾಗಾದರೆ ಎಷ್ಟು ಹೆಚ್ಚಾಯಿತು? 600 ಕೋಟಿ ಹೆಚ್ಚಾಯಿತು. ಆದರೆ ನೀವು 2000 ಕೋಟಿ ಹೆಚ್ಚಾಯಿತು ಎಂದು ಹೇಳುತ್ತಿದ್ದೀರಲ್ಲ?

ಶ್ರೀ ಬಿ.ಎಸ್.ಯಡಿಯೂರಪ್ಪ : ಅದು ಯಾವ figure?

ಶ್ರೀ ಸಿದ್ದರಾಮಯ್ಯ : ನೀವು ಕೊಟ್ಟಿರುವುದೇ. Is it not your statement? ನೀವು ಬರೆದಿರುವುದಲ್ಲವಾ? ನಾನು ಬೇರೆ ಹೇಳಿದ್ದೇನೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಓದುತ್ತಿರುವುದು..

ಶ್ರೀ ಸಿದ್ದರಾಮಯ್ಯ : ಅದು ಯಾವುದೋ ಬೇರೆಯದನ್ನು ಓದಿದರೆ ಹೇಗೆ? ಅದನ್ನು ಓದಿಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಬೇರೆಯದನ್ನು ಓದುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : Social Servicesಗೆ 2005–06ರಲ್ಲಿ 1895 ಕೋಟಿ ಇದ್ದರೆ..

ಶ್ರೀ ಬಿ.ಎಸ್.ಯಡಿಯೂರಪ್ಪ : Social Servicesಗೆ ನಾನು ಇನ್ನು ಬಂದಿಲ್ಲ. ಅದಕ್ಕೆ ಬರುತ್ತೇನೆ.

ಶ್ರೀ ಸಿದ್ದರಾಮಯ್ಯ : Education ಎಂಬುದು Economic Services ನಲ್ಲಿ ಬರುತ್ತದಾ? Social Services ನಲ್ಲಿ ಬರುತ್ತದಾ?

ಶ್ರೀ ಬಿ.ಎಸ್.ಯಡಿಯೂರಪ್ಪ : ಲೋಕೋಪಯೋಗಿ ಇಲಾಖೆಗೆ 2005–06ನೇ ಸಾಲಿನಲ್ಲಿ 1820 ಕೋಟಿ 80 ಲಕ್ಷ ಇತ್ತು, 2006–07ರಲ್ಲಿ 3043 ಕೋಟಿ 76 ಲಕ್ಷ ಆಯಿತು, ಅಂದರೆ ಸುಮಾರು 1223 ಕೋಟಿ ಜಾಸ್ತಿ ಲೋಕೋಪಯೋಗಿ ಇಲಾಖೆಗೆ ಹೋದ ವರ್ಷ ಕೊಟ್ಟಿದ್ದೇವೆ. ಅದರಲ್ಲಿ ಏನು ತಾರತಮ್ಯವಾಗಿದೆ, ಅದರ ಬಗ್ಗೆ ಅನಂತರ ಚರ್ಚೆ ಮಾಡುತ್ತೇನೆ. ಒಂದು ವಿಷಯ ಇಲ್ಲಿ ಚರ್ಚೆಯಾಗುತ್ತಿದೆ. ಯಡಿಯೂರಪ್ಪ ಬಂದ ಮೇಲೆ, ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ನೀರಾವರಿಗೆ ಕಡಿಮೆ ಕೊಡುತ್ತಿದ್ದೇವೆ. ನಾವು ಸಾಲವನ್ನೇನು ಮರುಪಾವತಿ ಮಾಡುತ್ತಿದ್ದೆವು, ಅದನ್ನು ಸೇರಿಸಿ ದೊಡ್ಡ figuresನ್ನು ಹೇಳಿಕೊಳ್ಳುತ್ತಿದ್ದೆವು, ಸಾಲವನ್ನು deduct ಮಾಡಿ ವಾಸ್ತವಿಕವಾಗಿ ಅಭಿವೃದ್ಧಿ ಕಾರ್ಯಕ್ಕೆ ನೀರಾವರಿ ಯೋಜನೆ ಕಾರ್ಯರೂಪಕ್ಕೆ ತರಲು ನಾವೇನು ಹಣವನ್ನು ಕೊಟ್ಟಿದ್ದೇವೆ, ಎಷ್ಟು percent ಹಣ ಜಾಸ್ತಿಯಾಗಿದೆ ಎಂಬ ಬಗ್ಗೆ ನಿಮಗೆ ಹೇಳುತ್ತೇನೆ. 2005--06ರಲ್ಲಿ 2,141 ಕೋಟಿ 16 ಲಕ್ಷ ಇತ್ತು, 2006–07ರಲ್ಲಿ 2,812 ಕೋಟಿ 87 ಲಕ್ಷ, 2007–08ರಲ್ಲಿ 3,630 ಕೋಟಿ 82 ಲಕ್ಷ ಕೊಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಅದು ಎಲ್ಲಿದೆ ಸ್ವಲ್ಪ ತೋರಿಸುತ್ತೀರಾ? ಬಜೆಟ್‌ನ್ನು ನೀವೇ ಕೊಟ್ಟಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಬಜೆಟ್‌ನಲ್ಲಿರುವ ಅಂಕಿಅಂಶವನ್ನೇ ನಾನು ಹೇಳುತ್ತಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ : ಬಜೆಟ್ ಪುಸ್ತಕದಲ್ಲಿ ಇದೆಯಲ್ಲ, Annual Statement ನಲ್ಲಿ ಇದೆಯಲ್ಲ, ಅದರಲ್ಲಿ 3600 ಕೋಟಿ ಎಲ್ಲಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ : ಎರಡನ್ನೂ ಕಂಪೇರ್ ಮಾಡಿ.

ಶ್ರೀ ಸಿದ್ದರಾಮಯ್ಯ : ನೀವು ಪ್ಲಾನ್‌ನಲ್ಲಿ ಇಟ್ಟಿರುವುದೇ 3145 ಕೋಟಿ. ಬಜೆಟ್ ಪುಸ್ತಕದಲ್ಲಿ ನೋಡಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನನ್ನು ಮಾತನಾಡಲು ಬಿಡಿ. ಹೋದ ಬಾರಿ ಸಾಲ ಮರುಪಾವತಿ ಮಾಡಿರುವುದು ಇಲ್ಲಿ ಸೇರುತ್ತಿತ್ತು. ಆ figures ಬಿಟ್ಟು ನಾನು ಅಂಕಿ ಅಂಶವನ್ನು ಹೇಳಿದ್ದೇನೆ. ನೀರಾವರಿ ಇಲಾಖೆಗೆ ಈ ವರ್ಷ 2007–08ಕ್ಕೆ 3,630 ಕೋಟಿ. ಸಮಾಜ ಕಲ್ಯಾಣ ಇಲಾಖೆಗೆ 2005–06ರಲ್ಲಿ 741 ಕೋಟಿ 91 ಲಕ್ಷ ಇಟ್ಟಿದ್ದರು. 2006–07ರಲ್ಲಿ 1,167 ಕೋಟಿ 60 ಲಕ್ಷ ಇಟ್ಟಿದ್ದರೆ, ಈಗ 2007–08ಕ್ಕೆ 1,430 ಕೋಟಿ 47 ಲಕ್ಷ ಇಟ್ಟಿದ್ದೇವೆ. ಅಂದರೆ 2005–06ಕ್ಕಿಂತ 2006–07ರಲ್ಲಿ ಶೇಕಡಾ 9 ರಿಂದ 67% ಹೆಚ್ಚಿಗೆ ಕೊಟ್ಟಿದ್ದೇವೆ. ನೀರಾವರಿಗೆ ಹಣ ಕಡಿಮೆಯಾಗಿದೆ ಎಂದು ಹೇಳುತ್ತೀರಿ. ಆ ಮಾತು ಸರಿಯಲ್ಲ. ಏಕೆಂದರೆ 2006–07ರಲ್ಲಿ 26.48 ಹಾಗೂ 2005–06 ಶೇಕಡಾ 29.08 ಇದ್ದು ಪ್ರಸಕ್ತ ಈ ಸಾಲಿನಲ್ಲಿ ಗಣನೀಯವಾಗಿ ಏರಿಕೆಯಾಗಿದೆ. ವಾಸ್ತವಿಕವಾಗಿ ನೀರಾವರಿ ಕಾಮಗಾರಿಗೆ, ಬಹುಶಃ ಸಿದ್ದರಾಮಯ್ಯನವರಿಗೆ ಈಗ clear ಆಗಬಹುದು. 2005–06ರಲ್ಲಿ 2,141 ಕೋಟಿ, 2006–07ರಲ್ಲಿ 2,813 ಕೋಟಿ, 2007–08ರಲ್ಲಿ ಒದಗಿಸಿರುವ ಅನುದಾನ 3,631 ಕೋಟಿ. 2005–06ರಲ್ಲಿ ನೀರಾವರಿ ಸಾಲದ ಮರುಪಾವತಿಗಾಗಿ 1,658 ಕೋಟಿ ಆವಾಗ ಸೇರಿತ್ತು. ಅದನ್ನು minus ಮಾಡಿ ನಿಮಗೆ ಹೇಳುತ್ತಿದ್ದೇನೆ. ಸಾಲ ಮರುಪಾವತಿ ಮಾಡಿದ್ದು ನೀರಾವರಿಯ ಅಭಿವೃದ್ಧಿ ಎಲ್ಲಿ ಆಗುತ್ತದೆ? ಸಾಲದ ಬಾಬ್ತು ತೀರಿಸಿದ್ದೇವೆ. 2005–06ರಲ್ಲಿ 1650 ಕೋಟಿ, 2006–07ರಲ್ಲಿ 1548 ಕೋಟಿ ಈ ವರ್ಷ ಕೇವಲ 813 ಕೋಟಿ. ಅಂದರೆ ಸಾಲ ಕಟ್ಟುವುದು ಕಡಿಮೆಯಾಗುತ್ತಿದೆ. ಆದ್ದರಿಂದ ಈ ಅಂಕಿ ಅಂಶವೇನಿದೆ, ಸ್ಪಷ್ಟವಾಗಿ ಇರಬೇಕು. ಸಾಲ ಮರುಪಾವತಿ ಅಲ್ಲದೇ ಈ figures ಸರಿಯಾಗಿದೆ.

ಶ್ರೀ ಸಿದ್ದರಾಮಯ್ಯ : ತಪ್ಪು ತಪ್ಪು ಅಂಕಿ ಅಂಶವನ್ನು ಹೇಳಿದರೆ ನಾವು ಸುಮ್ಮನೆ ಕುಳಿತುಕೊಳ್ಳಬೇಕೇ?

ಶ್ರೀ ಬಿ.ಎಸ್.ಯಡಿಯೂರಪ್ಪ : Social Services ವ್ಯತ್ಯಾಸ ಇದ್ದರೆ ನಾನೇ ನಿಮ್ಮನ್ನು ಕರೆದು ನಾವು ನೀವು ಕುಳಿತುಕೊಂಡು ಮಾತನಾಡೋಣ. ಯಾರು ಬೇಡ ಎಂದು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : ನೀರಾವರಿಗೆ Revenue and Capital account ನಲ್ಲಿ ಈ ವರ್ಷ ಎಷ್ಟು ಹಣ ಖರ್ಚು ಮಾಡುತ್ತಿದ್ದೀರಿ ಹೇಳಿಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಎಲ್ಲಾ ವಿವರವಾದ ಮಾಹಿತಿ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಆಮೇಲೆ ಏಕೆ ಕೊಡುತ್ತೀರಿ? ಈಗಲೇ ಓದಿ ಹೇಳಿ. ಹೋದ ವರ್ಷ ಎಷ್ಟು ಖರ್ಚು ಮಾಡಿದ್ದರು, ಈ ವರ್ಷ ಎಷ್ಟು ಮಾಡುತ್ತಿದ್ದೀರಿ ಹೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ : ಇವರು ನೀರಾವರಿಗೆ ಎಷ್ಟೆಷ್ಟು ಕೊಡುತ್ತಿದ್ದರು ಎಂಬುದು ಒಂದು, ಜೊತೆಗೆ ಎಷ್ಟೆಷ್ಟು ಲ್ಯಾಪ್ಸ್ ಆಗುತ್ತಿತ್ತು ಎಂಬುದೂ ಒಂದು. ಅವೆರಡನ್ನೂ ಕೊಡಬೇಕು. ಏಕೆಂದರೆ ಇವರೆಲ್ಲ ಘೋಷಣೆ ಮಾಡಿದ್ದು ಒಂದು ಕೊಟ್ಟಂಥ ಹಣ ಖರ್ಚೇ ಮಾಡಲಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ಇದರ ಬಗ್ಗೆ ನೀವು ಹೇಳಬೇಕು. ನಾವು ಇದ್ದಾಗ ಇಷ್ಟು ಹಣ ಕೊಟ್ಟೆವು, ನೀವು ಇದ್ದಾಗ ಇಷ್ಟು ಹಣ ಕೊಟ್ಟಿದ್ದೀರಿ, ನಾವು ಇಷ್ಟು ರಿಲೀಸ್ ಮಾಡಿದೆವು, ನೀವು ಇಷ್ಟು ಮಾಡಿದಿರಿ ಎಂದು ನೀವು ಹೇಳಬೇಕು. ನೀವು ಒಳ್ಳೆಯ ಕೆಲಸ ಮಾಡಿದ್ದರೆ ನಾವು ಮೆಚ್ಚುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ : ಕೊಡುತ್ತೇವೆ. ಅದನ್ನು ಸೇರಿಸಿಯೇ ಕೊಡುತ್ತೇವೆ. ಎಷ್ಟೆಷ್ಟು ಹಣ ಇಟ್ಟರು, ಎಷ್ಟೆಷ್ಟು ಲ್ಯಾಪ್ಸ್ ಆಯಿತು, ಯಾವ್ಯಾವ ವರ್ಷದಲ್ಲಿ, ನಾವು ಎಷ್ಟು ಮಾಡಿದೆವು, ನಾವು ಎಷ್ಟು additional grants ನ್ನು ತೆಗೆದುಕೊಂಡಿದ್ದೇವೆ ಎಲ್ಲವನ್ನು ಸೇರಿಸಿ ನಾವು ಕೊಡುತ್ತೇವೆ.

ಅಧ್ಯಕ್ಷರು : ಪ್ರಕಟಣೆ ಇದೆ. ಇಂದು 4.30 ಗಂಟೆಗೆ ಕೃಷ್ಣಾದಲ್ಲಿ ಮುಖ್ಯಮಂತ್ರಿಗಳು ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ ಕುರಿತಂತೆ ಸಂಬಂಧಪಟ್ಟ ಶಾಸಕರುಗಳನ್ನು, ಸಂಸತ್ ಸದಸ್ಯರುಗಳ ಸಭೆಯನ್ನು ಕರೆದಿದ್ದರು. ಆ ಸಭೆ ಮುಂದೆ ಹೋಗಿದೆ. ಅದನ್ನು ನಾಳೆಗೆ ಮುಂದಕ್ಕೆ ಹಾಕಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮೌಲ್ಯವರ್ಧಿತ ತೆರಿಗೆ ಮತ್ತು ಮಾರಾಟ ತೆರಿಗೆಯಲ್ಲಿ ಸಾಕಷ್ಟು ಬದಲಾವಣೆ ತರುವಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. 2 ಲಕ್ಷಕ್ಕಿಂತ ಹೆಚ್ಚು ವಹಿವಾಟು ನಡೆಸುವ ಎಲ್ಲಾ ವಹಿವಾಟುದಾರರನ್ನು ತೆರಿಗೆಯ ವ್ಯಾಪ್ತಿಯಲ್ಲಿ ತಂದಿದ್ದೇವೆ. 15 ಲಕ್ಷಕ್ಕಿಂತ ಕಡಿಮೆ ವ್ಯಾಪಾರ ಹೊಂದಿರುವವರಿಗೆ ಸರಳತೆ ದೃಷ್ಟಿಯಿಂದ ಒಂದು

ಸಂಯೋಜಿತ ಯೋಜನೆಯನ್ನು ರೂಪಿಸಿದ್ದೇವೆ. ಹೊಸ ವ್ಯಾಟ್ ಪದ್ಧತಿಯ ಅನುಗುಣವಾಗಿ ನಾವು ಒಂದು ಬದಲಾವಣೆಯನ್ನು ತಂದ ಮೇಲೆ 2005–06 ನೇ ಸಾಲಿನಲ್ಲಿ 12,357 ಕೋಟಿ 49 ಲಕ್ಷ ಸಂಗ್ರಹವಾಗಿದ್ದರೆ 2006–07ರಲ್ಲಿ 14,190.75 ಕೋಟಿ ಸಂಗ್ರಹವಾಗಿದೆ. ವಾಣಿಜ್ಯ ಇಲಾಖೆಯಲ್ಲಿ ಗುಪ್ತವಾರ್ತೆ ವಿಭಾಗ ಬಹಳ ಅಚ್ಚುಕಟ್ಟಾಗಿ ಒಳ್ಳೆಯ ಚುಟುವಟಿಕೆಯಿಂದ ಕೆಲಸ ಮಾಡುತ್ತಿದೆ. ಉದಾಹರಣೆಗೆ, 2005–06ರಲ್ಲಿ ವ್ಯಾಪಾರಸ್ಥರ ತಪಾಸಣೆ 6,655 ಕಡೆ ಮಾಡಿದ್ದರೆ 2006–07ರಲ್ಲಿ 8,156 ಕಡೆ ಮಾಡಿದ್ದಾರೆ. ಸಂಗ್ರಹಿಸಿರುವ ತೆರಿಗೆಯ ಹಣ 2005–06ರಲ್ಲಿ ರೂ. 11,00,274 2006–07ರಲ್ಲಿ ರೂ 14,00,811 ಸಂಗ್ರಹವಾಗಿದೆ. ದಂಡದ ರೂಪದಲ್ಲಿ 2005–06ರಲ್ಲಿ 299 ಕೋಟಿ, 2006–07ರಲ್ಲಿ 272 ಕೋಟಿ ಸಂಗ್ರಹವಾಗಿದೆ. ಅದೇ ರೀತಿ ಸರಕು ವಾಹನಗಳ ತಪಾಸಣೆಯಿಂದ ಸಂಗ್ರಹ ಮಾಡಿರುವ ಹಣ 2005–06ರಲ್ಲಿ 2,869 ಲಕ್ಷವಾಗಿದ್ದರೆ ಈ ವರ್ಷ 3,012 ಲಕ್ಷ ಸಂಗ್ರಹ ಮಾಡಿದ್ದೇವೆ. ಕಳೆದ ಒಂದು ವರ್ಷದಲ್ಲಿ ವಿಶೇಷವಾದ ಕಾರ್ಯಾಚರಣೆ ನಡೆಸಿ ಈ ರಾಜ್ಯದಲ್ಲಿ ಈ plywood ವ್ಯಾಪಾರಸ್ಥರು ಬಹಳ ತೆರಿಗೆ ವಂಚನೆ ಮಾಡುವ ಕೆಲಸ ಮಾಡುತ್ತಿದ್ದರು. ಆ ವ್ಯಾಪಾರಸ್ಥರ ಮೇಲೆ ದಾಳಿ ಮಾಡಿ ಹತೋಟಿಗೆ ತರುವ ಪ್ರಯತ್ನ ಮಾಡಿದ್ದೇವೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಲ್ಲಿ ಖಾದ್ಯ ತೈಲ ಉತ್ಪಾದನಾ ಕೇಂದ್ರಗಳೇನಿದೆ, ಅಲ್ಲಿ ಬಿಲ್ ಟ್ರೇಡಿಂಗ್‌ನ್ನು ಕಾನೂನು ಬಾಹಿರವಾಗಿ ಮಾಡುತ್ತಿದ್ದರು. ತೆರಿಗೆ ವಂಚನೆ ಪ್ರಕರಣಗಳು ಬಹಳ ದೊಡ್ಡ ಪ್ರಮಾಣದಲ್ಲಿ ಇತ್ತು. ಅದನ್ನು ಹತೋಟಿಗೆ ತರುವ ಪ್ರಯತ್ನ ಮಾಡಿದ್ದೇವೆ. ಹೀಗೆ ವಾಣಿಜ್ಯ ತೆರಿಗೆಯಲ್ಲಿ ಸಾಕಷ್ಟು ಬದಲಾವಣೆಯನ್ನು ತರುವ ಪ್ರಯತ್ನ ಮಾಡಿದ್ದೇವೆ. ಮುದ್ರಾಂಕ ಮತ್ತು ನೋಂದಣಿ ತೆರಿಗೆ, 2005–06 ರಲ್ಲಿ 2,180 ಕೋಟಿ ಸಂಗ್ರಹವಾಗಿದ್ದರೆ 2006–07ರಲ್ಲಿ 3,400 ಕೋಟಿ ಸಂಗ್ರಹವಾಗಿದೆ. ಮೋಟಾರ್ ವಾಹನ ತೆರಿಗೆ, 2005–06ರಲ್ಲಿ, 1,158 ಕೋಟಿ ಸಂಗ್ರಹವಾಗಿದ್ದರೆ 2006–07ರಲ್ಲಿ 1,285 ಕೋಟಿ ಸಂಗ್ರಹ ಮಾಡಿದ್ದೇವೆ. ಈ ರೀತಿ ತೆರಿಗೆ ಜಾಲದ ವಿಸ್ತರಣೆ 12ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಲಭ್ಯವಿರುವ ಪ್ರೋತ್ಸಾಹಧನ ಈ ಕೆಳಕಂಡಂತೆ ಇದೆ. 2005–06ರಲ್ಲಿ 1,199 ಕೋಟಿ 46 ಲಕ್ಷ, 2006–07ರಲ್ಲಿ 1,190 ಕೋಟಿ 2 ಲಕ್ಷ, 2007–08ರಲ್ಲಿ 1,212 ಕೋಟಿ 11 ಲಕ್ಷ. ಇದರಿಂದ ಉಳಿತಾಯ 2005–06ರಲ್ಲಿ 303 ಕೋಟಿ 61 ಲಕ್ಷ, 2006–07ರಲ್ಲಿ 321 ಕೋಟಿ 5

ಲಕ್ಷ, 2007–08ರಲ್ಲಿ 370 ಕೋಟಿ 2 ಲಕ್ಷ, ಸಾಲ ಮನ್ನಾ ಮೂಲಕ, ಈ ಹಣವನ್ನು ಕೊಟ್ಟಿದ್ದರಿಂದ ನಮಗೆ 2005–06ರಲ್ಲಿ ಕೇಂದ್ರ ಸರ್ಕಾರದಿಂದ 358 ಕೋಟಿ 33 ಲಕ್ಷ, 2006–07ರಲ್ಲಿ 358 ಕೋಟಿ 33 ಲಕ್ಷ, 2007–08 ರಲ್ಲಿ ಸಹ 358 ಕೋಟಿ 33 ಲಕ್ಷ ಬಂದಿದೆ. ಈ ವರ್ಷ ಸಹ ಅದೇ ರೀತಿ ಸುಧಾರಣೆ ಆಗುತ್ತದೆ ಎಂಬ ವಿಶ್ವಾಸ ನನಗೆ ಇದೆ. 2006–07ರಲ್ಲಿ ನಮಗೇನು ಪ್ರಮುಖ ಇಲಾಖೆಯಲ್ಲಿ ಸಂಪನ್ಮೂಲ ಕ್ರೋಢೀಕರಿಸುತ್ತೇವೆ, ಯಾವ ರೀತಿ ವ್ಯತ್ಯಾಸವಾಗಿದೆ, ಹೆಚ್ಚು ತೆರಿಗೆಯನ್ನು ಹಾಕದೆಯೇ ಸೋರಿಕೆಯನ್ನು ತಡೆಯುವ ಮೂಲಕ ನಾವು ಯಾವ ರೀತಿ ಸಾಧನೆಯಾಗಿದೆ ಎಂಬ ಮಾತನ್ನು ಹೇಳಲು ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ : ವ್ಯಾಟ್ ಬಂದ ಮೇಲೆ ಹೆಚ್ಚು ತೆರಿಗೆಯನ್ನು ಹಾಕಲು ಬರುವುದಿಲ್ಲ. 4 ಮತ್ತು 12.5% standard ಹಾಕಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : 2006–07ನೇ ಸಾಲಿನಲ್ಲಿ ಏಪ್ರಿಲ್, ಮೇ, ಜೂನ್ ಈ ಮೂರು ತಿಂಗಳಿನಲ್ಲಿ 5,518 ಕೋಟಿ 32 ಲಕ್ಷ ಸಂಗ್ರಹವಾಗಿದ್ದರೆ, ಈ ವರ್ಷದ ಆ ಮೂರು ತಿಂಗಳಿನಲ್ಲಿ 6, 457 ಕೋಟಿ 57 ಲಕ್ಷ ಸಂಗ್ರಹವಾಗಿದೆ. ಅಂದರೆ ಹೋದ ಏಪ್ರಿಲ್, ಮೇ, ಜೂನ್ ತಿಂಗಳಿಗೂ ಈ ವರ್ಷದ ಆ ಮೂರು ತಿಂಗಳಿಗೂ ಹೋಲಿಕೆ ಮಾಡಿದರೆ 839 ಕೋಟಿ 25 ಲಕ್ಷ ಹೆಚ್ಚುವರಿಯಾಗಿ ಸಂಗ್ರಹ ಮಾಡುವುದರಲ್ಲಿ ನಾವು ಯಶಸ್ವಿಯಾಗಿದ್ದೇವೆ. ಆದ್ದರಿಂದ ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೇವೆ, ಅದನ್ನು ತಲುಪುತ್ತೇವೆ ಎನ್ನುವ ವಿಶ್ವಾಸ ನನಗಿದೆ. ಯೋಜನಾ ಗಾತ್ರ ಹೇಗೆ ಪ್ರಗತಿಯಾಗುತ್ತಿದೆ ಎಂಬುದು ನಿಮ್ಮೆಲ್ಲರ ಶ್ರಮ, ಪ್ರಯತ್ನದಿಂದ ಆಗಿದೆ. ಇದನ್ನು ನಾನು ಒಬ್ಬ ಬಂದು ಮಾಡಿದೆ ಎಂದು ಸಿದ್ದರಾಮಯ್ಯನವರೆ ಹೇಳುವುದಿಲ್ಲ ನಿಮ್ಮೆಲ್ಲರ ಶ್ರಮದಿಂದ ಕಳೆದ ನಾಲ್ಕಾರು ವರ್ಷಗಳಲ್ಲಿ ಸ್ವಲ್ಪ ಬಿಗಿ ಕ್ರಮ ತೆಗೆದುಕೊಂಡು ಸೋರಿಕೆಯ ಬಗ್ಗೆ ಕ್ರಮ ತೆಗೆದುಕೊಂಡು ಸಂಪನ್ಮೂಲ ಕ್ರೋಢೀಕರಿಸುವಲ್ಲಿ ಯಶಸ್ವಿಯಾಗಿದ್ದರಿಂದ ಯೋಜನಾ ಗಾತ್ರ 2005–06 ರಲ್ಲಿ 36,209 ಕೋಟಿ 2 ಲಕ್ಷ ಇತ್ತು. 2006–07ರಲ್ಲಿ 43,434 ಕೋಟಿ 64 ಲಕ್ಷ ಆಯಿತು. ಈ ವರ್ಷ 2007–08 ರಲ್ಲಿ 50,465 ಕೋಟಿ 61 ಲಕ್ಷ ನಮ್ಮ ನಿರೀಕ್ಷೆ ಇದೆ.

ಶ್ರೀ ಸಿದ್ದರಾಮಯ್ಯ : 5 ವರ್ಷದ ಪ್ಲಾನ್ size ನ್ನು ಹೇಳುತ್ತಿದ್ದೀರಾ?

ಶ್ರೀ ಬಿ.ಎಸ್.ಯಡಿಯೂರಪ್ಪ : ಹೌದು. ಇದು ಸಂಚಿತ ನಿಧಿ ಒಟ್ಟು ಸೇರಿ ಬಜೆಟ್.

ಶ್ರೀ ಸಿದ್ದರಾಮಯ್ಯ : 5 ವರ್ಷಕ್ಕೆ Plan size 43,558 ಕೋಟಿ tenth planನಲ್ಲಿ ಖರ್ಚಾಗಿರುವುದು. 9th planಗೂ 10th planಗೂ growth ಆಗಿರುವುದು ನಿಜ. ಮುಂದಿನ ವರ್ಷಕ್ಕೆ ಎಷ್ಟು growth ಆಗಿದೆ ಎಂದರೆ, ಈ ವರ್ಷ 11ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುತ್ತಿದೆ. ಈ ವರ್ಷ 96,703 ಕೋಟಿ plan size ಆಗಿದೆ. Approved plan size for five years. ಈ ಐದು ವರ್ಷದಲ್ಲಿ ನೀರಾವರಿಗಾಗಿಯೇ 24,700 ಕೋಟಿ ಖರ್ಚು ಮಾಡಬೇಕು. ಅದರ ಪ್ರಕಾರ ನೀವು ಲೆಕ್ಕ ಹಾಕಿಕೊಂಡರೆ ನೀವು planನಲ್ಲಿ ಇಟ್ಟಿರತಕ್ಕ ಹಣ ಬಹಳ ಕಡಿಮೆ.

(4-30 PM)

ಶ್ರೀ ಬಿ.ಎಸ್.ಯಡಿಯೂರಪ್ಪ : ಅದೇ ರೀತಿ 2005–06ರಲ್ಲಿ ಯೋಜನಾ ಗಾತ್ರ 13555 ಕೋಟಿ ರೂಪಾಯಿಗಳು ಇದ್ದರೆ, 2006–07ರಲ್ಲಿ 16166 ಕೋಟಿ ರೂಪಾಯಿಗಳು, ಈ ವರ್ಷ ಅಂದರೆ 2007–08ರಲ್ಲಿ 17782 ಕೋಟಿ ರೂಪಾಯಿಗಳು.

ಶ್ರೀ ಸಿದ್ದರಾಮಯ್ಯ : ನಂಜುಂಡಪ್ಪ ವರದಿಯಂತೆ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆಂದು ಇಟ್ಟ ಹಣವನ್ನು Minus 1571 ಕೋಟಿ ರೂಪಾಯಿಗಳನ್ನು ಮಾಡಿದರೆ ಎಷ್ಟು ಆಗುತ್ತದೆಂದು ಲೆಕ್ಕ ಇಟ್ಟುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ : 8% GDP growth in the Country.

ಶ್ರೀ ಸಿದ್ದರಾಮಯ್ಯ : Inflation 6% ಅದನ್ನೂ ಲೆಕ್ಕ ಹಾಕಿ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇಲ್ಲಿ ಬಹಳ ಚರ್ಚೆಯಾಗುತ್ತಿದ್ದ ವಿಷಯವೇನೆಂದರೆ ಈ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಡಾ: ನಂಜುಂಡಪ್ಪನವರ ವರದಿ ಏನಿತ್ತು. ಈ ಹಿಂದೆ 2002 ರಲ್ಲಿಯೇ ವರದಿಯನ್ನು ಕೊಟ್ಟಿದ್ದರೂ ಸಹ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಬೇರೆ ಬೇರೆ ಕಾರಣಕ್ಕೆ ಆಗಿರಲಿಲ್ಲ. ಅದರ ಬಗ್ಗೆ ಯಾರನ್ನೂ ದೂರುವುದಕ್ಕೆ ನಾನು ಇಷ್ಟಪಡುವುದಿಲ್ಲ. ಈ ಸಲ ವಿಶೇಷವಾದ ಶ್ರಮ ಹಾಕಿ ನಂಜುಂಡಪ್ಪ ವರದಿ ಆಧಾರದ ಮೇಲೆ 1571 ಕೋಟಿ ರೂಪಾಯಿಗಳನ್ನು ಖರ್ಚು

ಮಾಡಬೇಕೆನ್ನುವ ತೀರ್ಮಾನವನ್ನು ಮಾಡಿದ್ದೇವೆ. plan ನಲ್ಲಿಯೇ ಆ ಹಣವನ್ನು ತೆಗೆದಿಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : Record purpose ಗೋಸ್ಕರ ಅದನ್ನು ಸರಿಪಡಿಸಿ ಹೇಳುತ್ತೇನೆ. ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಎಲ್ಲಾ Membersಗೆ ಅರ್ಥವಾಗಬೇಕೆನ್ನುವ ಕಾರಣಕ್ಕೋಸ್ಕರ ಹೇಳುವುದೇನೆಂದರೆ, 17,782 ಕೋಟಿ ರೂಪಾಯಿಗಳ Plan size ಈ ವರ್ಷದ್ದು ಆಗಿದೆ. ಈ ನಂಜುಂಡಪ್ಪ ವರದಿ ಸಲುವಾಗಿ 1571 ಕೋಟಿ ರೂಪಾಯಿಗಳನ್ನು ಏನು ಇಟ್ಟಿದ್ದೀರಿ, ಅದು ಸಹ ಈ Plan size ಒಳಗಡೆ ಸೇರಿಕೊಂಡಿದೆ. ಅದಕ್ಕೆ separate ಆಗಿ additional grant ಎಂದು ನೀವು ಇಟ್ಟುಕೊಂಡರೆ ಇನ್ನು ಉಳಿದುಕೊಳ್ಳುವುದು 16,221 ಕೋಟಿ ರೂಪಾಯಿಗಳು. ಕಳೆದ ವರ್ಷ ನಿಮ್ಮ Plan size 16,166 ಕೋಟಿ ರೂಪಾಯಿಗಳಿತ್ತು. ಈ ವರ್ಷದ Plan 16,221 ಕೋಟಿ ರೂಪಾಯಿಗಳು. ಅಂದರೆ ಕೇವಲ 45 ಕೋಟಿ ರೂಪಾಯಿಗಳು ಮಾತ್ರ Planನಲ್ಲಿ ಜಾಸ್ತಿ ಆಗಿದೆ. ಆ ಕಾರಣದಿಂದ ರಾಜ್ಯದ ಬೆಳವಣಿಗೆ ಆಗುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ಒಂದು ಕಡೆ Plan size 96703 ಕೋಟಿ ರೂ. ಆಗಬೇಕು, 5 ವರ್ಷದಲ್ಲಿ ಅದನ್ನು achieve ಮಾಡಬೇಕೆಂದು ಲೆಕ್ಕ ಇಟ್ಟುಕೊಂಡರೆ core subject ಗಳಿಗೆ ಈ ವರ್ಷ Plan ನಲ್ಲಿರತಕ್ಕಂಥ ಹಣ agriculture ಇರಬಹುದು, power ಇರಬಹುದು, irrigation ಇರಬಹುದು, ಇವೆಲ್ಲಕ್ಕೂ ಕೂಡ comparatively ಕಡಿಮೆ ಆಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ಸಮ್ಮಿಶ್ರ ಸರ್ಕಾರ ರಾಜಕೀಯ ಇಚ್ಛಾಶಕ್ತಿಯನ್ನು ಪ್ರಕಟಣೆ ಮಾಡಿ 2002ರಲ್ಲಿ ಡಾ॥ ನಂಜುಂಡಪ್ಪ ವರದಿ ಬಂದರೂ ಸಹ ಹಿಂದಿನ ಸರ್ಕಾರಗಳು ಅದರದೇ ಆದಂಥ ಕಾರಣಗಳಿಂದ ಇದಕ್ಕೆ ಗಮನವನ್ನು ಕೊಟ್ಟಿರಲಿಲ್ಲ. ನಾವು ಈ ಸಲ ಆ ದಿಕ್ಕಿನಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ ಹಣ ತೆಗೆದಿಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಯಾವುದರಿಂದ ತೆಗೆದಿಟ್ಟಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ಇದಕ್ಕಾಗಿ Plan size ನಿಂದ ತೆಗೆದಿಟ್ಟು ಖರ್ಚು ಮಾಡುತ್ತಿದ್ದೇವಲ್ಲಾ.

ಶ್ರೀ ಸಿದ್ದರಾಮಯ್ಯ : ನಂಜುಂಡಪ್ಪನವರು ತಮ್ಮ ವರದಿಯಲ್ಲಿ ಏನು ಹೇಳಿದ್ದಾರೆಂದರೆ, 2002 ಇಸವಿಯ ಬೆಲೆಗಳ ಪ್ರಕಾರ 31 ಸಾವಿರ ಕೋಟಿ

ರೂಪಾಯಿಗಳನ್ನು ಖರ್ಚು ಮಾಡಬೇಕು, 15 ಸಾವಿರ ಕೋಟಿ ರೂಪಾಯಿಗಳು normal planನಲ್ಲಿ ಬಂದುಬಿಡುತ್ತದೆ, ಇನ್ನು 16 ಸಾವಿರ ಕೋಟಿ ರೂಪಾಯಿಗಳನ್ನು additional ಆಗಿ ಖರ್ಚು ಮಾಡಬೇಕೆಂದು ಹೇಳಿರುವುದು. ವರ್ಷಕ್ಕೆ ಎರಡೆರಡು ಸಾವಿರ ಕೋಟಿ ರೂಪಾಯಿಗಳಂತೆ additional ಆಗಿ other than plan amount, regular plan amount ಎಂದು ಹೇಳಿರುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಂಜುಂಡಪ್ಪ ವರದಿ ಅನುಷ್ಠಾನಗೊಳಿಸುವ ಸಂದರ್ಭದಲ್ಲಿ 206–07ನೇ ಸಾಲಿನಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗೆ 253 ಕೋಟಿ 86 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. 2007–08ರ ಸಾಲಿನಲ್ಲಿ ಇದೇ ಬಾಬ್ತುಗೆ 362 ಕೋಟಿ 25 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಅಂದರೆ ಹಿಂದುಳಿದ ತಾಲ್ಲೂಕುಗಳಿಗಾಗಿ ಹೆಚ್ಚಿಗೆ 125 ಕೋಟಿ ರೂಪಾಯಿಗಳನ್ನು ನಾವು ತೆಗೆದಿಟ್ಟಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : 12th Finance ಇಲ್ಲ.

(ಗೊಂದಲ)

ಅಧ್ಯಕ್ಷರು : ಹಣಕಾಸಿನ ಸಚಿವರಿಗೆ ಮಾತನಾಡುವುದಕ್ಕೆ ಬಿಡಿ. ಪ್ರತಿಯೊಂದಕ್ಕೂ interfere ಆದರೆ ಏನೂ ಹೇಳುವುದಕ್ಕಾಗುವುದಿಲ್ಲ. ನೀವು ಭಾಷಣ ಮಾಡಿದ್ದೀರಿ. ಈಗ ಸಚಿವರು ಹೇಳುವುದನ್ನು ಕೇಳಿ. ನಂತರ clarification ಏನಾದರೂ ಇದ್ದರೆ ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : 2006–07ರಲ್ಲಿ. . .

ಅಧ್ಯಕ್ಷರು : ವಿರೋಧ ಪಕ್ಷದ ಕಡೆಯಿಂದ ಕೆಲವರು ಎರಡೂವರೆ ಗಂಟೆ ಭಾಷಣ, ಮೂರೂವರೆ ಗಂಟೆ ಭಾಷಣ ಹೀಗೆ ಒಟ್ಟು 26 ಗಂಟೆ ಸಮಯವನ್ನು ಉಪಯೋಗಿಸಿಕೊಂಡಿದ್ದೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನೀವೆಲ್ಲ ಸಹಕಾರ ಕೊಡಿ. ನಿಶ್ಚಿತವಾಗಿ ಡಾ: ನಂಜುಂಡಪ್ಪ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಯಾವ ರೀತಿ ಹಣ ಒದಗಿಸಬೇಕೋ ಅದಕ್ಕೆ ವಿಶೇಷವಾಗಿ ಪ್ರಯತ್ನ ಮಾಡಿ ಹಣವನ್ನು ಒದಗಿಸುತ್ತೇವೆ ಮತ್ತು ಆ ಕಾರ್ಯಕ್ರಮವನ್ನು ಜಾರಿಗೆ ತರುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ

ಇಚ್ಛೆಪಡುತ್ತೇನೆ. ಇನ್ನು ಶಿಕ್ಷಣದ ಬಗ್ಗೆ ನಿನ್ನೆಯ ದಿವಸ ಮಾತನಾಡ-ಬೇಕಾದರೆ, ಸನ್ಮಾನ್ಯ ರೇವಣ್ಣನವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ, ಇವತ್ತು ಈ ಸಮ್ಮಿಶ್ರ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಕೇವಲ ಶಾಲೆಗಳನ್ನು ಪ್ರಾರಂಭ ಮಾಡಿ ಕೈಕಟ್ಟಿಕೊಂಡು ಕುಳಿತುಕೊಳ್ಳಲಿಲ್ಲ. ಜೊತೆಗೆ ಶಿಕ್ಷಕರ ನೇಮಕಾತಿಗೂ ಕೂಡ ವಿಶೇಷವಾದ ಪ್ರಯತ್ನವನ್ನು ಮಾಡಿದ್ದೇವೆ. ಕಳೆದ ವರ್ಷ 716 ಪ್ರಾಥಮಿಕ ಶಾಲೆಗಳನ್ನು 485 ಪ್ರೌಢಶಾಲೆಗಳನ್ನು, 200 ಪದವಿಪೂರ್ವ ಕಾಲೇಜುಗಳನ್ನು, 15 ಪ್ರಥಮ ದರ್ಜೆ ಕಾಲೇಜುಗಳನ್ನು, 11 ITI ಗಳನ್ನು ನಾವು ಮಂಜೂರು ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಯಾವ್ಯಾವ ತಾಲ್ಲೂಕುಗಳಿಗೆ ಮಂಜೂರು ಮಾಡಿದ್ದೀರಿ ಎನ್ನುವ ಬಗ್ಗೆ ಒಂದು white paper ಹೊರಡಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ತಾವು ಕೇಳಿದಂಥ ಎಲ್ಲಾ ವಿವರಗಳನ್ನು, ಮಾಹಿತಿಗಳನ್ನು ಕೊಡಲಿಕ್ಕೆ ನಾನು ಸಿದ್ಧನಿದ್ದೇನೆ. ಈವರ್ಷ 655 ಪ್ರಾಥಮಿಕ ಶಾಲೆಗಳು, 543 ಪ್ರೌಢಶಾಲೆಗಳು, 229 ಪದವಿ ಪೂರ್ವ ಕಾಲೇಜುಗಳು, 166 ಪ್ರಥಮದರ್ಜೆ ಕಾಲೇಜುಗಳು, 21 polytechnic college ಗಳು ಮತ್ತು 33 ITI ಗಳನ್ನು ಮಂಜೂರು ಮಾಡಿದ್ದೇವೆ. ಬಹುಶಃ ಪ್ರಥಮ ದರ್ಜೆ ಕಾಲೇಜುಗಳು ಸ್ವಾತಂತ್ರ್ಯ ನಂತರ ಕಳೆದ 58 ವರ್ಷಗಳಲ್ಲಿ ಪ್ರಾರಂಭ ಮಾಡಿ ಪ್ರಥಮ ದರ್ಜೆ ಕಾಲೇಜುಗಳು ಕೇವಲ 171. ಆದರೆ, ಕಳೆದ 18 ತಿಂಗಳುಗಳಲ್ಲಿ ಮಂಜೂರು ಮಾಡಿದಂಥ ಪ್ರಥಮ ದರ್ಜೆ ಕಾಲೇಜು 181.

ಶ್ರೀ ಸಿದ್ದರಾಮಯ್ಯ : ಹಾಸನದ ಪಡವಲಹಿಪ್ಪೆನಲ್ಲಿ ಆ degree college ನಲ್ಲಿ ಎಷ್ಟು ವಿದ್ಯಾರ್ಥಿಗಳಿದ್ದಾರೆಂದು ಹೇಳುತ್ತೀರಾ?

(ಗೊಂದಲ)

ಅಧ್ಯಕ್ಷರು : ಸಿದ್ದರಾಮಯ್ಯನವರೆ, ಸಚಿವರು ಉತ್ತರ ಹೇಳಲಿ. ಬಿಡಿ. ಅವರು ಸರ್ಕಾರದ ಸಾಧನೆ ಹೇಳುವುದಕ್ಕೆ ನೀವು ಬಿಡುವುದಿಲ್ಲವಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅಲ್ಲಿಯ ಡಿಗ್ರಿ ಕಾಲೇಜಿನಲ್ಲಿ ಕೇವಲ 5 ಜನ ವಿದ್ಯಾರ್ಥಿಗಳು. ಪಡವಲಹಿಪ್ಪೆಯ Law collegeನಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿದ್ದಾರೆ ಎಂದು ಹೇಳಿ ನೋಡೋಣ.

ಅಧ್ಯಕ್ಷರು : of course, ಆಮೇಲೆ ಮಾತನಾಡುವುದಕ್ಕೆ ನಿಮಗೆ ತುಂಬಾ ಅವಕಾಶವಿದೆ. ಆಗ ನೀವು ಹೇಳುವಿರಂತೆ. ಈಗ ಅವರು ಸರ್ಕಾರದ ಸಾಧನೆಯನ್ನು ಹೇಳಬೇಕಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ದಯಮಾಡಿ ನಿಮ್ಮ ಗಮನಕ್ಕೆ ತರುವುದೇನೆಂದರೆ,

ಅಧ್ಯಕ್ಷರು : ನಿನ್ನೆ ನೀವು ಇರಲಿಲ್ಲ. ರೇವಣ್ಣನವರು ನಿನ್ನೆ ಉತ್ತರ ಕೊಡುವಾಗ ಏನು ಹೇಳಿದರೆಂದರೆ, 2000–01 ರಿಂದ 2004–05 ರ ಸಾಲು ಏನಿದೆ, ಅದರ comparison ಕೊಟ್ಟರು. ಕೆಲವು constituency ಗೆ ಜಾಸ್ತಿ ಕೊಟ್ಟಿದ್ದರು, 172 constituency ಗೆ ಒಂದು ಆಣೆಯೂ ಕೊಡಲಿಲ್ಲ, ಒಂದು ವರ್ಷ 36ಕ್ಕೆ ಕೊಡಲಿಲ್ಲ, ಆದರೆ ನಾನು 224 constituency ಗೆ ಕೊಟ್ಟಿದ್ದೇನೆಂದು ಹೇಳಿದಾಗ ನೀವು ಮಾತನಾಡಲೇ ಇಲ್ಲ.

ಶ್ರೀ ಸಿದ್ದರಾಮಯ್ಯ : ಹಿಂದಿನವರೆಲ್ಲ ಇದ್ದಾರೆಯೇ ಅಂಕಿಅಂಶ ಕೊಟ್ಟು ಹೇಳುವುದಕ್ಕೆ? ನೀವು ಕೇಳುವುದಕ್ಕೇ ಬಿಡುವುದಿಲ್ಲ.

ಅಧ್ಯಕ್ಷರು : ಅವರು ಹೇಳಿದಾಗ ನಿಮ್ಮ ಕಡೆಯಿಂದ ಯಾರೂ ಏನೂ ಹೇಳಲಿಲ್ಲ. ನೀವು ಆ ಸಂದರ್ಭದಲ್ಲಿ ಸದನದಲ್ಲಿ ಇದ್ದರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಸಿದ್ದರಾಮಯ್ಯ : Let them present a white paper. ಅದರ ಮೇಲೆ ಚರ್ಚೆ ಆಗಲಿ. Whether it amounts to imbalance or not ಎಂದು ನೋಡೋಣ. ಸಮಾನ ಬೆಳವಣಿಗೆ ಆಗಬೇಕು, ಸಾಮಾಜಿಕ ನ್ಯಾಯ ಆಗಬೇಕು, ಆದರೆ, ಇವರ Education Policyಯಲ್ಲಿ ತೆಗೆದುಕೊಂಡು ಹೋಗಿ ಹೊಳೆನರಸೀಪುರದಲ್ಲಿ First Grade Collegeಗಳನ್ನು ಕೊಟ್ಟು, ಪಡವಲಹಿಪ್ಪೆಯ Law Collegeನಲ್ಲಿ 5 ಜನ ವಿದ್ಯಾರ್ಥಿಗಳು ಮಾತ್ರ ಇದ್ದಾರಂತಲ್ಲ. ಅಲ್ಲಿಗೆ ಏನು ಮಾಡುವುದು? Library ಇಲ್ಲ, ಆಟದ ಮೈದಾನವಿಲ್ಲ, building, ಇಲ್ಲ, ಇಂಥದ್ದನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ : ಸಿದ್ದರಾಮಯ್ಯನವರು ಬೇರೆಯವರ ಮಾತು ಕೇಳಿ ಕೆಟ್ಟಿರುವುದು. ನೀವು ಸ್ವತಃ ಪಡವಲಹಿಪ್ಪೆಗೆ ಬಂದು ನೋಡಿ ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ.

ಶ್ರೀ ಸಿದ್ದರಾಮಯ್ಯ : ಕೇಳಿದ್ದರೆ ನಿಮ್ಮ father ಮಾತು ಕೇಳಿರಬಹುದು, ನಿಮ್ಮ father ಮಾತು ಕೇಳಿದ್ದರೆ, ಅದರಿಂದ ನಾನು ಕೆಟ್ಟು ಹೋದನೇ?

ಶ್ರೀ ಹೆಚ್.ಡಿ.ರೇವಣ್ಣ : ನಾನು ಹೇಳಿದ್ದು ಅದಕ್ಕಲ್ಲ.

ಶ್ರೀ ಸಿದ್ದರಾಮಯ್ಯ : ಮತ್ತೆ ಇನ್ನೇನು? ಇನ್ನು ಸ್ವಲ್ಪ ದಿವಸ ನಿಮ್ಮ ದೇವೇಗೌಡರ ಮಾತು ಕೇಳಿ ನಾನು ಕೆಟ್ಟು ಹೋದನೆಯೇ? ಹಾಗಾದರೆ ದೇವೇಗೌಡರ ಮಾತು ಕೇಳಿ ನಾನು ಕೆಟ್ಟಿರಬೇಕು. ಕೆಟ್ಟಿದ್ದರೆ ದೇವೇಗೌಡರ ಮಾತು ಕೇಳಿ ಕೆಟ್ಟಿರುತ್ತೇನಷ್ಟೆ. ಬೇರೆಯವರ ಮಾತೂ ಕೇಳುವುದಿಲ್ಲ. ನನ್ನ ಸ್ವಂತ ತೀರ್ಮಾನವನ್ನೇ ನಾನು ಮಾಡುವುದು.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಿದ್ದರಾಮಯ್ಯನವರು white paper ಇಡಬೇಕೆಂದು ಹೇಳಿದರು. ಇಡೋಣ. ಮೊನ್ನೆ ನಾನು ಸವಿಸ್ತಾರವಾಗಿ ಎಳೆಎಳೆಯಾಗಿ ಬಿಡಿಸಿ ಹೇಳಿದ್ದೇನೆ. ಕಳೆದ 50 ವರ್ಷಗಳಲ್ಲಿ ಕೊಟ್ಟಿರುವುದು 168 ಕಾಲೇಜುಗಳು, ಕಳೆದ 15 ತಿಂಗಳುಗಳಲ್ಲಿ ಶ್ರೀಮಾನ್ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರು ಸೇರಿ 182 ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಿದ್ದಾರೆ.

Building ಇಲ್ಲದೆ ಮೇಷ್ಟ್ರುಗಳು ಇಲ್ಲದೇ, Playground ಇಲ್ಲದೆ, ಲೈಬ್ರರಿ ಇಲ್ಲದೆ, ಶಾಲೆ ಕೊಟ್ಟರೆ ಏನು ಪ್ರಯೋಜನ? ರಾಮನಗರಕ್ಕೆ ಹೊಳೇನರಸೀಪುರಕ್ಕೆ ಮತ್ತು ಶಿಕಾರಿಪುರಕ್ಕೆ ಕೊಟ್ಟಿದ್ದೀರಿ.

(ಗೊಂದಲ)

ನಮ್ಮ Constituencyಗೆ ಎಷ್ಟು ಹೈಸ್ಕೂಲ್‌ಗಳು ಬಂದಿವೆ, ನಿಮ್ಮ Constituency ಗೆ ಎಷ್ಟು ಹೈಸ್ಕೂಲ್‌ಗಳು ಬಂದಿವೆ ಎಂದು ಮಾಹಿತಿ ಇಡಿ.

ಅಧ್ಯಕ್ಷರು : ಸಿದ್ದರಾಮಯ್ಯನವರೇ, ಇವರು ಮಾತನಾಡಲಿ. ಆ ಮನೆಗೆ ಇವತ್ತು ಬಿಲ್ ಹೋಗಬೇಕಾಗಿದೆ. ಈಗಾಗಲೇ 4.40 ಆಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದಲ್ಲಿದ್ದು, ಸಾಕಷ್ಟು ಅನುಭವ ಇರುವಂತಹ ಹಿರಿಯ ಸದಸ್ಯರು ಎದುರುಗಡೆ ಕುಳಿತಿದ್ದೀರಿ. ಪ್ರಾರಂಭದಲ್ಲಿ ನಾನು ನಿಮಗೆ ಒಂದು ಪ್ರಶ್ನೆ

ಕೇಳಿದೆ. 2006–07, 2007–08 ಈ 18 ತಿಂಗಳು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಒಂದು ದಾಖಲೆಯ ಪ್ರಗತಿ ಆಗಿದೆ. 50 ಲಕ್ಷ ಜನರಿಗೆ ಯಾವ ರೀತಿ ಸವಲತ್ತು ಆಗಿದೆ ಎಂದು ನಾನು ನಿಮಗೆ ವಿವರವನ್ನು ಒದಗಿಸುವುದಕ್ಕೆ ನಾನು ಸಿದ್ಧನಾಗಿದ್ದೇನೆ. ನಾನು ಕೊಡುವ ಮಾಹಿತಿ ತಪ್ಪು ಇದ್ದರೆ ಹೇಳಿ. ಇದು ಕೇವಲ ಯಾರದೋ ಮೂತಿಗೆ ತುಪ್ಪ ಹಚ್ಚಿ ಓಟ್ ಬ್ಯಾಂಕ್‌ಗೋಸ್ಕರ ಸಮ್ಮಿಶ್ರ ಸರ್ಕಾರದಲ್ಲಿ ರಾಜಕಾರಣ ಮಾಡುತ್ತಿಲ್ಲ. ಮಾನ್ಯ ಕುಮಾರಸ್ವಾಮಿಯವರಾಗಲಿ, ನಾನಾಗಲಿ,...

ಶ್ರೀ ಕೆ.ಶ್ರೀನಿವಾಸಗೌಡ : ದೇವರ ತುಟಿಗೇ ತುಪ್ಪ ಹಚ್ಚಿ ಬಿಟ್ಟಿದ್ದೀರಿ. ನೀವು ಯಾರ ತುಟಿಗೂ ತುಪ್ಪ ಹಚ್ಚಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ಯಾವುದೂ ಬಿಟ್ಟಿಲ್ಲ. ಗುಡಿಗಳು ಬಿಟಟಿಲ್ಲ, ಮಠಗಳು ಬಿಟ್ಟಿಲ್ಲ, ಶಾಸಕರಿಗೂ ಬಿಟ್ಟಿಲ್ಲ, ಎಲ್ಲದಕ್ಕೂ ಬಿಲ್ ಮಾಡಿದ್ದೀರಿ. ಇಲ್ಲವೆಂದು ಹೇಳಬೇಡಿ. ಓಟು ರಾಜಕಾರಣ ಮಾಡಿಲ್ಲವೆಂದು ಹೇಳಬೇಡಿ. After all we are all politicians of different political parties. ಏನು ತಪ್ಪಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಸಿದ್ದರಾಮಯ್ಯನವರು ಹೇಳಿದಂತೆ, ಕೇವಲ ಶಾಲೆ ಮಂಜೂರು ಮಾಡಿ ಕೈಕಟ್ಟಿ ಕುಳಿತಿಲ್ಲ. ಶಾಲೆಗೆ ಬೇಕಾದಂತಹ staff ಏನು ಅಗತ್ಯವಿದೆ, ಅದಕ್ಕೆ ಹಣ ಮಂಜೂರು ಮಾಡಿದ್ದೇವೆ. ಶಿಕ್ಷಕರ ನೇಮಕ ಮಾಡಿಕೊಳ್ಳುತ್ತಿದ್ದೇವೆ. ಶಿಕ್ಷಕರನ್ನು ಯಾವ ಪ್ರಮಾಣದಲ್ಲಿ ಮಾಡಿಕೊಳ್ಳುತ್ತಿದ್ದೇವೆಂದರೆ, ಅಧ್ಯಕ್ಷರೆ, 2004–05ರಲ್ಲಿ 4,939 ಜನ ಪ್ರಾಥಮಿಕ ಪ್ರೌಢಶಾಲೆ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೇವೆ. 2005–06ರಲ್ಲಿ 6.872 ಜನ ಸೇಮಕಾತಿ ಆಗಿತ್ತು. 2006–07 ರಲ್ಲಿ 23,000 ಜನ ಶಿಕ್ಷಕರಿಗೆ ನೇಮಕ ಮಾಡಿಕೊಳ್ಳುತ್ತಿದ್ದೇವೆ.. ಇದರ ವಿವರವನ್ನು ನಾನು ನಿಮಗೆ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : Every year more than 10% of the teachers are retiring ಅದು ಫಿಲ್ ಮಾಡಬೇಕೋ ಇಲ್ಲವೋ? It is a routime work.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ನೋವು ನಮಗೆ ಅರ್ಥವಾಗುತ್ತದೆ. ನಾವು ಅಧಿಕಾರದಲ್ಲಿದ್ದ ಕಾಲದಲ್ಲಿ

ಮಾಡುವುದಕ್ಕಾಗಲಿಲ್ಲ, ಇಷ್ಟೊಂದು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಜನಕ್ಕೆ ಹೇಗೆ ಮುಖ ತೋರಿಸುವುದು, ಜನ ಏನು ಹೇಳುತ್ತಾರೆನ್ನುವ ಭಯವೋ ಏನೋ, ನಿಮಗೆ ಕಾಡುತ್ತಿರಬಹುದು, ನನಗೆ ಗೊತ್ತಿಲ್ಲ. ಆದರೆ ಈ ಅಂಕಿಅಂಶಗಳಲ್ಲಿ ಸತ್ಯಾಂಶ ಇದೆ ಎನ್ನುವುದು ಮಾತ್ರ ನಾನು ಅತ್ಯಂತ ವಿನಮ್ರತೆಯಿಂದ ಹೇಳುತ್ತಿದ್ದೇನೆ. ಮಾನ್ಯ ರಮೇಶ್‌ಕುಮಾರ್‌ರವರು ನನ್ನ ಭಾವನೆಗಳನ್ನು ಒಪ್ಪಿಕೊಳ್ಳುತ್ತಾರೆಂದು ನಾನು ಅಂದುಕೊಂಡಿದ್ದೇನೆ. ಚಿಂತನೆ ಮಾಡಬೇಕಾಗಿರುವಂತಹ ಸಲಹೆಗಳನ್ನು ನೀವು ಕೊಡಿ. ಶಿಕ್ಷಣಕ್ಕೆ ಇಷ್ಟು ಒತ್ತು ಕೊಟ್ಟಿದ್ದೇವೆ, 2006-07 ರಲ್ಲಿ 23,000 ಜನ ಶಿಕ್ಷಕರು ಎಂದರೆ, ಪ್ರಾಥಮಿಕ ಶಾಲೆಗೆ 16,208 ಜನ ಪ್ರೌಢಶಾಲೆಗೆ 5,382 ಜನ ಶಿಕ್ಷಕರು, ಪದವಿ ಪೂರ್ವ ಕಾಲೇಜು ತೆಗೆದು, ಶಿಕ್ಷಕರಿಗೆ 800 ಜನರಿಗೆ ನೇಮಕ ಮಾಡಿಕೊಂಡಿದ್ದೇವೆ. ಪ್ರಥಮ ದರ್ಜೆ ಕಾಲೇಜು 610 ಜನ ಒಟ್ಟು 23,000 ಜನರನ್ನು ಹೋದ ವರ್ಷ ನೇಮಕ ಮಾಡಿಕೊಂಡಿದ್ದೇವೆ. ಈ ವರ್ಷ 2007-08 ರಲ್ಲಿ 19,600 ಜನ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. 2006-07, 2007-08 ರಲ್ಲಿ ಒಟ್ಟು 42,600 ಜನ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೇವೆ. 2007-08ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು 12,000, ಪ್ರೌಢ ಶಾಲೆಗೆ 5,000, ಪದವಿ ಪೂರ್ವ ಶಿಕ್ಷಕರು, 1,100, ಪ್ರಥಮ ದರ್ಜೆ ಕಾಲೇಜಿಗೆ 1,500 ಹೀಗೆ 19,600 ಜನರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಇದು ಶಿಕ್ಷಣ ಕ್ಷೇತ್ರದಲ್ಲಿ ನಾವು ಮಾಡಿರುವಂತಹ ಕ್ರಾಂತಿಕಾರಿ ಬದಲಾವಣೆ. ಅಲ್ಪಸಂಖ್ಯಾತರ ಬಗ್ಗೆ ನಾವು ಮಾತನಾಡುತ್ತೇವೆ, ಅಲ್ಪಸಂಖ್ಯಾತರ ಬಗ್ಗೆ ನಾವು ಬಹಳಷ್ಟು ಚರ್ಚೆ ಮಾಡಿದ್ದೇವೆ. ಆದರೆ ಈ ಸಮ್ಮಿಶ್ರ ಸರ್ಕಾರ ಅತ್ಯಂತ ವಿನಮ್ರದಿಂದ ಅವರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆಂದು ನನ್ನ ಅಂಕಿ ಅಂಶಗಳ ಮೂಲಕ ತಮಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಆಶ್ಚರ್ಯವಾಗುತ್ತದೆ, ಅಲ್ಪಸಂಖ್ಯಾತರು ನಿಮ್ಮನ್ನು ನಂಬಿ ಬದುಕಿದವರು ಅವರು. ಆದರೆ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ನೀಡಿದ ಹಣ 2004-05ರಲ್ಲಿ 22.72 ಕೋಟಿ ರೂ. 2006-07ರಲ್ಲಿ 83 ಕೋಟಿ ರೂ. 2007-08ರಲ್ಲಿ 107 ಕೋಟಿ ರೂ. ಇದು ಅಲ್ಪಸಂಖ್ಯಾತರಿಗೆ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಎಂದು ಒಂದಿದೆ, 2005-06ರಲ್ಲಿ 1.330 ಲಕ್ಷ ಕೊಟ್ಟಿದ್ದಿರಿ, 2006-07ರಲ್ಲಿ 4,041 ಲಕ್ಷ ಕೊಟ್ಟಿದ್ದೇವೆ. ಈ ವರ್ಷ 2007-08ರಲ್ಲಿ 5,131 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 2007-08ರಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗೆ 107 ಕೋಟಿ ರೂ.ಗಳ ಹೆಚ್ಚಿನ ಸಂಪನ್ಮೂಲವನ್ನು ಅನುಕೂಲ ಮಾಡಿದ್ದೇವೆ. ನಾವು ಯಾವ

ರೀತಿ ಅಲ್ಪಸಂಖ್ಯಾತರಿಗೆ ಕಾರ್ಯಕ್ರಮ ರೂಪಿಸಿದ್ದೇವೆ ಎನ್ನುವುದಕ್ಕೆ ಈ ಅಂಕಿ ಅಂಶಗಳನ್ನು ನಾನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಅಧ್ಯಕ್ಷರೆ, ಇಲ್ಲಿಗೆ ರಾಷ್ಟ್ರಪತಿಗಳಾದ ಶ್ರೀಮಾನ್ ಅಬ್ದುಲ್ ಕಲಾಂಜಿಯವರು ಬಂದಾಗ ಗುಲ್ಬರ್ಗದಲ್ಲಿ ನಮ್ಮ ಪ್ರತಿಪಕ್ಷದ ನಾಯಕರ ಕ್ಷೇತ್ರದಲ್ಲಿ ಕಾರ್ಯಕ್ರಮ ಆಯಿತು. ನಾನು ಮತ್ತು ಮಾನ್ಯ ಮುಖ್ಯಮಂತ್ರಿ--ಗಳಿದ್ದೆವು. ಆ ಕಾರ್ಯಕ್ರಮ ಮುಗಿಸಿ ದೆಹಲಿಗೆ ಅವರ ವಿಮಾನದಲ್ಲಿಯೇ ಹೋದೆ, ಇಡೀ ಜಗತ್ತಿನ ಒಂದು ಕಾಲದಲ್ಲಿ ಹೆಸರು ಗೊತ್ತಿದ್ದುದು ದೆಹಲಿ ಒಂದೇ. ಆದರೆ ಜಗತ್ತಿನ ಯಾವುದೇ ದೇಶಕ್ಕೆ ಹೋದರೆ ಈಗ ಕೇಳಿಬರುತ್ತಿರುವಂತಹ ಹೆಸರು ಬೆಂಗಳೂರು. ಇದು ರಾಷ್ಟ್ರಪತಿಗಳು ಹೇಳಿದಂತಹ ಮಾತು ಇದು ಒಂದು ವರ್ಷದಿಂದ ಆಗಿಲ್ಲ. ಇದು ನಿಮ್ಮೆಲ್ಲರ ಪ್ರಯತ್ನದಿಂದ ಆಗಿರುವುದು. ನಾನು ಇಷ್ಟು ಹೊತ್ತು ಇಲ್ಲಿ ಹೇಳಿರುವುದರಲ್ಲಿ ನಿಮ್ಮ ಪ್ರಯತ್ನ ಇಲ್ಲ, ನಾನೊಬ್ಬನೇ ಮಾಡಿದ್ದೇನೆಂದು ಎಂದೂ ಹೇಳುವುದಿಲ್ಲ. I am the last man. ನಿಮ್ಮೆಲ್ಲರ ಪ್ರಯತ್ನದಿಂದ ಜಗತ್ತಿನಲ್ಲಿ ಇವತ್ತು ಬೆಂಗಳೂರನ್ನು ಗಮನಿಸುತ್ತಿದ್ದಾರೆ. ಅವರು ಹೇಳಿರುವಂತಹ ಮಾತೇನು ಮೂಲಭೂತ ಸವಲತ್ತುಗಳನ್ನು ಕೊಡುವುದಕ್ಕಾಗಿ ನೀವು ವಿಶೇಷ ಪ್ರಯತ್ನ ಮಾಡಬೇಕು. ಇದನ್ನು ಮಾನ್ಯ ಪ್ರಧಾನಿಯವರು ಎರಡು–ಮೂರು ಬಾರಿ ಹೇಳಿದರು, ರಾಷ್ಟ್ರ ಪತಿಗಳೂ ಹೇಳಿದರು. ಅದಕ್ಕೆ ನಾವು ಏನು ಮಾಡುತ್ತಿದ್ದೇವೆ, ರೈಲ್ವೆ ಕನೆಕ್ಟಿವಿಟಿ ಬಗ್ಗೆ Air port ಗಳ ಬಗ್ಗೆ ವಿಶೇಷ ಪ್ರಯತ್ನ ಮಾಡಿದ್ದೇವೆ. 2002–03 ರಿಂದ 2005--06 ರವರೆಗೆ ರೈಲ್ವೆಗೆ ನೀವು ಹಂಚಿಕೆ ಮಾಡಿದಂತಹ ಹಣ 162.10 ಕೋಟಿ ರೂ. ಖರ್ಚು ಮಾಡಿದ್ದು 102.30 ಕೋಟಿ. 2002–03 ರಿಂದ 2005–06 ರವರೆಗೆ 4 ವರ್ಷಗಳಲ್ಲಿ ಮಾಡಿರುವುದು. ನಾವು ಏನು ಮಾಡಿದ್ದೇವೆ, 2006–07, 2007–08 ಕಳೆದ ಎರಡು ವರ್ಷಗಳಲ್ಲಿ, ನೀವು projection ಮಾಡಿದ್ದು ಹಂಚಿಕೆ ತೋರಿಸಿರುವುದು 162.10 ಕೋಟಿ ರೂ. ಖರ್ಚಾಗಿರುವುದು 102.30 ಲಕ್ಷ. ಈ ವರ್ಷ ಮತ್ತು ಹೋದ ವರ್ಷ 2006–07ರಲ್ಲಿ ನಾವು ತೆಗೆದು ಇಟ್ಟ ಹಣ 120 ಕೋಟಿ ರೂ. ಖರ್ಚು ಮಾಡಿರುವುದು 104.89 ಲಕ್ಷ ರೂ. 2007–08ರಲ್ಲಿ 154 ಕೋಟಿ ತೆಗೆದು ಇಟ್ಟಿದ್ದೇವೆ, ಜುಲೈ 2007 ರವರೆಗೆ ಬಿಡುಗಡೆ ಮಾಡಿರುವ ಹಣ 58.65 ಲಕ್ಷ ರೂ. ಒಟ್ಟು 2006–07, 2007–08 ರಲ್ಲಿ 274 ಕೋಟಿ ರೂ. ಗಳಲ್ಲಿ 163.54 ಲಕ್ಷ ರೂ. ಜುಲೈ ತಿಂಗಳ ಕೊನೆಯವರಿಗೆ ರೈಲ್ವೆಗಾಗಿ ಬಿಡುಗಡೆ ಮಾಡಿದ್ದೇವೆ. ಸಣ್ಣ ವಿಮಾನ

ನಿಲ್ದಾಣಗಳ ಅಭಿವೃದ್ಧಿಗಾಗಿ 2002–03 ರಿಂದ 2005–06 ರವರೆಗೆ, ನಾಲ್ಕು ವರ್ಷ ನೀವು ಬಿಡುಗಡೆ ಮಾಡಿರುವುದು 21 ಕೋಟಿ ರೂ. ಖರ್ಚಾಗಿರುವುದು 18.80 ಲಕ್ಷ ರೂ. 2006–07, 2007–08ರಲ್ಲಿ ಎರಡು ವರ್ಷಗಳಲ್ಲಿ 6.25 ಲಕ್ಷ ಇಟ್ಟಿದ್ದೆವು, 20.93 ಲಕ್ಷ ರೂ. ಖರ್ಚಾಯಿತು. 2007–08ರಲ್ಲಿ 50 ಕೋಟಿ ರೂ. ತೆಗೆದು ಇಟ್ಟಿದ್ದೆವು, ಈಗಾಗಲೇ 42.15 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಈ ಹಣ ಸಣ್ಣ ವಿಮಾನ ನಿಲ್ದಾಣಗಳ ವಿಷಯಕ್ಕೆ ಸಂಬಂಧಪಟ್ಟಿದೆಯೇ ಹೊರತು International Airportಗೆ ಸಂಬಂಧಪಟ್ಟದ್ದಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಸಣ್ಣ ವಿಮಾನ ನಿಲ್ದಾಣ ಅಭಿವೃದ್ಧಿ ಮಾಡುವ ಸಲುವಾಗಿ ಬೆಳಗಾವಿ ವಿಮಾನ ನಿಲ್ದಾಣ ವಿಸ್ತರಣೆಗಾಗಿ 370 ಎಕರೆ ಭೂಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ 645 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕಾಗಿ 650 ಎಕರೆ ಭೂಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ ಈಗಾಗಲೇ ನಾವು 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಹಾಸನ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಖಾಸಗಿ ಸಹಭಾಗಿತ್ವದಲ್ಲಿ ಟೆಂಡರ್ ಪ್ರೊಸೆಸ್ ಪ್ರಾರಂಭವಾಗಿದೆ. ಅದೇ ರೀತಿ ಗುಲ್ಬರ್ಗಾ, ಬಿಜಾಪುರ, ಶಿವಮೊಗ್ಗ ವಿಮಾನ ನಿಲ್ದಾಣಗಳನ್ನೂ ಕೂಡ ಅಭಿವೃದ್ಧಿಪಡಿಸುವುದಕ್ಕೋಸ್ಕರ ಈಗಾಗಲೇ ಖಾಸಗಿ ಸಹಭಾಗಿತ್ವದಲ್ಲಿ ಅನೇಕ ದೊಡ್ಡ ದೊಡ್ಡ ಸುಮಾರು 19 ಕಂಪನಿಗಳು ಮುಂದೆ ಬಂದಿವೆ. ನಾನು ವಿನಮ್ರತೆಯಿಂದ ಒಂದು ಮಾತನ್ನು ನಿಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಮತ್ತು ಮುಖ್ಯಮಂತ್ರಿಗಳ ಯೋಚನೆ ಏನಿದೆಯೆಂದರೆ, ಈ ವರ್ಷದ ಕೊನೆಯೊಳಗೆ ಗುಲ್ಬರ್ಗಾ, ಬಿಜಾಪುರ, ಶಿವಮೊಗ್ಗ ಮತ್ತು ಹಾಸನ ವಿಮಾನ ನಿಲ್ದಾಣಗಳ ಕೆಲಸವನ್ನು ಪ್ರಾರಂಭಿಸಬೇಕು, ಕೇವಲ ಪ್ರೊಸೆಸ್ ಮಾಡುವುದೊಂದೇ ಅಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನೋಡಿ, ಆ Infrastructure Schemeನಲ್ಲಿ ಗುಲ್ಬರ್ಗಾದ್ದು 500 ಎಕರೆ consent ಮೇಲೆ ಲ್ಯಾಂಡ್‌ನ್ನು ನಾನು personally supervise ಮಾಡಿ handover ಮಾಡಿದೆ. ಇಷ್ಟೇ ಅಲ್ಲದೆ ಅದಕ್ಕೆ compound ಕೂಡ ಹಾಕಿಸಿಕೊಟ್ಟೆ. ಅದಕ್ಕೊಂದು ಹತ್ತಿಪ್ಪತ್ತು ಕೋಟಿ ಖರ್ಚು ಮಾಡಿದರೆ immediately ready ಆಗುತ್ತದೆ. ಆದರೆ ಅದಕ್ಕೆ ಇದುವರೆವಿಗೂ ಒಂದು ಪೈಸೆಯನ್ನೂ ಕೂಡ ಖರ್ಚು ಮಾಡಿಲ್ಲ. ಸುಮ್ಮನೆ ನೀವು ಏಕೆ ಹೇಳುತ್ತೀರಿ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಹಣ ಬಿಡುಗಡೆ ಮಾಡಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಎಲ್ಲಿ ಬಿಡುಗಡೆ ಮಾಡಿದ್ದೀರಿ? ನೋಡಿ ನಾನು ಯಾವಾಗಲೂ follow-up ಮಾಡುತ್ತಿರುತ್ತೇನೆ. ಇವತ್ತಿನ ದಿವಸ ಭೂಮಿಯನ್ನು ಕೊಡುವುದೇ ಕಷ್ಟ. ಹೀಗಿರುವಾಗ ರೈತರಿಗೆ consent ತೆಗೆದುಕೊಂಡು without acquisition ನಾವು ಭೂಮಿ ಕೊಡಿಸಿದ್ದೇವೆ. ಈಗ ಸುಮಾರು ಒಂದೂವರೆ ವರ್ಷದಿಂದ ಮೇಲಿಂದ ಮೇಲೆ ಸುಮಾರು ಹತ್ತು ಪತ್ರ ಬರೆದಿದ್ದೇನೆ. ಆದರೆ ಯಾರೂ ಕೂಡ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಎಲ್ಲ ಕ್ಷೇತ್ರಗಳ ಬಗ್ಗೆಯೂ ಅತ್ಯಂತ ಪ್ರಾಮಾಣಿಕವಾಗಿ ಚಿಂತನೆ ಮಾಡಿ ಅಭಿವೃದ್ಧಿಯತ್ತ ಸಾಗಲು ಗಮನವನ್ನು ಕೊಡುತ್ತಿದ್ದೇವೆ. ಈ ಗುಲ್ಬರ್ಗಾ ವಿಮಾನ ನಿಲ್ದಾಣದ ಬಗ್ಗೆ ಕೇಳಿರುವ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಮತ್ತು ಮಾನ್ಯ ಧರ್ಮಸಿಂಗ್‌ರವರು ಇಲ್ಲಿಯೇ ಇದ್ದಾರೆ. ಈ ಸದನ ಮುಗಿಯುತ್ತಿದ್ದಂತೆ ನಾನು ಅವರನ್ನು ಕರೆಯುತ್ತೇನೆ. ನಾನು ಮತ್ತು ಮುಖ್ಯಮಂತ್ರಿಗಳು ಅಲ್ಲಿಗೆ ಬರುತ್ತೇವೆ. ತತ್‌ಕ್ಷಣ ಅಲ್ಲಿ ವಿಮಾನ ನಿಲ್ದಾಣ ಆಗುವುದಕ್ಕೆ ಹಣಕಾಸಿನ ಯಾವ ರೀತಿಯ ನೆರವು ಬೇಕು ಎಂದು ಹೇಳಿ. ನಾವು ಬಿಡುಗಡೆ ಮಾಡುವುದಕ್ಕೆ ಸಿದ್ಧರಿದ್ದೇವೆ. ಶಿವಮೊಗ್ಗಕ್ಕೂ ಮುಂಚೆ ಗುಲ್ಬರ್ಗಾ ವಿಮಾನ ನಿಲ್ದಾಣದ ಕೆಲಸ ಪ್ರಾರಂಭವಾಗಬೇಕು ಎಂಬುದು ನನ್ನ ಇಚ್ಛೆ. ಅದಕ್ಕೆ ಯಾವ ರೀತಿಯ ಸಹಕಾರ ಬೇಕು ಎಂಬುದನ್ನು ತಿಳಿಯಲು ನಾನು ನಿಮ್ಮನ್ನೇ ಕರೆಯುತ್ತೇನೆ. ಕರೆದು ಮಾತನಾಡಿ ಹಣಕಾಸನ್ನು ಬಿಡುಗಡೆ ಮಾಡುವುದಕ್ಕೆ ನಾನು ಎಲ್ಲಾ ರೀತಿಯಿಂದಲೂ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ತಮ್ಮ ಹತ್ತಿರ ಕೂಡ ಮಾಹಿತಿ ಇದೆ. ಈಗ ಗುಲ್ಬರ್ಗಾ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಮಾಡುವುದಕ್ಕೆ Airports Authority of India ದವರು ಮುಂದೆ ಬಂದಿಲ್ಲ. ಅದಕ್ಕಾಗಿಯೇ ಖಾಸಗಿ ಸಹಭಾಗಿತ್ವದ ಆಧಾರದೊಂದಿಗೆ ಮಾಡಬೇಕೆಂದು ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಇನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಬಗ್ಗೆ ಒಂದು ವಿಶೇಷವಾದ ಪ್ರಯತ್ನವನ್ನು ಮಾಡಲಾಗಿದೆ. 1993-94 ರಿಂದ OTS ಯೋಜನೆ ಸಾಲ ಪಡೆದವರಿಗಾಗಿ ಜಾರಿಯಲ್ಲಿದೆ. ಈ ಯೋಜನೆಯಡಿಯಲ್ಲಿ 21607 ಘಟಕಗಳು ಪ್ರಯೋಜನವನ್ನು ಪಡೆದುಕೊಂಡಿವೆ. 1469 ಘಟಕಗಳು ಭಾಗಶಃ ಹಣ ಪಾವತಿಯನ್ನು

ಮಾಡಿದ್ದಾರೆ. ಅದಕ್ಕೋಸ್ಕರ ಈ OTS ಯೋಜನೆಯ ಸೌಲಭ್ಯಗಳನ್ನು ಪಡೆದ ಘಟಕಗಳಿಗೆ ನೀಡಲಾಗಿದ್ದ ಸಾಲದ ಮೊತ್ತ ಸುಮಾರು 579.13 ಕೋಟಿ ರೂಪಾಯಿಗಳು. ಈ OTS ಸೇರಿ ಒಟ್ಟು ವಸೂಲಾದ ಮೊತ್ತ 1009.65 ಕೋಟಿ ರೂಪಾಯಿಗಳು. OTS ನಲ್ಲಿ ವಸೂಲಾಗಬೇಕಿದ್ದ ಬಾಕಿ ಮೊತ್ತ 106 ಕೋಟಿ. ಬಡ್ಡಿ ಮನ್ನಾ ರೂಪದಲ್ಲಿ ಬಿಟ್ಟುಕೊಟ್ಟ ಮೊತ್ತ 688.55 ಕೋಟಿ ರೂಪಾಯಿಗಳು. ಪ್ರಸಕ್ತ ಈ ವರ್ಷದಿಂದ 10 ಲಕ್ಷದವರೆಗೆ ಸಾಲ ಪಡೆದವರಿಗೆ ಅನ್ವಯವಾಗುವಂತೆ, 2 ಲಕ್ಷದವರೆಗೆ ಸಾಲ ಪಡೆದವರಿಗೆ ಅಸಲು ಪಾವತಿಸಿದರೆ ಕರ್ನಾಟಕ ಸರ್ಕಾರ ಸರಳ ಬಡ್ಡಿಯನ್ನು ಪರುಪಾವತಿ ಮಾಡುತ್ತದೆ.

ಶ್ರೀ ಸಿದ್ದರಾಮಯ್ಯ : ಇದರಿಂದ ಏನು ಉಪಯೋಗ?

ಶ್ರೀ ಬಿ.ಎಸ್. ಯಡಿಯೂರಪ್ಪ : ಹೇಳುತ್ತೇನೆ. ಇದರಿಂದ ಏನು advantage ಎಂಬುದನ್ನು ಹೇಳುತ್ತೇನೆ. 2 ಲಕ್ಷದವರೆಗೆ ಸಾಲ ಪಡೆದಂಥವರು ಕೇವಲ ಅವರು ಅಸಲು ಪಾವತಿ ಮಾಡಿದರೆ ಸಾಕು. ಬಡ್ಡಿ, ಸುಸ್ತಿ ಬಡ್ಡಿ ಸಾವು,

ಶ್ರೀ ಸಿದ್ದರಾಮಯ್ಯ : ಇದನ್ನು ಏತಕ್ಕಾಗಿ ನೀವು ಮಾಡುತ್ತಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ಅವರಿಗೆ ಅನುಕೂಲ ಮಾಡಿಕೊಡುವುದ ಕ್ಕೋಸ್ಕರ. ಅವರು ಬೀದಿಪಾಲಾಗುತ್ತಿದ್ದಾರೆ, ಬಡ್ಡಿ, ಸುಸ್ತಿ ಬಡ್ಡಿ ಜಾಸ್ತಿಯಾಗುತ್ತಿದೆ.

ಶ್ರೀ ಸಿದ್ದರಾಮಯ್ಯ : ನಾನು ಏನು ಹೇಳುತ್ತೇನೆಂದರೆ, What is the intention of K.S.F.C? K.S.F.C. ಯಲ್ಲಿ nearly more than 70% misutilization ಆಗಿದೆ. ಸಾಲಗಾರರು ಯಾವ purposeಗೆ ಸಾಲವನ್ನು ತೆಗೆದುಕೊಂಡಿರುತ್ತಾರೋ ಆ purposeಗೆ ಸಾಲವನ್ನು ಉಪಯೋಗಿಸಿರು ವುದಿಲ್ಲ. ಅನೇಕ ಕಡೆ assets create ಆಗಿರುವುದಿಲ್ಲ. ಆದರೆ 5 ಲಕ್ಷ, 10 ಲಕ್ಷ, 8 ಲಕ್ಷ, ಹೀಗೆ ಸಾಲವನ್ನು ಮಾತ್ರ ತೆಗೆದುಕೊಂಡಿದ್ದಾರೆ. ಯಾರು ಸಾಲವನ್ನು ತೆಗೆದುಕೊಂಡು utilize ಮಾಡಿಕೊಳ್ಳದೇ ಸುಳ್ಳು documents create ಮಾಡಿಕೊಟ್ಟಿದ್ದಾರೆ, ಅಂಥವರಿಗೇಕೆ ನೀವು ಸಹಾಯ ಮಾಡುವುದಕ್ಕೆ ಹೋಗುತ್ತೀರಿ? ಇದರಿಂದ ಉಪಯೋಗ ಏನು? ಹೇಗೂ ಈಗಾಗಲೇ one-time settlement scheme ಇತ್ತು. ಅದೇ ಸಾಕಾಗಿತ್ತಲ್ಲವೆ? ಹತ್ತು

ಲಕ್ಷದವರೆಗೆ ಸಾಲ ತೆಗೆದುಕೊಂಡಿರುವವನಿಗೆ, ನೀನು ಏನೂ assets create ಮಾಡಿಲ್ಲಪ್ಪಾ, ನೀನೇ ಖರ್ಚು ಮಾಡಿಕೊಂಡುಬಿಟ್ಟಿದ್ದಿ, ನೀನು ಬಡ್ಡಿ ಕೊಡಬೇಡ ಎಂದು ಹೇಳಿ ಅಂಥವರಿಗೆ ನೀವು ಏಕೆ ಸಹಾಯ ಮಾಡುವುದಕ್ಕೆ ಹೋಗುತ್ತೀರಿ? ನಿಜವಾಗಿಯೂ ಅವರು industry ಮಾಡೇ ಇರುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಯಾರು 10 ಲಕ್ಷದೊಳಗೆ ಮತ್ತು 25 ಲಕ್ಷದವರೆಗೆ ಸಾಲವನ್ನು ಪಡೆದಿದ್ದಾರೆ, ಇವರ್‍ಯಾರು ದೊಡ್ಡ ಕೈಗಾರಿಕೋದ್ಯಮಿಗಳಲ್ಲ. ಕಳೆದ 18 ತಿಂಗಳುಗಳಿಂದ, , ,

ಶ್ರೀ ಸಿದ್ದರಾಮಯ್ಯ : ನೀವು ಒಂದು survey ಮಾಡಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು ಮಾಡಿಸುವುದಕ್ಕೆ ready ಇದ್ದೇನೆ. ಖಂಡಿತ, ನಿಮಗೇನು ಬೇಕೋ ಆ ಎಲ್ಲ ವಿವರಗಳನ್ನು, ಮಾಹಿತಿಗಳನ್ನು ಪಡೆಯೋಣ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ನಮ್ಮ ಕಡೆ ದೋಣಿಗಳಿಗೆ ಸುಮಾರು 2 ಲಕ್ಷದವರೆಗೆ ಸಾಲವನ್ನು ತೆಗೆದುಕೊಂಡಿರುವವರು ಇದ್ದಾರೆ. ಅಂಥವರಿಗೆ ಈಗ ಮಾಡಿರುವ scheme ನಿಂದ ಬಹಳ ಸಹಾಯವಾಗಿದೆ. ಖಂಡಿತವಾಗಿಯೂ ಈ scheme ನಿಂದ ಸಣ್ಣ ಕೈಗಾರಿಕೆಗಳವರಿಗೆ ತುಂಬಾ ಸಹಾಯವಾಗಿದೆ.

ಶ್ರೀ ಸಿದ್ದರಾಮಯ್ಯ : one time settlement scheme ಹಿಂದೆಯೇ ಇತ್ತಲ್ಲ. ಅದೇ ಸಾಕಾಗಿತ್ತಲ್ಲ. Fake documents create ಮಾಡಿರುವವರ ಮೇಲೆ Charges frame ಮಾಡಿ ಕ್ರಮ ತೆಗೆದುಕೊಳ್ಳಿ ಎಂದರೆ ಅದು ಆಗೊಲ್ಲವೆಂದು ಹೇಳುತ್ತೀರಿ. ಅಲ್ಲಿ ಹತ್ತು ಲಕ್ಷ ರೂಪಾಯಿ ಸಾಲ ಪಡೆದುಕೊಂಡಿರುವವರು ಅಸಲು ಪೂರ್ತಿ ಕಟ್ಟಿದರೆ ಪೂತಿ ಬಡ್ಡಿ ಮನ್ನಾ ಮಾಡುತ್ತೇವೆಂದು ಹೇಳುತ್ತೀರಿ, ಇದು ಯಾವ logic?

ಅಧ್ಯಕ್ಷರು : Action ನಿಮ್ಮ ಕಾಲದಲ್ಲಿಯೇ ತೆಗೆದುಕೊಳ್ಳಬಹುದಾಗಿತ್ತಲ್ಲ. ಸುಳ್ಳು ದಾಖಲಾತಿಗಳನ್ನು ಕೊಟ್ಟು misuse ಮಾಡಿದ್ದರೆ You could have taken action.

ಶ್ರೀ ಸಿದ್ದರಾಮಯ್ಯ : ಬೇಕಾದಷ್ಟು ಇದೆ. ಆ ಬಗ್ಗೆ ರಿಪೋರ್ಟ್ ಇದೆ.

ಅಧ್ಯಕ್ಷರು : ಆ ರೀತಿಯದ್ದು ಇದ್ದರೆ ನೀವು ಸಲಹೆ ಮಾಡಿ. ಇವರಾದರೂ ಕ್ರಮ ತೆಗೆದುಕೊಳ್ಳಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕೆ.ಎಸ್.ಎಫ್.ಸಿ. ಯಲ್ಲಿ ಹಿಂದೆ ಏನೇನು ಹಗರಣಗಳು ನಡೆದಿವೆ, ಯಾವ ರೀತಿಯಲ್ಲಿ ಅವ್ಯವಹಾರಗಳು ನಡೆದಿವೆ ಎಂಬುದನ್ನು ನಮ್ಮ ಸಿದ್ದರಾಮಯ್ಯನವರು ಹೇಳುತ್ತಿದ್ದಾರೆ. ಇದನ್ನು ಇಲ್ಲವೆಂದು ನಾನು ಹೇಳುತ್ತಿಲ್ಲ. ಅದರ ಬಗ್ಗೆ ಆ ಕಾಲದಲ್ಲಿಯೇ ಸಮಗ್ರವಾಗಿ ತನಿಖೆಯಾಗಬೇಕಾಗಿತ್ತು. ಈಗಲೂ ಕೂಡ ನಾನು ಅದರ ಬಗ್ಗೆ ವಿವರಗಳನ್ನು ನೋಡುತ್ತೇನೆ. ಆದರೆ ನಾವೇನು ಈಗ scheme ಮಾಡಿದ್ದೇವೆಂದರೆ ಯಾರು ಸಾಮಾನ್ಯ ಜನ, ವಿದ್ಯಾವಂತ ಯುವಕರು ಸಾಲ ಮಾಡಿ ಕಾರ್ಖಾನೆ ಬಾಗಿಲು ಮುಚ್ಚಿ ಮನೆ ಮಠ ಹರಾಜಿಗೆ ಬಂದಿದೆಯೋ ಅಂಥವರಿಗೆ ನಾವೇನು ಅನುಕೂಲ ಮಾಡುತ್ತಿದ್ದೇವೆಂದರೆ, 2 ಲಕ್ಷದವರೆವಿಗೆ ಸಾಲ ಪಡೆದಿರುವವರು ಅಸಲು ಕಟ್ಟಿದರೆ ಸಾಕು. ಬಡ್ಡಿಯನ್ನು ಕೆ.ಎಸ್.ಎಫ್.ಸಿ.ಗೆ ಸರ್ಕಾರ ಕಟ್ಟುತ್ತದೆ. 2 ಲಕ್ಷಕ್ಕಿಂತ 5 ಲಕ್ಷದವರೆವಿಗೆ ಸಾಲ ಪಡೆದಿರುವವರು ಸಲು ಮತ್ತು ಶೇಕಡಾ 25 ರಷ್ಟು ಸರಳ ಬಡ್ಡಿಯನ್ನು ಕಟ್ಟಬೇಕು. ಅವರಿಗೆ ಈ concession ಸಿಗುತ್ತದೆ. 5 ಲಕ್ಷದಿಂದ 10 ಲಕ್ಷದವರೆವಿಗೆ ಸಾಲ ಪಡೆದಿರುವವರು ಅಸಲು ಮತ್ತು ಶೇಕಡಾ 50 ರಷ್ಟು ಸರಳ ಬಡ್ಡಿಯನ್ನು ಪಾವತಿ ಮಾಡಬೇಕು. ಅವರಿಗೆ ಈ ಸವಲತ್ತು ಸಿಗುತ್ತದೆ. 10 ಲಕ್ಷದಿಂದ 25 ಲಕ್ಷದವರೆವಿಗೆ ಸಾಲ ಪಡೆದಿರುವವರಿಗೆ, ಈ ಭದ್ರತೆ, ಆಸ್ತಿ, ಲಭ್ಯವಿದ್ದರೆ ಆಸ್ತಿ ಒಳಗೊಂಡಂತೆ OTS ಅನ್ನು ಅನ್ವಯಿಸಲಾಗುತ್ತದೆ, ಅಸಲು ಮತ್ತು ಸರಳ ಬಡ್ಡಿ ಪಾವತಿಸಿದರೆ ದಂಡ ಬಡ್ಡಿಯನ್ನು ನಾವು ತೆಗೆದುಹಾಕುತ್ತೇವೆ. ಇದರಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಅವರಿಗೆ ಅನುಕೂಲವಾಗುತ್ತದೆ. 25 ಲಕ್ಷಕಿಂತಲೂ ಹೆಚ್ಚು ಸಾಲ ಪಡೆದಿರುವವರಿಗೂ ಅಸಲು ಪಾವತಿಸಿದರೆ ಬಡ್ಡಿ ಬಾಬ್ತು ಹಣವನ್ನು ಕೆ.ಎಸ್.ಎಫ್.ಸಿ.ಮನ್ನಾ ಮಾಡುತ್ತದೆ. ಅವರ ಆಸ್ತಿ ಪಾಸ್ತಿ ಇದ್ದರೆ ಅದು OTS ಗೆ ಅನ್ವಯವಾಗುತ್ತದೆ. ಈ ತರಹ ನಾವು ದೂರದೃಷ್ಟಿಯನ್ನಿಟ್ಟುಕೊಂಡು ಈ ಜನರಿಗೆ ಅನುಕೂಲ ಮಾಡುತ್ತಿದ್ದೇವೆ. ಇನ್ನು ವಿವಿಧ ಯೋಜನೆಗಳಲ್ಲಿ ನೇರ ಫಲಾನುಭವಿಗಳು ಸುಮಾರು 56 ಲಕ್ಷದ 44 ಸಾವಿರದ 68 ಜನರಿದ್ದಾರೆ ಎಂದು ನಾನು ಹೇಳಿದೆ. ಅದರ ಬಗ್ಗೆ ನಾನು ವಿವರವನ್ನು ಕೊಡುತ್ತೇನೆ. ಏಕೆಂದರೆ ಇದರ ಬಗ್ಗೆ ನಾನು vague ಆಗಿ ಹೇಳುವುದಕ್ಕೆ

ಇಷ್ಟಪಡುವುದಿಲ್ಲ. ಸಾಲ ಮತ್ತು ಬಡ್ಡಿ ಮನ್ನಾ ಯೋಜನೆಯಿಂದ ಸುಮಾರು 17 ಲಕ್ಷ ರೈತರಿಗೆ ಅನುಕೂಲವಾಗಿದೆ. ಇನ್ನು ಹೊಸ ಯೋಜನೆಯಾದ 'ಸಂಧ್ಯಾ ಸುರಕ್ಷಾ' ಯೋಜನೆಯನ್ನು ಈ ದೇಶದಲ್ಲಿಯೇ ಮೊದಲ ಬಾರಿಗೆ ತಂದಿದ್ದೇವೆ. ಈ ಯೋಜನೆಯನ್ನು ಎಲ್ಲ ಶಾಸಕರು ತಮ್ಮ ಕ್ಷೇತ್ರದಲ್ಲಿಯೇ 65 ವರ್ಷ ದಾಟಿದ, ಮಕ್ಕಳಿದ್ದರೂ ಕೂಡ 20 ಸಾವಿರ ರೂ.ಗಳವರೆಗೂ ವರಮಾನ ಹೊಂದಿರುವಂಥವರಿಗೆ ವೃದ್ಧಾಪ್ಯ ವೇತನವನ್ನು ಕೊಡಿಸಲು ಉಪಯೋಗ ಮಾಡಿಕೊಳ್ಳಬಹುದು. ಕೇಂದ್ರ ಸರ್ಕಾರದವರು ಮಾಡಿರುವ ಯೋಜನೆಯಲ್ಲಿ 65 ವರ್ಷ ದಾಟಿದ ಹಿರಿಯರಿಗೆ ಏನಾದರೂ ಮಕ್ಕಳಿದ್ದರೆ ವೃದ್ಧಾಪ್ಯ ವೇತನವನ್ನು ಕೊಡುತ್ತಿರಲಿಲ್ಲ. ಆದರೆ ಈಗ ನಾವು ಮಾಡಿರುವ 'ಸಂಧ್ಯಾ ಸುರಕ್ಷಾ' ಯೋಜನೆಗೆ 250 ಕೋಟಿ ರುಪಾಯಿ ಗಳನ್ನು ತೆಗೆದಿಟ್ಟಿದ್ದೇವೆ. ಫಲಾನುಭವಿಗಳಾಗಲು voters listನಲ್ಲಿ 65 ವರ್ಷ ಆಗಿರುವ ಬಗ್ಗೆ proof ಇದ್ದರೆ ಸಾಕು. 20 ಸಾವಿರದವರೆಗೆ ವರಮಾನ ವಿದ್ದರೂ ವೃದ್ಧಾಪ್ಯ ವೇತನ ದೊರೆಯುತ್ತದೆ. ಈ ಹೊಸ ಯೋಜನೆಯಿಂದ 7 ಲಕ್ಷ ಹಿರಿಯವರಿಗೆ ವೃದ್ಧಾಪ್ಯ ವೇತನ ದೊರೆಯುತ್ತದೆಯಾದ ಕಾರಣ ವಿಧಾನ ಮಂಡಲದ ಎಲ್ಲ ಸದಸ್ಯರು ತಮ್ಮ ತಮ್ಮ ಕ್ಷೇತ್ರದಲ್ಲಿ ಉಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : 65 ವರ್ಷಕ್ಕಿಂತ ಮೇಲ್ಪಟ್ಟವರಿಗೆ ವೃದ್ಧಾಪ್ಯ ವೇತನ ಕೊಡಲೆಂದೇ ಈಗಾಗಲೇ old age pension scheme ಇದೆಯಲ್ಲ.

ಅಧ್ಯಕ್ಷರು : ಅದರ ಬಗ್ಗೆಯೂ ಅವರು ಹೇಳಿದರಲ್ಲಾ ಸಿದ್ದರಾಮಯ್ಯ ನವರೆ, ಕೇಂದ್ರ ಸರ್ಕಾರದ schemeನಲ್ಲಿ 65 ವರ್ಷ ದಾಟಿದವರಿಗೆ ಏನಾದರೂ ಮಕ್ಕಳಿದ್ದರೆ ವೃದ್ಧಾಪ್ಯ ವೇತನವನ್ನು ಕೊಡುತ್ತಿಲ್ಲವೆಂದು ಹೇಳಿದ್ದಾರಲ್ಲ. ಆದರೆ ಇವರು ಮಾಡಿರುವ ಸ್ಕೀಂನಲ್ಲಿ 65 ವರ್ಷ ದಾಟಿದ್ದು 20 ಸಾವಿರದೊಳಗೆ ವರಮಾನವಿದ್ದು ಮಕ್ಕಳಿದ್ದರೂ ಕೂಡ ವೃದ್ಧಾಪ್ಯ ವೇತನ ದೊರೆಯುತ್ತದೆ.

(5-00 PM)

ಶ್ರೀ ಸಿದ್ದರಾಮಯ್ಯ : ಆ ರೀತಿ ಅಪ್ಪ ಅಮ್ಮನನ್ನು ಓಡಿಸಿಬಿಟ್ಟಿರುವವರು ಎಷ್ಟು ಜನ ಇದ್ದಾರೆ?

(ಗೊಂದಲ)

ಅಧ್ಯಕ್ಷರು : ಇರಲಿ ಅವರು ಮಾಡಿದ್ದಾರೆ ಬಿಡಿ. ಅವರು ಹೇಳಲಿ, ಈಗಾಗಲೇ 5.00 ಗಂಟೆ ಆಗಿಹೋಯಿತು. ಬಿಲ್ಲನ್ನು ಆ ಮನೆಗೆ ತೆಗೆದುಕೊಂಡು ಹೋಗಬೇಕು.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು : ಮಾನ್ಯ ಸಿದ್ದರಾಮಯ್ಯನವರ ಕಾಲದಲ್ಲಿ ತಿಂಗಳಿಗೆ 100 ರೂಪಾಯಿ ಕೊಡುತ್ತಿದ್ದರು, ಈಗ 400 ರೂಪಾಯಿ ಕೊಡುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ದೇವದಾಸಿಯರಿಗೆ ನಾವು ಉಚಿತವಾಗಿ 10,000 ರೂಪಾಯಿ ಕೊಡುತ್ತಿದ್ದೇವೆ. ಅವರು 10,000 ರೂಪಾಯಿಗಳನ್ನು KMFನಿಂದ ಸಾಲ ತೆಗೆದುಕೊಳ್ಳಬೇಕು. ಕರೆಯುವಂತಹ ಆಕಳು ಅಥವಾ ಎಮ್ಮೆ ಕೊಡುವುದಕ್ಕೋಸ್ಕರ 50,000 ಫಲಾನುಭವಿಗಳಿಗೆ ಈ ಯೋಜನೆಯನ್ನು ಮಾಡುತ್ತಿದ್ದೇವೆ. ಸ್ವಾತಂತ್ರ ಹೋರಾಟಗಾರರಿಗೆ 1,500 ರೂಪಾಯಿಯಿಂದ 3,00 ರೂಪಾಯಿಯವರೆಗೆ ಏರಿಕೆ ಮಾಡಿದ್ದೇವೆ. 11,400 ಜನ ಸ್ವಾತಂತ್ರ ಸಂಗ್ರಾಮಿಗಳಿದ್ದಾರೆ. ಅಂಗವಿಕಲರಿಗೆ ನೀಡುವಂತಹ monthly pension ಎಷ್ಟಿತ್ತು? ನೂರು ರೂಪಾಯಿ ಇತ್ತು. ಅದನ್ನು ಹೋದ ವರ್ಷ 200 ರೂಪಾಯಿ ಮಾಡಿದ್ದು, ಈ ವರ್ಷ 400 ರೂಪಾಯಿ ಮಾಡಿದ್ದೇವೆ. ದೇಶದಲ್ಲೇ ಮೊದಲ ಬಾರಿಗೆ ಇದನ್ನು ನಾವು ಮಾಡಿದ್ದೇವೆ. ಮಕ್ಕಳಿದ್ದರೂ ಕೂಡ 65 ವರ್ಷದ ಯಜಮಾನ ಇದ್ದರೂ ಗಂಡನಿಗೂ ಬರುತ್ತದೆ ಹಾಗೂ ಹೆಂಡತಿಗೂ ಬರುತ್ತದೆ. ಇದೂ ಕೂಡ ನಮ್ಮ ಒಂದು ಯೋಜನೆ. 4,10,378 ಜನರಿಗೆ ಅಂಗವಿಕಲ ವೇತನ ಕೊಡುತ್ತಿದ್ದೇವೆ. ವೃದ್ಧಾಪ್ಯ ವೇತನ ಹೆಚ್ಚಳ 5,40,813 ಜನರಿಗೆ ಆಗುತ್ತಿದೆ. ವಿಧವಾ ವೇತನ ಹೆಚ್ಚಳ 6,81,477 ಜನರಿಗೆ ಹಾಗೂ 8ನೇ ತರಗತಿಯಲ್ಲಿ ಓದುತ್ತಿರುವ ಬಡ ಗಂಡು ಮತ್ತು ಹೆಣ್ಣುಮಕ್ಕಳಿಗೆ ಬೈಸಿಕಲ್‌ನ್ನು 4,00,000 ಮಕ್ಕಳಿಗೆ ಕೊಡುತ್ತಿದ್ದೇವೆ. ಎತ್ತುಗಳ ವಿತರಣೆಗೆ 10,000 ರೂಪಾಯಿಗಳನ್ನು 50,000 ಜನರಿಗೆ ಕೊಡುತ್ತಿದ್ದೇವೆ. ನಮ್ಮ ರಾಜ್ಯ ಸರ್ಕಾರಿ ನೌಕರರಿಗೆ ವೇತನ ಹೆಚ್ಚಳದ ಅನುಕೂಲತೆಯು 11,00,000 ನೌಕರರಿಗೆ ಅನುಕೂಲ ಆಗುತ್ತದೆ. ಭಾಗ್ಯಲಕ್ಷ್ಮಿ ಯೋಜನೆಯಲ್ಲಿ 1,50,000 ಜನ ಅದರ benefit ತೆಗೆದುಕೊಳ್ಳುತ್ತಾರೆ. ಒಟ್ಟು 56,44,068 ಜನರಿಗೆ ಈ ಯೋಜನೆಗಳಿಂದ ಲಭವಾಗುತ್ತಿದೆ. ಬಹುಶಃ

ಸ್ವಾತಂತ್ರ್ಯ ನಂತರ ಕರ್ನಾಟಕದಲ್ಲಿ ಮಾತ್ರ ಈ ರೀತಿ ಹೆಚ್ಚಳವನ್ನು ಮಾಡುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ಈ ರಾಜ್ಯದಲ್ಲಿ ಹೊಸ ಹೊಸ ರಸ್ತೆಗಳನ್ನು ಏನು ಹುಟ್ಟು ಹಾಕುತ್ತೇವೆ ಎಂದರೆ ಕೃಷಿ ಮಾರುಕಟ್ಟೆ ಆಯೋಗ ರಚನೆ ಮಾಡಿದ್ದೇವೆ. ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಪ್ರಾರಂಭ ಮಾಡುವುದಕ್ಕೆ ಕಾರ್ಯಕ್ರಮ ರೂಪಿಸಿದ್ದೇವೆ. ಹಾಸನದಲ್ಲಿ ಕೃಷಿ ವಿಶ್ವವಿದ್ಯಾಲಯ ಮತ್ತು ಪಶು ವೈದ್ಯಕೀಯ ವಿಶ್ವವಿದ್ಯಾಲಯ ಪ್ರಾರಂಭ ಮಾಡುತ್ತಿದ್ದೇವೆ. ಮೈಸೂರಿನಲ್ಲಿ ಸಂಗೀತ ವಿಶ್ವವಿದ್ಯಾಲಯ ಪ್ರಾರಂಭ ಮಾಡುತ್ತಿದ್ದೇವೆ. ಧಾರವಾಡದಲ್ಲಿ ಹಿಂದೂಸ್ಥಾನಿ ತರಬೇತಿ ಕೇಂದ್ರ ಪ್ರಾರಂಭ ಮಾಡುತ್ತಿದ್ದೇವೆ. ಗುಲ್ಬರ್ಗಾದಲ್ಲಿ ಡೈರಿ ವಿಜ್ಞಾನ ಕಾಲೇಜು ಪ್ರಾರಂಭ ಮಾಡುವುದಕ್ಕೆ ಯೋಜನೆ ಮಾಡಿದ್ದೇವೆ. ಬೆಂಗಳೂರಿನಲ್ಲಿ ಮಧುಮೇಹ ಸಂಸ್ಥೆ ಪ್ರಾರಂಭ ಮಾಡುತ್ತಿದ್ದೇವೆ. ಕಾರವಾರ ಮತ್ತು ಬೆಂಗಳೂರಿನಲ್ಲಿ ಆಭರಣ ಮತ್ತು ಇತರೆ ತಯಾರಿಕಾ ವಸ್ತು ಕೇಂದ್ರವನ್ನು ತೆರೆಯುತ್ತಿದ್ದೇವೆ. ಮಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಖಾಯಂ ಕೈಗಾರಿಕಾ ವಸ್ತು ಪ್ರದರ್ಶನ ಮಾಡುವುದಕ್ಕೆ ಹೊರಟ್ಟಿದ್ದೇವೆ. ಶಿವಮೊಗ್ಗದಲ್ಲಿ ಒಂದು ವಿಷಾಣು ಅಧ್ಯಯನ ಸಂಸ್ಥೆಯನ್ನು ಮಾಡುತ್ತಿದ್ದೇವೆ. ಶಿವಮೊಗ್ಗ ಅಥವಾ ಗುಲ್ಬರ್ಗಾದಲ್ಲಿ ಕಾನೂನು ಕಾಲೇಜು ಮಾಡುತ್ತಿದ್ದೇವೆ. ಮಂಗಳೂರಿನಲ್ಲಿ ಯಕ್ಷಗಾನ ಅಕಾಡೆಮಿ ಮಾಡುತ್ತಿದ್ದೇವೆ. ಬೀದರ್‌ನಲ್ಲಿ ತೋಟಗಾರಿಕಾ ಕಾಲೇಜು ಮಾಡುತ್ತಿದ್ದೇವೆ. ಶಿವಮೊಗ್ಗದ ಪಶುಸಂಗೋಪನಾ ವಿದ್ಯಾಲಯ ತೆರೆಯುತ್ತಿದ್ದೇವೆ. ರಾಮನಗರ, ಹಾಸನ, ಕುಶಾಲನಗರ, ಚಾಮರಾಜನಗರ, ಬಳ್ಳಾರಿ, ಹೂವಿನಹಡಗಲಿ, ಹಾವೇರಿ, ಕೆ.ಆರ್.ಪೇಟೆ ಮತ್ತು ರಾಯಚೂರುಗಳಲ್ಲಿ Engineering College ಮಾಡುತ್ತಿದ್ದೇವೆ. ಬಳ್ಳಾರಿಯಲ್ಲಿ ದಂತ ವೈದ್ಯಕೀಯ ಕಾಲೇಜು ಮಾಡುತ್ತಿದ್ದೇವೆ.

ಅಧ್ಯಕ್ಷರು : ಅವರ ಸಾಧನೆಯನ್ನು ಹೇಳುವುದಕ್ಕೆ ಬಿಡಿ ಸ್ವಾಮಿ. ಅವರು ಸರ್ಕಾರದ ಸಾಧನೆಗಳನ್ನು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : Hand bill print ಮಾಡಿ ಹೊರಗಡೆ ಹಚ್ಚಿರಿ. ಸುಮ್ಮನೆ ಇವೆಲ್ಲಾ ಏಕೆ ಹೇಳುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಬಜೆಟ್ ಹೇಗೆ ಇದೆ ಎಂದರೆ "ಕೈಯಲ್ಲಿ ಕಾಸೂ ಇಲ್ಲ, ಮೈಯಲ್ಲಿ ಉಲ್ಲಾಸವೂ ಇಲ್ಲ ಎನ್ನುವ ಹಾಗೆ" ಇದೆ. ಹೇಳೋದೆ ಹೇಳುವುದು.

ಅಧ್ಯಕ್ಷರು : ಈಗ ಯೋಜನೆ ರೂಪಿಸಿದ್ದಾರೆ. ಆ ಯೋಜನೆ ಜನರಿಗೆ ತಲುಪದೇ ಇದ್ದರೆ ಕೆಡುವವರು ಅವರೇ. ಆದುದರಿಂದ ನೋಡೋಣ. ಹೌದಲ್ಲವೇ? ಯೋಜನೆಯನ್ನು ಮಾಡಿದ್ದಾರೆ, ಕಾಸಿಲ್ಲವೆಂದು ಜನರಿಗೆ ಏನಾದರೂ ತಲುಪಿಸದೇ ಇದ್ದರೆ ಕೆಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕೈಗಾರಿಕಾ ಕ್ಷೇತ್ರದಲ್ಲಿ ಒಂದು ಕ್ರಾಂತಿಯಾಗಿದೆ. ಬಹಳ ದೊಡ್ಡ ರೀತಿಯಲ್ಲಿ ಅಮೂಲಾಗ್ರವಾದ ಬದಲಾವಣೆಯಾಗಿದೆ. ಇದರ ಬಗ್ಗೆ ಮಾತನಾಡ ಬೇಕಾಗಿತ್ತು. ಆದರೆ ಸಮಯಾಭಾವದಿಂದ ಆಗುತ್ತಿಲ್ಲ. ಈ ದೇಶದ ಕೈಗಾರಿಕಾ ಬೆಳವಣಿಗೆ ಸರಾಸರಿ ಎಂಟು ಇದ್ದರೆ ಕರ್ನಾಟಕದ ಕೈಗಾರಿಕಾ ಬೆಳವಣಿಗೆ 10.7% ಇದೆ. ರಾಜ್ಯಕ್ಕೆ ಸುಮಾರು 29 ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗೆ ನಮಗೆ ಅನುಮತಿ ದೊರೆತಿದೆ. ನಾವು ದೇಶದಲ್ಲಿ ತೃತೀಯ ಸ್ಥಾನದಲ್ಲಿದ್ದೇವೆ. ಕರ್ನಾಟಕ ರಾಜ್ಯ 27,064 ಕೋಟಿ ರೂಪಾಯಿಗಳ ವಿದೇಶಿ ನೇರವಿನ ಬಂಡವಾಳವನ್ನು ಆಕರ್ಷಿಸಿ ದೇಶದಲ್ಲಿ ದ್ವಿತೀಯ ಸ್ಥಾನದಲ್ಲಿ ನಾವು ಇದ್ದೇವೆ. ಕಳೆದ 11 ತಿಂಗಳಿನಲ್ಲಿ ಅನೇಕ ಕೈಗಾರಿಕೆಗಳನ್ನು ತರುವಂತಹ ಪ್ರಯತ್ನ ಮಾಡಿದ್ದೇವೆ. ರಾಜ್ಯದ ರಫ್ತು ಬೆಳವಣಿಗೆ ಕಳೆದ ವರ್ಷಕ್ಕಿಂತ ಶೇಕಡ 31.5 ರಷ್ಟು ಬೆಳವಣಿಗೆ ಸಾಧಿಸಿ 82,279 ಕೋಟಿಯವರೆಗೆ ನಾವು ತಲುಪಿದ್ದೇವೆ. ಈ ರೀತಿಯಾಗಿ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಸುವರ್ಣ ಕಾಯಕ ಯೋಜನೆಯಡಿಯಲ್ಲಿ 37,773 ಮಂದಿಗೆ ನೇರ ಉದ್ಯೋಗ ಮತ್ತು 17,994 ಮಂದಿಗೆ ತರಬೇತಿ ವ್ಯವಸ್ಥೆಯನ್ನು ಮಾಡಿದ್ದೇವೆ. ಒಟ್ಟು 59,767 ಮಂದಿಗೆ ಸುವರ್ಣ ಕಾಯಕ ಯೋಜನೆಯಡಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಇದು ಒಂದು ಲಕ್ಷದವರೆಗೆ ತಲುಪಬೇಕು ಎನ್ನುವಂತಹ ನಮ್ಮ ಅಪೇಕ್ಷೆ ಇದೆ. ಈ ಸಮ್ಮಿಶ್ರ ಸರ್ಕಾರ ಎಷ್ಟು ದಿವಸ ಇರುತ್ತದೆ? ಅಧಿಕಾರ ಹಸ್ತಾಂತರ ಆಗುತ್ತದೋ ಇಲ್ಲವೋ ಎನ್ನುಂತಹ ಮಾತುಗಳು ನಡೆಯುತ್ತಿವೆ. ನಮಗೆ ನಿಮ್ಮೆಲ್ಲರ ಸಹಕಾರ ಬೇಕು.

ಶ್ರೀ ಬಿ.ಎ. ಜೀವಿಜಯ : ಮಾನ್ಯ ಉಪ ಮುಖ್ಯಮಂತ್ರಿಗಳೇ, ನೀವು ಎಲ್ಲರಿಗೂ ಎಲ್ಲಾ ಕೊಟ್ಟಿದ್ದೀರಿ. ನಮ್ಮ ಕೊಡಗಿನ ಕಾಫಿ ತೋಟದವರಿಗೆ ಏನು

ಕೊಡುತ್ತೀರಿ ಹೇಳಿ. ಎಲ್ಲಾ ಸರ್ವ ನಾಶವಾಗಿ ಹೋಗಿಬಿಟ್ಟಿದೆ. ನಮಗೆ ಏನು ಕೊಡುತ್ತೀರಿ? ಎಲ್ಲರಿಗೂ ಕೊಟ್ಟಿದ್ದೀರಿ.

ಅಧ್ಯಕ್ಷರು : ಸಚೇತಕರೆ ನಿಮ್ಮವರೆಲ್ಲಾ ಹೊರಗಡೆ ಹೋಗುತ್ತಿದ್ದಾರೆ, ಅವರಿಗೆ ಕುಳಿತುಕೊಳ್ಳಿ ಎಂದು ಹೇಳಿ. ಇಲ್ಲಿ ಇನ್ನು ಮುಂದೆ attendance register ತಂದು ಇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅತ್ಯಂತ ವಿನಯದಿಂದ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ಬಜೆಟ್ ಬಗ್ಗೆ ಮನೆ ಮನೆಗಳಲ್ಲಿ ಚರ್ಚೆಯಾಗುತ್ತದೆ. ಸಾಮಾನ್ಯ ಜನಗಳು ಹಿಮದೆ ಬಜೆಟ್ ಬಂದಾಗ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಸುಮಾರು 55ರಿಂದ 60 ಲಕ್ಷ ಜನರ ಕುಟುಂಬಕ್ಕೆ ಈ ಸವಲತ್ತು ಸಿಗುತ್ತಿರುವುದಿಂದ ಅವರು ಯೋಚನೆ ಮಾಡುತ್ತಾರೆ. ಹಿಂದೆ ಅಧಿಕಾರದಲ್ಲಿದ್ದಂತಹ ಜನರಿಗೆ ನಾವು ತೆರಿಗೆ ಹಣವನ್ನು ಕೊಡುತ್ತಿದ್ದೇವಲ್ಲ, ಅದು ಎಲ್ಲಿ ಹೋಗುತ್ತಿತ್ತು? ನಮಗೆ ಆಗ ಏಕೆ ಈ ಸವಲತ್ತು ಸಿಗಲಿಲ್ಲವೆಂದು ಸಾಮಾನ್ಯವಾಗಿ ಚರ್ಚೆಯಾಗುತ್ತಿದೆ. ನಾನು ಯಾರನ್ನು ಆರೋಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಅಧ್ಯಕ್ಷರು : ಹಿಂದೆಲ್ಲಾ ದುಡ್ಡು ನಿಮ್ಮ ಜೇಬಿನೊಳಗೆ ಹೋಗಿಬಿಡುತ್ತಿತ್ತು ಎಂದು ಅದರ ಅರ್ಥ. ಅದನ್ನು ಅವರು indirect ಆಗಿ ಹೇಳುತ್ತಿದ್ದಾರೆ.

ಶ್ರೀ ಹೆಚ್.ಡಿ.ಬಸವರಾಜ್ : ನಿಮ್ಮ ಕಾಲದಲ್ಲಿ ನಿಮಗೆ ಅಧಿಕಾರ ಕೊಟ್ಟಾಗಲೂ ಕೂಡ ನೀವು ಅದನ್ನು ಸದುಪಯೋಗ ಮಾಡಲಿಲ್ಲ. ಆ ಹಣವನ್ನೆಲ್ಲಾ ಅವರು ಸದುಪಯೋಗ ಮಾಡುತ್ತಿದ್ದಾರೆ, ಅದಕ್ಕೆ ಪ್ರಶಂಸೆ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅಧಿಕಾರ ಹಸ್ತಾಂತರ ಆಗುತ್ತದೋ ಇಲ್ಲವೋ ಎನ್ನುವ ಚರ್ಚೆ ಮಾನ್ಯ ಗೌರವಾನ್ವಿತ ಸದಸ್ಯರು ಮಾಡಿದರು. ಈ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಜೊತೆ ಏನು ಒಡಂಬಡಿಕೆಯಾಗಿದೆ, ಅದು ನಾಡಿನ ಜನರಿಗೆ ಗೊತ್ತಿದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ಸಮಸ್ತ ಕನ್ನಡ ನಾಡಿನ ಜನರ ಸಮಕ್ಷಮಕ್ಕೆ ಬಂದಿರುವಂಥಾದ್ದು. ನಾನು ನಾಲ್ಕು ದಶಕಗಳ ಹೋರಾಟದ ಹಿನ್ನೆಲೆಯಲ್ಲಿ ಬಂದಿರುವವನು. ನನ್ನ ಮೌನವನ್ನು, ಶಾಂತವಾಗಿರುವುದನ್ನು

ಯಾರೂ ದಯಮಾಡಿ ಹಗುರವಾಗಿ ತೆಗೆದುಕೊಳ್ಳಬೇಡಿ. ನಾನು ಮೌನವಾಗಿರುವುದು, ಶಾಂತವಾಗಿರುವುದು, ಸಮಾಧಾನವಾಗಿರುವುದು ಈ ರಾಜ್ಯದ ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿಯಾಗಬಾರದು. 40 ತಿಂಗಳು ನಾವು ಆಡಳಿತವನ್ನು ಪೂರ್ಣ ಮಾಡಬೇಕು ಎನ್ನುವ ದೃಷ್ಟಿಯಿಂದ ಕೆಲಸವನ್ನು ಮಾಡುತ್ತಿದ್ದೇವೆ. ಸನ್ಮಾನ್ಯ ಕುಮಾರಸ್ವಾಮಿಯವರು ಇನ್ನೂ ಯುವಕರು ಇದ್ದಾರೆ. ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ದೀರ್ಘಕಾಲ ಈ ನಾಡಿನ ಜನರ ಸೇವೆಯನ್ನು ಮಾಡಬೇಕು ಎಂದು ಸಂಕಲ್ಪ ತೊಟ್ಟಿರುವಂತಹ ಒಬ್ಬ ಮುಖ್ಯಮಂತ್ರಿಗಳು. ಅವರ ಭವಿಷ್ಯ ಉಜ್ವಲವಾಗಬೇಕು, ಉಜ್ವಲವಾಗಿದೆ ಎಂದು ನಾನು ಭಾವಿಸಿದ್ದೇನೆ.

ಅವರು ಅಧಿಕಾರ ಹಸ್ತಾಂತರ ಮಾಡುತ್ತಾರೆಂಬ ವಿಶ್ವಾಸ ನನಗೆ ಸಂಪೂರ್ಣ ಇದೆ. ಈ ಅಧಿಕಾರ ಹಸ್ತಾಂತರದ ಸಮಯದಲ್ಲಿ ಅನುಮಾನ ಹುಟ್ಟಿಸುವಂಥ ಕಟ್ಟು ಕತೆಗಳಿಗೆ ನಾನು ಕಿವಿ ಕೊಡುವುದಕ್ಕೆ ಇಚ್ಛೆಪಡುವುದಿಲ್ಲ. ಮೈತ್ರಿ ಸರ್ಕಾರ ರಚನೆ ಮಾಡುವಂಥ ಸಂದರ್ಭದಲ್ಲಿ, ನಾವು ಏನು ಒಂದು ವಚನವನ್ನು ನೀಡಿದ್ದೆವು, ಅದನ್ನು ಪಾಲನೆ ಮಾಡಿದ್ದೇವೆ. ನಾವು ಪರಸ್ಪರ ಕುಳಿಯು ಬಹಿರಂಗವಾಗಿ ಚರ್ಚೆ ಮಾಡಿದ್ದೇವೆ. ಅದರಂತೆ ಸರ್ಕಾರ ಮುಂದುವರೆಯುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರ ಮತ್ತು ನನ್ನ ಸಂಬಂಧ, ನಾನು ಉಪ ಮುಖ್ಯಮಂತ್ರಿ ಯಾಗಿ ಈ ಅಧಿವೇಶನ ಕೊನೆಯ ಅಧಿವೇಶನವಾಗಿದೆ. ಮುಂದೆ ಬೇರೆ ಅಧ್ಯಾಯ, ಅಧಿಕಾರ ಹಸ್ತಾಂತರವಾಗಬೇಕು. ಆ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಅವರ ಸಚಿವ ಸಂಪುಟದ ಸದಸ್ಯರು ಯಾವ ರೀತಿಯಲ್ಲಿ ನಮ್ಮ ಜೊತೆಯಲ್ಲಿ ನಡೆದುಕೊಂಡಿದ್ದಾರೋ, ಅದಕ್ಕಿಂತ ಹತ್ತು ಪಟ್ಟು ಒಳ್ಳೆಯ ರೀತಿಯಲ್ಲಿ ನಳೆ ದಿವಸ ಹೊಸ ಅಧ್ಯಾಯ ಪ್ರಾರಂಭವಾದ ಮೇಲೆ, ನನಗೆ ಆ ಜವಾಬ್ದಾರಿಯನ್ನು ಕೊಟ್ಟ ಮೇಲೆ, ಅದೇ ವಿನಂಮ್ರತೆಯಿಂದ, ಗೌರವದಿಂದ, ಸಹಕಾರವನ್ನು ಕೊಡುತ್ತೇವೆಂಬ ಭರವಸೆಯನ್ನು ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಈ ಸದನದ ಮೂಲಕ ಕೊಡುತ್ತಿದ್ದೇನೆ. ಯಾವ ಕಾರಣಕ್ಕೂ ಸಹ............

ಶ್ರೀ ಕೆ.ಶ್ರೀನಿವಾಸ ಗೌಡ : ತಾವು ಮಾನ್ಯ ಮುಖ್ಯಮಂತ್ರಿಯವರಿಗೆ ಪ್ರೋನೋಟ್ ಬರೆದುಕೊಡುತ್ತಿದ್ದೀರಿ.

ಶ್ರೀ ಆರ್.ವಿ.ದೇಶಪಾಂಡೆ : ನಿಮ್ಮ ಮನೆ ವ್ಯವಹಾರ ಇಲ್ಲಿ ಏಕೆ?

ಶ್ರಿ ಎನ್.ಯೋಗೀಶ್ ಭಟ್ : ನೀವೇ ಪ್ರಸ್ತಾಪ ಮಾಡಿರುವುದು, ಅದಕ್ಕೆ ಅವರು ಉತ್ತರ ಕೊಡಬೇಕಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ವಿಷಯ ರಾಜ್ಯದ ಜನ ಕಣ್ಣಲ್ಲಿ ಕಣ್ಣು ಇಟ್ಟು ನೋಡುತ್ತಿದ್ದಾರೆ, ಗಮನಿಸುತ್ತಿದ್ದಾರೆ. ಮಾಧ್ಯಮದ ಮೂಲಕ ಅನೇಕ ಲೇಖನಗಳು ಬರುತ್ತಿವೆ. ನಮ್ಮ ಪತ್ರಿ ಪಕ್ಷದ ನಾಯಕರುಗಳು ಇಲ್ಲಿ ಅನೇಕ ಬಾರಿ ಚರ್ಚೆ ಮಾಡಿದ್ದೀರಿ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಯವರು ಸಮಕ್ಷಮದಲ್ಲಿ ನಾನು ಒಂದು ಮಾತನ್ನು ಹೇಳುತ್ತಿರುವಂಥದ್ದು. ಕಳೆದ 18 ತಿಂಗಳುಗಳಲ್ಲಿ ನಾವು ಯಾರು ನಿರೀಕ್ಷೆ ಮಾಡದ ರೀತಿಯಲ್ಲಿ, ಅವರು ಹೇಳಿದಂತೆ, ನಾವು ಮಾತುಕತೆ ಆಡಿದಂತೆ ನಡೆದುಕೊಂಡಿದ್ದಾರೆ. ನಾನು ಮತ್ತು ನಮ್ಮ ಸಚಿವ ಸಂಪುಟದವರು ಅದೇ ರೀತಿಯಲ್ಲಿ ನಡೆದುಕೊಂಡಿದ್ದಾರೆ. ಯಾವುದೇ ಭೇದಭಾವಕ್ಕೆ ನಮ್ಮ ಶಾಸಕರಲ್ಲಿ ಅವಕಾಶವನ್ನು ಮಾಡಿಕೊಟ್ಟಿಲ್ಲ. ಆದುದರಿಂದ ನಾನು ಹೇಳುತ್ತಿರುವಂಥದ್ದು, ಈ ಮನೆಯ ಎಲ್ಲಾ ಸದಸ್ಯರುಗಳಿಗೆ, ನಾನು ಉಪ ಮುಖ್ಯಮಂತ್ರಿಯಾಗಿ, ಹಣಕಾಸಿನ ಸಚಿವನಾಗಿ, ಕೆಲಸ ಮಾಡುವುದಕ್ಕೆ ತಾವೆಲ್ಲರೂ ಮತ್ತು ಮಾಧ್ಯಮದ ಸ್ನೇಹಿತರು ಸಹಕಾರವನ್ನು ಕೊಟ್ಟಿದ್ದೀರಿ. ಮುಂದೆ ಬರುವಂಥ ದಿವಸಗಳಲ್ಲಿ ಅಧಿಕಾರ ಹಸ್ತಾಂತರವಾದ ಮೇಲೂ ಸಹ, ನಾನು ಈ ಸ್ಥಾನದಲ್ಲಿ ಕುಳಿತುಕೊಳ್ಳುವುದಿಲ್ಲ. ನಾನು ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಾಗ, ಅದೇ ರೀತಿಯ ಸಹಕಾರವನ್ನು ಈ ಸದನದ ಸದಸ್ಯರುಗಳು ಕೊಡಬೇಕು ಮತ್ತು ಮಾಧ್ಯಮದ ಸ್ನೇಹಿತರು ಕೊಡಬೇಕು. ಅದೇ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಸಹ, ಅವರು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳಿ, ನಮ್ಮ ಅವರ ಸಂಬಂಧ ಇದಕ್ಕಿಂತ ಒಳ್ಳೆಯದಾಗಿರುತ್ತದೆ. ನನಗೆ ಶೇ. 100ರಷ್ಟು ಅವರಲ್ಲಿ ವಿಶ್ವಾಸವಿದೆ. ನೂರು ಬಾರಿ ಅವತ್ತಿನಿಂದ ಇವತ್ತಿನವರೆಗೂ ಯಾರೇ ಪ್ರಸ್ತಾಪ ಮಾಡಿದರೂ, ನನಗೆ ಮಾನ್ಯ ಮುಖ್ಯಮಂತ್ರಿಯವರ ಮೇಲೆ ವಿಶ್ವಾಸವಿದೆ. ಅವರು ಅಧಿಕಾರ ಹಸ್ತಾಂತರ ಮಾಡುತ್ತಾರೆ. ಕನ್ನಡ ನಾಡಿನ ಜನರ ಅಪೇಕ್ಷೆ ಏನು ಇದೆ, ನಾವು ಏನು ಭರವಸೆಯನ್ನು ಕೊಟ್ಟಿದ್ದೇವೆ, ಈ ಜಗತ್ತು ನಂಬಿಕೆ, ವಿಶ್ವಾಸದ ಮೇಲೆ ನಡೆಯುವಂಥದ್ದು. ಆ ರೀತಿ ನಡೆಯುತ್ತದೆಂಬ ವಿಶ್ವಾಸವಿದೆ. ಇದುವರೆಗೂ ಅನೇಕ ರೀತಿಯಲ್ಲಿ ನಮ್ಮ ಮಾಧ್ಯಮದ ಸ್ನೇಹಿತರು ಸಹಕಾರವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ನಿಮಗೆ ಅಭಿನಂದನೆಗಳನ್ನು ಸಲ್ಲಿಸಿ, ಇವತ್ತು ಹಣಕಾಸಿನ.. .. ..

ಶ್ರೀ ಎನ್.ಧರ್ಮಸಿಂಗ್ : ಇದು ಕೊನೆಯ ಭಾಷಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ನಿಮ್ಮ ಕೊನೆ ಭಾಷಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ಹೌದು, ನಾನು ಉಪ ಮುಖ್ಯಮಂತ್ರಿಯಾಗಿ ಇದು ಕೊನೆಯ ಭಾಷಣ, ಈ ಮನೆಯಲ್ಲಿ ಇದು ಕೊನೆಯ ಭಾಷಣ. ಆದುದರಿಂದ ಈ ನನ್ನ ಆಯವ್ಯಯ ಭಾಷಣದಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿರುವಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. "ಪ್ರಜೆಗಳ ಸುಖವೇ ರಾಜನ ಸುಖ, ಪ್ರಜೆಗಳ ಹಿತವೇ ರಾಜನ ಹಿತ" ಇಲ್ಲಿ ರಾಜನಾದವನು ಎಂದರೆ ಚುನಾಯಿತ ಪ್ರತಿನಿಧಿ, ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರುವವನು, ಪ್ರಜೆಗಳಿಗೆ ಹಿತವಾದುದನ್ನೇ ಮಾಡಬೇಕೆನ್ನುವಂಥ ಮಾತನ್ನು ಹೇಳಿದ್ದಾರೆ. ನಮಗೆ ಖುಷಿ ಬಂದಂತೆ ಏನು ಮಾಡಬಾರದು. ಜನರ ಹಿತಕ್ಕಾಗಿ ಕೆಲಸವನ್ನು ಮಾಡಬೇಕೆಂಬ ಮಾತನ್ನು ಕೌಟಿಲ್ಯ ಹೇಳಿದ್ದಾನೆ. ಈ ಕೌಟಿಲ್ಯನ ನೀತಿ ಮಾತು, ನಮಗೆ ದಾರಿ ದೀವಿಗೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದೇ ರೀತಿಯಲ್ಲಿ ಪ್ರಾಮಾಣಿಕನಾಗಿ ಹಣಕಾಸಿನ ಸಚಿವನಾಗಿ, ನಾನು ಕೆಲಸವನ್ನು ಮಾಡಿದ್ದೇನೆ. ನಮ್ಮ ಪ್ರತಿ ಪಕ್ಷದ ನಾಯಕರಿಗೆ ಮನದಟ್ಟಾಗುವ ರೀತಿಯಲ್ಲಿ, ನಾನು ಹಣಕಾಸಿನ ಸಚಿವನಾಗಿ ಎಲ್ಲಾ ವಿವರಗಳನ್ನು, ನಿಮ್ಮ ಎಲ್ಲಾ ಪ್ರಶ್ನೆಗಳಿಗೆ ಒದಗಿಸಿದ್ದೇನೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ 2007-08ನೇ ಸಾಲಿನ ಆಯವ್ಯಯಕ್ಕೆ ತಾವು ಅನುಮೋದನೆಯನ್ನು ನೀಡುವಂತೆ ನಾನು ಈ ಸದನವನ್ನು ನಾನು ಕೋರುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಮುಖ್ಯಮಂತ್ರಿಯವರ ಭಾಷಣದ ನಂತರ ಶ್ರೀ ಬಿ.ಎಸ್.ಯಡಿಯೂರಪ್ಪ-ನವರು ಸಾರ್ವಜನಿಕ ಭಾಷಣದ ಹಾಗೆ ಹೇಳಿದ್ದಾರೆ. ಕಳೆದ ಬಜೆಟ್‌ನಲ್ಲಿ ಸಾರಾಸಗಟಾಗಿ ಇಲ್ಲಿ "ಅಷ್ಟು ಕೊಡುತ್ತೇನೆ, ಹಾಗೆ ಕೊಡುತ್ತೇನೆ" ಎಂಬ ರೀತಿಯಲ್ಲಿ ಹೇಳಿದ್ದಾರೆ. ಇದು ಅಲ್ಲ. ತಾವು ರಾಜ್ಯದ ಹಣಕಾಸಿನ ಸಚಿವರಾಗಿದ್ದೀರಿ, ಉಪ ಮುಖ್ಯಮಂತ್ರಿಗಳಾಗಿದ್ದೀರಿ. ನಾವು ಏನು ಕೇಳಿದ್ದೇವೆ, ಇವತ್ತು ಸಾರಾಯಿ ನಿಷೇಧ, ಸಾಲ ಮನ್ನಾದಿಂದ 5,000 ಕೋಟಿ ರೂಪಾಯಿಗಳನ್ನು ಸರ್ಕಾರ ಭರಿಸಬೇಕಾಗುತ್ತದೆ. ಅದನ್ನು ಎಲ್ಲಿಂದ ಭರಿಸುತ್ತೀರಿ? Resource 5,000 ಕೋಟಿ ರೂಪಾಯಿಗಳು, ಇವತ್ತು ಈ Resource mobilization ಬಗ್ಗೆ ಕೂಡ ನಾವು ಹೇಳಬೇಕಾಗುತ್ತದೆ. ಇವತ್ತು

ಇದೇ ರೀತಿಯಲ್ಲಿ ಹೇಳುವಂಥದ್ದು ಅಲ್ಲ. ಇವತ್ತು Resource mobilize ಮಾಡುವುದರಲ್ಲಿ ನೀವು fail ಆಗಿದ್ದೀರಿ. ಇವತ್ತು ರೈತರ ಸರ್ಕಾರ, ದಿನಾಲು ರೈತರ ಆತ್ಮಹತ್ಯೆಯಾಗುತ್ತಿದೆ. ಎಲ್ಲಾ ಕಡೆಗಳಲ್ಲೂ ಆಗುತ್ತಿದೆ. ಇವತ್ತು ನಾವು ರೈತರಿಗೆ ಸಾಲ ಮನ್ನಾ ಮಾಡಿದ್ದೇವೆ, ನಮ್ಮ ರಾಜ್ಯದಲ್ಲಿ ರೈತರು ಖುಷಿಯಾಗಿದ್ದಾರೆ. ಬಡ ಜನತೆ ಖುಷಿಯಾಗಿದ್ದಾರೆ. ನಮ್ಮ ಜನಾಭಿಪ್ರಾಯವನ್ನು ಕೇಳಬೇಕಾದರೆ, ಜನರ ಬಳಿಗೆ ಹೋಗಿ ಎನ್ನುವಂಥ ಮಾತನ್ನು ಹೇಳುತ್ತಿದ್ದಾರೆ. ಅದಕ್ಕೆ ನೀವು ಯಾವ ವಿಷಯಗಳಲ್ಲೂ ಕೂಡ, ಇವತ್ತು ರೈತರಿಗೆ ಸಹಾಯ ಮಾಡಿಲ್ಲ, ರೈತರ ಬಗ್ಗೆ ಚಿಂತನೆ ಇಲ್ಲ. ಕೇವಲ ಘೋಷಣೆಗಳ ಮೂಲಕ ರಾಜ್ಯದ ಜನರನ್ನು ಮುಗ್ಧಗೊಳಿಸುವಂಥ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ತಮ್ಮ 28 ಬೇಡಿಕೆಗಳು ಏನು ಇಟ್ಟಿದ್ದೀರಿ. ಎಲ್ಲಾ ಇಲಾಖೆಗಳಲ್ಲೂ ಇವತ್ತು ಸಂಪೂರ್ಣವಾಗಿ ವಿಫಲರಾಗಿದ್ದೀರೆಂಬ ಆರೋಪ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಬಹಳ ದೀರ್ಘವಾಗಿ ಭಾಷಣ ಮಾಡಿದರು. ಅವರು ಭಾಷಣವನ್ನು ಮಾಡುವಾಗ , ಅವರು ಸುಮಾರು 56 ಲಕ್ಷ ಜನರಿಗೆ ನಾನು ವೈಯಕ್ತಿವಾಗಿ ಸಹಾಯ ಮಾಡಿದ್ದೇನೆ. ಆದರೆ ಒಂದು ಮಾತನ್ನು ನೀವು ಅರ್ಥ ಮಾಡಿಕೊಳ್ಳಬೇಕು. ನೀವು ಹೇಗೆ ಮಾಡಿದ್ದೀರೆಂದರೆ, ಯಾವ ರೈತರಿಗೆ ನಾವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ನೀರಾವರಿ ಯೋಜನೆಗಳನ್ನು ಕೊಡಬೇಕಾಗಿತ್ತೋ, ಅಲ್ಲಿ ನೀವು ಸುಮಾರು 2,000 ರೂಪಾಯಿಗಳನ್ನು ಕಟ್ ಮಾಡಿದ್ದೀರಿ. ಇವತ್ತಿನ ಲೆಕ್ಕದ ಪ್ರಕಾರ ನಿಮಗೆ 5,000 ಕೋಟಿ, 6,000 ಕೋಟಿ ರೂಪಾಯಿಗಳು ಸಿಗಬೇಕಾಗಿತ್ತು. ಅಂಥದ್ದರಲ್ಲಿ 3,000 ಸಾವಿರ ಕೋಟಿ ರೂಪಾಯಿಗಳಿಂದ ಮೂರುವರೆ ಸಾವಿರ ಕೋಟಿ ರೂಪಾಯಿಗಳು ಸಿಕ್ಕಿವೆ. 17% total outlayನಲ್ಲಿ ಸಿಕ್ಕಿದೆ. ಎರಡನೆಯದಾಗಿ Powerನಲ್ಲೂ ಕೂಡ, ಮಾನ್ಯ ಹೆಚ್.ಡಿ.ರೇವಣ್ಣನವರ ಇಲಾಖೆಗೆ ಸಂಬಂಧಪಟ್ಟಂತೆ 1,000 ಕೋಟಿ ರೂಪಾಯಿಗಳು ಅವರಿಗೂ ಕೂಡ ಹೆಚ್ಚಿನ ಹಣವನ್ನು ಅಲ್ಲಿಗೆ ಕೊಡುವಂಥದ್ದು ಇತ್ತು. ಅದೇ ರೀತಿಯಾಗಿ ಕೃಷಿ ರಂಗದಲ್ಲೂ ಕೂಡ ಸುಮಾರು 475 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕಾಗಿತ್ತು. ಆದರೆ ಇವೆಲ್ಲವನ್ನು ಕಡಿತ ಮಾಡಿ, ಸುಮಾರು 4,000 ಕೋಟಿ ರೂಪಾಯಿಗಳನ್ನು ಈ ಯೋಜನೆ ಕೆಳಗೆ ಕಡಿತ ಮಾಡಿ, ನಾನು

ಸೈಕಲ್ ಕೊಟ್ಟೆ, ನಾನು ಅದು ಕೊಟ್ಟೆ, ಎಂದು ಹೇಳಿ, ನೀವು non-planನಲ್ಲಿ ಹೆಚ್ಚಿನ ಹಣವನ್ನು ಖರ್ಚು ಮಾಡಿ non-productive ಕೆಲಸಕ್ಕೆ ಕೊಟ್ಟ ಹಣವನ್ನು populist schemeಗಳಲ್ಲಿ ಕೊಟ್ಟು, ಯಾರು 50ವರ್ಷಗಳಲ್ಲಿ ಮಾಡಿಲ್ಲ. ನಾನು ಮಾಡಿದೆ, 160 ಹೈಸ್ಕೂಲ್‌ಗಳನ್ನು ಯಾರು ಕೊಟ್ಟಿದ್ದರು, 160 ಕಾಲೇಜುಗಳನ್ನು ಯಾರು ಕೊಟ್ಟಿದ್ದರು, ಎಂದು ಹೇಳುತ್ತೀರಿ. ತಾವು ಎಲ್ಲಿಂದ ಕೊಟ್ಟಿದ್ದೀರಿ? ಈ ರೈತರ ಬಾಯಿ ಮೇಲೆ ಹೊಡೆದಿದ್ದೀರಿ. ಅಲ್ಲಿ ಕೊಟ್ಟಿದ್ದೀರಿ. ಆದರೆ proportionately ಯಾವುದಕ್ಕೆ development ಆಗಬೇಕೋ, ಅದನ್ನು ನೀವು ಮಾಡಿಲ್ಲ. ಇಲ್ಲಿ ಮೂಲಭೂತ ಸೌಕರ್ಯಗಳನ್ನು ಈ ರಾಜ್ಯದ ರೈತರಿಗೆ ಕೊಡಬೇಕಾಗಿತ್ತು, ಕೃಷಿ ರಂಗದಲ್ಲಿ ಕೊಡಲಿಲ್ಲ, ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಕೊಡಲಿಲ್ಲ, ನೀರಾವರಿಯಲ್ಲಿ ಕೊಡಲಿಲ್ಲ. ಇದನ್ನು ಕಟ್ಟಿಕೊಂಡು ಇನ್ನೊಂದು ಕಟ್ಟಿಕೊಂಡು ಇನ್ನೊಂದು ಕಡೆ ಮನಸ್ಸು ಬಂದ ಹಾಗೆ ಕೊಟ್ಟ ಹಾಗೆ ಕೊಟ್ಟು, ಕೊಟ್ಟಿದ್ದೇನೆ ಎಂದು ಹೇಳುತ್ತೀರಿ. ಅದಕ್ಕೆ ನಾನು ಹೇಳಿದೆ. ಈ ಬಜೆಟ್ ಹೇಗೆ ಇದೆಯೆಂದರೆ, ಮೇಲೆ ಎಲ್ಲಾ ನೋಡುವುದಕ್ಕೆ ಚೆನ್ನಾಗಿ, ಒಳಗಡೆ ಎಲ್ಲಾ ಕೂಡ ರೈತರಿಗೆ ಹೊಡೆಯುವಂಥಾ ಕೆಲಸವಾಗಿದೆಯೇ ಹೊರತಾಗಿ, ನಾವು ರೈತರ ಅಭಿವೃದ್ಧಿಗಾಗಿ ಮಾಡಿದೆಯೆಂದು ಹೇಳುತ್ತೀರಿ. ತಾವು ಊರು ಊರು ತಿರುಗಿದೆಯೆಂದು ಹೇಳಿದ್ದೀರಿ. ನಿಮ್ಮ ಕಾಲದಲ್ಲಿ ಹಿಂದೆ 30%, 31% ಹಣವನ್ನು ನೀರಾವರಿಗೆಂದು ಇಡುತ್ತಿದ್ದರು. ನೀವು ಇವತ್ತಿನ ದಿವಸ ಎಲ್ಲಾ ಕಡೆ ಓಡಾಡಿದವರು 17% ಇಟ್ಟಿದ್ದೀರಿ. ವಿದ್ಯುಚ್ಛಕ್ತಿ ಉತ್ಪಾದನೆಗೆ ಹಿಂದೆ 24%, 25% ಹಣವನ್ನು ಹಿಂದೆ ಇಡುತ್ತಿದ್ದರು. ನೀವು ಏಕೆ 20% ಗೆ ಬಂದಿದ್ದೀರಿ? ಅದೇ ರೀತಿಯಲ್ಲಿ ಕೃಷಿರಂಗದಲ್ಲಿ, ಈಗ ನಾನು ಒಂದೊಂದಾಗಿ ಹೇಳುವುದಕ್ಕೆ ಹೋಗುವುದಿಲ್ಲ. Social Welfare Development ನಲ್ಲಿ ವಿದ್ಯಾರ್ಥಿಗಳಿಗೆ 400 ರೂ.ಗಳಿಂದ 600 ರೂ.ಗಳನ್ನು ಮಾಡಿ, ಮತ್ತು post granduate 700 ರೂ. ಗಳನ್ನು ಮಾಡಿಯೆಂದು ಹೇಳಿದರೆ, ಅದರ ಬಗ್ಗೆ ಮಾತನ್ನೇ ಆಡಲಿಲ್ಲ. ಇಲ್ಲಿ scholarship ಬಗ್ಗೆ ಹೇಳಲಿಲ್ಲ. ತಮಗೆ ಯಾವುದು ಬೇಕೋ ಅದನ್ನು ಹೇಳಿ, ನಾನು ಇಷ್ಟು ಮಾಡಿಯೆಂದು ಹೇಳುವಂಥದ್ದು ಸರಿಯಲ್ಲ. ಇದು ರಾಜ್ಯದ ಹಿತದೃಷ್ಟಿಯಿಂದಲೂ ಉತ್ತಮವಾದಂಥ ಬಜೆಟ್ ಅಲ್ಲ.

ಇರಬಹುದು, ನಾಲ್ಕು popular schemeಗಳಲ್ಲಿ ಕೇಳಿದಂಥಾದ್ದಕ್ಕೆ ಅವರಿಗೆ ಒಂದು ಕೋಟಿ ಕೊಟ್ಟೆ, ಎರಡು ಕೋಟಿ ಕೊಟ್ಟೆ ಎಂದು

ಹೇಳಿಕೊಂಡು, ಹೋಗೆ ಕೊಟ್ಟಿದ್ದಕ್ಕೆ ನಿಮಗೆ ಶಹಭಾಷ್‌ಗಿರಿ ಸಿಗುತ್ತಿರಬಹುದು. ಅದು ನಿಮಗೆ ನೀಡಿದ ವೈಯಕ್ತಿಕ ಶಹಭಾಷ್‌ಗಿರಿ. ಈ ರಾಜ್ಯ ಅಭಿವೃದ್ಧಿಗೆ ಕೊಟ್ಟಂಥ ಶಹಭಾಷ್‌ಗಿರಿ ಯಲ್ಲ. ಆ ರೀತಿ ಮಾಡಿಕೊಂಡು, ಇವತ್ತಿನ ದಿವಸ ವಿಶೇಷವಾಗಿ unproductive ಕೆಲಸಗಳಿಗೆ ಹೆಚ್ಚಿನ ಹಣವನ್ನು ಕೊಟ್ಟು, productive ಕೆಲಸಗಳಿಗೆ ಹೊಡೆತವನ್ನು ಹಾಕಿದಿರಲ್ಲ, ಇದನ್ನು ಸ್ಪಷ್ಟ ಮಾಡಬೇಕು. ಬಿಸಿಯೂಟದ ಕಾರ್ಯಕ್ರಮಗಳನ್ನು ನಾವೂ ಮಾಡಿದ್ದೇವೆ. ಅದಕ್ಕೆ ಕೊಟ್ಟು ಆಯಿತು. ಇಂಥಾದ್ದಕ್ಕೆಲ್ಲಾ ಕೊಟ್ಟಿದ್ದೇವೆ ಎನ್ನುವುದಾದರೆ, ನೀರಾವರಿಗೆ 17% ಏಕೆ ಕೊಡುತ್ತೀರಿ, ಅದನ್ನೂ ನಿಲ್ಲಿಸಿಬಿಡಿ, 0% ಮಾಡಿಬಿಡಿ. ಇದನ್ನು ಸ್ಪಷ್ಟಪಡಿಸಬೇಕು ಮತ್ತು ಇದಕ್ಕೆ ಹಣ ಕೊಡತಕ್ಕಂಥಾದ್ದನ್ನೂ ಅವರು ಘೋಷಣೆ ಮಾಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರವಾನ್ವಿತ ಉಪ ಮುಖ್ಯಮಂತ್ರಿಗಳು ಸಾಲ ಮನ್ನಾದಿಂದ 17 ಲಕ್ಷ ರೈತರಿಗೆ ಸಹಾಯವಾಗಿದೆ ಎಂದು ಹೇಳಿದ್ದಾರೆ. ನಾನು ಆ ಅಂಕಿಯನ್ನು ಒಪ್ಪುವುದಿಲ್ಲ. ಅದರಿಂದ ರೈತರಿಗೆ ಸಹಾಯವಾಗಿದೆ, ಸಾಲ ಮನ್ನಾ ಮಾಡಿ ಒಳ್ಳೆಯ ಕೆಲಸ ಮಾಡಿದ್ದೀರಿ ಎನ್ನುವುದನ್ನು ಒಪ್ಪುತ್ತೇನೆ. ಆದರೆ 17 ಲಕ್ಷ ರೈತರಿಗೆ ಸಹಾಯವಾಗಿದೆ ಎಂದು ಹೇಳುತ್ತಿದ್ದೀರಲ್ಲ, ಯಾವ ಕೆಟಗರಿಯಲ್ಲಿ ಎನ್ನುವುದನ್ನು ತವು ಸ್ಪಷ್ಟಪಡಿಸಬೇಕು. ನಾನು ಮತ್ತೊಂದು ಪ್ರಶ್ನೆಯನ್ನು ಕೇಳುತ್ತೇನೆ, ನೀವು ಚಾಲ್ತಿ ಸಾಲ ಮನ್ನಾ ಮಾಡಿದ್ದೀರಿ. ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಂಥ ರೈತರ್ಯಾರು ಎಂದರೆ defaulters. ಯಾರು ನಿಜವಾಗಿ ಕಷ್ಟದಲ್ಲಿದ್ದಾರೆ, ಯಾರಿಗೆ ಸಾಲ ಮರುಪಾವತಿ ಮಾಡಲು ಸಾಧ್ಯವಾಗಿಲ್ಲ, ಅವರ ಸಾಲ ಮನ್ನಾ ಮಾಡಿ ಎಂದು ನಾವು ಹೇಳಿದ್ದೆವು. ನೀವು ಆ ಸಾಲ ಮನ್ನಾ ಮಾಡಲಿಲ್ಲ. ಅಸಲನ್ನು ತುಂಬಿ, ಬಡ್ಡಿ ಮನ್ನಾ ಮಾಡುತ್ತೇವೆ ಎಂದು ನೀವು ಹೇಳಿದಿರಿ. ಹಾಗಾಗಿ ಸುಮಾರು ಎರಡೂವರೆಯಿಂದ ಮೂರು ಲಕ್ಷ ರೈತರ ಕುಟುಂಬಗಳು ನಿಮ್ಮ ಈ ಕಾರ್ಯಕ್ರಮದಿಂದ ವಂಚಿತವಾಗಿವೆ. Primary Education, Health, Commercial tax, Resource mobilization ಇವುಗಳ ಬಗ್ಗೆ ನೀವು ಕೆಲವು ಅಂಕಿಅಂಶಗನ್ನು ಹೇಳಿದಿರಿ. ಆದರೆ ನೀವು ಹೇಳಿದ ಅಂಕಿ ಅಂಶ-ಗಳಿಗೂ, Mid Term Fiscal Plan for Karnataka, 2007-2011ಗೂ ಬಹಳಷ್ಟು difference ಇದೆ. ತಾವೂ ಸಹ ಒಪ್ಪಿಕೊಂಡಿರಿ. ಅದು ತಪ್ಪಾಗಿದೆ

ಎಂದು ತಾವು ಹೇಳಿದಿರಿ. ಇದು ಬಹಳ ಗಂಭೀರವಾದುದಾಗಿದೆ. ತಾವು ಇದನ್ನು ಶಾಸನ ಸಭೆಯಲ್ಲಿ ಮಂಡಿಸಿ, ನಂತರ ಇದರಲ್ಲಿ ಕೊಟ್ಟಿರುವ ಅಂಕಿಅಂಶಗಳು ತಪ್ಪಿದೆ ಎಂದು ಹೇಳಿದ್ದೀರಿ. ಇದು mandatory obiligation. ಏಕೆ ಇದರಲ್ಲಿ ತಪ್ಪಾಗಿದೆ ಎನ್ನುವ ಬಗ್ಗೆ ತಾವು ಸ್ಪಷ್ಟನೆ ನೀಡಬೇಕಾಗುತ್ತದೆ. Fiscal Responsibility Act ಪ್ರಕಾರ ನೀವು ಕನಿಷ್ಟ ಆರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಹಣಕಾಸು ಇಲಾಖೆಯನ್ನು ರಿವ್ಯೂ ಮಾಡಿ ಅದನ್ನು ಸದನದ ಮುಂದೆ ಇಡಬೇಕಾಗುತ್ತದೆ. ಅದನ್ನು ತಾವು ಇಟ್ಟಿಲ್ಲ. ಆ ರಿವ್ಯೂವನ್ನು ತಾವು ಮಾಡಿಲ್ಲ. ಹಾಗಾಗಿ ಇಂಥ wrong information ಇವತ್ತು ಇಲ್ಲಿಗೆ ಬಂದಿದೆ. Mid term Fiscal Plan ಅನ್ನು ಮಂಡಿಸುವುದು mandatory ಯಾಗಿದೆ ಎಂದು ನಾವು ಹೇಳಿದಾಗ, ಗಡಿಬಿಡಿಯಿಂದ ಅದನ್ನು ತಂದು ಇಲ್ಲಿ ಇಟ್ಟಿದ್ದಾರೆ. ಇದರ ಬಗ್ಗೆ ಚಿಂತನೆಯನ್ನೂ ಮಾಡಿಲ್ಲ, ಇದರ ಬಗ್ಗೆ ಸಮೀಕ್ಷೆಯನ್ನೂ ಮಾಡಿಲ್ಲ. ಉದಾಹರಣೆಗಾಗಿ ಹೇಳುತ್ತೇನೆ, ನೀವೇನು ಹೇಳುತ್ತಿದ್ದೀರಿ ಎಂದರೆ, "The State has been a beneficiary of overall buoyant economic situation in the Country, Though agriculture growth rate been below expectations, manufacturing anf services sector have performed well. The upbeat mood of manufacturing and services sevtor is well reflected in the growth in figures of investment and also performance of capital markets. The growth trends appear to be well entrenched. However, the susceptibility of agriculture sector to vagaries of nature, decling productivity and performance of agriculture sector is a cause for concern. In back ground of these, the GSDP for the Medium Term Plan is forecasted to clock areal growth rate of 8%." ಎಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅಥವಾ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಅಥವಾ ಇವರು ಹೇಳಿದ ಹಾಗೆ ಅಥವಾ ನಾನು ಹೇಳಿದ ಹಾಗೆ, we are marching ahead. ರಾಷ್ಟ್ರದ growth ಏನಿದೆ, ಅದಕ್ಕಿಂತ half percent, quarter percent growth ನಮ್ಮದು ಹೆಚ್ಚಿದೆ. ಇವತ್ತು ಭಾರತ ದೇಶ 9.25% GDP ಯಲ್ಲಿ progress ಮಾಡುತ್ತಿದೆ. ಇವತ್ತು ನಿಮಗೆ ಒಂದು information ಕೊಡುತ್ತೇನೆ. GDP

growth in 2006-07 close to the 10% mark. ಇಲ್ಲಿ ಏನು ಹೇಳುತ್ತಾರೆಂದರೆ, agricultureನಲ್ಲಿ improvement ಆಗಿ, agriculture growth is likely to be from 2.7% ti 4% and 9.2% ದಿಂದ 10% growth ಆಗುವುದಿದೆ. ಆದರೆ ತಾವು forecast ಮಾಡಿ growth 8%, which is less than the national average. ಅದರ ಅರ್ಥ Karnataka is going backwards. ಕರ್ನಾಟಕದಲ್ಲಿ ಪ್ರಗತಿಯಾಗುತ್ತಿಲ್ಲ ಎಂದು ತಾವು ಒಪ್ಪಿಕೊಂಡ ಹಾಗೆ ಆಯಿತು. ಹಾಗಾಗಿ, ಇದರ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕಾಗಿದೆ.

ಶ್ರೀ ಪಿ.ಟಿ. ಪರಮೇಶ್ವರ ನಾಯಕ್ (ಹರಪನಹಳ್ಳಿ) : ಮಾನ್ಯ ಅಧ್ಯಕ್ಷರೇ, ಆ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದ 18 ತಿಂಗಳ ತರುವಾಯ ಮಾಡಿರುವ ಒಳ್ಳೆಯ ಕೆಲಸವೆಂದರೆ ಸಾರಾಯಿ ನಿಷೇಧ ಮತ್ತು ಸಾಲ ಮನ್ನಾ ಮಾಡಿರುವುದು. ಸಾರಾಯಿ ನಿಷೇಧ ಮಾಡಿರುವುದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಏಕೆಂದರೆ, ಇದಕ್ಕೆ ಬಲಿಯಾಗುತ್ತಿದ್ದಂಥ ಹೆಚ್ಚಿನ ಜನ ನಮ್ಮವರು. ಸಾರಾಯಿ ನಿಷೇಧ ಮಾಡಿ ನಾಳೆಗೆ ಒಂದು ತಿಂಗಳಾಗುತ್ತದೆ. ಆದರೆ, ಇವತ್ತಿಗೂ ಕೂಡ ನಮ್ಮ ಎಲ್ಲಾ ತಾಂಡಾಗಳಲ್ಲಿ ರಾಜಾರೋಷವಾಗಿ ಹಿಂದಿನ ಗುತ್ತಿಗೆದಾರರು ಸಾರಾಯಿ ಪ್ಯಾಕೆಟ್‌ಗಳನ್ನು ತುಂಬುತ್ತಿದ್ದಾರೆ. ಅದರಿಂದ ಸಮಸ್ಯೆಯಾಗಿ ರುವುದು ನಮ್ಮ ಮುಗ್ಧ ಜನರಿಗೆ. ಅವರು ಚೀಲಗಟ್ಟಲೆ ಪ್ಯಾಕೆಟ್‌ಗಳನ್ನು ತಂದು ತುಂಬಿ ಹೋಗಿಬಿಡುತ್ತಾರೆ. ಪೋಲೀಸ್‌ನವರು ಮತ್ತು ಎಕ್ಸೈಸ್ ಇಲಾಖೆಯವರು ರೈಡ್ ಮಾಡಿದಾಗ ಅವರು ಸಿಕ್ಕಿಹಾಕಿಕೊಳ್ಳುತ್ತಾರೆ. ಅವರ ಮೇಲೆ ಕೇಸು ವಗೈರಾಗಳನ್ನು ಹಾಕಿದಾಗ, ಅವರು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ಅದಕ್ಕಾಗಿ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಹಿಂದಿನ ಎಕ್ಸೈಸ್ ಕಾಂಟ್ರಾಕ್ಟರ್‌ಗಳನ್ನು ಮಟ್ಟ ಹಾಕತಕ್ಕಂಥ ಕೆಲಸವನ್ನು ತ್ವರಿತವಾಗಿ ಮಾಡಿ, ಬಲಿಯಾಗುತ್ತಿರುವ ಮುಗ್ಧ ಜನರನ್ನು ಕಾಪಾಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಾ) : ಮಾನ್ಯ ಅಧ್ಯಕ್ಷರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಿದರು. ಈ ವರ್ಷ ಸಾಕಷ್ಟು ಪ್ರಮಾಣದಲ್ಲಿ ಹಣಕಾಸನ್ನು ಕ್ರೋಢೀಕರಣ

ಮಾಡಿ ಉತ್ತಮವಾದಂಥ ಬಜೆಟ್ ಅನ್ನು ಕೊಟ್ಟಿದ್ದೇವೆ ಎನ್ನುವಂಥ ಮಾತನ್ನು ಹೇಳಿದರು. ನಾನು ಬಹಳ ಗಂಭೀರವಾಗಿ ಒಂದು ವಿಚಾರವನ್ನು ಕೊಟ್ಟಿದ್ದೇವೆ ಎನ್ನುವಂಥ ಮಾತನ್ನು ಹೇಳಿದರು. ನಾನು ಬಹಳ ಗಂಭೀರವಾಗಿ ಒಂದು ವಿಚಾರವನ್ನು ಕೇಳಲಿಕ್ಕೆ ಇಚ್ಛೆಪಡುತ್ತೇನೆ, fiscal deficit ವಿಚಾರದಲ್ಲಿ ನಾನು ಎರಡು ವರ್ಷದ್ದನ್ನು ಮಾತ್ರ compare ಮಾಡುತ್ತೇನೆ. 2005–06ನೇ ಸಾಲಿನಲ್ಲಿ fiscal deficit 2,871 ಕೋಟಿ ರೂಪಾಯಿಗಳಿದ್ದರೆ, 2006–07ನೇ ಸಾಲಿನಲ್ಲಿ 5.225 ಕೋಟಿ ರೂಪಾಯಿಗಳಾಗಿದೆ. ಅಂದರೆ ಸುಮಾರು 3,400 ಕೋಟಿ ರೂಪಾಯಿಗಳ fiscal deficit ಒಂದೇ ವರ್ಷದಲ್ಲಿ ಜಾಸ್ತಿಯಾಗಿದೆ. ಸರ್ಕಾರದ ಸಾಲದ ಪ್ರಮಾಣ ಅಂದರೆ, ಸರ್ಕಾರದ borrowings ಎಷ್ಟಾಗಿದೆ ಎಂದು ನೋಡಿ, 20 ತಿಂಗಳಿನಲ್ಲಿ 12,743 ಕೋಟಿ ರೂಪಾಯಿಗಳು ಜಾಸ್ತಿಯಾಗಿದೆ. ಅಂದರೆ, 2005–06ನೇ ಸಾಲಿನಲ್ಲಿ 53,888 ಕೋಟಿ ರೂಪಾಯಿಗಳ borrowing ಅನ್ನು ತೆಗೆದುಕೊಂಡಿದ್ದರೆ, 2006–07ಕ್ಕೆ ಅದು 66,631 ಕೋಟಿ ರೂಪಾಯಿಗಳಿಗೆ ಹೋಗುತ್ತಿದೆ. ಅಂದರೆ, ಕೇವಲ 20 ತಿಂಗಳಲ್ಲಿ 12,743 ಕೋಟಿ ರೂಪಾಯಿಗಳ borrowing ಅನ್ನು ತಾವು ಹೆಚ್ಚಿಗೆ ತೆಗೆದು ಕೊಂಡಿದ್ದೀರಿ. ಮೂರನೆಯದಾಗಿ, Non-developmental Expenditure ಬಗ್ಗೆ ಹೇಳುವುದಾದರೆ, 2005–06ನೇ ಸಾಲಿನಲ್ಲಿ Non-developmental Expenditure 11,620 ಕೋಟಿ ರೂಪಾಯಿಗಳಿದ್ದರೆ, 2006–07ನೇ ಸಾಲಿಗೆ ಅದು 14,240 ಕೋಟಿ ರೂಪಾಯಿಗಳಾಗಿದೆ. ಅಂದರೆ, Non-developmental Expenditure 2,620 ಕೋಟಿ ರೂಪಾಯಿಗಳು ಜಾಸ್ತಿಯಾಯಿತು. Non-developmental Expenditure ಅಂದರೆ ಏನು? ಇದನ್ನು ಯಾರಿಗೆ ಕೊಡುತ್ತಿದ್ದೀರಿ? ಯಾವ ಕಾರಣಕ್ಕಾಗಿ ಕೊಡುತ್ತಿದ್ದೀರಿ? Non-developmental Expenditure ಏಕೆ ಹೆಚ್ಚಾಯಿತು ಎಂದು ನೀವು ಹೇಳಬೇಕಲ್ಲವೇ? ಅಂದರೆ ನೀವು non-productive ಕ್ಷೇತ್ರಗಳಿಗೆ ಹೆಚ್ಚು ಹಣ ಕೊಡುತ್ತಿದ್ದೀರಿ ಎಂದ ಹಾಗಾಯಿತಲ್ಲವೇ. ಅದಕ್ಕೆ ನಿಮಗೆ ಹಣ ಕಡಿಮೆಯಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : P.W.D. ಗೆ, power ಗೆ ಹೆಚ್ಚು ಹಣ ಕೊಡುತ್ತಿದ್ದೇವೆ ಎಂದು ಆಗಲೇ ಉತ್ತರ ಹೇಳುವಾಗ ಹೇಳಿದೆ. ಆಗ ನೀವು ಇರಲಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಹಾಗಾದರೆ ಅವು Non-developmental Expenditureಗಳೇ? That means, there is a Non-developmental Expenditure according to you. ಅದಕ್ಕಾಗಿ ಈ ಮೂರು ವಿಚಾರದಲ್ಲೂ ಇವರು ಸ್ಪಷ್ಟವಾಗಿ ಹೇಳಬೇಕು. ಸುಮಾರು 16,000 ಕೋಟಿ ರೂಪಾಯಿಗಳ ಆಲವನ್ನು ಏಕೆ ಜಾಸ್ತಿ ಮಾಡಿದಿರಿ? ವಿತ್ತೀಯ ಕೊರತೆ, fiscal deficit ಏಕೆ? ಕೊನೆಯದಾಗಿ, ನಾನು ಇನ್ನೂ ಒಂದು ಗಂಭೀರವಾದ ವಿಚಾರವನ್ನು ನಾನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ, Non Tax Revenue ಕೂಡ ಬಹಳ ಕಡಿಮೆಯಾಗಿದೆ. ತಾವು ಕೊಟ್ಟಿರುವ Mid Term Fiscal Planನಲ್ಲೇ ಇದೆ, ದಯವಿಟ್ಟು ನೋಡಿ. Non Tax Revenue tremendously ಬಹಳ ಕಡಿಮೆಯಾಗಿದೆಂದು ಯಾವ ಕಾರಣಕ್ಕಾಗಿ ಕಡಿಮೆಯಾಗಿದೆ ಎನ್ನುವುದನ್ನು ಹೇಳಬೇಕು ಮತ್ತು ಮುಂಬರುವಂಥ ಐದು ವರ್ಷಗಳಿಗೆ ತಾವು ಮಂಡಿಸಿರುವ plan ಬಹಳ ವಿತ್ತೀಯ ಕೊರತೆಯನ್ನು ತೋರಿಸುತ್ತದೆ. ನಿಮ್ಮ ಪ್ರಕಾರವೇ, ನೀವು ಈ ರಾಜ್ಯವನ್ನು ಸಾಲಗಾರರ ಕೂಪಕ್ಕೆ ತಳ್ಳುತ್ತಿದ್ದೀರಿ. ಮುಂದಿನ ವರ್ಷಗಳಲ್ಲಿ ಹೆಚ್ಚಿನ ಸಾಲವನ್ನು ತೆಗೆದುಕೊಳ್ಳಲು ತಾವು ಏಕೆ propose ಮಾಡಿದ್ದೀರಿ? ವಿತ್ತೀಯ ಕೊರತೆ ಏಕೆ ಜಾಸ್ತಿಯಾಗುತ್ತದೆ ಎನ್ನುವ ಬಗ್ಗೆ ಸಂಪೂರ್ಣವಾಗಿ ತಾವು ಒಂದು ಶ್ವೇತಪತ್ರವನ್ನು ಹೊರಡಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ.

(5-30 PM)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತರವನ್ನು ಕೊಡುವಾಗ ಕೆಲವು ಅಂಕಿಅಂಶಗಳನ್ನು ಹೇಳಿದರು, ಆಗ ನಾನು ಇರಲಿಲ್ಲ. ಯಡಿಯೂರಪ್ಪನವರೆ, ಈ ಮೀಡಿಯಂ ಟರ್ಮ್‌ಫಿಸ್ಕಲ್ ಪ್ಲಾನ್‌ನಲ್ಲಿ ಫಿಗರ್ಸ್ ಎಲ್ಲಾ ನಮೂದಾಗಿದ್ದಾವಲ್ಲ, ಅದೇ ಸರಿ ಇಲ್ಲವೆಂದು ಹೇಳಿಬಿಟ್ಟಿದ್ದಾರಂತೆ, ನೀವು ಹಾಗೆ ಹೇಳಲಿಲ್ಲವೆ? ಹೇಳಿಲ್ಲವೆನ್ನುತ್ತಾರೆ. ನಾವು ಬಂದ ಮೇಲೆ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಎಲ್ಲಾ

ಜಾಸ್ತಿಯಾಗಿದೆ ಎಂಬು ಹೇಳುತ್ತೀರಿ, ಆಮೇಲೆ ಪ್ರಕಾಶ್‌ರವರು ಗ್ರೋಥ್‌ರೇಟ್ ಲೆಕ್ಕ ಹಾಕಿಕೊಳ್ಳುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಗ್ರೋಥ್‌ರೇಟ್ ಎಂದರೆ ಪರ್ಸೆಂಟೇಜ್ ಹೇಗೆಂದರೆ, ಕಳೆದ ವರ್ಷ 2000 ಕೋಟಿಯಾಗಿದ್ದರೆ, ಈ ವರ್ಷ ಅದರ ಮೇಲೆ 10% ಎಂದರೆ ಎಷ್ಟಾಗುತ್ತದೆಂದರೆ 2200 ಕೋಟಿಯಾಗುತ್ತದೆ. 6% inflation ಇರುತ್ತದೆ, ನಾನು ಆ ಪರ್ಸೆಂಟೇಜ್ ಹೇಳಿದ್ದು. ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಗ್ರೋಥ್ 2004--05ರಲ್ಲಿ 30.05% ಇದ್ದರೆ, ಕಳೆದ ವರ್ಷ 2006--07ಕ್ಕೆ 14.84%ಕ್ಕೆ ಬಂದಿದೆ, What is the decline percentage? The decline percentage is nearly 16%. ಮತ್ತೆ ಇವರು ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ನಾವು ಹೆಚ್ಚಿಗೆ ಮಾಡಿದ್ದೇವೆಂದು ಹೇಳುತ್ತಾರೆ.

ಶ್ರೀ ರಾಮಚಂದ್ರೇಗೌಡ (ಸಣ್ಣ ಉಳಿತಾಯ ಸಚಿವರು) : ಇಷ್ಟು ವರ್ಷದ ತೂತು ಮುಚ್ಚಿದ ಮೇಲೆ ಕಡಿಮೆಯಾಗಿದೆ.

ಶ್ರೀ ಸಿದ್ದರಾಮಯ್ಯ : ತೂತು ಮುಚ್ಚಿದ ತಕ್ಷಣವೇ ಹಾಗೆ ಕಡಿಮೆಯಾಗುವುದಿಲ್ಲ ಸುಮ್ಮನೆ ಕುಳಿತುಕೊಳ್ಳಿ ಸ್ವಾಮಿ. ಅವರು 3 ತಿಂಗಳಲ್ಲಿ ನಮ್ಮ ತೆರಿಗೆ ಸುಮಾರು 800 ಕೋಟಿ ರೂಪಾಯಿಗಳಷ್ಟು ಜಾಸ್ತಿಯಾಗಿದೆ ಎಂದು ಹೇಳಿದ ಮೇಲೆ ಈ ಸಾರಿ ಎಷ್ಟು ತೆರಿಗೆ ಇದೆ, ಕಳೆದ ವರ್ಷ ಸೇಲ್ಸ್ ಟ್ಯಾಕ್ಸ್‌ನಿಂದ ಎಷ್ಟು ಬಂದಿತ್ತು, ಅದರ ಮೇಲೆ 700--800 ಕೋಟಿ ಜಾಸ್ತಿಯಾಗಿದೆ ಎಂದು ಒಟ್ಟು ರೆಸಿಟ್ಸ್ ನಲ್ಲಿ ತಾವೇ ತಾವು ಹೇಳಿರುವುದು?

ಶ್ರೀ ಬಿ.ಎಸ್.ಯಡಿಯೂರಪ್ಪ : ಕಳೆದ ವರ್ಷ ಮೇ, ಜೂನ್, ಜುಲೈನಲ್ಲಿ ಏನು ಸಂಗ್ರಹವಾಗಿತ್ತು, ಈ ವರ್ಷ ಅದಕ್ಕಿಂತ 800 ಕೋಟಿ ಚಿಲ್ಲರೆ ಜಾಸ್ತಿಯಾಗಿದೆ ಎಂದು ಹೇಳಿದ್ದು.

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರೆ, do you agree with this or not?

ಶ್ರೀ ಬಿ.ಎಸ್.ಯಡಿಯೂರಪ್ಪ : ಒಪ್ಪಿಕೊಂಡೇ ಹೇಳಿದ್ದು, ಏನೂ ವ್ಯತ್ಯಾಸವಿಲ್ಲ.

ಶ್ರೀ ಸಿದ್ದರಾಮಯ್ಯ : ಕಡಿಮೆಯಾಗಿದೆಯಲ್ಲ, That means to say, ನಿಮ್ಮ ರಿಸೋರ್ಸ್ ಮೊಬಿಲೈಜ್ ಮಾಡುವುದರಲ್ಲಿ ಕಡಿಮೆಯಾಗಿದೆ. ಎರಡನೆಯದಾಗಿ ಮೋಟಾರ್ ವೆಹಿಕಲ್ ಟ್ಯಾಕ್ಸ್ ಜಾಸ್ತಿಯಾಗಿದೆ ಎಂದು ಹೇಳುತ್ತೀರಿ, 2004--05ರಲ್ಲಿ ಮೋಟಾರ್ ವೆಹಿಕಲ್ ಟ್ಯಾಕ್ಸ್ 22.86% ಇದ್ದರೆ

2006–07ರಲ್ಲಿ 10.97% ಆಗಿದೆ, ಅಂದರೆ ಅದು ಮತ್ತೆ ಕುಸಿದಿದೆ. ಆಮೇಲೆ ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ 2004–05ರಲ್ಲಿ 29.8% ಇದ್ದರೆ 2006–07ರಲ್ಲಿ 18.63% ಗ್ರೋಥ್ ಆಗಿದೆ. ಅಂದರೆ over the last year's realization, ಕಳೆದ ವರ್ಷ ಎಷ್ಟು ರಿಯಲೈಜೇಷನ್ ಆಗಿತ್ತು ಅದರ ಮೇಲೆ, ಇದು ಅಕೌಂಟ್ಸ್ ಲೆಕ್ಕ, ಇದು ಸುಳ್ಳು ಹೇಳುವುದಕ್ಕಾಗುವುದಿಲ್ಲ. ಸಾಮಾನ್ಯ ಶಿಕ್ಷಣಕ್ಕೆ ಕಳೆದ ವರ್ಷಕ್ಕೂ ಈ ವರ್ಷಕ್ಕೂ 2000 ಕೋಟಿ ಹೆಚ್ಚಾಗಿ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಇದು ಅನ್ಯುವಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟ್, ಇದರಲ್ಲೇ ರೆವಿನ್ಯೂ ಅಕೌಂಟ್, ಕ್ಯಾಪಿಟಲ್ ಅಕೌಂಟ್, ಕ್ಯಾಪಿಟಲ್ ರೆಸಿಟ್ಸ್, ರೆವಿನ್ಯೂ ಎಲ್ಲಾ ಲೆಕ್ಕ ಇದೆ. ಇದನ್ನು ಬಿಟ್ಟು ಬೇರೆ ಫಿಗರ್ಸ್ ಹೇಳುವುದಕ್ಕೆ ಬರುವುದೇ ಇಲ್ಲ. ಇವರು ಏನಾದರೂ ಬೇರೆ ಫಿಗರ್ಸ್ ಹೇಳಿದರೆ, ಇದಕ್ಕೆ ಕಾಂಟ್ರಡಿಕ್ಸ್ ಆದರೆ ನಾವು ಯಾವ ಫಿಗರ್ ಅನ್ನು ನಂಬಿಕೊಳ್ಳಬೇಕು? We have to go by this figure only. We can't go by the figures made by Mr. Yediyurappa. ಇದು ಅಕೌಂಟ್, ಖರ್ಚು ಆಗಿರುವ ಲೆಕ್ಕಾ, ಎ.ಜಿ.ಅವರ ಹತ್ತಿರ ಲೆಕ್ಕಕ್ಕೆ ಹೋಗಿರುವುದು ಇದು, ಅವರು ಲೆಕ್ಕ ಹಾಕಿ ಕಳುಹಿಸುವುದು. 2005–06ಕ್ಕೆ 4570 ಕೋಟಿ ಶಿಕ್ಷಣಕ್ಕೆ ನೀಡಲಾಗಿದೆ, 2006–07ಕ್ಕೆ 5010 ಕೋಟಿ, 500 ಕೋಟಿ ಜಾಸ್ತಿಯಾಯಿತು. ಅದರ ಮೇಲೆ ನೀವು 2000 ಕೋಟಿ ಹೆಚ್ಚಾಯಿತೆಂದು ಹೇಳುವುದು ಸರಿಯಲ್ಲ ತಾನೆ? ಇದು ಒಂದು. ಇನ್ನು ಕ್ಯಾಪಿಟಲ್ ಅಕೌಂಟ್‌ನಲ್ಲಿ ಇರಿಗೇಷನ್, ಫೈನಾನ್ಸಿಯಲ್ ಅಕೌಂಟ್ ಪೇಜ್ ನಂ–10, 2005–06ಕ್ಕೆ 68 ಕೋಟಿ, 2006–07ಕ್ಕೆ 72 ಕೋಟಿ, ಮುಂದಿನ ವರ್ಷಕ್ಕೆ 82 ಕೋಟಿ. ಪೇಜ್ ನಂ–17, ಭಾರಿ ಮತ್ತು ಮಧ್ಯಮ ನೀರಾವರಿ 2005–06ಕ್ಕೆ 3143 ಕೋಟಿ ಖರ್ಚಾಗಿರುವ ಲೆಕ್ಕ, 2006–07ಕ್ಕೆ 3865 ಕೋಟಿ. ಇದರದ್ದು ಇನ್ನು ಲೆಕ್ಕ ಬಂದಿಲ್ಲ, ಮುಂದಿನ ವರ್ಷಕ್ಕೆ 3147 ಕೋಟಿ. Where is the jump? 6% ಇನ್ಫ್ಲೇಷನ್ ನೀವು ಇಟ್ಟುಕೊಂಡು ಕಳೆದ ವರ್ಷದಷ್ಟೇ ಖರ್ಚು ಮಾಡುತ್ತೇವೆಂದರೂ ಕೂಡ ಇದಕ್ಕಿಂತ ಜಾಸ್ತಿ ಬರಬೇಕು. ಆದರೆ ನೀರಾವರಿಗೆ ಹಣ ಕಡಿಮೆಯಾಯಿತು. ಜೊತೆಗೆ 11ನೇ ಫೈನಾನ್ಸ್‌ನಲ್ಲಿ ಈ ವರ್ಷ ಜಾಸ್ತಿ ಆಗುತ್ತಿದೆ. ಈ ವರ್ಷ ನೀರಾವರಿಗೆ ಕನಿಷ್ಟ ಪಕ್ಷ 5000 ಕೋಟಿಗಿಂತ ಹೆಚ್ಚಿಗೆ ಇಟ್ಟಿದ್ದರೆ 11ನೇ ಪಂಚವಾರ್ಷಿಕ ಯೋಜನೆಯಲ್ಲಿಟ್ಟಿರುವ 24700 ಕೋಟಿ ಅನ್ನು ತಲುಪುವುದಕ್ಕೆ ಸಾಧ್ಯವಾಗುತ್ತದೆ, ಮತ್ತೆ ನಮ್ಮ

ನೀರಾವರಿ ಯೋಜನೆಗಳನ್ನೆಲ್ಲಾ ಮುಗಿಸಲು ಸಾಧ್ಯವಾಗುತ್ತದೆ, ಇವರು ಇಟ್ಟಿರುವುದೇ 3145 ಕೋಟಿ. ನಾವು ಹೆಚ್ಚಾಗಿ ಇಟ್ಟಿದ್ದೇವೆಂದು ಹೇಳುತ್ತಾರೆ, ಎಲ್ಲಿದೆ? 2007–08ಕ್ಕೆ ಇದು ಅನ್ಯುಯಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟ್, ಇದನ್ನು ಬಿಟ್ಟು ಬೇರೆ ಫಿಗರ್ಸ್ ಹೇಳುವುದಕ್ಕಾಗುವುದಿಲ್ಲ, ಇದು ಬಿಟ್ಟು ಬೇರೆ ದುಡ್ಡು ಇಲ್ಲ, ಇದ್ದರೆ ಯಾವುದು ಅಡಿಷನಲ್ ಆಗಿ ಬರುತ್ತದೆಂದು ಸಪ್ಲಿಮೆಂಟರಿಯಲ್ಲಿ ಹೇಳಬೇಕಾಗುತ್ತದೆ. ಇದನ್ನು ಬಿಟ್ಟು ಬೇರೆ ಫಿಗರ್ಸ್‌ಗಳನ್ನು ಹೇಳಿದರೆ, ಆ ಫಿಗರ್ಸ್ ಇದಕ್ಕೆ ಟ್ಯಾಲಿ ಆಗದಿದ್ದರೆ, ಇದಕ್ಕೆ ಕಾಂಟ್ರಡಿಕ್ಷನ್ ಇದ್ದರೆ, they cannot be believed. ಅದನ್ನು ಪಾಸ್ ಮಾಡುವುದಕ್ಕೆ ಬರುವುದಿಲ್ಲ. ಪ್ಲಾನಿಂಗ್‌ನಲ್ಲಿ 17782 ಕೋಟಿ ಇಟ್ಟುಕೊಂಡಿದ್ದಾರೆ, 1571 ಕೋಟಿಯನ್ನು ಡಾ: ನಂಜುಂಡಪ್ಪ ವರದಿಗೆ ತೆಗೆದು ಇಟ್ಟರೆ ಮತ್ತೆ ಪ್ಲಾನ್‌ನಲ್ಲಿ ಉಳಿದುಕೊಳ್ಳುವುದೇ 16,122 ಕೋಟಿ. ಅದಕ್ಕೆ 6% ಗ್ರೋಥ್ ಎಂದು ಇಟ್ಟುಕೊಂಡರೂ ಕೂಡ ಕಳೆದ ವರ್ಷಕ್ಕಿಂತ ಕಡಿಮೆಯಾಯಿತು. ಆದಕಾರಣ, ನೀವು ಏನೇ ಸರ್ಕಸ್ ಮಾಡಿದರೂ ಕೂಡ ನಿಮಗೆ ಅಭಿವೃದ್ಧಿಯಾಗುವುದಿಲ್ಲ. ಪ್ಲಾನ್ ಅಮೌಂಟ್ ನಿಮಗೆ ಕಡಿಮೆಯಾದರೆ, how can you expect the growth? ಪ್ಲಾನ್‌ನಲ್ಲಿ ಹೆಚ್ಚು ಹಣ ಖರ್ಚು ಮಾಡಬೇಕು, ಅದನ್ನು ಸೇರಿಸಿಕೊಂಡು ಅಷ್ಟೇ ಆಗುವುದು, ಆದುದರಿಂದ, ಪ್ಲಾನ್‌ನಲ್ಲಿ ಹೆಚ್ಚಿಗೆ ಹಣ ಖರ್ಚು ಮಾಡದೇ ಹೋದರೆ, ಡೆವಲಪ್‌ಮೆಂಟಲ್ ಎಕ್ಸ್‌ಫೆಂಡಿಚರ್ ಹೆಚ್ಚಿಗೆ ಮಾಡದೆ ಹೋದರೆ ರಾಜ್ಯ ಅಭಿವೃದ್ಧಿಯಾಗುವುದಿಲ್ಲ. ಅದಕ್ಕೆ ಕಳೆದ ವರ್ಷ ನಿಮಗೆ ಏನಾಗಿದೆ ಎಂದರೆ, 2004–05ರಲ್ಲಿ ಈ ತರಹ ಖರ್ಚು ಮಾಡಿರುವುದರಿಂದ 56.72% ಆಯಿತು. 2002–03ರಲ್ಲಿ ಡೆವಲಪ್‌ಮೆಂಟಲ್ ಎಕ್ಸ್‌ಫೆಂಡಿಚರ್ ಬರೀ 37% ಇತ್ತು, 2003–04 ಕ್ಕೆ ಅದು ಹೆಚ್ಚಾಯಿತು, ಮತ್ತೆ 2005–06 ರಲ್ಲಿ 92.95% ಆಯಿತು, ಅಂದರೆ 21%, ಡೆವಲಪ್‌ಮೆಂಟಲ್ ಎಕ್ಸ್‌ಫೆಂಡಿಚರ್ ಗ್ರೋಥ್ ಆಯಿತು. 2006–07ರಲ್ಲಿ 62.95% ರಿಂದ 63% ಗ್ರೋಥ್ ಆಗಿದೆ. The growth is most negligible. It is 0.05%. Where is the growth? ಅದಕ್ಕೆ ನಾವು ಮಾತನಾಡುವಾಗ ಅಲ್ಲಿ ಖರ್ಚು ಮಾಡಿದ್ದೇವೆ, ಇಲ್ಲಿ ಖರ್ಚು ಮಾಡಿದ್ದೇವೆಂದು ಫಿಗರ್ಸ್ ಹೇಳುವುದಲ್ಲ, ಇಲ್ಲಿ ರಾಜ್ಯದ ಬೆಳವಣಿಗೆಯಾಗಬೇಕು. 2005–06ರಲ್ಲಿ ದೇಶದ ಜಿಡಿಪಿ ಗ್ರೋಥ್ 9%, 2006–07ರಲ್ಲಿ 9.2%, ನಮ್ಮದು 2005–06ರಲ್ಲಿ 7.8%, 2006–07ರಲ್ಲಿ 7.9%. We have reached not even 8%. ನೀವು ಇಷ್ಟೆಲ್ಲಾ 18 ತಿಂಗಳಲ್ಲಿ

ಖರ್ಚು ಮಾಡಿದ ಮೇಲೆ, Human Development Indexನಲ್ಲಿ ನಾವು ಎಲ್ಲಿದ್ದೇವೆ? Where is our place? ನಾವು ಒಂದು ಜಾಗ ಆದರೂ ಜಂಪ್ ಆಗಬೇಕಾಗಿತಲ್ಲ? ನಾವು ಜಾಸ್ತಿ ಮಾಡಿಬಿಟ್ಟಿದ್ದೇವೆ, ಭಾರಿ ಹಣ ಖರ್ಚು ಮಾಡಿಬಿಟ್ಟಿದ್ದೇವೆ, ಅಭಿವೃದ್ಧಿ ಎಲ್ಲಾ ಜಾಸ್ತಿ ಆಗಿದೆ ಎನ್ನುವುದಾದರೆ, even today we are in 7th place in Human Development Index. Not an inch we have moved. ಆ ರೀತಿ ರಾಜ್ಯ ಕಡಿಮೆಯಾಗುತ್ತಿದೆ. ನಿಮಗೆ ಯೋಜನೆ ಲೆಕ್ಕವನ್ನು ಹೇಳಿಬಿಡುತ್ತೇನೆ, 2004–05ರಲ್ಲಿ ಯೋಜನೇತರ ವೆಚ್ಚ 25000 ಚಿಲ್ಲರೆ ಕೋಟಿ ಇತ್ತು, 2005–06ಕ್ಕೆ ಅದು ಕಡಿಮೆಯಾಯಿತು, ಆಗ ಇವರು ಇರಲಿಲ್ಲ, 23,000 ಕೋಟಿಗೆ ಕೆಳಗೆ ಇಳಿಯಿತು. ಮತ್ತೆ, 2006–07 ರಲ್ಲಿ 28 ಸಾವಿರ ಕೋಟಿ ರೂಪಾಯಿಗಳಾಯಿತು. Page No-286, Economic Survey ತೆಗೆದು ನೋಡಿ. ಜಾಸ್ತಿಯಾಯಿತು. ಅಂದರೆ, non plan amount is going up. Plan amount is coming down. How can you expect growth? Can anybody expect growth? ಯಾರಾದರೂ Common man, economist ಬಿಟ್ಟುಬಿಡಿ.... ಏನೂ resource mobilize ಮಾಡಿಕೊಳ್ಳುವುದಕ್ಕೇ ಪ್ರಯತ್ನ ಮಾಡಿಲ್ಲ. Commercial Tax ಕಡಿಮೆಯಾಗಿದೆ. Stamp Duty ಕಡಿಮೆಯಾಗಿದೆ. Motor Vehicle Tax ಕಡಿಮೆಯಾಗಿದೆ. ಕಳೆದ ವರ್ಷಕ್ಕೂ, ಈ ವರ್ಷಕ್ಕೂ ಹೋಲಿಸಿದರೆ, Excise ನಲ್ಲಿ ಮಾತ್ರ 1% ಹೆಚ್ಚಾಗಿದೆ. ಅದು ಬಿಟ್ಟರೆ, resource mobilize ಮಾಡುವಲ್ಲಿ Mr. Yadiyurappa has totally failed. Plan ನಲ್ಲಿ ನೀವು invest ಮಾಡುವ ಕಡೆ fail ಆಗಿದ್ದೀರಿ. Capatil formation ನಲ್ಲಿ fail ಆಗಿದ್ದೀರಿ. ಹಾಗಾಗಿ, ರಾಜ್ಯದ ಬೆಳವಣಿಗೆ ನೀವು ಬಂದ ಮೇಲೆ ಕುಂಠಿತ ಆಗುತ್ತಿದೆ. ಇನ್ನು ಮುಂದೆಯೂ ಕುಂಠಿತವಾಗುತ್ತಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಬಹಳ ವಿನಮ್ರತೆಯಿಂದ ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಕೆಲವು ಅಂಕಿಅಂಶಗಳನ್ನು ನಾನೂ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ಮಾತನಾಡುವುದಕ್ಕೆ ಬಿಡಬೇಕು ಸಾರ್. ನಾನು ಉತ್ತರ ಕೊಡುವುದಕ್ಕೆ ನಿಂತಿದ್ದೇನೆ. ನಿಮ್ಮ ಮಾತಿಗೆ ನಾನು ಉತ್ತರ ಕೊಡುತ್ತೇನೆ. ವಿನಮ್ರತೆಯಿಂದ ವಿನಂತಿ ಮಾಡುತ್ತಿದ್ದೇನೆ. 2007–08 11ನೇ ಪಂಚವಾರ್ಷಿಕ ಯೋಜನೆಯ ಮೊದಲನೇ ವರ್ಷ, 2006–07ರಲ್ಲಿ

ಬಹಳಷ್ಟು ವೆಚ್ಚಗಳನ್ನು ಈ ವರ್ಷ non Plan ಗೆ ಸೇರಿಸಬೇಕಾಗಿದೆ. ಆದ್ದರಿಂದ, plan ವೆಚ್ಚ ಹೆಚ್ಚಾಗುವಂತೆ ಕಾಣುತ್ತಿಲ್ಲ. ಒಟ್ಟು ವೆಚ್ಚ ಸಂಚಿತ ನಿಧಿಯಲ್ಲಿ ಗಣನೀಯ ಹೆಚ್ಚಳವಾಗುವುದಿದೆ. ಅದರಲ್ಲಿ 2006–07ರಲ್ಲಿ ಕೆಲವು ಯೋಜನಾ ವೆಚ್ಚದ ಬಾಬುಗಳೂ ಸೇರಿವೆ. ಎರಡನೆಯದಾಗಿ, ನೀರಾವರಿ ಬಗ್ಗೆ ಹೇಳುವುದಾದರೆ, ಹಿಂದೆ ಸಾಲ ಮರುಪಾವತಿಯನ್ನು ನಾವು plan ನಲ್ಲಿ ತೋರಿಸುತ್ತಿದ್ದೇವೆ. ಈಗ ಸಾಲ ಮರುಪಾವತಿ ಮೊತ್ತವನ್ನು non planನಲ್ಲಿ ತೋರಿಸುತ್ತಿದ್ದೇವೆ. ಆದ್ದರಿಂದ, plan ನಲ್ಲಿ ಒದಗಿಸಿದ ಮೊತ್ತ ಕಡಿಮೆ ಎಂದು ಕಾಣಿಸುತ್ತಿದೆ. ಕೆಲವು ಅಂಕಿಅಂಶ ವ್ಯತ್ಯಾಸವಾಗಿದೆ ಎಂದು ನೀವು ಹೇಳಿದಿರಿ. MTFP ನಲ್ಲಿ ನೀಡಿದ revised estimate, ಪರಿಷ್ಕೃತ ಅಂದಾಜಿದೆ. revised estimate ನಲ್ಲಿ ಅದು ಬರುತ್ತದೆ. ಅಂಕಿ ಅಂಶಗಳ ಬಗ್ಗೆ ಈಗ ತಾವೇನು ಹೇಳಿದಿರಿ, ಉದಾಹರಣೆಗೆ, ಅಬಕಾರಿ ತೆರಿಗೆ 4525 ಕೋಟಿ ರೂಪಾಯಿ ಬಂದಿದೆ ಎಂದು ನಾನು ಹೇಳಿದ್ದೇನೆ. ಆ figures ಸರಿ ಇದೆ.

ಶ್ರೀ ಆರ್.ವಿ.ದೇಶಪಾಂಡೆ : ನಾವು ಹೇಳಿದ Figures and Medium Term Fiscal Plan figures ಸರಿ ಇಲ್ಲ. ತಾವು check up ಮಾಡಿ ನೋಡಿ. You ask your officers to examine.

ಶ್ರೀ ಬಿ.ಎಸ್.ಯಡಿಯೂರಪ್ಪ : ಕಪ್ಪು ಬಿಳಿ ಮಾಡುವುದಕ್ಕಾಗುವುದಿಲ್ಲ, ಬಿಳಿ ಕಪ್ಪು ಮಾಡುವುದಕ್ಕಾಗುವುದಿಲ್ಲ. ಅಂಕಿಅಂಶ ಅದು ಸತ್ಯಾಂಸವಿದೆ. Plan expenditure 2005–06ರಲ್ಲಿ, 11,290 ಕೋಟಿ ರೂಪಾಯಿ ಇದ್ದರೆ, 11,131 ಕೋಟಿ ರೂಪಾಯಿ ಖರ್ಚಯಿತು. 20606–07 ರಲ್ಲಿ 14,602.76 ಕೋಟಿ ರೂಪಾಯಿ ಇದ್ದರೆ, ಅದು 16457 ಕೋಟಿ ರೂಪಾಯಿಗಳಾಯಿತು. ಏಕೆಂದರೆ, Supplementary Budget ನಲ್ಲಿ additional ಆಗಿ PWD ಗೆ. Urban Development ಗೆ ಬೇರೆ ಎಲ್ಲ ಹಣ ಕೊಟ್ಟಿದ್ದೇವೆ. ಅಂದರೆ, 2006–07ರಲ್ಲಿ plan expenditure 16457 ಕೋಟಿ ರೂಪಾಯಿ, whereas in 2005-06 11131 crores. Plan expenditure ಬಗ್ಗೆ 2007–08ಕ್ಕೆ 17257 ಕೋಟಿ ರೂಪಾಯಿಗಳನ್ನು ನಾವು ಅಂದಾಜು ಇಟ್ಟುಕೊಂಡಿದ್ದೇವೆ. ನಾನು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುತ್ತಿದ್ದೇನೆ. 2005–06ರಲ್ಲಿ 741 ಕೋಟಿ 91 ಲಕ್ಷ ರೂಪಾಯಿ ಇಟ್ಟುಕೊಂಡಿದ್ದರೆ, 2006–07ರಲ್ಲಿ 1167 ಕೋಟಿ 60 ಲಕ್ಷ ರೂಪಾಯಿ ಇಟ್ಟಿದ್ದೇವೆ. 2007–08ರಲ್ಲಿ 1430 ಕೋಟಿ 47

ಲಕ್ಷ ರೂಪಾಯಿ ಇಟ್ಟಿದ್ದೇವೆ. ಸಮಾಜ ಕಲ್ಯಾಣವನ್ನು ನೀವು ನಿರ್ಲಕ್ಷ್ಯ ಮಾಡಿದ್ದೀರಿ, ಹಣ ಇಟ್ಟಿಲ್ಲವೆಂದು ಹೇಳಿದರೆ ಹೇಗೆ?

ಶ್ರೀ ಸಿದ್ಧರಾಮಯ್ಯ : Pooled amountನಲ್ಲಿ ನಾವೆಲ್ಲ ಸೇರಿಸಿ SCP ಯಲ್ಲಿಡುತ್ತೇವಲ್ಲ, ಅದು ಕಳೆದ ವರ್ಷ ಎಷ್ಟಿತ್ತು?

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಕೇಳುವುದಕ್ಕೇ ರೆಡಿ ಇಲ್ಲವಲ್ಲ. ಮಲ್ಲಿಕಾರ್ಜುನ ಖರ್ಗೆಯವರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಯೋಜನಾ ಕಾರ್ಯಕ್ರಮದ ಕೆಳಗಡೆ ನಾವು ಕಳೆದ ವರ್ಷಕ್ಕಿಂತ 263 ಕೋಟಿ ರೂಪಾಯಿ ಜಾಸ್ತಿ ಇಟ್ಟಿದ್ದೇವೆ. SCP and TSP ಯೋಜನೆಯಡಿ ಯಲ್ಲಿ ಈ ವರ್ಷ 3974 ಕೋಟಿ ರೂಪಾಯಿ ವೆಚ್ಚ ಆಗುತ್ತಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅದು Government of India SCP amount 18% ಅಥವಾ population ಪ್ರಕಾರ ಮಾಡಲೇಬೇಕೆಂಬ direction ಇದೆ. ಅದರ ಕೆಳಗಡೆ ಅಲಾಟ್ ಇದೆ. ನಿಮ್ಮ ಉಪಕಾರವೇನೂ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅದಕ್ಕೇ ಇಟ್ಟಿದ್ದು ಸಾರ್. ನಮ್ಮ ಮನೆಯಿಂದ ತಂದೆ ಎಂದು ಹೇಳಿದೆನೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸುಮ್ಮನೆ ಜಂಭ ಕೊಚ್ಚಿಕೊಳ್ಳುವುದು ಬೇಡ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಈ ವರ್ಷ 6 ಸಾವಿರ ಕೋಟಿ ರೂಪಾಯಿ ಜಾಸ್ತಿ ಕೊಟ್ಟಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾತನಾಡುವುದಕ್ಕೇ ಬಿಡುವುದಿಲ್ಲ ವೆಂದರೆ ಹೇಗೆ?

ಅಧ್ಯಕ್ಷರು : ನಿಮ್ಮ ವಿಚಾರ ಹೇಳಿದಿರಿ. ಅವರು ಅವರ ವಿಚಾರ ಹೇಳುತ್ತಾರೆ. ಕೇಳಿ.

ಡಾ: ಹೆಚ್.ಸಿ.ಮಹಾದೇವಪ್ಪ : Special Component ಅನ್ನು Government of India ಕೊಟ್ಟಿದ್ದರೆ Single Window Agency ಯವರು ಮಾಡಬೇಕು. ಮಾಡಲಿಲ್ಲ.

ಅಧ್ಯಕ್ಷರು : ಆಯಿತು, ಹೇಳಲಿ ಬಿಡಿ.

ಡಾ: ಹೆಚ್.ಸಿ.ಮಹಾದೇವಪ್ಪ : ಮುಖ್ಯಮಂತ್ರಿಯವರಿಗೂ ಹೇಳಿದ್ದೇವೆ. **(ಗೊಂದಲ)** ಏನೂ ಮಾಡುವುದಿಲ್ಲ. ಸುಮ್ಮನೆ ಹೆಚ್ಚು Government of India ದ್ದನ್ನೇ ಇವರು ಓದಿಬಿಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀರಾವರಿ ಇಲಾಖೆಯ ಬಗ್ಗೆ ಇಲ್ಲಿ ತೋರಿಸುತ್ತಿದ್ದೆವು. Separate ಆಗಿ ತೋರಿಸಿಕೊಂಡಿದ್ದೇವೆ. ಆದ್ದರಿಂದ, 2007–08ರಲ್ಲಿ 3630 ಕೋಟಿ ರೂಪಾಯಿ ಭಾರೀ, ಮಧ್ಯಮ ನೀರಾವರಿ ನಾವು ಇಟ್ಟಿದ್ದೇವೆಂದು 10 ಬಾರಿ ನಾನು ಹೇಳಿದ್ದೇನೆ. ಇಲ್ಲಿ ಬಜೆಟ್ ಮಂಡಿಸಿದಾಗಿ ನಿಂದ ಇದರ ಬಗ್ಗೆ ನಾನು Clarification ಕೊಟ್ಟಿದ್ದೇನೆ. ಸಣ್ಣ ನೀರಾವರಿಗೆ ಇವರ ಕಾಲದಲ್ಲಿ 2004–05ರಲ್ಲಿ ಇವರು ಖರ್ಚು ಮಾಡಿದ್ದು 210 ಕೋಟಿ ರೂಪಾಯಿ. 2005–06ರಲ್ಲಿ 240 ಕೋಟಿ ರೂಪಾಯಿ, 2006–07ರಲ್ಲಿ 465 ಕೋಟಿ ರೂಪಾಯಿ, ಈ ವರ್ಷ 759 ಕೋಟಿ ರೂಪಾಯಿ ಇಟ್ಟಿದ್ದೇವೆ. ಅಂದರೆ, ನೀರಾವರಿ ಯೋಜನೆಗೆ ಆದ್ಯತೆ ಕೊಟ್ಟಿಲ್ಲವೇ?

ಅಧ್ಯಕ್ಷರು : Minor Irrigation ಗೆ, ಎಷ್ಟು ಕೊಟ್ಟಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ಎಷ್ಟು ಇಟ್ಟಿದ್ದೇವೆ, ಎಷ್ಟು ಖರ್ಚಾಗಿದೆ ಎಂಬ ಅಂಕಿಅಂಶ ಹೇಳುತ್ತಿದ್ದೇನೆ. **(ಗೊಂದಲ)** ನಿಮ್ಮ ಕಾಲದಲ್ಲಿ ಸೇರಿರಲಿಲ್ಲವೇ? ಸನ್ಮಾನ್ಯ ಪ್ರತಿಪಕ್ಷದ ನಾಯಕರಾದ. . . .

ಶ್ರೀ ಮಲ್ಲಿಕಾರ್ಜುನ ಖರ್ಗೆ : Irrigation ಗೆ 17% ಗಿಂತಲೂ ಹೆಚ್ಚಿನ ಹಂ ಇಟ್ಟಿದ್ದೇನೆಂದು ಹೇಳುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ ಸಾರ್.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಮತ್ತೆ, ಹಣ ಎಲ್ಲಿಂದ ಬರುತ್ತದೆ? ಇದ್ದುದರಲ್ಲಿಯೇ ಮಾಡಬೇಕಲ್ಲ?

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು 29% ಇಟ್ಟಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಎಲ್ಲಿದೆ? ನಿಮ್ಮ ಬಜೆಟ್ ಬುಕ್ ತೆಗೆದು ನೋಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಒಂದು ನಿಮಿಷ yield ಆದರೆ ನಾನು ಹೇಳುತ್ತೇನೆ.

ಶ್ರೀ ಎಂ.ಮಲಿಕಾರ್ಜುನ ಖರ್ಗೆ : Income and Expenditure ನಲ್ಲಿ ಕೊಟ್ಟಿದ್ದೀರಲ್ಲ, ಆ ಪುಸ್ತಕ ನೋಡಿ ಸ್ವಾಮಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಏಕೆ ಈ ತರಹ ವಾದವಾಗುತ್ತಿದೆ ನನಗೆ ಗೊತ್ತಾಗುತ್ತಿಲ್ಲ. ಒಂದು ನಿಮಿಷ ಸಾರ್, ನಾನು ಕಳುಹಿಸಿಕೊಡುತ್ತೇನೆ. ಮತ್ತೆ, ನಿಮ್ಮ ಹತ್ತಿರ ನಾನು ಚರ್ಚೆ ಮಾಡುತ್ತೇನೆ.

ಅಧ್ಯಕ್ಷರು : ಅವರ ವಿಚಾರ ಅವರು ಹೇಳುತ್ತಾರೆ. ನೀವು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾವೇನು ಸಾಲ ಮರುಪಾವತಿ ಮಾಡುತ್ತಿದ್ದೇವೆ, ಆ ಫಿಗರ್ ಬಿಟ್ಟು, ಕಳೆದು ನಾನು ಜವಾಬ್ದಾರಿ ಸ್ಥಾನದಲ್ಲಿದ್ದು ಅಂಕಿಅಂಶ ಕೊಟ್ಟಿದ್ದೇನೆ, ಹೇಳುತ್ತಿದ್ದೇನೆ. 2005–06ರಲ್ಲಿ 2141 ಕೋಟಿ ರೂಪಾಯಿ ಇಟ್ಟಿದ್ದೆವು. 2006–07ರಲ್ಲಿ 2812 ಕೋಟಿ ರೂಪಾಯಿ ಇಟ್ಟಿದ್ದೆವು. 2007–08ರಲ್ಲಿ 3630 ಕೋಟಿ ರೂಪಾಯಿ ಭಾರೀ ಮತ್ತು ಮಧ್ಯಮ ನೀರಾವರಿಗೆ ಇಟ್ಟಿದ್ದೇವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : 16ನೇ ಪೇಜ್ ನೋಡಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : Annexure-1, 108 page. ಇದು ಅವರು ಕೊಟ್ಟಿದ್ದು. ಪ್ರಿಂಟಾಗಿದೆ. Agriculture ಅಲ್ಲ ಇದು. 1255 crores, 7.6%. Special area programme 146, 0.82, Irrigation and Flood control 3145.77 ಅಂದರೆ 17.69%. ಮತ್ತೆ ಬೇರೆ ಯಾವ ಪುಸ್ತಕ ಇದೆ ಗೊತ್ತಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಕಳೆದ ವರ್ಷ 3900 ಕೋಟಿ ರೂಪಾಯಿ ಇತ್ತು, ಈ ವರ್ಷ 3100 ಕೋಟಿ ರೂಪಾಯಿ ಇದೆ. 29%, ರಿಂದ 26% ಆಯಿತು, 26% ನಿಂದ 17% ಆಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ : 850 ಕೋಟಿ ರೂಪಾಯಿ ಸಾಲ ನಾವೇನು ಮರುಪಾವತಿ ಮಾಡಿದ್ದೇವೆ, ಅದು ಕೂಡ ಸೇರಿದೆ. ಅದನ್ನು ಕಳೆದು ಈ ಫಿಗರ್ ಹೇಳುತ್ತಿದ್ದೇನೆ. ಅದು ಹೇಗೆ Annual Report ನಲ್ಲಿ ವ್ಯತ್ಯಾಸವಾಗುತ್ತದೆ? I am telling the Same figure ಎಲ್ಲಿ ವ್ಯತ್ಯಾಸ ವಾಗುತ್ತದೆ, ನನಗೆ ಅರ್ಥವಾಗುತ್ತಿಲ್ಲ. ಅವರ Annual Report ನೋಡಿಯೇ ಬರೆದುಕೊಡುವುದು. ನೀವಿದ್ದರೂ ಅವರೇ ಬರೆದುಕೊಡುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ : ಕ್ಯಾಪಿಟಲ್ ಅಕೌಂಟ್ಸ್ 4701–4700–4705–4711, 3969 ಕೋಟಿ 93 ಲಕ್ಷ ಇದೆ.

ಶ್ರೀ ಸಿದ್ದರಾಮಯ್ಯ : ರೆವಿನ್ಯೂ ಅಕೌಂಟ್ 10ನೇ ಪೇಜ್‌ನಲ್ಲಿದೆ, ಅದನ್ನು ತೆಗೆಯಿರಿ. 68 ಕೋಟಿ 2004--05, 2005–06, 72 ಕೋಟಿ 2006–07,.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಹೇಳಿದ ಅಂಕಿಅಂಶಗಳನ್ನೇ ಅವರು ಬರೆದು ಕೊಡುವುದು, ಅಧಿಕಾರಿಗಳೇ ಬೇರೆ ನಾನು ಬೇರೆ ಹೇಳುವುದಕ್ಕೆ ಆಗುತ್ತದೆಯೆ?

ಶ್ರೀ ಸಿದ್ದರಾಮಯ್ಯ : ನಿಮ್ಮ ಫಿಗರ್‌ಗಳ ಪ್ರಕಾರ, ಏನೆಂದರೆ, Please don't claim "ಕಳೆದ ವರ್ಷಕ್ಕಿಂತ ಈ ವರ್ಷ ನಾವು ಜಾಸ್ತಿ ಮಾಡುತ್ತಿದ್ದೇವೆ, ನೀರಾವರಿಗೆ ಹೆಚ್ಚು ಖರ್ಚು ಮಾಡುತ್ತಿದ್ದೇವೆ" ಎಂದು ಹೇಳುವುದಕ್ಕೆ ಹೋಗಬೇಡಿ. ಅದಕ್ಕಿಂತ ಕಡಿಮೆಯಾಗಿದೆ because ಅದನ್ನು ಮೈನಸ್ ಮಾಡಿದ್ದೇವೆಂದು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಕೊಡುತ್ತಿದ್ದೇವಲ್ಲ ಸಾರ್ ಸ್ವಲ್ಪ ಕೇಳಿ. ಸಾಲ ಮರುಪಾವತಿ ಮಾಡಿದಂಥ ಫಿಗರ್‌ಗಳು ಇದರಲ್ಲಿ ಸೇರಿರುವುದು.. ಸಾಲ ಮರುಪಾವತಿ ಮಾಡಿದರೆ ಅದು ಅಭಿವೃದ್ಧಿ ಕಾರ್ಯವಾಗುವುದಿಲ್ಲ. actually ಎಷ್ಟು ಹಣವನ್ನು ಕೊಟ್ಟಿದ್ದೇನೆ, ಅಷ್ಟನ್ನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರೆ ಕೇಳಿ. ಕಳೆದ ವರ್ಷ repayment of interest ಇತ್ತು. ಅದರ ಜೊತೆಗೆ ಸೇರಿಕೊಂಡಿತ್ತು. OK, agreed. ನಿಮ್ಮ ಪ್ರಕಾರ ತಾವೇನು ವಿವರಣೆ ಕೊಡುತ್ತಿದ್ದೀರಿ, ಈ ವರ್ಷ ನಾವು ಬಡ್ಡಿ ಕೊಡುವುದಿಲ್ಲ, ಸಪರೇಟಾಗಿ ಇಟ್ಟು ಬಿಟ್ಟಿದ್ದೇವೆ, ನಾನ್ ಪ್ಲಾನ್‌ನಲ್ಲಿ ಇಟ್ಟು ಬಿಟ್ಟಿದ್ದೇವೆ. ಇದರಲ್ಲಿ ಸೇರಿಸಿಲ್ಲವೆಂದು ಹೇಳುತ್ತಿದ್ದೀರಿ. OK. ಅದನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಕೂಡ ಕಡಿಮೆಯಾಗುತ್ತದೆ. ಮತ್ತೆ 6% inflation. Growth ಎಲ್ಲಿದೆ? ಪ್ಲಾನ್ ಸೈಜ್ ಈ ವರ್ಷ ಕಡಿಮೆಯಾಯಿತಲ್ಲ? ದುಡ್ಡು ಕೊಡುವುದಕ್ಕೆ ನಿಮ್ಮ ಹತ್ತಿರ ಎಲ್ಲಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ : ಪ್ರತಿ ಪಕ್ಷದ ನಾಯಕರಾಗಿರತಕ್ಕಂಥ ಧರ್ಮಸಿಂಗ್‌ರವರು ಈ resource mobilization ಬಗ್ಗೆ ನೀವು ವಿಶೇಷ ಗಮನ ಕೊಟ್ಟಿಲ್ಲ, 5000 ಕೋಟಿ ರೂಪಾಯಿ ನಿಮಗೆ ತೊಂದರೆಯಾಗುತ್ತದೆ ಎಂದು ಹೇಳಿದಿರಿ. ನೀರಾವರಿಯ ಬಗ್ಗೆ ಇಷ್ಟರವರೆಗೆ ಹೇಳಿದ್ದೇವಲ್ಲ. ಆಯಿತು ಬಿಡಿ ಸಾರ್. 5000 ಕೋಟಿ ರೂಪಾಯಿ ಕಡಿಮೆಯಾಗುತ್ತದೆ, ಅದನ್ನು ತರುತ್ತೀರಾ ಎನ್ನುವ ಮಾತನ್ನು ಹೇಳಿದ್ದೀರಿ. ಹೋದ ವರ್ಷವೂ

ಕೂಡ ನಾವು ಆಯವ್ಯಯ ಇಟ್ಟಂಥ ಸಂದರ್ಭದಲ್ಲಿ ಇದೇ ಮಾತುಗಳನ್ನು ತಾವು ಹೇಳಿದ್ದೀರಿ. ಯಾವುದಕ್ಕೂ ಕೊರತೆ ಮಾಡಲಿಲ್ಲ. ನಾವು ಈ ಸಾರಿ ನಿರೀಕ್ಷಡ ಮಾಡಿರುವುದು, ಸೋರಿಕೆಯನ್ನು ತಡೆಯುವುದರ ಮುಖೇನ ಸಂಪನ್ಮೂಲಗಳನ್ನು ಕ್ರೋಢೀಕರಿಸುವಂಥ ಕೆಲಸ ಮಾಡುತ್ತಿದ್ದೇವೆ. ಏರ್ ಪೋರ್ಟ್ ಬರುತ್ತಿರುವ ಭಾಗದಲ್ಲಿರುವ ಜಮೀನನ್ನು ಹರಾಜು ಮಾಡಿದರೆ ಸುಮಾರು 700 ರಿಂದ 800 ಕೋಟಿ ರೂಪಾಯಿ ಆದಾಯ ಬರುತ್ತದೆಂದು ಕ್ಯಾಬಿನೆಟ್‌ನಲ್ಲಿ ಡಿಷಿಷನ್ ತೆಗೆದುಕೊಂಡಿದ್ದೇವೆ. ಆದರೆ ಜೊತೆಗೆ ಬೆಂಗಳೂರು ಸುತ್ತಾಮುತ್ತಾ ಏನು ಒತ್ತುವರಿಯಾಗಿದೆ..

ಶ್ರೀ ಧರ್ಮಸಿಂಗ್ : ಇರಿಗೇಷನ್‌ಗೆ ಮೊದಲು 3024 ಕೋಟಿ ರೂಪಾಯಿಗಳನ್ನು ನೀಡಲಾಗಿತ್ತು. ಸಿದ್ದರಾಮಯ್ಯನವರು ಬಂದಾಗ 3924 ಆಯಿತು. ನಾವು 29% ಗೆ ಅನ್ನು ಹೆಚ್ಚಿಗೆ ಮಾಡಿದ್ದೇವೆ. ನೀವು ಬಂದ ಮೇಲೆ ತಾವು ಅದನ್ನು 17% ಗೆ ಇಳಿಸಿದಿರಿ. resource mobilization ದಲ್ಲಿ ನೀವೇನು ಇವತ್ತು ಸಾಲ ಮನ್ನಾದಲ್ಲಿ 2300 ಕೋಟಿ ರೂಪಾಯಿಗಳನ್ನು ಅಪೆಕ್ಸ್ ಬ್ಯಾಂಕ್‌ಗೆ ಕೊಡಬೇಕಾಗಿದೆ. ಇಲ್ಲಿಯವರೆಗೆ ಕೊಟ್ಟಿದ್ದು 75 ಕೋಟಿ. DCC Bank ಎಲ್ಲಾ ಕಡೆಗೆ ಸಾಲ ಕೊಡಲಿಕ್ಕೆ ಆಗುತ್ತಿಲ್ಲ. ಸಾರಾಯಿ ನಿಷೇಧದಿಂದಾಗಿ 1902 ಕೋಟಿ deficit ಇದೆ. ಈ ಎಲ್ಲಾ ಕೂಡಿ 5000 ಕೋಟಿಯನ್ನು ಯಾವ ರೀತಿಯಾಗಿ resource mobilization ಮಾಡುತ್ತೀರಿ? ಹೋದ ಬಜೆಟ್‌ನಲ್ಲಿ ಹೇಳಿ ನಾಲ್ಕು ತಿಂಗಳ ಅವಧಿಯಲ್ಲಿ ನೀವು ಎಲ್ಲಿ ಹಣ ಬಿಡುಗಡೆ ಮಾಡಲಿಲ್ಲ. ರೈತರಿಗೆ ಇವತ್ತು ಎಲ್ಲಿಯೂ ಸಾಲ ಸಿಗುತ್ತಿಲ್ಲ. ಮುಂದೆ ಹೇಗೆ ಮಾಡುತ್ತೀರಿ? ತೆರಿಗೆ ಎಷ್ಟು ಕಲೆಕ್ಟ್ ಮಾಡಿದಿರಿ? ತೆರಿಗೆಯಲ್ಲಿ 682 ಅದರಲ್ಲಿ ಏನೋ ಆಗಿದೆ, there also you have failed.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಎಲ್ಲಾದರಲ್ಲೂ fail ಆಗಿದ್ದೀರಿ ಎಂದು ಹೇಳುವುದು ನಿಮ್ಮ ಧರ್ಮ. ಆ ಕೆಲಸ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ನೀವು ಆಪೋಜಿಷನ್‌ನಲ್ಲಿದ್ದಾಗ ಧರ್ಮಕ್ಕೆ ಹೇಳುತ್ತಿದ್ದೀರಾ? ಈಗ ಧರ್ಮ ಎಂದು ಹೇಳುತ್ತೀರಾ?

(ಗೊಂದಲ)

ಅಧ್ಯಕ್ಷರು : ಅಂದರೆ ಪ್ರತಿಪಕ್ಷದ ಸ್ಥಾನದಲ್ಲಿದ್ದಾಗ ಒಂದು ರೀತಿ ಹೇಳುವುದು, ಈಗ ಒಂದು ತರಹ ಹೇಳುವುದು. ಪಾತ್ರಗಳ ಬದಲಾವಣೆ.. ನಾನು ನೋಡಿದೆ, ಮಾತಿನ ಅರ್ಥ ಏನೆಂದರೆ,..

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನೀವು ನೋಡಿಲ್ಲವೆ? ಈ ರೀತಿ ಹೇಳಿದರೆ ಹೇಗೆ?

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನು 2007–08ನೇ ಆಯವ್ಯಯ ವನ್ನು ಮಂಡನೆ ಮಾಡಿದ ದಿವಸದಿಂದ ಈ ನೀರಾವರಿಯ ಬಗ್ಗೆ ತರ್ಕ ಇದೆ. ಆವತ್ತು ನಾನು ಹೇಳಿದ್ದೆ. ಮೊದಲು ಈ ರೀತಿಯಾಗಿ ಪ್ರಾಜೆಕ್ಟ್‌ಗಳಿಗೆ ಹಣವನ್ನು ನಿಗದಿ ಮಾಡಿದಂಥ ಕಾಲದಲ್ಲಿ, ಸಾಲ ಮರುಪಾವತಿ ಮಾಡಿದಂಥ ಫಿಗರ್ ಇದರಲ್ಲಿ ಸೇರುತ್ತಿತ್ತು. ಅದನ್ನು ತೆಗೆದು ಹಾಕಿದ್ದೇವೆ, ಆದುದರಿಂದ ಈ ಫಿಗರ್ ಇದೆ ಎಂದು ಹೇಳಿದ್ದೇನೆ. ಅದನ್ನು ದಯಮಾಡಿ ಅವರು ಒಪ್ಪಿಕೊಳ್ಳಬೇಕು. ತರ್ಕ ಮಾಡಿದರೆ ನಾನೇನು ಮಾಡಬೇಕು ಗೊತ್ತಿಲ್ಲ.

ಅಧ್ಯಕ್ಷರು : ಈಗ ಒಪ್ಪಿಕೊಂಡಿದ್ದಾರೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : 5000 ಕೋಟಿ ರೂಪಾಯಿ ನಿಮ್ಮ ಮೇಲೆ ಭಾರ ಬೀಳುತ್ತದೆ, ಇದಕ್ಕೆ ಏನು ಮಾಡುತ್ತೀರಿ? ಇದು ನಿಜ. ಇದು ನಿಮಗೆ ಬಹಳ ದೊಡ್ಡ ಭಾರ. ಇವತ್ತು ಇಡೀ ಎಲ್ಲಾ ಮನೆಯ ಸದಸ್ಯರು ಒಟ್ಟಿಗೆ ಕುಳಿತು ರೈತರಿಗೆ ಸುಮಾರು ಸಾವಿರ ಕೋಟಿ ರೂಪಾಯಿ ಕನ್‌ಸೇಷನ್ ಕೊಡಬೇಕು, 25 ಸಾವಿರ ಸಾಲ ಮನ್ನಾದ ಬಗ್ಗೆ ಹೇಳಿದಾಗ, ಇಡೀ ಮನೆಯ ಸದಸ್ಯರು ಎಲ್ಲರೂ ಒಕ್ಕೊರಲಿನಿಂದ ಎಲ್ಲರಿಗೂ 25 ಸಾವಿರ ಮನ್ನಾ ಮಾಡಬೇಕೆಂದಾಗ ಅದಕ್ಕೆ 2200 ಕೋಟಿ ರೂಪಾಯಿ ಆಯಿತು. ಹೀಗಾಗಿ 1200 ಕೋಟಿ ಹೆಚ್ಚಿನ ಭಾರ ಸರ್ಕಾರದ ಮೇಲೆ ಬಂತು. ಯಡಿಯೂರಪ್ಪನವರೆ ಈ ದುಡ್ಡನು ಎಲ್ಲಿಂದ ತರುತ್ತೀರಿ ಎಂದು ಕೇಳಿದರೆ, ನಮಗೆ ವಿಶ್ವಾಸ ಇದೆ. ಸಾಲ ಮಾಡಬೇಕಾದರೆ ಮಾಡೋಣ. ಅದರಲ್ಲಿ ತಪ್ಪೇನಿದೆ? 2000 ಕೋಟಿ ರೂಪಾಯಿಗಳನ್ನು ರೈತರಿಗೆ ಕನ್‌ಸೆಷನ್ ಕೊಡುತ್ತಿದ್ದೇವೆ. ನಾನು ಈ ಮನೆಯಲ್ಲಿ ನಮ್ಮ ಕಾಂಗ್ರೆಸ್ ಸ್ನೇಹಿತರಿಗೆ ಒತ್ತಾಯಿಸುತ್ತೇನೆ, ಒಟ್ಟಾಗಿ ಒಂದು ಡೆಲಿಗೇಷನ್ ತೆಗೆದುಕೊಂಡು ಹೋಗೋಣ, 50% ಕಾಂಪೆನ್‌ಷೇಟ್ ಮಾಡಿ ಎಂದು ಕೇಂದ್ರ ಸರ್ಕಾರವನ್ನು

ಕೇಳೋಣ. ಏಕೆ ಕೊಡಬಾರದು? ಈ ರಾಜ್ಯದ ರೈತ ಸಮುದಾಯಕ್ಕೆ ನಾವು ಇಷ್ಟು ದೊಡ್ಡ ಪ್ರಮಾಣದಲ್ಲಿ ಕನ್‌ಸೆಷನ್ ಕೊಟ್ಟಾಗ, 2200 ಕೋಟಿ ಕೊಟ್ಟಾಗ, ಕೇಂದ್ರ ಸರ್ಕಾರ ಅದರಲ್ಲಿ 50% ಕೋಟಿ ಎಂದು ನಾನು ಮಾನ್ಯ ಪ್ರಧಾನ ಮಂತ್ರಿಗಳು ಬಂದಾಗ ನಾನು ಕೇಳುವವನು ಇದ್ದೇನೆ.

(ಗೊಂದಲ)

ಸಾರ್ ಒಂದು ನಿಮಿಷ, ಮಾತಿಗೆ ಮಾತು ಬೇಡ. ನಾನು ನಿಮ್ಮ ಹತ್ತಿರ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಮಾತು ಸರಿಯಿದೆ. ಯಡಿಯೂರಪ್ಪನವರೆ, ಸರ್ಕಾರದ ಮೇಲೆ ಈ fifth pay Commission, lottery ನಿಷೇಧ, ಸಾರಾಯಿ ನಿಷೇಧ, ರೈತರ ಸಾಲ ಮನ್ನಾ, ಸುಮಾರು 6000 ಕೋಟಿ ಹೆಚ್ಚು ಕಡಿಮೆ ಭಾರ ಬೀಳುತ್ತದೆ, ಹೇಗೆ ತರುತ್ತೀರಾ? ತಾವು ಹೇಳಿದ್ದು ಸರಿಯಿದೆ. ಇದೊಂದು ಬಿಗ್ ಟಾಸ್ಕ್, ನಾನು ಇದನ್ನು ಎದುರಿಸಬೇಕಾಗಿದೆ. ನಾನು ಮುಖ್ಯಮಂತ್ರಿಗಳು ಕುಳಿತು ಏನು ಯೋಚಿಸಿದ್ದೇವೆಂದರೆ, ಬೆಂಗಳೂರಿನಲ್ಲಿ ಒತ್ತುವರಿಯಾಗಿರುವ ಜಮೀನನ್ನು ಹರಾಜು ಹಾಕಿದರೆ ಎರಡೂವರೆಯಿಂದ ಮೂರು ಸಾವಿರ ಕೋಟಿ ರೂಪಾಯಿ ಬರುತ್ತದೆ ನಾನು ಕೊಡುತ್ತೇನೆ ಎನ್ನುವ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದರಿಂದ ಇವೆಲ್ಲವನ್ನು ಯೋಚನೆ ಮಾಡಿದ್ದೇವೆ. ಏರ್ ಪೋರ್ಟ್ ಪಕ್ಕದಲ್ಲಿರತಕ್ಕಂಥ ನಮ್ಮ ಹೆಚ್ಚುವರಿ ಜಮೀನು ಏನು ಇದೆ, ಅದನ್ನು ಹರಾಜು ಹಾಕಿದರೆ ಸುಮಾರು 700 ರಿಂದ 800 ಕೋಟಿ ಬರುತ್ತದೆಂದು ನಾನು ನಿರೀಕ್ಷೆ ಇಟ್ಟಿಕೊಂಡಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ : ಹರಾಜು ಮಾಡಿ ಸರ್ಕಾರ ನಡೆಸುವ ಹಾಗಿದ್ದರೆ ನೀವು ಏಕೆ ಬೇಕು?

ಶ್ರೀ ಬಿ.ಎಸ್.ಯಡಿಯೂರಪ್ಪ : ಸ್ವಾಮಿ ಇನ್ನೆಲ್ಲಿ ಸಿಗುತ್ತದೆ?

ಅಧ್ಯಕ್ಷರು : It is their programme. ಅವರು ತುಂಬಿ ಕೊಡಬೇಕೆಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ನಮ್ಮಪ್ಪನ ಆಸ್ತಿಯನ್ನು ನಾನು ಮಾರಿಕೊಂಡು ತಿನ್ನುತ್ತೇನೆಂದರೆ ನಾನು ಏಕೆ ಇರಬೇಕು?

ಶ್ರೀ ಸಿದ್ದು ಕಲ್ಲಪ್ಪ ಸಾವದಿ : ಒತ್ತುವರಿಯಾಗಿರುವ ಜಮೀನು ಹೊರಗೆ ತೆಗೆದದ್ದು ತಪ್ಪೆ?

(ಗೊಂದಲ)

ಅಧ್ಯಕ್ಷರು : ಅಲ್ಲಪ್ಪಾ ಅವರ ಅಪ್ಪನ ಆಸ್ತಿಯ ಬಗ್ಗೆ ಅಲ್ಲ ಮಾತನಾಡುತ್ತಿರುವುದು, ಕಳ್ಳನಿಗೆ ಕೊಟ್ಟಿದ್ದಿರಲ್ಲ, ಕಳ್ಳನಿಗೆ, ಆ ಕಳ್ಳನಿಂದ ವಶಪಡಿಸಿಕೊಂಡಿರುವ ಆಸ್ತಿ. ಮಿಸ್ಟರ್ ರೆಡ್ಡಿ ಆ ವಿಚಾರದಲ್ಲಿ ನಾನು ಒಪ್ಪುವುದಿಲ್ಲ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : 8% ಇದೆ, You have to seriously think about this. ದೇಶದಲ್ಲಿ 10% GDP growth ಆಗುತ್ತಿರುವಾಗ, Finance Minister ನಮಗೆ ಹೇಳಿದ್ದಾರೆ, State will grow by 8%. ಏನು ನಡೆಯುತ್ತಿದೆ? We were always in the forefront.

ಅಧ್ಯಕ್ಷರು : ಆಯಿತು ಬಿಡಿ ಸಾರ್. ಈಗ ಮನೆಗೆ ತೆಗೆದುಕೊಂಡು ಹೋಗುತ್ತೀರಾ?

(ಗೊಂದಲ)

ಎಷ್ಟು ಸಾರಿ ಕ್ಲಾರಿಫಿಕೇಷನ್ ಕೇಳುತ್ತೀರಿ? ವಾಕ್ ಔಟ್? ಹೇಳಿ.

(ಗೊಂದಲ)

ಶ್ರೀ ಎನ್.ಧರ್ಮಸಿಂಗ್ : ಮುಖ್ಯಮಂತ್ರಿಗಳ ಭಾಷಣವಾಯಿತು, ಈಗ ಯಡಿಯೂರಪ್ಪನವರು ಮಾಡುತ್ತಿದ್ದಾರೆ. ನಾಲ್ಕು ತಿಂಗಳ ಹಿಂದೇನು ಮಾತನಾಡಿದ್ದರೋ ಅದೇ ಬಜೆಟ್ ಭಾಷಣವನ್ನು ಈಗ ತಿರುಗ-ಮುರುಗಾ ಮಾತನಾಡುತ್ತಿದ್ದಾರೆ. ಸಾಲ ಮನ್ನಾದಿಂದ ಇವತ್ತು ಯಾವ ರೈತನಿಗೂ ಒಂದು ರೂಪಾಯಿ ಸಿಕ್ಕಿಲ್ಲ. ಯಾವ ಡಿಸಿಸಿ ಬ್ಯಾಂಕ್ ಸಾಲ ಮಾಡುತ್ತಿಲ್ಲ. ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರು, ನಮಗೆ ರೈತರಿಗೆ ಸಾಲ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಸಹಕಾರ ಮಂತ್ರಿಗಳಾದ ಜಿ.ಟಿ.ದೇವೇಗೌಡ ರವರು, ಈ ರೀತಿಯಾಗಿ ಸರ್ಕಾರ ಏನೊಂದು ತೀರ್ಮಾನ ತೆಗೆದುಕೊಳ್ಳುತ್ತದೆ, ನಾವು ಬದ್ಧರಾಗಿಲ್ಲ. ಇವತ್ತು ನಾವು ಎಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರತಿಭಟನೆ ಮಾಡುತ್ತಿದ್ದಾರೆ. 73 ಕೋಟಿ ರೂಪಾಯಿ ಕೊಡಬೇಕಾಗಿದೆ. ಅದರಲ್ಲಿ ಕೇವಲ ಆರು ಕೋಟಿ ಎಂಭತ್ತು ಲಕ್ಷ ಬಿಡುಗಡೆ ಮಾಡಿದ್ದಾರೆ. ಸ್ಕಾಲರ್ ಶಿಪ್ ಆಗುತ್ತಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಇಲ್ಲ. ರೈತರ ಆತ್ಮಹತ್ಯೆಯಾಗುತ್ತಿದೆ.

ವಿದರ್ಭ ಪ್ಯಾಕೇಜ್‌ನಲ್ಲಿ ಕೊಟ್ಟಂಥ ಹಣವನ್ನು ಕೂಡ ಖರ್ಚು ಮಾಡುತ್ತಿಲ್ಲ. action plan prepare ಮಾಡಿಲ್ಲ. ಮತ್ತೆ hostel ನಲ್ಲೂ ಕೂಡ..

(ಗೊಂದಲ)

ಹೌದು, ವಿರೋಧ ಪಕ್ಷದಲ್ಲಿದ್ದು ನಾನು ಏನು ಮಾಡಬೇಕೋ, ಅದನ್ನು ಹೇಳುತ್ತೇವೆ.

ಅಧ್ಯಕ್ಷರು : ರೀ ಕುಳಿತುಕೊಳ್ಳಿ ಅವರು ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ.

(6-00 PM)

ಶ್ರೀ ಎನ್.ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಕಳೆದ ಬಜೆಟ್‌ನಲ್ಲಿ ಏನು ಆಶ್ವಾಸನೆ ಕೊಟ್ಟಿದ್ದಾರೆಯೋ ಅದೇ ರೀತಿಯಾದ ಆಸ್ವಾಸನೆಯನ್ನು ಈ ಸಾರಿಯೂ ಕೂಡ ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟಿದ್ದಾರೆ. ಯಾವ ಬಾಬ್ತಿನಲ್ಲಿಯೂ ಕೂಡ ಅವರು ಕೆಲಸ ಮಾಡಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಸಿದ್ದರಾಮಯ್ಯನವರು ಹಾಗೂ ಮಾನ್ಯ ದೇಶಪಾಂಡೆಯವರು ಎಲ್ಲಾ ವಿಷಯವನ್ನು ಎಳೆಎಳೆಯಾಗಿ ಬಿಚ್ಚಿ ಹೇಳಿದ್ದಾರೆ. ಈ ಸರ್ಕಾರ ಫೈನಾನ್ಸ್‌ನಲ್ಲಿ ವಿಫಲವಾಗಿದೆ. ಇವರು ರಾಜ್ಯದ ಜನತೆಗೆ ಏನೂ ಕೊಡುತ್ತಿಲ್ಲ. ಆದ್ದರಿಂದ, ನಾವು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಅನುಭವ ಹೊಂದಿರುವಂಥ ಪಕ್ಷ ಅವರದು. ಫೈನಾನ್ಸ್ ಬಿಲ್‌ಗೆ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತಿರುವುದು ಸರಿಯಲ್ಲ. ಫೈನಾನ್ಸ್ ಬಿಲ್‌ನ್ನು ಯಾವಾಗಲೂ ಕೂಡ ಗೌರವದಿಂದ ಪಾಸ್ ಮಾಡಿಕೊಡಬೇಕು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಹೋದ ಸಾರಿ ಕೊಟ್ಟಿರುವ ಹಣದ ಬಗ್ಗೆ ಏನು ಎನ್ನತಕ್ಕಂಥ ವಿಷಯದ ಬಗ್ಗೆ ವಿರೋಧ ಪಕ್ಷದವರು ಸದನಕ್ಕೆ ಸರಿಯಾದಂಥ ಮಾಹಿತಿಯನ್ನು ಕೊಡುತ್ತಿಲ್ಲ. 3500

ಕೋಟಿ ರೂಪಾಯಿಗಳಷ್ಟು ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಅದರಲ್ಲಿ 1500 ಕೋಟಿ ರೂಪಾಯಿಗಳಷ್ಟು ಕೃಷ್ಣ ಜಲಭಾಗ್ಯ ನಿಗಮಕ್ಕೆ ಸಾಲ ನೀಡಲಾಗಿದೆ, ಆದರೆ, ಅಲ್ಲಿ ಕೆಲಸ ಮಾಡಿರತಕ್ಕಂಥದ್ದು ಸುಮಾರು 2000 ಕೋಟಿ ರೂಪಾಯಿಗಳಷ್ಟಿದೆ. ಹಿಂದೆ ಅವರು ಕೆಲಸವನ್ನು 3800 ಕೋಟಿ ರೂಪಾಯಿಗೇನು ಮಾಡಿಲ್ಲ. ಬಜೆಟ್‌ನಲ್ಲಿ 3800 ಕೋಟಿ ರೂಪಾಯಿಗಳಷ್ಟು ಮಾಡಿದ್ದೇವೆಂದು ಅವರು ಹೇಳಲಿ ನೋಡೋಣ? ಅಲ್ಲಿ ಖರ್ಚಾಗಿರುವುದು 2000 ಕೋಟಿ ರೂಪಾಯಿಗಳಷ್ಟೆ. ಹಿಂದೆ ಕೃಷ್ಣ ಜಲಭಾಗ್ಯ ನಿಗಮಕ್ಕೆ ಮಾಡಿದಂಥ 1500 ಕೋಟಿ ರೂಪಾಯಿಗಳನ್ನು ಸಾಲ ತೀರಿಸುವುದಕ್ಕೆ ಸೇರಿಸಿ 3800 ಕೋಟಿ ರೂಪಾಯಿಗಳೆಂದು ಅವರು ಲೆಕ್ಕ ಕೊಡುತ್ತಿದ್ದಾರೆ. ಈ ಸಾರಿ ಅವೆಲ್ಲವನ್ನು ಕಳೆದು 800 ಕೋಟಿ ರೂಪಾಯಿಗಳಷ್ಟು ಜಾಸ್ತಿ ಕೊಡುತ್ತಿದ್ದೇವೆ. ನಮ್ಮದು 3145 ಕೋಟಿ ರೂಪಾಯಿಗಳೆಂದು ಅವರು ಹೇಳುತ್ತಿದ್ದಾರೆ. ಆದರೆ, ಹಿಂದೆ ನೀರಾವರಿಗಾಗಿ ಅವರ ಕಾಲದಲ್ಲಿ ಕೇವಲ 2000 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದಾರೆ. ಆದ್ದರಿಂದ, ಇದು ಬೇರೆ ರೀತಿಯಲ್ಲಿ ತಪ್ಪು ಕಲ್ಪನೆಯಾಗಬಾರದೆಂಬ ದೃಷ್ಟಿಯಿಂದ ನಾನು ಹೇಳಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಕಾಂಗ್ರೆಸ್ ಪಕ್ಷದ ಸ್ನೇಹಿತರ ನಿರೀಕ್ಷೆಯಂತೆ ಅವರು ಸಭಾತ್ಯಾಗ ಮಾಡಿದ್ದಾರೆ. ನಮಗೆ ರಾಜ್ಯದ ಜನತೆಯ ಸರ್ಟಿಫಿಕೇಟ್ ಸಿಕ್ಕಿದೆ. ನಮ್ಮ ಮುಖ್ಯಮಂತ್ರಿಗಳು ಮತ್ತು ನಾವು ಅಂದರೆ, ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಸಮಿಶ್ರ ಸರ್ಕಾರ ಕೊಟ್ಟಿರುವ ಬಜೆಟ್ ಬಗ್ಗೆ ನಾನು ಈಗಾಗಲೇ ಹೇಳಿದಂತೆ ರಸ್ತೆಗಳಲ್ಲಿ ಮತ್ತು ಮನೆ ಮನೆಗಳಲ್ಲಿ ಚರ್ಚೆ ಮಾಡುತ್ತಿದ್ದಾರೆ. ಸುಮಾರು 58 ರಿಂದ 60 ಲಕ್ಷ ಕುಟುಂಬಗಳಿಗೆ ಒಂದು ಸವಲತ್ತು ಸಿಕ್ಕಿದ್ದು, ಅವರು ನೆಮ್ಮದಿಯಿಂದ ನಿಟ್ಟುಸಿರು ಬಿಟ್ಟು ನೆಮ್ಮದಿಯಿಂದ ಅವರೆಲ್ಲರೂ ಎರಡು ಹೊತ್ತು ಊಟ ಮಾಡುತ್ತಿದ್ದಾರೆ. ಸಾರಾಯಿ ನಿಷೇಧದಿಂದ ಅನುಕೂಲವಾಗಿದೆ. ಲಾಟರಿಯನ್ನು ನಿಷೇಧ ಮಾಡಿರುವುದರಿಂದ ಎಲ್ಲರೂ ಕೂಡ ನಿಟ್ಟುಸಿರು ಬಿಡುತ್ತಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಂಡಿದ್ದೇವೆ. ವೃದ್ಧಾಪ್ಯ ಮತ್ತು ವಿಧವೆ ಹಾಗೂ ಅಂಗವಿಕರ ವೇತನಗಳನ್ನು ನಾವು 400 ರೂಪಾಯಿ ಮಾಡಿದ್ದೇವೆ. ಮತ್ತೆ ಇದಕ್ಕಾಗಿ ಪ್ರತ್ಯೇಕವಾದ ಡೈರೆಕ್ಟರೇಟ್ ಮಾಡಿ ಪ್ರತಿ ತಿಂಗಳು ಅವರ ಬ್ಯಾಂಕ್ ಅಕೌಂಟ್‌ಗೆ ಜಮಾ ಮಾಡಿ ಆ ದುಡ್ಡು ಅವರಿಗೆ ಸಿಗುವಂಥ ಕಾರ್ಯಕ್ರಮವನ್ನು ನಾವು ರೂಪಿಸಿದ್ದೇವೆ. ಇವೆಲ್ಲವನ್ನು ಸಹಿಸಲಾರದೇ ನಮ್ಮ ಕಾಂಗ್ರೆಸ್ ಸ್ನೇಹಿತರು ಮಾತನಾಡುತ್ತಾರೆ. ನೀರಾವರಿ

ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಅವರಲ್ಲಿ 10 ಬಾರಿ ಮನವರಿಕೆ ಮಾಡಿದ್ದೇನೆ. ಹಿಂದೆ ನಾವು ಸಾಲದ ಹಣವನ್ನು ಏನು ಮರುಪಾವತಿ ಮಾಡಿದ್ದವೊ ಅದನ್ನು ಸೇರಿಸಿ ಅಂಕಿ-ಅಂಶಗಳನ್ನು ಹೇಳುತ್ತಿದ್ದೇವೆ. ಅದನ್ನು ತೆಗೆದು ಹಾಕಿ, ಹಿಂದೆ ಎಂದೂ ಸಹಾ ಕೊಡದಷ್ಟು ಅಭಿವೃದ್ಧಿ ಕೆಲಸಕ್ಕಾಗಿ 2007–08ನೇ ಸಾಲಿನಲ್ಲಿ ದೊಡ್ಡ ಪ್ರಮಾಣದಲ್ಲಿ ಕೊಟ್ಟಿದ್ದೇವೆ. ಮತ್ತೆ ಅಪೂರ್ಣವಾಗಿರತಕ್ಕಂಥ ನೀರಾವರಿ ಯೋಜನೆಗಳನ್ನು ಪೂರ್ಣ ಮಾಡಿದ್ದೇವೆ. ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಅವರ್ಯಾರು ಮಾತನಾಡಲಿಲ್ಲ. ನಾನೇ ಎದ್ದು ನಿಂತುಕೊಂಡು ಏನು ಹೇಳಿದ್ದೇನೆಂದರೆ, 2006–07ರಲ್ಲಿ ಏನಾದರೂ ಕೊರತೆ ಇದೆಯೆ? ನಾವು ರಾಜ್ಯದ ಜನತೆ ಭರವಸೆ ಕೊಟ್ಟಂತೆ ರೆವಿನ್ಯೂ ಕಲೆಕ್ಷನ್ ಆಗಿಲ್ಲವೆ? ಮತ್ತೆ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಹಣ ಖರ್ಚು ಮಾಡಿಲ್ಲವೆ? ಇದೊಂದು ದಾಖಲೆ. ಇದನ್ನು ಪ್ಲಾನಿಂಗ್ ಕಮೀಷನ್ ಅಪ್ರಿಶಿಯೇಟ್ ಮಾಡಿದೆ ಮತ್ತೆ Reserve Bank of India ನಮಗೆ ಬೆನ್ನು ತಟ್ಟಿದೆ. ಮತ್ತೆ ಕೇಂದ್ರ ಸರ್ಕಾರದಿಂದ ನಮಗೆ ಸಿಗಬೇಕಾಗಿರತಕ್ಕಂಥ ಎಲ್ಲಾ ಸವಲತ್ತುಗಳು ಸಿಕ್ಕಿವೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಂದರೆ, 2200 ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಮಾಡಿರುವ ಕಾಲದಲ್ಲಿ ಕೇಂದ್ರ ಸರ್ಕಾರ 2200 ಕೋಟಿ ರೂಪಾಯಿಗಳಲ್ಲಿ 50% ನಷ್ಟು ನಮಗೆ compensate ಮಾಡಿಕೊಡಲಿ. ನಾವೇನು ಕಾರ್ಯಕ್ರಮ ರೂಪಿಸಿದ್ದೇವೆ, ಇದರ ಮಧ್ಯದಲ್ಲಿ 5ನೇ ವೇತನ ಆಗದ ಶಿಫಾರಸ್ಸಿನ ಪ್ರಕಾರ ಹಣ ತುಂಬಬೇಕಾಯಿತು. ಸಾಲ ಮನ್ನಾ ಮಾಡಿರುವುದರಿಂದ ದೊಡ್ಡ ಭಾರ ಬಿದ್ದಿದೆ. ಮತ್ತೆ ಲಾಟರಿ ಮನ್ನಾ ಮಾಡಿರುವುದರಿಂದ ಅದರಿಂದ ಬರತಕ್ಕಂಥ ಆದಾಯ ಕಡಿಮೆ ಆಯಿತು. ಮತ್ತೆ ಸಾರಾಯಿಯಿಂದ ಬರತಕ್ಕಂಥ ಆದಾಯ ಕೂಡ ಕಡಿಮೆ ಆಯಿತು. ಎಲ್ಲಾ ಕೊರತೆಯನ್ನು ನಾವು ತುಂಬಿ ಆಯವ್ಯಯದಲ್ಲಿ ಹೇಳಿರುವ ಪ್ರಕಾರ ಯಾವುದೇ ಒಂದು ಕಾರ್ಯಕ್ರಮಕ್ಕೆ ಒಂದು ರೂಪಾಯಿ ಕೊರತೆ ಆಗದ ರೀತಿಯಲ್ಲಿ ಆ ಎಲ್ಲಾ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುತ್ತೇವೆ ಎಂಬ ಭರವಸೆಯನ್ನು ಈ ಮನೆಯ ಮೂಲಕ ಈ ನಾಡಿನ ಜನತೆಗೆ ತೆಗೆದುಕೊಳ್ಳುವುದಕ್ಕೆ ಇಚ್ಛೆ ಪಡುತ್ತೇನೆ. ಸಭೆಯ ಮುಂದಿರುವ ಬೇಡಿಕೆಗಳನ್ನು ಸದನವು ಅಂಗೀಕರಿಸಬೇಕೆಂದು ಕೋರುತ್ತೇನೆ.